ಮಂಗಳವಾರ, ಜನವರಿ 30, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಾಯನ

ಮುಂಬೈನಲ್ಲಿ ಹಮ್ಮಿಕೊಂಡಿದ್ದ 'ಮುಂಬೈ ಫೆಸ್ಟಿವಲ್'ನಲ್ಲಿ ಬಾಲಿವುಡ್ ನಟಿ ಪರಿಣೀತಿ ಚೋಪ್ರಾ ಅವರು ಹಾಡುವ ಮೂಲಕ ಮೋಡಿ ಮಾಡಿದರು

ಕ್ವಾಡ್ ಬೀಮ್ LED ಹೆಡ್‌ಲ್ಯಾಂಪ್‌ಗಳು, ಹಾರಿಜಾನ್ LED ಪೊಸಿಷನಿಂಗ್ ಲ್ಯಾಂಪ್ & DRLಗಳು

ಸರೌಂಡ್ ವ್ಯೂ ಮಾನಿಟರ್ (SVM) & ಬ್ಲೈಂಡ್–ಸ್ಪಾಟ್ ವ್ಯೂ ಮಾನಿಟರ್ (BVM)

Hyundai ಸ್ಮಾರ್ಟ್‌ಸೆನ್ಸ್– ಲೆವೆಲ್ 2 ADAS (19 ಫೀಚರ್‌ಗಳು)



ಧ್ವನಿ ಚಾಲಿತ ಸ್ಮಾರ್ಟ್ ಪ್ಯಾನೋರಾಮಿಕ್ ಸನ್‌ರೂಫ್

ಡ್ಯುಯಲ್ ಜೋನ್ ಆಟೋಮ್ಯಾಟಿಕ್ ಟೆಂಪರೇಚರ್ ಕಂಟ್ರೋಲ್ (DATC)

ಪವರ್‌ಟ್ರೈನ್‌ನ ಆಯ್ಕೆ
1.5l PL, 1.5l DSL, 1.5l PL turbo
MT, AT, DCT & IVT

ಫಿಲ್ಮ್ ಪ್ರಸಾರಕ್ಕೆ ಸ್ಕ್ಯಾನ್ ಮಾಡಿ

36 ಸ್ಟಾಂಡರ್ಡ್ ಸೇಫ್ಟಿ ಫೀಚರ್‌ಗಳು ಮತ್ತು
70+ ಅತ್ಯಾಧುನಿಕ ಸೇಫ್ಟಿ ಫೀಚರ್‌ಗಳು*

HYUNDAI

To know more, WhatsApp us on 8447228019 | my Hyundai app | Hyundai Cl!ck to Buy | 3 YEAR Unlimited* Kilometer Warranty | 3 YEAR Road Side Assistance (RSA)* | UPTO 7 YEARS Extended Warranty^ | UPTO 5 YEARS Shield of Trust Running Repair Package* | UPTO 5 YEARS Shield of Trust Super Maintenance Package* | Bluelink 3 Years free Bluelink subscription with 70+ Bluelink features | JioSaavn Pro 1 year complimentary subscription*

For Information Contact: Toll Free:1800114645 **Bangalore:** Advaith Hyundai, Residency Road, Ph: 9606076451 Marathahalli, Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Kormangala, Ph: 9606076455 Avalahalli, Ph: 9606076456, Sarjapura Ph: 9606076458 Bilekahalli, Ph: 9606076457 Trident Hyundai, Sankey Road, Ph: 9844266882 K R Puram, Ph: 9844266873 Hosur Road, Ph: 9964187952 Indiranagar, Ph: 9743107927, Yelahanka, Ph: 7353750677, Yeshwantpur, Ph: 9844701452 Blue Hyundai, New Bel Road, Ph: 9513000800 Magadi Road, Ph: 9513200033, Rajajinagar, Ph: 9591200001, Basavangudi, Ph: 9591211118, Mysore Road, Ph: 9591100001, Nelamangala, Ph: 9742245636 Lakshmi Hyundai, Hebbal Ph: 9900037900 Kalyan Nagar, Ph: 8884441111, Whitefield, Ph: 8884497700, Devanahalli, Ph: 8884499037 Pavan Hyundai, Kanakpura Road, Ph: 7892703338, Electronic City, Ph: 7337882335 **Ramanagara:** Advaith Hyundai, Ph: 9900095504, Pavan Hyundai, Kanakpura, Ph: 7892718572 **Kolar:** Advaith Hyundai, Ph: 9620111398 **Mangalore:** Kanchana Hyundai, Ph: 9900144113, Advaith Hyundai, Ph: 7760962805 **Dakshina Kannada:** Kanchana Hyundai, Puttur, Ph: 9740873450, Surathkal, Ph: 9482574530. Advaith Hyundai Belthangady, Ph: 7760962819, Sullia, Ph: 8861003072 **Udupi:** Kanchana Hyundai, Ph: 9611133151 / 9686697448, Kundapur, Ph: 9900145948, Karkala, Ph: 8762464853 **Uttara Kannada:** Kanchana Hyundai, Karwar, Ph: 6364860518, Sirsi, Ph: 9731856300, Kumta, Ph: 9535855966 **Mysore:** Advaith Hyundai, Belavadi, Ph: 9538970802 JLB Road, Ph: 9538971141, Star Hyundai, Mysore Ph: 9538879294 Hunsur, Ph: 9538879235 **Mandya:** Advaith Hyundai, Ph: 9740060075 **Coorg:** Advaith Hyundai, Madikeri, Ph: 9538971151 Gonikoppal, Ph: 9538971188 Kushalnagar, Advaith Hyundai, Ph: 9538971149 **Hassan:** Advaith Hyundai, Ph: 9620004782, Star Hyundai, Sakleshpura, Ph: 9538879238, Channarayapatna, Ph: 9538879238 **Shimoga:** Rahul Hyundai, Ph: 6364465441 Sagar, Ph: 7625080180, Thirthahalli, Ph: 9108843230, Shikaripura, Ph: 7795800034 **Chikmagalur:** Rahul Hyundai, Ph: 7795800038 **Hubli:** Bellad Hyundai, Ph: 9900035084, Raam Hyundai, Ph: 8495072555 **Belgaum:** Nagshanti Hyundai, Ph: 9844890456, 9916862285 Chikodi, Ph: 8088511713 Gokak, Ph: 8147978240 Athani, Ph: 8722552253, 9620341451 Saundatti, Ph: 8147978240 **Bijapur:** Narayan Hyundai, Ph: 9742272157, 9742272153 Bagalkot, Ph: 9742253245, Jamkhandi, Ph: 9742272271 **Davanagere:** KJ Hyundai, Ph: 7022001201 Channagiri, Ph: 7022425985 **Chitradurga:** KJ Hyundai, Ph: 9980759983 **Gulbarga:** Shah Hyundai, Ph: 9108049250 **Hospete:** Anika Hyundai, Ph: 8884484018 **Bidar:** Shah Hyundai, Ph: 7625093556 **Raichur:** Shah Hyundai, Ph: 9108049252, Sindhanur, Ph: 9071411136 **Tumkur:** Pavan Hyundai, Ph: 7337882383, Advaith Hyundai, Tiptur, Ph: 9686668513, **Bellari:** Anika Hyundai, Ph: 8792910448 **Yadgir:** Shah Hyundai, Ph: 9108049262 **Koppal:** Anika Hyundai, Ph: 8884484015, **Chamarajanagar:** Star Hyundai, Kollegal, Ph : 9538879248, **Gadag:** Bellad Hyundai, Ph : 9844504724, **Haveri:** Bellad Hyundai, Ph : 9731596540

*Terms & Conditions apply. ~Ex-showroom price. Features & specifications shown may vary or not be part of standard fitment & are subject to change without prior notice. Hyundai Motor India reserves the right to change specifications, colour, equipment and schemes at any time without prior notice. The black shade on glasses is due to lighting effect. Size, colour may vary due to lighting and positing effects. Visit your nearest Hyundai dealership for more details. Hyundai urges you to follow traffic rules – these are meant to keep you safe on roads. Bluelink functionality is dependent on adequate power supply and uninterrupted network connectivity. The Bluelink system is designed in such a way that it makes vehicle theft difficult if its circuit and battery connection is uninterrupted. Hyundai SmartSense, the Advanced Driver Assistance System is not a substitute for safe and attentive driving. Its effectiveness depends on various factors. Availability of Hyundai SmartSense Features may differ by variants.^Upto 7 years extended warranty is applicable only for petrol variants. Extended Warranty and Shield of Trust Packages are on payable basis. The JioSaavn Music streaming service functionality may vary based on network connectivity /content provider platform functionality. For more details on JioSaavn, refer T&C and Privacy Policy on - https://www.jiosaavn.com/corporate/terms/. For more details, consult the nearest authorized dealer. INNOCEAN-007/24 KAN

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ: ಬಿಜೆಪಿ ಟಿಕೆಟ್‌ಗೆ ಹೆಚ್ಚಿದ ಪೈಪೋಟಿ • ವರಿಷ್ಠರಿಗೆ ಆಂತರಿಕ ವರದಿ

ಸುಧಾಕರ್ ವಿರುದ್ಧ ವಿರೋಧಿಗಳ ಒಗ್ಗಟ್ಟು

• ಡಿ.ಎಂ.ಕುರ್ಕೆ ಪ್ರಶಾಂತ್

ಡಾ.ಕೆ. ಸುಧಾಕರ್

ಅಲೋಕ್

ಚಿಕ್ಕಬಳ್ಳಾಪುರ: ಸಂಸದ ಬಿ.ಎನ್. ಬಚ್ಚೇಗೌಡ ಚುನಾವಣಾ ನಿವೃತ್ತಿ ಘೋಷಣೆ ಬಳಿಕ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್‌ಗಾಗಿ ಪೈಪೋಟಿ ಹೆಚ್ಚಿದೆ. ವರಿಷ್ಠರು ಸಹ ಈಗಾಗಲೇ ಆಂತರಿಕ ವರದಿ ಪಡೆದಿದ್ದಾರೆ.

ವಿಧಾನಸಭೆಯ ಚುನಾವಣೆಯಲ್ಲಿ ಸೋಲಿನ ನಂತರ ಹೆಚ್ಚು ಸಾರ್ವ-ಜನಿಕವಾಗಿ ಕಾಣಿಸಿಕೊಳ್ಳದ ಮಾಜಿ ಸಚಿವ ಡಾ.ಕೆ. ಸುಧಾಕರ್ ಲೋಕಸಭೆ ಚುನಾವಣೆಗೆ ಸಿದ್ಧರಾಗುತ್ತಿದ್ದಾರೆ ಎಂಬ ಸುದ್ದಿ ಪ್ರಬಲವಾಗಿದೆ. ಇದರ ಬೆನ್ನಲ್ಲೇ ಪಕ್ಷದೊಳಗಿನ ಅವರ ವಿರೋಧಿಗಳು ಕೂಡ ಸಕ್ರಿಯರಾಗಿದ್ದು, ಒಗ್ಗೂಡುತ್ತಿದ್ದಾರೆ.

ಸದ್ಯ ಬಿಜೆಪಿ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಮಾಜಿ ಸಚಿವ ಡಾ.ಕೆ. ಸುಧಾಕರ್ ಮತ್ತು ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಅವರ ಮಗ ಅಲೋಕ್ ಹೆಸರು ಚಾಲ್ತಿಯಲ್ಲಿವೆ. ಅಲೋಕ್‌ಗೆ ಟಿಕೆಟ್ ನೀಡುವಂತೆ ಒತ್ತಾಯಿಸಲು ವಿಶ್ವನಾಥ್ ವರಿಷ್ಠರನ್ನು ಭೇಟಿ ಮಾಡಿದ್ದಾರೆ. ಪಕ್ಷ ಸಂಘಟಿಸುವಂತೆ ವರಿಷ್ಠರು ಸೂಚಿಸಿದ್ದಾರೆ ಎಂದು ಅವರು ಕಾರ್ಯಕರ್ತರು ಮತ್ತು ಮುಖಂಡರನ್ನು ಸಂಪರ್ಕಿಸುತ್ತಿದ್ದಾರೆ.

ಕೆ. ಸುಧಾಕರ್ ಟಿಕೆಟ್‌ಗಾಗಿ ದೆಹಲಿ ಮಟ್ಟದಲ್ಲಿ ಪ್ರಯತ್ನಿಸುತ್ತಿದ್ದಾರೆ. ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಸೇರಿದಂತೆ ದೆಹಲಿ ಮಟ್ಟದಲ್ಲಿ ಹಲವು ವರಿಷ್ಠರನ್ನು ಭೇಟಿ ಆಗಿರುವ ಸುದ್ದಿ ಇದೆ.

ಸುಧಾಕರ್ ವಿರುದ್ಧ ಮುನಿಸಿಕೊಂಡಿರುವ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಬಿಜೆಪಿ ನಾಯಕರನ್ನು ಯಲಹಂಕ ಬಿಜೆಪಿ ಶಾಸಕ ಎಸ್.ಆರ್. ವಿಶ್ವನಾಥ್ ಭೇಟಿ ಮಾಡುತ್ತಿದ್ದಾರೆ. ಪುತ್ರನನ್ನು ಬೆಂಬಲಿಸುವಂತೆ ಕೋರುತ್ತಿದ್ದಾರೆ. ಕೆ.ಸುಧಾಕರ್ ಆಪ್ತರಿಗೂ ಗಾಳ ಹಾಕುತ್ತಿದ್ದಾರೆ.

ಮಾಜಿ ಸಚಿವ ಎಂ.ಟಿ.ಬಿ.ನಾಗರಾಜ್ ಮತ್ತು ಕೆ. ಸುಧಾಕರ್ ನಡುವಿನ ಮುಸುಕಿನ ಗುದ್ದಾಟ ವಿಧಾನಸಭೆ ಚುನಾವಣೆಯ ಫಲಿತಾಂಶದ ನಂತರ ಸಾಮಾಜಿಕ ಜಾಲತಾಣದಲ್ಲಿ ಸ್ಫೋಟವಾಗಿತ್ತು. ವಿಧಾನಸಭೆಯ ಸೋಲಿನ ಬಳಿಕ ಈ ಇಬ್ಬರೂ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿಲ್ಲ.

ಎಂ.ಟಿ.ಬಿ ನಾಗರಾಜ್ ತೆಗೆದುಕೊಳ್ಳುವ ರಾಜಕೀಯ ನಿರ್ಧಾರ ಲೋಕಸಭಾ ಚುನಾವಣಾ ಫಲಿತಾಂಶದ ಮೇಲೆ ನೇರ ಪರಿಣಾಮ ಬೀರಲಿದೆ ಎನ್ನುತ್ತಾರೆ ಬಿಜೆಪಿ ಸ್ಥಳೀಯ ಮುಖಂಡರು.

ಗೌರಿಬಿದನೂರು ಕ್ಷೇತ್ರದಲ್ಲಿ ಸುಧಾಕರ್ ಬೆಂಬಲಿಗರು ಪಕ್ಷದ ಅಧಿಕೃತ ಅಭ್ಯರ್ಥಿ ಬಿಟ್ಟು ಪಕ್ಷೇತರ ಅಭ್ಯರ್ಥಿ ಕೆ.ಎಚ್.ಪುಟ್ಟಸ್ವಾಮಿ ಗೌಡ ಅವರನ್ನು ಬೆಂಬಲಿಸಿದ್ದರು. ವಿಧಾನಸಭೆ ಚುನಾವಣೆ ಬಳಿಕ ಗೌರಿಬಿದನೂರಿನ ಬಿಜೆಪಿ ನಾಯಕ ಎನ್.ಎಂ.ರವಿನಾರಾಯಣ ರೆಡ್ಡಿ ಅವರು ಸುಧಾಕರ್ ವಿರುದ್ಧ ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದರು.

ಬಾಗೇಪಲ್ಲಿಯಲ್ಲಿ ಸಿ.ಮುನಿರಾಜು ಪಕ್ಷ ಸಂಘಟಿಸುತ್ತಿದ್ದ ವೇಳೆ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಆಗಿದ್ದ ನಿವೃತ್ತ ಪೊಲೀಸ್ ಅಧಿಕಾರಿ ಕೋನಪ್ಪ ರೆಡ್ಡಿ ಅವರನ್ನು ಸುಧಾಕರ್ ಕರೆ ತಂದಿದ್ದರು ಎಂದು ಹೇಳಲಾಗುತ್ತಿದೆ. ಆಗ ಮುನಿಸಿಕೊಂಡಿದ್ದ ಮುನಿರಾಜು ಅವರನ್ನು ವಿಶ್ವನಾಥ್ ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ.

ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿರುವ ಜೆಡಿಎಸ್ ನಾಯಕರು ಕೆ.ಸುಧಾಕರ್ ವಿರುದ್ಧ ಅಸಮಾಧಾನ ಹೊಂದಿದ್ದಾರೆ. ‘ಮೈತ್ರಿ’ ಕುದುರಿದರೂ ಅವರು ಸುಧಾಕರ್ ಪರ ಕೆಲಸ ಮಾಡುವುದು ಕಷ್ಟ ಎನ್ನುವ ಮಾತು ಕೇಳಿ ಬರುತ್ತಿವೆ. ಅಂಥ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರನ್ನು ವಿಶ್ವನಾಥ್ ಸಂಪರ್ಕಿಸುತ್ತಿದ್ದಾರೆ.

ಬಿಡದಿಯ ತೋಟದ ಮನೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಈಚೆಗೆ ಭೇಟಿ ಮಾಡಿರುವ ಸುಧಾಕರ್ ಬೆಂಬಲ ಕೋರಿದ್ದಾರೆ ಎಂಬ ವರದಿಗಳಿವೆ.

ಮೂರು ಜಿಲ್ಲೆಗಳಲ್ಲಿ ಹರಡಿರುವ ಕ್ಷೇತ್ರ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ ಮೂರು ಜಿಲ್ಲೆಗಳಲ್ಲಿ ಹರಡಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಜಿಲ್ಲೆಯ ಯಲಹಂಕ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ ಮತ್ತು ದೇವನಹಳ್ಳಿ ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. ಮೂರು ಚುನಾವಣೆಗಳಿಂದ ಬಿಜೆಪಿ ಈ ಕ್ಷೇತ್ರದಲ್ಲಿ ಬಲ ಹೆಚ್ಚಿಸಿಕೊಳ್ಳುತ್ತಲೇ ಸಾಗಿದೆ.

ತಿರುಪತಿ ಪ್ರವಾಸ!

ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿಯ ಕೆಲವು ಸ್ಥಳೀಯ ಮುಖಂಡರ ಓಲೈಕೆಗಾಗಿ ವಿಶ್ವನಾಥ್ ತಿರುಪತಿ ಪ್ರವಾಸ ಆಯೋಜಿಸುತ್ತಿದ್ದಾರೆ.

ತಿರುಮಲ ತಿರುಪತಿ ದೇವಸ್ಥಾನ ಸಮಿತಿಯ ಸದಸ್ಯರೂ ಆಗಿರುವ ವಿಶ್ವನಾಥ್, ಕ್ಷೇತ್ರವಾರು ಬಿಜೆಪಿ ಮತ್ತು ಜೆಡಿಎಸ್ ಮುಖಂಡರನ್ನು ತಿರುಪತಿ ಪ್ರವಾಸಕ್ಕೆ ಕರೆದೊಯ್ಯುತ್ತಿದ್ದಾರೆ.

ಸುದ್ದಿ 2 ನಿಮಿಷ

‘ನಾನು ಸನ್ಯಾಸಿಯಲ್ಲ, ಕೇಂದ್ರ ರಾಜಕಾರಣಕ್ಕೆ ಹೋಗುವೆ’

ಹಾವೇರಿ: ‘ನಾನು ರಾಜಕೀಯ ಸನ್ಯಾಸಿ ಅಲ್ಲ, ಪಕ್ಷ ನಿರ್ಧರಿಸಿದರೆ ಕೇಂದ್ರ ರಾಜಕಾರಣಕ್ಕೆ ಹೋಗುವೆ. ಲೋಕಸಭಾ ಚುನಾವಣೆಗೆ ಅಭ್ಯ-ರ್ಥಿಯನ್ನು ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ’ ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

‘ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಈಗಾಗಲೇ ಸಮೀಕ್ಷಾ ಕಾರ್ಯ ನಡೆದಿದೆ. ವರದಿ ನೋಡಿ ನಿರ್ಧರಿ-ಸುವುದಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಈಗಾಗಲೇ ಹೇಳಿದ್ದಾರೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಪಕ್ಷದ ವರಿಷ್ಠರು ಯಾರಿಗೆ ಟಿಕೆಟ್ ನೀಡಿದರೂ ಅವರ ಪರ ನಾವೆಲ್ಲರೂ ಕೆಲಸ ಮಾಡುತ್ತೇವೆ. ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಲು ಎಲ್ಲರೂ ಕೈಜೋಡಿಸುತ್ತೇವೆ’ ಎಂದು ಹೇಳಿದರು.

‘ಅನ್ಯಾಯವನ್ನು ಸರಿಪಡಿಸು-ವುದಾಗಿ ಭರವಸೆ ನೀಡಿ ಜಗದೀಶ ಶೆಟ್ಟರ್ ಅವರನ್ನು ವರಿಷ್ಠರು ಪುನಃ ಪಕ್ಷಕ್ಕೆ ಕರೆ ತಂದಿದ್ದಾರೆ. ಅವರಿಂದ ಒಂದು ದೊಡ್ಡ ಶಕ್ತಿ ಬಂದಂತಾಗಿದೆ’ ಎಂದರು.

ಒಂದೇ ಕಾರಿನಲ್ಲಿ ಸವದಿ, ಜೊಲ್ಲೆ ಪ್ರಯಾಣ

ಬೆಳಗಾವಿ: ಅಥಣಿ ಶಾಸಕ ಲಕ್ಷ್ಮಣ ಸವದಿ, ಚಿಕ್ಕೋಡಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಮತ್ತು ಚನ್ನಮ್ಮನ ಕಿತ್ತೂರು ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಅವರು ಸೋಮವಾರ ಡಿಸಿಸಿ ಬ್ಯಾಂಕ್‌ನ ಸಾಮಾನ್ಯ ಸಭೆಯಲ್ಲಿ ಪಾಲ್ಗೊಳ್ಳಲು ಒಂದೇ ಕಾರಿನಲ್ಲಿ ಬಂದರು. ಸಭೆಗೂ ಮುನ್ನ ಇಲ್ಲಿನ ಸದಾಶಿವನಗರದ ಸವದಿ ಅವರ ಮನೆಯಲ್ಲಿ ಗೋಪ್ಯ ಸಭೆ ನಡೆಸಿ, ಊಟ ಮಾಡಿದರು.

ಇದರ ಬಗ್ಗೆ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಲಕ್ಷ್ಮಣ ಸವದಿ, ‘ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಪಕ್ಷಾತೀತವಾಗಿದೆ. ಒಂದೇ ವಾಹನದಲ್ಲಿ ಬಂದಿದ್ದು ವಿಶೇಷವೇನೂ ಅಲ್ಲ. ಎಲ್ಲರೂ ಸೇರಿಯೇ ಸಭೆ ಮಾಡುತ್ತೇವೆ’ ಎಂದರು.

ಬ್ಯಾಂಕ್‌ನ ಅಧ್ಯಕ್ಷ ರಮೇಶ ಕತ್ತಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ತಯಾರಿ ನಡೆದಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಇದೆಲ್ಲ ಊಹಾಪೋಹ. ಬ್ಯಾಂಕ್‌ನಲ್ಲಿ ಗುಂಪುಗಾರಿಕೆ ಇಲ್ಲ’ ಎಂದರು. ‘ಬಿಜೆಪಿಗೆ ತಮ್ಮನ್ನು ವಾಪಸ್ ಕರೆಸಿಕೊಳ್ಳಲು ತಂಡ ಸಿದ್ಧವಾಗಿದೆಯೇ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿ-ಸಿದ ಅವರು, ‘ತಂಡದ ಬಗ್ಗೆ ಗೊತ್ತಿಲ್ಲ. ಇವೆಲ್ಲ ಸಹಜ ಬೆಳವಣಿಗೆ. ನಾನು, ನನ್ನ ಮಗ ಯಾವ ಪಕ್ಷದಿಂದಲೂ ಲೋಕಸಭೆಗೆ ಸ್ಪರ್ಧಿ-ಸುವುದಿಲ್ಲ’ ಎಂದರು. ‘ಸವದಿ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದು ಮಾತನಾಡುವುದಾಗಿ ಯಡಿಯೂರಪ್ಪ ಹೇಳಿದ್ದಾರೆ. ಆದರೆ, ನನ್ನ ಮನಸ್ಸಿನಲ್ಲಿ ಏನಿದೆ ಎಂಬುದು ನನಗೆ ಮತ್ತು ದೇವರಿಗೆ ಮಾತ್ರ ಗೊತ್ತು’ ಎಂದರು.

ಎಐಸಿಸಿಟಿಯು ರಾಜ್ಯ ಸಮ್ಮೇಳನ ನಾಳೆ

ಹುಬ್ಬಳ್ಳಿ: ಕರ್ನಾಟಕ ಪ್ರಗತಿಪರ ತ್ಯಾಜ್ಯ ಸಾಗಿಸುವ ವಾಹನ ಚಾಲಕರ ಮತ್ತು ಸಹಾಯಕರ ಸಂಘದ (ಎಐಸಿಸಿಟಿಯು) ರಾಜ್ಯ ಸಮ್ಮೇಳನ ಹುಬ್ಬಳ್ಳಿಯಲ್ಲಿ ಜನವರಿ 31 ರಂದು ನಡೆಯಲಿದೆ ಎಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ಪಿ. ಅಪ್ಪಣ್ಣ ಹೇಳಿದರು.

‘ಸಮ್ಮೇಳನಕ್ಕೂ ಮುನ್ನ ಬೆಳಿಗ್ಗೆ 10.30ಕ್ಕೆ ನಗರದ ಡಾ.ಬಿ. ಆರ್.ಅಂಬೇಡ್ಕರ್ ವೃತ್ತದಿಂದ ಟೌನ್‌ಹಾಲ್‌ವರೆಗೆ ಸ್ವಚ್ಛತಾ ಕಾರ್ಮಿಕರ ಬೃಹತ್ ರ‍್ಯಾಲಿ ನಡೆಯಲಿದೆ’ ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿ-ಯಲ್ಲಿ ತಿಳಿಸಿದರು.

‘ಬೆಂಗಳೂರಿನಲ್ಲಿ ಫೆಬ್ರುವರಿ 3 ಮತ್ತು 4 ರಂದು ಅಖಿಲ ಭಾರತ ಮುನ್ಸಿಪಲ್ ವರ್ಕರ್ಸ್ ಫೆಡರೇಷನ್‌ನಿಂದ ರಾಷ್ಟ್ರೀಯ ಸಮ್ಮೇಳನ ನಡೆಯಲಿದೆ’ ಎಂದರು.

ಫೆ.22ರಿಂದ ತ್ಯಾಗಮೂರ್ತಿಗೆ ಮಹಾಮಜ್ಜನ

ಉಜಿರೆ (ದಕ್ಷಿಣ ಕನ್ನಡ): ವೇಣೂರಿನಲ್ಲಿರುವ ಭಗವಾನ್ ಬಾಹುಬಲಿ ಮೂರ್ತಿಗೆ ಫೆ.22ರಿಂದ ನಡೆಯಲಿರುವ ಮಹಾ ಮಸ್ತಕಾಭಿಷೇಕಕ್ಕೆ ಭರದ ಸಿದ್ಧತೆ ನಡೆಯುತ್ತಿವೆ.

ಮಸ್ತಕಾಭಿಷೇಕ ನೆರವೇರಿಸಲು ಅಟ್ಟಳಿಗೆ ನಿರ್ಮಾಣ ಕಾರ್ಯ ಮುಕ್ತಾಯದ ಹಂತದಲ್ಲಿದ್ದು, ಅಲ್ಪಸಂಖ್ಯಾತರ ಇಲಾಖೆಯಿಂದ ಲಭಿಸಿದ ₹ 1ಕೋಟಿ ಅನುದಾನದಲ್ಲಿ ಬಾಹುಬಲಿ ಬೆಟ್ಟದ ಸುತ್ತ ಗ್ರಾನೈಟ್ ಹಾಕಲಾಗುತ್ತಿದೆ. ಸಿಮೆಂಟ್ ಪ್ಲಾಸ್ಟರಿಂಗ್, ಬೆಟ್ಟದ ಬದಿಯ ಎರಡು ಬಸದಿಗಳ ಜೀರ್ಣೋದ್ಧಾರ ಪೂರ್ಣಗೊಂಡಿದೆ ಎಂದು ಮಸ್ತಕಾಭಿಷೇಕ ಸಮಿತಿ ಕಾರ್ಯಾಧ್ಯಕ್ಷ ಅಳದಂಗಡಿ ಅರಮನೆಯ ಪದ್ಮಪ್ರಸಾದ ಅಜಿಲ ತಿಳಿಸಿದ್ದಾರೆ.

ಬಾಹುಬಲಿ ಮೂರ್ತಿಯ ಎಡ ಮತ್ತು ಬಲಭಾಗದಲ್ಲಿರುವ ಅಕ್ಕಂಗಳ ಬಸದಿ ಮತ್ತು ಬಿನ್ನಾಣಿ ಬಸದಿ, ಕಲ್ಲುಬಸದಿಯ ಜೀರ್ಣೋದ್ಧಾರ ಕಾರ್ಯವೂ ನಡೆಯುತ್ತಿದೆ. ಜೈನರ ಸಂಪ್ರದಾಯದಂತೆ ಪ್ರತಿ 12ವರ್ಷಗಳಿ-ಗೊಮ್ಮೆ ಮಹಾ ಮಸ್ತಕಾಭಿಷೇಕ ನಡೆಸ-ಲಾಗುತ್ತದೆ. 2012ರಲ್ಲಿ ವೇಣೂರಿನಲ್ಲಿ ಮಹಾಮಸ್ತಕಾಭಿಷೇಕ ನಡೆದಿದ್ದು, ಈ ಬಾರಿ ಫೆ.22ರಿಂದ ಮಾರ್ಚ್ 1ರವರೆಗೆ ಮಹಾ ಪರ್ವ ನಡೆಯಲಿದೆ.

ಯುಗಳಮುನಿಗಳಾದ ಅಮೋಘ ಕೀರ್ತಿ ಮುನಿಮಹಾಜರು, ಅಮರಕೀರ್ತಿ ಮುನಿ ಮಹಾರಾಜರ ಉಪಸ್ಥಿತಿಯಲ್ಲಿ ಮಸ್ತಕಾಭಿಷೇಕ ನಡೆಯಲಿದೆ.

ಬೀದರ್: ಬಿಜೆಪಿಯಲ್ಲಿ ಭಿನ್ನಮತ ಸ್ಫೋಟ

ಉತ್ತಮ ಅಭ್ಯರ್ಥಿಗೆ ಟಿಕೆಟ್ ಕೊಡಬೇಕೆಂದು ವಿಜಯೇಂದ್ರ ಕಾಲಿಗೆ ಬಿದ್ದ ಶಾಸಕ ಪ್ರಭು ಚವಾಣ್

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಮುಂಬರುವ ಲೋಕಸಭಾ ಚುನಾವಣೆಗೆ ಬೀದರ್ ಕ್ಷೇತ್ರದ ಅಭ್ಯರ್ಥಿ ಆಯ್ಕೆ ವಿಚಾರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಸಮ್ಮುಖದಲ್ಲೇ ಸೋಮವಾರ ಸ್ಫೋಟಗೊಂಡಿದೆ.

ರಾಜ್ಯ ಅಧ್ಯಕ್ಷರಿಗೆ ಸೋಮವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಔರಾದ್ ಶಾಸಕ ಪ್ರಭು ಚವಾಣ್ ಅವರು, ‘ಬೀದರ್ ಜಿಲ್ಲೆಗೆ ಉತ್ತಮ ಅಭ್ಯರ್ಥಿಯನ್ನು ಕೊಡಬೇಕು. ಇಡೀ ಜಿಲ್ಲೆಯ ಪಕ್ಷದ ಪರವಾಗಿ ಮನವಿ ಮಾಡುತ್ತೇನೆ. ನಾನು ನಿಮಗೆ ಕೈಜೋಡಿಸುತ್ತೇನೆ, ಕಾಲಿಗೆ ಬೀಳುತ್ತೇನೆ’ ಎಂದು ಹೇಳುತ್ತಲೇ ವಿಜಯೇಂದ್ರ ಅವರ ಕಾಲಿಗೆರಗಿ ದೀರ್ಘದಂಡ ನಮಸ್ಕಾರ ಮಾಡಿದರು. ವಿಜಯೇಂದ್ರ ಪಕ್ಕದಲ್ಲೇ ಕುಳಿತಿದ್ದ ಕೇಂದ್ರ ಸಚಿವರೂ ಆದ ಬೀದರ್‌ನ ಹಾಲಿ ಸಂಸದ ಭಗವಂತ ಖೂಬಾ ಅವರು ಇದರಿಂದ ತೀವ್ರ ಮುಜುಗರಕ್ಕೊಳಗಾದರು.

ಇದಕ್ಕೆ ಖೂಬಾ ಬೆಂಬಲಿಗರು ವೇದಿಕೆ ಬಳಿ ಬಂದು ಚವಾಣ್ ನಡೆಗೆ ಅಸಮಾಧಾನ ವ್ಯಕ್ತಪಡಿ-ಸಿದರು. ಘೋಷಣೆಗಳನ್ನು ಕೂಗಿದರು. ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಪಕ್ಷದ ಹಾಲಿ, ಮಾಜಿ ಶಾಸಕರು, ಮುಖಂಡರು ವೇದಿಕೆಯ ಮೇಲಿದ್ದರು.

‘ಯಾರೂ ಕೂಡ ನನ್ನ ಪರ ಘೋಷಣೆ ಕೂಗಬೇಡಿ’ ಎಂದು ಖೂಬಾ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ಒಂದು ಕಡೆ ಸಮಾರಂಭದಲ್ಲಿ ಮುಖಂಡರು ಭಾಷಣ ಮಾಡುತ್ತಿದ್ದರೆ, ಇನ್ನೊಂದು ಕಡೆ ವೇದಿಕೆಯ ಬಳಿ ಖೂಬಾ ಬೆಂಬಲಿಗರನ್ನು ಸಮಾಧಾನ ಪಡಿಸುವ ಕೆಲಸ ಕಾರ್ಯಕ್ರಮದ ಕೊನೆಯವರೆಗೂ ನಡೆದೇ ಇತ್ತು.

ಬೀದರ್‌ನಲ್ಲಿ ಸೋಮವಾರ ನಡೆದ ಅಭಿನಂದನಾ ಸಮಾರಂಭದಲ್ಲಿ ಔರಾದ್ ಶಾಸಕ ಪ್ರಭು ಚವಾಣ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಕಾಲಿಗೆ ಬಿದ್ದು, ಲೋಕಸಭೆ ಚುನಾವಣೆಯಲ್ಲಿ ಬೀದರ್ ಕ್ಷೇತ್ರಕ್ಕೆ ಉತ್ತಮ ಅಭ್ಯರ್ಥಿ ಕೊಡಬೇಕೆಂದು ಮನವಿ ಮಾಡಿದರು. ವಿಜಯೇಂದ್ರ ಪಕ್ಕದಲ್ಲಿಯೇ ಕುಳಿತಿದ್ದ ಕೇಂದ್ರ ಸಚಿವ ಭಗವಂತ ಖೂಬಾ ತೀವ್ರ ಮುಜುಗರಕ್ಕೆ ಒಳಗಾದರು —ಪ್ರಜಾವಾಣಿ ಚಿತ್ರ

ಈ ಘಟನೆಯಿಂದಾಗಿ ‘ಬೀದರ್ ಲೋಕಸಭೆ ಕ್ಷೇತ್ರದ ಬಿಜೆಪಿಯಲ್ಲಿ ಎಲ್ಲವೂ ಸರಿ ಇಲ್ಲ’ ಎನ್ನುವುದು ಜಗಜ್ಜಾಹೀರಾಗಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಚುನಾವಣೆ ಸಿದ್ಧತೆ ಕುರಿತು ಬೀದರ್ ಜಿಲ್ಲಾ ಮುಖಂಡರು, ಶಾಸಕರೊಂದಿಗೆ ನಡೆಸಿದ ಆಂತರಿಕ ಸಭೆಯಲ್ಲೂ ಪ್ರಭು ಚವಾಣ್ ಅವರು ಖೂಬಾ ಬದಲು ಅನ್ಯರಿಗೆ ಟಿಕೆಟ್ ನೀಡಬೇಕು ಎಂದು ಆಗ್ರಹಿಸಿದ್ದರು. ಬಳಿಕ ಪಕ್ಷದ ಮುಖಂಡರು ಅದಕ್ಕೆ ತೇಪೆ ಹಚ್ಚುವ ಕೆಲಸ ಮಾಡಿದ್ದರು. ‘ಸಭೆಯಲ್ಲಿ ಏನೂ ನಡೆದಿಲ್ಲ. ನಾವೆಲ್ಲ ಒಗ್ಗಟ್ಟಾಗಿದ್ದೇವೆ’ ಎಂದು ಮುಖಂಡರು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು. ಆದರೆ, ಈಗ ಬಹಿರಂಗ ಸಭೆಯಲ್ಲಿಯೇ ಚವಾಣ್ ಅವರು ಖೂಬಾ ಎದುರಿನಲ್ಲೇ ಅವರ ವಿರುದ್ಧ ಧ್ವನಿ ಎತ್ತಿದ್ದಾರೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಲು ಖೂಬಾ ಕೆಲಸ ಮಾಡಿದ್ದಾರೆ ಎಂದು ಚವಾಣ್ ಅವರು ಆರಂಭದಿಂದಲೂ ಆರೋಪ ಮಾಡುತ್ತ ಬಂದಿದ್ದಾರೆ. ಅದನ್ನು ಖೂಬಾ ಅಲ್ಲ-ಗಳೆದಿದ್ದಾರೆ. ಒಂದೇ ವೇದಿಕೆಯನ್ನು ಇಬ್ಬರು ಹಂಚಿಕೊಳ್ಳುತ್ತಿರಲಿಲ್ಲ. ಇಬ್ಬರ ನಡುವಿನ ಭಿನ್ನಮತ ಕೊನೆಗಾಣಿಸಲು ಹಲವು ಪ್ರಯತ್ನಗಳು ನಡೆದ್ದವು. ಆದರೆ, ಯಶಸ್ಸು ಸಿಕ್ಕಿಲ್ಲ. ವಿಜಯೇಂದ್ರ ಅವರು ಅಧ್ಯಕ್ಷರಾದ ನಂತರ ಎಲ್ಲವೂ ಸರಿ ಹೋಗುತ್ತದೆ ಎಂದು ಜಿಲ್ಲೆಯ ಮುಖಂಡರು ಭಾವಿಸಿದ್ದರು. ಚುನಾವಣೆಯ ಹೊಸ್ತಿಲಲ್ಲಿ ಇಬ್ಬರನ್ನು ಒಂದೇ ವೇದಿಕೆಗೆ ಕರೆ ತಂದು, ‘ಪಕ್ಷದಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದೇವೆ’ ಎಂಬ ಸಂದೇಶ ಸಾರಲು ಬಿಜೆಪಿ ಮುಂದಾಗಿತ್ತು. ಆದರೆ, ಅದು ಫಲ ಕೊಡಲಿಲ್ಲ.

ವಿಜಯೇಂದ್ರ ಮಾತಿನ ಚಾಟಿ

‘ತಾವು ಚುನಾಯಿತ ಪ್ರತಿನಿಧಿ ಆದ ನಂತರ ಬಿಜೆಪಿ ಹುಟ್ಟಿದೆ ಎಂಬ ಭಾವನೆ ಬೀದರ್ ಜಿಲ್ಲೆಯ ಮುಖಂಡರಿಗಿದೆ. ರಾಮಚಂದ್ರ ವೀರಪ್ಪನವರು ಅನೇಕ ಸಲ ಗೆದ್ದು ಸಂಸದರಾಗಿ, ಪಕ್ಷಕ್ಕೆ ಭದ್ರ ಬುನಾದಿ ಹಾಕಿದ ಕ್ಷೇತ್ರವಿದು. ಅವರಿಂದ ಇಲ್ಲಿ ಈ ಪಕ್ಷ ಬೆಳೆದಿದೆ. ಅದನ್ನು ಯಾರೂ ಮರೆಯಬಾರದು. ಕಾರ್ಯಕರ್ತರು ಹಲವು ದಶಕಗಳಿಂದ ಶ್ರಮ ವಹಿಸಿ ಪಕ್ಷ ಕಟ್ಟಿ ಬೆಳೆಸಿದ್ದಾರೆ ಎನ್ನುವುದನ್ನು ಮುಖಂಡರು ಮರೆತಿದ್ದಾರೆ ಅನಿಸುತ್ತಿದೆ’ ಎಂದು ವಿಜಯೇಂದ್ರ ಚಾಟಿ ಬೀಸಿದಾಗ, ಕಾರ್ಯಕರ್ತರ ಕರತಾಡನ ಮುಗಿಲು ಮುಟ್ಟಿತು.

ಕನಕದಾಸ, ಸಿ. ಎಂ ಫ್ಲೆಕ್ಸ್ ಹರಿದ ಕಿಡಿಗೇಡಿಗಳು; ಆರೋಪ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆರಗೋಡು ಗ್ರಾಮದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ಕೈಗೊಂಡಿದ್ದ ಕಾರ್ಯಕರ್ತರಲ್ಲಿ ಕೆಲ ಕಿಡಿಗೇಡಿಗಳು ಕುರುಬರ ಸಂಘದ ವಿದ್ಯಾರ್ಥಿನಿಲಯಕ್ಕೆ ನುಗ್ಗಿ ದಾಂದಲೆ ನಡೆಸಿದ್ದಾರೆ, ಕನಕದಾಸ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಫ್ಲೆಕ್ಸ್ ಹರಿದು ಹಾಕಿದ್ದಾರೆ ಎಂದು ಕುರುಬರ ಸಂಘ ಜಿಲ್ಲಾ ಘಟಕ ಆರೋಪಿಸಿದೆ.

ಸೋಮವಾರ ರಾತ್ರಿ ತುರ್ತು ಪತ್ರಿಕಾಗೋಷ್ಠಿ ನಡೆಸಿದ ಸಂಘದ ಅಧ್ಯಕ್ಷ ಸುರೇಶ್, ‘ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಕುರುಬರ ಸಂಘದ ವಿದ್ಯಾರ್ಥಿನಿಲಯಕ್ಕೆ ಕಿಡಿಗೇಡಿಗಳು ಅಕ್ರಮವಾಗಿ ಪ್ರವೇಶಿಸಿ ಕಿಟಕಿ ಗಾಜುಗಳನ್ನು ಒಡೆದು ವಿಕೃತಿ ಮೆರೆದಿದ್ದಾರೆ. ಕನಕದಾಸ ಹಾಗೂ ಮುಖ್ಯಮಂತ್ರಿಗಳ ಭಾವಚಿತ್ರಕ್ಕೆ ಹಾನಿ ಮಾಡಿ, ಫ್ಲೆಕ್ಸ್ ಹರಿದಿದ್ದಾರೆ’ ಎಂದು ಹೇಳಿದರು.

‘ಸಿದ್ದರಾಮಯ್ಯ ಕುರುಬ ಸಮಾಜಕ್ಕೆ ಸೇರಿದ್ದಾರೆಂಬ ಕಾರಣಕ್ಕೆ ಹಾಸ್ಟೆಲ್‌ಗೆ ನುಗ್ಗಿದ್ದಾರೆ. ದಾಸಶ್ರೇಷ್ಠ ಕನಕದಾಸರ ಭಾವಚಿತ್ರ ಹರಿದಿರುವುದು ಖಂಡನೀಯ. ವಿದ್ಯಾರ್ಥಿಗಳು ಕಾಲೇಜಿಗೆ ತೆರಳಿದ್ದರಿಂದ ಯಾವುದೇ ತೊಂದರೆಯಾಗಿಲ್ಲ. ಕಿಡಿಗೇಡಿಗಳನ್ನು ಕೂಡಲೇ ಬಂಧಿಸಬೇಕು. ಘಟನೆಯನ್ನು ಖಂಡಿಸಿ ಸಂಘವು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಿದೆ’ ಎಂದು ಎಚ್ಚರಿಸಿದರು.

ಬಿಜೆಪಿಯವರು ಧರ್ಮದ ಆಧಾರದಲ್ಲಿ ಜನರನ್ನು ಪ್ರಚೋದಿಸಲು ಹೊರಟಿದ್ದಾರೆ. ಸಮಾಜದಲ್ಲಿ ಘರ್ಷಣೆ, ಹಿಂಸೆ ಸೃಷ್ಟಿಸಿ ಜನರನ್ನು ಭಾವನಾತ್ಮಕವಾಗಿ ಕೆರಳಿಸುವುದೇ ಅವರ ಕಾರ್ಯಸೂಚಿ
ದಿನೇಶ್ ಗುಂಡೂರಾವ್
ಆರೋಗ್ಯ ಸಚಿವ

ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ಮರು ಸ್ಥಾಪನೆಯಾಗುವವರೆಗೂ ಹೋರಾಟ ನಡೆಯಲಿದೆ. ಭಾವನಾತ್ಮಕ ವಿಚಾರದಲ್ಲಿ ಜನ ದಂಗೆ ಎದ್ದರೆ ಯಾರೂ ರಕ್ಷಣೆ ನೀಡಲು ಸಾಧ್ಯವಿಲ್ಲ’
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಕೆರಗೋಡು ಘಟನೆ ಬಿಜೆಪಿಯ ಗುಪ್ತ ಕಾರ್ಯಸೂಚಿ. ಬಹುಸಂಖ್ಯಾತರನ್ನು ಓಲೈಕೆ ಮಾಡಲು ಬಿಜೆಪಿ ಈ ರೀತಿ ಮಾಡುತ್ತಿದೆ
ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

ಕೇಸರಿ ಧ್ವಜಕ್ಕೆ ಅವಮಾನವಾದಾಗ, ಒಂದು ಧರ್ಮದ ತುಷ್ಟೀಕರಣ ಮಾಡಿದಾಗ ಹೋರಾಡಿ ಅಧಿಕಾರಕ್ಕೆ ಬಂದಿದ್ದೆವು. ಕೇಸರಿ ಅಂದ್ರೆ ಬಿಜೆಪಿ ಎಂದು ಬ್ರ್ಯಾಂಡ್ ಮಾಡಿದ್ದೀರಿ. ಅದನ್ನೇ ನಾವು ಒಪ್ಪಿಕೊಂಡಿದ್ದೇವೆ.
ಟಿ.ಎಸ್.ಶ್ರೀವತ್ಸ, ಶಾಸಕ

‘ಕಾಂಗ್ರೆಸ್‌ನವರಿಗೆ ಕೇಸರಿ, ಹಿಂದೂಗಳನ್ನು ಕಂಡರೂ ಆಗಲ್ಲ. ತುಷ್ಟೀಕರಣಕ್ಕೆ ಕೆರಗೋಡಿನಲ್ಲಿ ಹನುಮನ ಧ್ವಜ ತೆಗೆದಿದ್ದಾರೆ
ಪ್ರಮೋದ ಮುತಾಲಿಕ್ ಶ್ರೀರಾಮ ಸೇನೆ ಸಂಘಟನೆಯ ರಾಷ್ಟ್ರೀಯ ಘಟಕದ ಅಧ್ಯಕ್ಷ

ಹೈಕೋರ್ಟ್ ತಡೆಯಾಜ್ಞೆ; ಬಾಗಿಲು ತೆರೆದ ಕಾರ್ಖಾನೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಪರಿಸರ ನಿಯಮಾವಳಿ ಉಲ್ಲಂಘನೆಯ ಆರೋಪದಡಿ ಸಿದ್ಧಸಿರಿ ಎಥನಾಲ್ ಮತ್ತು ಪವರ್ ಘಟಕ ಮುಚ್ಚುವಂತೆ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದ ಹಿನ್ನೆಲೆಯಲ್ಲಿ ಕಾರ್ಖಾನೆಯ ಅಧಿಕಾರಿಗಳು ಸೋಮವಾರ ರಾತ್ರಿ ಬೀಗ ತೆರೆದರು. ಯತ್ನಾಳ ಅಭಿಮಾನಿಗಳು, ಬಿಜೆಪಿ ಮುಖಂಡರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

‘ಸತ್ಯಕ್ಕೆ ಜಯವಾಗಿದೆ. ಕಾಂಗ್ರೆಸ್ ಸರ್ಕಾರದ ಷಡ್ಯಂತ್ರಕ್ಕೆ ಕರ್ನಾಟಕ ಹೈಕೋರ್ಟ್ ತಡೆ ನೀಡಿದೆ’ ಎಂದು ಕಾರ್ಖಾನೆಯ ಮಾಲೀಕ, ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ‘ಎಕ್ಸ್’ ಮಾಡಿದ್ದಾರೆ.

‘ನಷ್ಟ ತಡೆಯಲು ಶೆಟ್ಟರ್ ವಾಪಸ್’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಬಿ.ಎಸ್. ಯಡಿಯೂರಪ್ಪ ಕರ್ನಾಟಕ ಜನತಾ ಪಕ್ಷ (ಕೆಜೆಪಿ) ರಚಿಸಿದಾಗ, ಬಿಜೆಪಿಗೆ ನಷ್ಟವಾಗಿತ್ತು. ಜಗದೀಶ ಶೆಟ್ಟರ್ ತೊರೆದಾಗಲೂ ಅಂಥದ್ದೇ ನಷ್ಟವಾದ ಕಾರಣ ಅವರನ್ನು ಪುನಃ ಪಕ್ಷಕ್ಕೆ ಕರೆತರಲಾಯಿತು’ ಎಂದು ಶೆಟ್ಟರ್ ಆಪ್ತ, ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹೇಳಿದರು.

‘ಕಳೆದ ಚುನಾವಣೆಯಲ್ಲಿ ಕೆಲ ನಾಯಕರು ಪಕ್ಷ ತೊರೆದ ಸಂದರ್ಭದಲ್ಲಿ ನಾಯಕರು ಮತ್ತು ಕಾರ್ಯಕರ್ತರು ಬೇಸರ ವ್ಯಕ್ತಪಡಿಸಿದ್ದರು. ಆದ್ದರಿಂದ ಪಕ್ಷದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ತೊರೆದ ನಾಯಕರನ್ನು ವಾಪಸ್ ಪಕ್ಷಕ್ಕೆ ಕರೆ-ಯಿಸಿಕೊಳ್ಳುವ ಪ್ರಕ್ರಿಯೆಗೆ ವೇಗ ಸಿಕ್ಕಿದೆ’ ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಧಾರವಾಡ ಕ್ಷೇತ್ರಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರೇ ಅಭ್ಯರ್ಥಿ. ಬದಲಾವಣೆ ಇಲ್ಲ. ನಾನು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ
ಶಂಕರ ಪಾಟೀಲ ಮುನೇನಕೊಪ್ಪ,
ಮಾಜಿ ಸಚಿವ

‘ಕಳೆದ ಚುನಾವಣೆ ವೇಳೆ ಸ್ವಾಭಿಮಾನಕ್ಕೆ ಧಕ್ಕೆಯಾದ ಕಾರಣ ಶೆಟ್ಟರ್ ಅವರು ಪಕ್ಷ ತೊರೆದಿದ್ದರು. ಅದನ್ನು ಕೇಂದ್ರದ ನಾಯಕರು ಸರಿಪಡಿಸಿದ್ದಾರೆ. ಸೂಕ್ತ ಸ್ಥಾನಮಾನ ಮತ್ತು ಗೌರವ ಕೊಡುವುದಾಗಿ ಭರವಸೆ ನೀಡಿ, ವಾಪಸ್ ಕರೆಸಿಕೊಂಡಿದ್ದಾರೆ’ ಎಂದರು.

ಬಣಗಳ ನಿರ್ವಹಣೆ ಅವಶ್ಯ: ಬಿಜೆಪಿ ಧಾರವಾಡ ಜಿಲ್ಲಾ ಘಟಕದಲ್ಲಿ ಎರಡು–ಮೂರು ಬಣಗಳಿವೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲವನ್ನೂ ನಿರ್ವಹಿಸುವ ಜವಾಬ್ದಾರಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಮೇಲಿದೆ. ಸಣ್ಣಪುಟ್ಟ ಅಸಮಾಧಾನಗಳನ್ನು ಸರಿಪಡಿಸಲಾಗುವುದು’ ಎಂದರು.

ಲಿಂಗಾಯತರಿಗೆ ಅನ್ಯಾಯವಾಗಿಲ್ಲ: ‘ಲಿಂಗಾಯತರಿಗೆ ಅತಿ ಹೆಚ್ಚಿನ ಅವಕಾಶ ಬಿಜೆಪಿ ನೀಡಿದೆ. ಸಮುದಾಯದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಮತ್ತು ಜಗದೀಶ ಶೆಟ್ಟರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಿದೆ. ಅಲ್ಲದೇ, ನನ್ನನ್ನೂ ಸೇರಿ ಹಲವು ಲಿಂಗಾಯತ ನಾಯಕರಿಗೆ ಸಚಿವ ಸ್ಥಾನ ನೀಡಿದೆ. ಬಿಜೆಪಿಯಲ್ಲಿ ಲಿಂಗಾಯತರಿಗೆ ಅನ್ಯಾಯವಾಗಿಲ್ಲ’ ಎಂದರು.

‘ಕಾಂಗ್ರೆಸ್ ಸೇರುವಂತೆ ಅಲ್ಲಿನ ಕೆಲ ನಾಯಕರು ನನ್ನನ್ನು ಆಹ್ವಾನಿಸಿದ್ದು ನಿಜ. ಕಾಂಗ್ರೆಸ್ ವಿರೋಧಿಸಿಯೇ ಬೆಳೆದ ನಾನು ಆ ಪಕ್ಷ ಸೇರುವ ಪ್ರಶ್ನೆಯೇ ಇಲ್ಲ. ಹಿಂದೆಯೂ ಇರಲಿಲ್ಲ, ಮುಂದೆಯೂ ಇಲ್ಲ’ ಎಂದರು.

ಬಂಡೀಪುರ, ನಾಗರಹೊಳೆಯಲ್ಲಿ ಹುಲಿಗಳ ಸಂಖ್ಯೆ ಏರಿಕೆ

ಸಾಂದ್ರತೆ ಹೆಚ್ಚಳ: ಜನವಸತಿಯತ್ತ ಹುಲಿಗಳು

• ಮೋಹನ್ ಕುಮಾರ ಸಿ.

ಮೈಸೂರು: ಕಾಡಂಚಿನ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಹುಲಿಗಳು ನಗರದ ಏಳೆಂಟು ಕಿ.ಮೀ ಸುತ್ತಮುತ್ತ ಕಾಣಿಸಿಕೊಳ್ಳುತ್ತಿವೆ. ರಾಷ್ಟ್ರೀಯ ಉದ್ಯಾನಗಳಲ್ಲಿ ಹುಲಿ ಸಾಂದ್ರತೆಯ ಹೆಚ್ಚಳ ಹಾಗೂ ಅಭಿವೃದ್ಧಿ ಒತ್ತಡ, ಹೊಸ ಆವಾಸಸ್ಥಳಗಳ ಹುಡುಕಾಟದ ಒತ್ತಡಕ್ಕೆ ಅವುಗಳನ್ನು ಸಿಲುಕಿಸಿವೆ ಎನ್ನುವುದು ಪರಿಸರ ತಜ್ಞರ ಪ್ರತಿಪಾದನೆ.

‘ಪರಿಸರ ಸೂಕ್ಷ್ಮವಲಯದಲ್ಲಿ ಮಾನವ ಕೇಂದ್ರಿತ ಅಭಿವೃದ್ಧಿಗೆ ಕಡಿವಾಣ ಹಾಕಬೇಕು. ಬೆಂಗಳೂರಿನ ಅಭಿವೃದ್ಧಿಗೆ ಮೀಸಲಿಡುವಂತೆ ಬಜೆಟ್‌ನಲ್ಲಿ ಶೇ 10ರಷ್ಟು ಅನುದಾನ ವನ್ಯಜೀವಿಗಳ ರಕ್ಷಣೆಗೆ ನೀಡಬೇಕು. ಸರ್ಕಾರ ಶಾಶ್ವತ ನೀತಿಗಳನ್ನು ರೂಪಿಸಬೇಕು’ ಎಂದು ಕೃಪಾಕರ ಹಾಗೂ ಸಂಜಯ್ ಗುಬ್ಬಿ ಹೇಳುತ್ತಾರೆ.

ಹುಲಿ ಹೆಚ್ಚಳಕ್ಕೇ ಕೆಲಸ: ‘ಹುಲಿಗಳ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿಯೇ ಅರಣ್ಯ ಇಲಾಖೆ ಕೆಲಸ ಮಾಡುತ್ತಿದೆ. ಜಿಂಕೆಯಂಥ ಪ್ರಾಣಿಗಳ ಸಂತತಿ ಹೆಚ್ಚಾಗಲು ಕೆರೆಗಳನ್ನು ನಿರ್ಮಿಸಿ, ವರ್ಷವಿಡೀ ನೀರು ತುಂಬಿಸಲಾಗುತ್ತಿದೆ. ಮನೆಗಳಲ್ಲಿ ಜಾನುವಾರು ಸಾಕಿದಂತೆ ಈ ಕ್ರಮ. ಅದರಿಂದ ಸಾಂದ್ರತೆ ಹೆಚ್ಚಾಗಿ ಹೊಸ ನೆಲೆಗಳ ಹುಡುಕಾಟದ ಒತ್ತಡದಲ್ಲಿ ಹುಲಿಗಳು ಸಿಲುಕಿವೆ’ ಎಂದು ವನ್ಯಜೀವಿ ತಜ್ಞ ಸಂಜಯ ಗುಬ್ಬಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಆವಾಸಸ್ಥಾನಕ್ಕೆ ಸೂಕ್ತವಲ್ಲದ ಪ್ರದೇಶಗಳತ್ತಲೂ ಹುಲಿಗಳು ಬರುತ್ತಿವೆ. ಹೀಗಾಗಿಯೇ ಮಂಡಕಳ್ಳಿಯಲ್ಲಿ ಹುಲಿಯೊಂದು ರಸ್ತೆ ಅಪಘಾತದಿಂದ ಮೃತಪಟ್ಟಿದೆ. ಚಿಕ್ಕನಹಳ್ಳಿ, ಅರಬ್ಬಿತಿಟ್ಟು ಸೇರಿದಂತೆ ಚಿಕ್ಕಪುಟ್ಟ ಕಾಡು, ಬೆಟ್ಟಗಳತ್ತ ಹುಲಿಗಳು ಮುಖಮಾಡಿವೆ’ ಎಂದರು.

‘ಹುಲಿಗಳಿಗೆ ವಾರಕ್ಕೆ ಕನಿಷ್ಠ 100 ಕೆ.ಜಿ ಆಹಾರ ಬೇಕು. ಕಾಡುಹಂದಿ, ಜಿಂಕೆ, ಕಡವೆ ಸೇರಿದಂತೆ ಬಲಿ ಪ್ರಾಣಿಗಳೂ ಹೆಚ್ಚಿರಬೇಕು. ಆದರೆ, ಜನವಸತಿ ಪ್ರದೇಶ ಸಮೀಪದ ಕುರುಚಲು ಕಾಡುಗಳಲ್ಲಿ ನೆಲೆಗೊಳ್ಳುವ ಹುಲಿ ಅನಿವಾರ್ಯವಾಗಿ ದನ, ಕರು, ಜಾನುವಾರು ಹಿಡಿಯಬೇಕಾದ ಪರಿಸ್ಥಿತಿ ಬಂದಿದೆ’ ಎಂದರು.

‘ಕಾವೇರಿ, ಮಲೆಮಹದೇಶ್ವರ ವನ್ಯಜೀವಿಧಾಮಗಳಲ್ಲಿ ಹುಲಿ ನೆಲೆಗೊಳ್ಳಲು ಅವಕಾಶವಿದೆ. ವನ್ಯಜೀವಿ ಕಾರಿಡಾರ್‌ಗಳನ್ನು ರಕ್ಷಿಸಬೇಕು. ಜೀವ ಪರಿಸರ ವ್ಯವಸ್ಥೆ ಆಧರಿಸಿದ ನಿರ್ವಹಣೆ ಕಡೆಗೆ ವೈಜ್ಞಾನಿಕ ಕ್ರಮಗಳನ್ನು ಇಲಾಖೆ ಅನುಸರಿಸಬೇಕು’ ಎಂದು ಹೇಳಿದರು.

‘ಕಳೆದುಕೊಂಡ ನಂತರವಷ್ಟೇ ಅರಣ್ಯಗಳ ಬೆಲೆ ಗೊತ್ತಾಗುತ್ತದೆ. ದೇಶದ ಭೂಭಾಗದ ಶೇ 5ರಷ್ಟು ಸಂರಕ್ಷಿತ ಕಾಡುಗಳಿವೆ. ರಾಜ್ಯದ ಬಂಡೀಪುರ, ನಾಗರಹೊಳೆ, ಅಣಶಿ–ದಾಂಡೇಲಿ ಸೇರಿದಂತೆ ಅರಣ್ಯಗಳನ್ನು ಮಾನವ ಕೇಂದ್ರಿತ ಅಭಿವೃದ್ಧಿ ಚಟುವಟಿಕೆಗಳಿಂದ ದೂರವಿಡಬೇಕು’ ಎಂದರು.

ಎಲ್ಲೆಲ್ಲಿ ಕಾಣಿಸಿಕೊಂಡಿವೆ?

ನಾಗರಹೊಳೆ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಗಳು ಮೈಸೂರಿನಿಂದ 60–90 ಕಿಮೀ ದೂರದಲ್ಲಿವೆ. ಕಾಡಂಚಿನ ಬಫರ್ ವಲಯಗಳಲ್ಲಿ ಹುಲಿಗಳು ಬರುವುದು ಸಾಮಾನ್ಯ. ಆದರೆ, ಮೈಸೂರು ಹೊರವಲಯದಲ್ಲಿ ಕಳೆದೊಂದು ವರ್ಷದಿಂದ ಮೂರು ಬಾರಿ ಹುಲಿ ಕಾಣಿಸಿಕೊಂಡಿವೆ.

ಜ.14ರಂದು ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ, ಚನ್ನಹಳ್ಳಿ ಮತ್ತು ಬಿದರಹಳ್ಳಿ ಹುಂಡಿ ಆಸುಪಾಸಿನಲ್ಲಿ, ಕಳೆದ ಡಿಸೆಂಬರ್‌ನಲ್ಲಿ ಮೈಸೂರು ತಾಲ್ಲೂಕಿನ ಚಿಕ್ಕಕಾನ್ಯ, ದೊಡ್ಡಕಾನ್ಯ, ಬ್ಯಾತಹಳ್ಳಿ, ಸಿಂಧುವಳ್ಳಿಯಲ್ಲಿ ಹುಲಿ ಕಾಣಿಸಿಕೊಂಡಿತ್ತು. ಆಗಸ್ಟ್‌ನಲ್ಲಿ ಜಯಪುರ ಹೋಬಳಿಯ ಚಿಕ್ಕನಹಳ್ಳಿ ಅರಣ್ಯ ಪ್ರದೇಶದ ಅರಸಿನಕೆರೆ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿ ತಾಯಿ ಹುಲಿ ಜೊತೆ ಎರಡು ಮರಿಗಳು ಕಾಣಿಸಿಕೊಂಡಿದ್ದವು.

‘ಹೊಸ ನೆಲೆ ಹುಡುಕಾಟ’

‘ಹುಲಿ ಮರಿಗಳು 18 ತಿಂಗಳವರೆಗೆ ತಾಯಿಯೊಂದಿಗೆ ಇದ್ದು, ನಂತರ ಹೊಸ ನೆಲೆಗಳ ಅನ್ವೇಷಣೆ ನಡೆಸುತ್ತವೆ. ಮಂಡಕಳ್ಳಿಯಲ್ಲಿ ಅಪಘಾತಕ್ಕೆ ಬಲಿಯಾದ ಹುಲಿ ನೆಲೆಯ ಹುಡುಕಾಟದಲ್ಲಿತ್ತು ಎನಿಸುತ್ತದೆ’ ಎಂದು ವನ್ಯಜೀವಿ ತಜ್ಞ ಕೃಪಾಕರ ‘ಪ್ರಜಾವಾಣಿ’ಗೆ ಹೇಳಿದರು.

‘ಬಂಡೀಪುರ, ನಾಗರಹೊಳೆ ಅರಣ್ಯ ಪ್ರದೇಶ-ಗಳಲ್ಲಿ ಶೇ 50ರಷ್ಟು ಲಂಟಾನ ಬೆಳೆದಿರುವುದರಿಂದ ಬಲಿ ಪ್ರಾಣಿಗಳ ಸಂಖ್ಯೆ ಏರುಪೇರಾಗಿದೆ. ಅದನ್ನು ತೆರವುಗೊಳಿಸಿ ಆಹಾರ ಲಭ್ಯತೆ ಹೆಚ್ಚಿಸಬೇಕು. ಕಾಡಂಚಿನ ಕುರುಚಲು ಕಾಡು, ಬಫರ್ ವಲಯಗಳ ರಕ್ಷಣೆ ಆದ್ಯತೆಯಾಗಬೇಕು’ ಎಂದು ಹೇಳಿದರು.

ಕಾಡಂಚಿನ ಕಂದಾಯ ಭೂಮಿಯಲ್ಲಿ ಬೆಳೆದಿದ್ದ ಕುರುಚಲು ಕಾಡುಗಳು ಸರ್ಕಾರ ತೆಗೆದುಕೊಳ್ಳುವ ಅಕ್ರಮ–ಸಕ್ರಮ ನಿರ್ಧಾರದಿಂದ ನಾಶವಾಗುತ್ತಿವೆ. ಆವಾಸಸ್ಥಳಗಳಲ್ಲಿ ಒತ್ತಡ ಹೆಚ್ಚಾಗುತ್ತಿದೆ
ಕೃಪಾಕರ, ವನ್ಯಜೀವಿ ತಜ್ಞ

ಅಭಿವೃದ್ಧಿ ಎಲ್ಲಿ ಮಾಡಬೇಕು? ಮಾಡಬಾರದು? ಎಂಬುದನ್ನು ಸರ್ಕಾರ ದಾಖಲಿಸಿ, ನಿಯಮ ರೂಪಿಸಬೇಕು. ಅರಣ್ಯ ಹಾಗೂ ಕಾಡಂಚು ಮಾನವ ಕೇಂದ್ರಿತ ಅಭಿವೃದ್ಧಿ ಮುಕ್ತವಾಗಬೇಕು
ಸಂಜಯ ಗುಬ್ಬಿ, ವನ್ಯಜೀವಿ ತಜ್ಞ

ಚಿಕ್ಕಮಗಳೂರು ಸಮೀಪಕ್ಕೆ ಬಂದ 24 ಕಾಡಾನೆ

ಚಿಕ್ಕಮಗಳೂರು: ನಗರದ ಸಮೀಪಕ್ಕೆ 24 ಕಾಡಾನೆಗಳ ಹಿಂಡು ದಾಂಗುಡಿ ಇಟ್ಟಿದ್ದು, ಸುತ್ತಮುತ್ತಲ ಶಾಲೆಗಳಿಗೆ ಜಿಲ್ಲಾಡಳಿತ ರಜೆ ಘೋಷಿಸಿದೆ.

ತಾಲ್ಲೂಕಿನ ಕೆ.ಆರ್.ಪೇಟೆ ಮತ್ತು ಮಾವಿನಕೆರೆ ಭಾಗದಲ್ಲಿ ಶನಿವಾರ ಕಾಣಿಸಿಕೊಂಡಿದ್ದ ಈ ಆನೆಗಳು, ಸೋಮವಾರ ಬೆಳಿಗ್ಗೆ ನಗರದ ಹೊರ ವಲಯದ ಅಂಬರ್ ವ್ಯಾಲಿ ಶಾಲೆಗೆ ಹೊಂದಿಕೊಂಡಿರುವ ಅರಣ್ಯ ಪ್ರದೇಶಕ್ಕೆ ಬಂದಿವೆ. ಸಮೀಪವೇ ಇರುವ ಕದ್ರಿಮಿದ್ರಿ ಬಳಿ ಕೇಂದ್ರೀಯ ವಿದ್ಯಾಲಯ ಹಾಗೂ ವೈದ್ಯಕೀಯ ಕಾಲೇಜು ಸೇರಿ ಹಲವು ಖಾಸಗಿ ಶಾಲೆ ಮತ್ತು ಕಾಲೇಜುಗಳಿವೆ. ಸಮೀಪದ ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳೂ ಇದ್ದು, ಸೋಮವಾರ ಬೆಳಿಗ್ಗೆಯೇ ಎಲ್ಲಾ ಶಾಲೆಗಳಿಗೆ ರಜೆ ನೀಡಲಾಗಿತ್ತು. ಸುತ್ತಮುತ್ತಲ ಪ್ರದೇಶ-ಗಳಲ್ಲಿ ಸೆಕ್ಷನ್ 144 ಪ್ರಕಾರ ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿಗೊಳಿಸಿದೆ.

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಕಾಡಿನಲ್ಲಿದ್ದ 30 ಆನೆಗಳ ಹಿಂಡಿನಲ್ಲಿ 24 ಆನೆಗಳು ಚಿಕ್ಕಮಗಳೂರು ತಾಲ್ಲೂಕಿನತ್ತ ಬಂದಿವೆ. ರೇಡಿಯೊ ಕಾಲರ್ ಅಳವಡಿಸಿರುವ ‘ಬೀಟಮ್ಮ’ ಎಂಬ ಹೆಣ್ಣಾನೆಯನ್ನು ಈ ಹಿಂಡಿನಲ್ಲಿರುವ ಇತರ ಆನೆಗಳು ಹಿಂಬಾಲಿಸುತ್ತಿವೆ. ಅವುಗಳ ಚಲನ ವಲನದ ಮೇಲೆ ನಿಗಾ ಇರಿಸಲಾಗಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಪಂಡಿತಾರಾಧ್ಯ ಶ್ರೀಗೆ ‘ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ’

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಹೊಸದುರ್ಗ: ಲಂಡನ್‌ನ ಬಸವ ಇಂಟರ್ ನ್ಯಾಷನಲ್ ಫೌಂಡೇಷನ್ ಸಂಸ್ಥೆಯಿಂದ ನೀಡಲಾಗುವ ‘ಡಾ. ಎಂ.ಎಂ.ಕಲಬುರ್ಗಿ ಪ್ರಗತಿಪರ ಚಿಂತಕ’ ಪ್ರಶಸ್ತಿಗೆ ತರಳಬಾಳು ಶಾಖಾಮಠ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ಭಾಜನರಾಗಿದ್ದಾರೆ.

ಶ್ರೀಗಳ ಸಾಮಾಜಿಕ ಸೇವೆ, ಮೌಢ್ಯದ ವಿರುದ್ಧದ ನಿರಂತರ ಹೋರಾಟ ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿಯು ₹ 25,000 ನಗದು ಹಾಗೂ ಪ್ರಶಸ್ತಿ ಫಲಕ ಹೊಂದಿದೆ. ಫೆ. 6ರಂದು ಬೆಳಿಗ್ಗೆ 11.30ಕ್ಕೆ ಧಾರವಾಡದ ಕಲ್ಯಾಣ ನಗರದ ‘ಮಜ್ಜಿಗೆ ಪಂಚಪ್ಪ ಭವನ’ದಲ್ಲಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಮಠದ ಪ್ರಕಟಣೆ ತಿಳಿಸಿದೆ.

‘ಭಾರತಿ ತ್ಯಾಗರಾಜ ಸಮ್ಮಾನ’

ವಸಂತ ಮಾಧವಿ

ನರಸಿಂಹ ಮೂರ್ತಿ

ಬೆಂಗಳೂರು: ಸದ್ಗುರು ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯ ಟ್ರಸ್ಟ್ ನೀಡುವ ‘ಭಾರತಿ ತ್ಯಾಗರಾಜ ಸಮ್ಮಾನ್’ ಪ್ರಶಸ್ತಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ವಸಂತ ಮಾಧವಿ, ಪಿಟೀಲು ವಾದಕ ಎಚ್.ಕೆ. ನರಸಿಂಹಮೂರ್ತಿ ಅವರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹1 ಲಕ್ಷ ನಗದು ಮತ್ತು ಚಿನ್ನದ ಪದಕ ಒಳಗೊಂಡಿದೆ. ಇದೇ 30ರಂದು ಸಂಜೆ 6ಕ್ಕೆ ಬೆಂಗಳೂರಿನ ಚಾಮರಾಜ ಪೇಟೆಯ ಶಂಕರ ಮಠದ ಆವರಣದಲ್ಲಿ ನಡೆಯುವ ‘177ನೇ ವರ್ಷದ ತ್ಯಾಗರಾಜರ ಆರಾಧನೆ ಮತ್ತು ರಾಷ್ಟ್ರೀಯ ಸಂಗೀತೋತ್ಸವ’ದ ಸಮಾರೋಪ ಕಾರ್ಯಕ್ರಮದಲ್ಲಿ ಶೃಂಗೇರಿ ಶಾರದಾ ಪೀಠದ ಆಡಳಿ-ತಾಧಿಕಾರಿಗಳ ಸಲಹೆಗಾರರಾದ ವಿ.ಆರ್. ಗೌರಿಶಂಕರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ನರಸಾ ರೆಡ್ಡಿ ನಿಧನ

ಹೈದರಾಬಾದ್ (ಪಿಟಿಐ): ತೆಲಂಗಾಣದ ಹಿರಿಯ ಕಾಂಗ್ರೆಸ್ ಮುಖಂಡ ನರಸಾ ರೆಡ್ಡಿ (93) ಅವರು ವಯೋಸಹಜ ಕಾಯಿಲೆಯಿಂದಾಗಿ ಸೋಮವಾರ ನಿಧನರಾದರು.

ಮಂಗಳವಾರ, ಜನವರಿ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 30 | ಪುಟ 14
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿಗೆ ಹಲವು ಹಂತಗಳಲ್ಲಿ ಕೊಕ್ಕೆ
ಇ.ಡಿ ವಿಚಾರಣೆಗೆ ಹಾಜರಾದ ಲಾಲು 8
ಮಕ್ಕಳಿಂದ ಶೌಚಾಲಯ ಸ್ವಚ್ಛತೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,941 ▲	21,737 ▲	₹64,680 (ಬೆಂಗಳೂರು) ▲	₹73,400 (ಬೆಂಗಳೂರು) ▲	83.16 ▼

ಕಾರು ಡಿಕ್ಕಿ ಹುಲಿ ಸಾವು

ಮೈಸೂರು: ನಗರ ಹೊರವಲಯದ ಮಂಡಕಳ್ಳಿ ವಿಮಾನ ನಿಲ್ದಾಣ ಸಮೀಪ ಭಾನುವಾರ ರಾತ್ರಿ ಸುಮಾರು 11 ಗಂಟೆಗೆ ರಸ್ತೆ ದಾಟುತ್ತಿದ್ದ 2 ವರ್ಷದ ಗಂಡು ಹುಲಿಗೆ ಕಾರು ಡಿಕ್ಕಿ ಹೊಡೆದಿದ್ದು, ಅದು ಸ್ಥಳದಲ್ಲೇ ಮೃತಪಟ್ಟಿದೆ.

ಮರಸೆ ಗ್ರಾಮದ ಬಳಿ ಅಪಘಾತವಾಗಿದ್ದು, ಹುಲಿಯ ತಲೆ ಭಾಗಕ್ಕೆ ಗಾಯವಾಗಿತ್ತು. ಕಾರಿನ ಮುಂಭಾಗ ಜಖಂಗೊಂಡಿದ್ದು, ಕಾರು ಹಾಗೂ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ.

'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ನಿಯಮಾವಳಿಯಂತೆ ಕ್ರಮ ಕೈಗೊಳ್ಳಲಾಗಿದ್ದು, ಬಂಡೀಪುರ ಹಾಗೂ ಮೈಸೂರಿನ ಪಶು ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕಳೇಬರವನ್ನು ವಿಲೇವಾರಿ ಮಾಡಲಾಯಿತು' ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯಾ ತಿಳಿಸಿದರು.

ರಾಜ್ಯಪಾಲರ ಅಂಗಳ ತಲುಪಿದ ಕೆಪಿಎಸ್‌ಸಿ ಸಂಘರ್ಷ: ನಾಲ್ವರು ಸದಸ್ಯರ ಮೇಲೂ ಕ್ರಮಕ್ಕೆ ಆಗ್ರಹ

ಅಧ್ಯಕ್ಷ ವಜಾಕ್ಕೆ ಕಾರ್ಯದರ್ಶಿ ಪತ್ರ

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಮತ್ತು ನಾಲ್ವರು ಸದಸ್ಯರು ಕರ್ತವ್ಯಲೋಪ ಎಸಗಿ, ಅಧಿಕಾರ ದುರುಪಯೋಗ ಮಾಡಿರುವುದಲ್ಲದೆ, ದುರ್ನಡತೆ ತೋರಿದ್ದಾರೆ. ಹೀಗಾಗಿ ಅವರ ಸದಸ್ಯತ್ವ ರದ್ದುಪಡಿಸಲು ಸೂಕ್ತ ಕ್ರಮ ವಹಿಸಬೇಕು' ಎಂದು ಆಯೋಗದ ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಅವರು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಪತ್ರ ಬರೆದಿದ್ದಾರೆ.

ಏಳು ಪುಟಗಳ ತಮ್ಮ ಪತ್ರದಲ್ಲಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್, ಸದಸ್ಯರಾದ ವಿಜಯ್ ಕುಮಾರ್ ಡಿ. ಕುಚನೂರೆ, ಎಂ.ಬಿ. ಹೆಗ್ಗಣ್ಣವರ, ಬಿ.ವಿ. ಗೀತಾ ಮತ್ತು ಮುಸ್ತಫಾ ಹುಸೇನ್ ಸಯ್ಯದ್ ಅಜೀಜ್ ಅವರ ಕಾರ್ಯವೈಖರಿಯ ಕುರಿತು ವಿವರ ನೀಡಿರುವ ಕಾರ್ಯದರ್ಶಿ, 'ಸಂವಿಧಾನದ ವಿಧಿ 317ರಂತೆ ಇವರೆಲ್ಲರ ಸದಸ್ಯತ್ವ ರದ್ದುಗೊಳಿಸಲು ಕ್ರಮ ತೆಗೆದುಕೊಳ್ಳಬೇಕು' ಎಂದು ಕೋರಿದ್ದಾರೆ.

ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಮೂಲಕ ರಾಜ್ಯಪಾಲರಿಗೆ ಪತ್ರ ಬರೆದಿರುವ ಅವರು, 'ರಾಜ್ಯ ಹಾಗೂ ಅಭ್ಯರ್ಥಿಗಳ ಹಿತಾಸಕ್ತಿ ಕಾಪಾಡಲು ಪತ್ರದಲ್ಲಿರುವ ಅಂಶಗಳನ್ನು ರಾಜ್ಯಪಾಲರಿಗೆ ಮನವರಿಕೆ ಮಾಡಬೇಕು ಎಂದೂ ಮನವಿ ಮಾಡಿದ್ದಾರೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಇದೇ ಮೊದಲ ಬಾರಿಗೆ ಕೆಪಿಎಸ್‌ಸಿ ಕಾರ್ಯದರ್ಶಿಯೊಬ್ಬರು ಅಧ್ಯಕ್ಷ ಮತ್ತು ಸದಸ್ಯರ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದಾಗಿ ಮೂಲಗಳು ಹೇಳಿವೆ.

ಪತ್ರದಲ್ಲಿದೆ ಏನಿದೆ?: 'ಆಯೋಗವು ಸೂಚಿಸಿದ ಅಭ್ಯರ್ಥಿಗೆ ಕಾನೂನು ಕೋಶದ ಮುಖ್ಯಸ್ಥರ ನೇಮಕಾತಿ ಆದೇಶ ನೀಡಿಲ್ಲವೆಂಬ ಕಾರಣಕ್ಕೆ ಆಯೋಗದ ಸಭೆಗಳನ್ನು ಬಹಿಷ್ಕರಿಸಲಾಗಿದೆ; ಆಯ್ಕೆ ಪಟ್ಟಿಗಳಿಗೆ ಅನುಮೋದನೆ ನೀಡುವುದಿಲ್ಲವೆಂದು ಅಧ್ಯಕ್ಷರು ಮತ್ತು ಕೆಲವು ಸದಸ್ಯರು ನಿರ್ಣಯಿಸಿರುವುದು ಕಾನೂನುಬಾಹಿರ ಮತ್ತು ಕರ್ತವ್ಯ ಲೋಪವಾಗಿದೆ.

5ನೇ ಪುಟ ನೋಡಿ

ಪತ್ರದಲ್ಲಿರುವ ಮುಖ್ಯ ಅಂಶಗಳು

- ಕಾನೂನು ಕೋಶದ ಮುಖ್ಯಸ್ಥರ ಹುದ್ದೆಗೆ ನೇಮಕಾತಿ ಆದೇಶ ಹೊರಡಿಸುವವರೆಗೂ ಸಭೆಗಳನ್ನು ನಡೆಸುವುದಿಲ್ಲ. ಆಯ್ಕೆ ಪಟ್ಟಿಗಳನ್ನು ಅನುಮೋದಿಸುವುದಿಲ್ಲವೆಂದು ಕೆಪಿಎಸ್‌ಸಿ ಅಧ್ಯಕ್ಷರು, ಸದಸ್ಯರು ತಿಳಿಸುವುದು ಗುರುತರವಾದ ಕರ್ತವ್ಯಲೋಪ
- ತಮ್ಮ ಕಾರ್ಯವ್ಯಾಪ್ತಿಗೆ ಬಾರದಿದ್ದರೂ ಆಯೋಗದ ಗಣಕ ಕೇಂದ್ರದ ಸಿಬ್ಬಂದಿಗೆ ಅಧ್ಯಕ್ಷರು, ತಾವು ಸೂಚಿಸಿದಂತೆ ಕರ್ತವ್ಯ ನಿರ್ವಹಿಸಲು ಒತ್ತಡ ಹೇರಿರುವುದು ಅಧಿಕಾರದ ದುರ್ಬಳಕೆ ಮತ್ತು ಅಸಾಂವಿಧಾನಿಕ ಕ್ರಮ
- ಕೆಪಿಎಸ್‌ಸಿ ಅಧ್ಯಕ್ಷರು, ಸದಸ್ಯರ ವರ್ತನೆಗಳಿಂದ ನೇಮಕಾತಿ ಪ್ರಕ್ರಿಯೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ
- ಕೆಪಿಎಸ್‌ಸಿ ಅಧ್ಯಕ್ಷರು, ಸದಸ್ಯರ ವರ್ತನೆಗಳಿಗೆ ಅವಕಾಶ ನೀಡಿದರೆ ಮುಂದೆ ಪರೀಕ್ಷಾ ಕಾರ್ಯಗಳಲ್ಲಿಯೂ ಇತರ ಅಕ್ರಮಗಳಿಗೆ ದಾರಿಯಾಗಲಿದೆ
- ಆಯ್ಕೆ ಪಟ್ಟಿಗಳ ಕಡತಗಳಿಗೆ ಅನುಮೋದನೆ ನೀಡದ ಕಾರಣ ಹಲವು ಅಂತಿಮ ಆಯ್ಕೆ ಪಟ್ಟಿಗಳ ಫಲಿತಾಂಶ ಪ್ರಕಟಣೆ ಬಾಕಿಯಿದೆ
- ಪರೀಕ್ಷೆಗಳಲ್ಲಿ ನಡೆಯುವ ದುರಾಚಾರ ತಡೆಗಟ್ಟಲು ಕಾರ್ಯದರ್ಶಿಯು ಕೈಗೊಳ್ಳುವ ಕ್ರಮಗಳಿಗೆ ಆಯೋಗದ ಅಧ್ಯಕ್ಷರು ಅನುಮೋದನೆ ನೀಡಿಲ್ಲ
- ಆಯೋಗದ ಸಭೆಗಳಲ್ಲಿ ಕಾರ್ಯದರ್ಶಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡದೆ, ಆಯೋಗವು ನಿರ್ಣಯಿಸಿದಂತೆ ಸಭಾ ನಡಾವಳಿಗಳನ್ನು ದಾಖಲಿಸುವ ಶೀಘ್ರಲಿಪಿಗಾರರ ರೀತಿಯಲ್ಲಿ ಕಾರ್ಯನಿರ್ವಹಿಸಲು ಅಧ್ಯಕ್ಷರು ಮತ್ತು ಸದಸ್ಯರು ಅಪೇಕ್ಷಿಸುತ್ತಾರೆ. ಅಂತಹ ಕಾರ್ಯನಿರ್ವಹಿಸಲು ಐಎಎಸ್ ಅಧಿಕಾರಿಯ ಅವಶ್ಯಕತೆ ಇಲ್ಲ
- ಅಭ್ಯರ್ಥಿಗಳ ಹಿತಾಸಕ್ತಿ ಕಾಪಾಡಲು, ಕೆಪಿಎಸ್‌ಸಿ ಗೌರವದ ದೃಷ್ಟಿಯಿಂದ ಅಧ್ಯಕ್ಷರು, ಸದಸ್ಯರ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರಿ ರಾಜ್ಯಪಾಲರ ಗಮನಕ್ಕೆ ತರುವುದು ಅನಿವಾರ್ಯವಾಗಿದೆ

ಸಂವಿಧಾನದ 317ನೇ ವಿಧಿಯಲ್ಲಿ ಏನಿದೆ?

ಲೋಕಸೇವಾ ಆಯೋಗದ ಸದಸ್ಯರನ್ನು ತೆಗೆದುಹಾಕುವುದು ಮತ್ತು ಅಮಾನತಿನಲ್ಲಿಡುವ ಕುರಿತು ಸಂವಿಧಾನದ 317ನೇ ವಿಧಿಯಲ್ಲಿ ತಿಳಿಸಲಾಗಿದೆ. 317 (1)ರಲ್ಲಿ, ಅಧ್ಯಕ್ಷ ಅಥವಾ ಸದಸ್ಯನ ದುರ್ವರ್ತನೆಯ ಕಾರಣಕ್ಕೆ ರಾಷ್ಟ್ರಪತಿಯು ಸುಪ್ರೀಂ ಕೋರ್ಟ್‌ನ ಅಭಿಪ್ರಾಯ ಕೇಳಿದಾಗ, ಯಾವುದೇ ಕಾರಣದ ಮೇಲೆ ತೆಗೆದು ಹಾಕಬಹುದೆಂದು ಕೋರ್ಟ್ ಅಭಿಪ್ರಾಯ ನೀಡಿದರೆ ರಾಷ್ಟ್ರಪತಿಯವರು ಆ ಸದಸ್ಯರನ್ನು ಹುದ್ದೆಯಿಂದ ತೆಗೆದು ಹಾಕಬಹುದು.

317 (2)ರಲ್ಲಿ ಆಯೋಗವು ರಾಜ್ಯ ಮತ್ತು ಕೇಂದ್ರ ಸರ್ಕಾರದ ಜಂಟಿ (ಒಕ್ಕೂಟ ಸ್ವರೂಪ) ಆಡಳಿತಕ್ಕೆ ಒಳಪಟ್ಟ ಸಂದರ್ಭದಲ್ಲಿ ರಾಷ್ಟ್ರಪತಿ, ಒಂದು ವೇಳೆ ಆಯೋಗವು ರಾಜ್ಯಕ್ಕೆ ಮಾತ್ರ ಸೀಮಿತವಾಗಿದ್ದರೆ ರಾಜ್ಯಪಾಲರು (ಸುಪ್ರೀಂ ಕೋರ್ಟ್‌ನ ಅಭಿಪ್ರಾಯ ಕೇಳಿ ರಾಷ್ಟ್ರಪತಿಯವರು ಆದೇಶ ನೀಡುವವರೆಗೆ) ಆಯೋಗದ ಅಧ್ಯಕ್ಷ ಅಥವಾ ಇತರ ಸದಸ್ಯರನ್ನು ಅಮಾನತಿನಲ್ಲಿ ಇಡಬಹುದು.



ನಾಡಿನತ್ತ ಕಾಡಾನೆಗಳು

ಚಿಕ್ಕಮಗಳೂರು ನಗರದ ಹೊರ ವಲಯದಲ್ಲಿ ಕಾಡಾನೆಗಳು ಬೀಡು ಬಿಟ್ಟಿದ್ದು, ಸುತ್ತಮುತ್ತಲ ಶಾಲೆಗಳಿಗೆ ಜಿಲ್ಲಾಡಳಿತ ರಜೆ ಘೋಷಿಸಿದೆ

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್ sj
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹5705/gm
ಬೆಳ್ಳಿ ದರ: ₹72/gm
ವೇಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
Ph- 080-29909733/ 9513394070

ಹೆದ್ದಾರಿ ಬಂದ್, ಲಘು ಲಾಠಿ ಪ್ರಹಾರ

ಹನುಮದ್ವಜ ತೆರವು ಪ್ರಕರಣ: ಕೆರಗೋಡಿನಿಂದ ಡಿ.ಸಿ ಕಚೇರಿವರೆಗೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವುಗೊಳಿಸಿರುವುದನ್ನು ಖಂಡಿಸಿ ಬಿಜೆಪಿ, ಜೆಡಿಎಸ್ ಕಾರ್ಯಕರ್ತರು, ಸಂಘ ಪರಿವಾರದ ಸಾವಿರಾರು ಸದಸ್ಯರು ಗ್ರಾಮದಿಂದ ಮಂಡ್ಯದ ಜಿಲ್ಲಾಧಿಕಾರಿ ಕಚೇರಿವರೆಗೆ ಸೋಮವಾರ ಬೃಹತ್ ಪಾದಯಾತ್ರೆ ನಡೆಸಿದರು.

ಬೆಳಿಗ್ಗೆ 8 ಗಂಟೆಗೆ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಪಾದಯಾತ್ರೆಗೆ ಚಾಲನೆ ನೀಡಲಾಯಿತು. 15 ಕಿ.ಮೀ ದಾರಿಯುದ್ದಕ್ಕೂ ಕಾರ್ಯಕರ್ತರು ಕೇಸರಿ ಮಾರ್ಗವನ್ನೇ ನಿರ್ಮಿಸಿದ್ದರು. ಬಾವುಟ, ಬ್ಯಾನರ್, ಬಂಟಿಂಗ್‌ಗಳನ್ನು ಕಟ್ಟಿದ್ದರು. ರಸ್ತೆಬದಿಯ ಮನೆಗಳಿಗೆ, ಕಟ್ಟಡಗಳಿಗೆ ಹನುಮ ಧ್ವಜ ಕಟ್ಟಿ 'ಜೈ ಶ್ರೀರಾಮ್' ಘೋಷಣೆ ಕೂಗಿದರು.

ಡಿ.ಜೆ, ಬ್ಯಾಂಡ್ ಸೆಟ್ ಸದ್ದಿನೊಂದಿಗೆ ಮೆರವಣಿಗೆ ಸಾಗಿತು. ಕೆಲವರು ಬೈಕ್, ಆಟೊ, ಕಾರುಗಳ ರ‍್ಯಾಲಿ ನಡೆಸಿದರು. ಮಾರ್ಗದಲ್ಲಿ ಎಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಅವರ ಫ್ಲೆಕ್ಸ್‌ಗಳು ರಾರಾಜಿಸಿದವು. ಮರಿಲಿಂಗನದೊಡ್ಡಿ, ಹುಲಿವಾನ, ಸಾತನೂರು, ಚಿಕ್ಕಮಂಡ್ಯ ಹಾಗೂ ನಗರದ ವಿವಿಧೆಡೆ ಮುಖಂಡರಿಗೆ ಹಾರ ಹಾಕಿ ಸ್ವಾಗತ ಕೋರಲಾಯಿತು.

ವಿವಿಧೆಡೆ ಲಘು ಉಪಾಹಾರ, ಮಜ್ಜಿಗೆ ಪಾನಕ ವಿತರಿಸಲಾಯಿತು. ಮೆರವಣಿಗೆಯಲ್ಲಿದ್ದ ಶ್ರೀರಾಮನ ಬೃಹತ್ ಭಾವಚಿತ್ರಕ್ಕೆ ಗ್ರಾಮೀಣ ಮಹಿಳೆಯರು, ಮಕ್ಕಳು ಪೂಜೆ ಸಲ್ಲಿಸಿದರು. ಈಡುಗಾಯಿ, ಕರ್ಪೂರ ಹಚ್ಚಿದರು.

ಶಾಸಕನ ಭಾವಚಿತ್ರಕ್ಕೆ ಬೆಂಕಿ: ಮಂಡ್ಯ ರಸ್ತೆಯ ವಿವಿಧೆಡೆ ಶಾಸಕ ಗಣಿಗ ರವಿಕುಮಾರ್ ಅವರ ಭಾವಚಿತ್ರಗಳನ್ನು ಹರಿದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಚಪ್ಪಲಿಯಿಂದ ಹೊಡೆದು ಘೋಷಣೆ ಕೂಗಿದರು.

ನಗರದ ಮಹಾವೀರ ವೃತ್ತ, ಜೆಸಿ ವೃತ್ತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಗಣಿಗ ರವಿಕುಮಾರ್ ಭಾವಚಿತ್ರವುಳ್ಳ ಫ್ಲೆಕ್ಸ್‌ಗೆ ಬೆಂಕಿ ಹಚ್ಚಿದರು. ಬೆಂಕಿ ನಂದಿಸಲು ಬಂದ ಪೊಲೀಸರ ಜೊತೆ ವಾಗ್ವಾದ ನಡೆಸಿದರು. ಮಹಾವೀರ ವೃತ್ತದಲ್ಲಿ ಗುಂಪು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದರಿಂದ ಕೆಲ ಪ್ರತಿಭಟನಾಕಾರರು ಗಾಯಗೊಂಡರು.

ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿಭಟನಕಾರರು ಕುಳಿತು ಘೋಷಣೆ ಕೂಗಿದರು. ಅರ್ಧಗಂಟೆಗೂ ಹೆಚ್ಚು ಕಾಲ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಪಾದಯಾತ್ರೆಯಲ್ಲಿ ಬಿಜೆಪಿ ಮುಖಂಡರಾದ ಸಿ.ಟಿ.ರವಿ, ಕೆ.ಸಿ. ನಾರಾಯಣಗೌಡ, ಪ್ರೀತಂಗೌಡ, ಕಲ್ಯಾಣ ರಾಜ್ಯದ ಪ್ರಗತಿ ಪಕ್ಷದ ಸ್ಥಾಪಕ, ಶಾಸಕ ಗಾಲಿ ಜನಾರ್ದನ ರೆಡ್ಡಿ, ಜೆಡಿಎಸ್ ಶಾಸಕ ಎಚ್.ಟಿ.ಮಂಜು ಪಾಲ್ಗೊಂಡಿದ್ದರು.

ಕೆರಗೋಡು ಗ್ರಾಮದಿಂದ ಪಾದಯಾತ್ರೆಯಲ್ಲಿ ಬಂದ ಪ್ರತಿಭಟನಕಾರರು ಮಂಡ್ಯದ ಜಿಲ್ಲಾಧಿಕಾರಿ ಕಚೇರಿ ಮುಂದೆ ಜಮಾವಣೆಗೊಂಡಿದ್ದರು

ಬೂದಿ ಮುಚ್ಚಿದ ಕೆಂಡ

ಕೆರಗೋಡು ಗ್ರಾಮದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ. ಅಂಗಡಿಗಳು ಮುಚ್ಚಿದ್ದು, ಉದ್ವಿಗ್ನ ಪರಿಸ್ಥಿತಿ ಮುಂದುವರಿದಿದೆ. ಧ್ವಜಸ್ತಂಭದ ಬಳಿ ಯಾರೂ ಬಾರದಂತೆ ಬ್ಯಾರಿಕೇಡ್ ಹಾಕಲಾಗಿದೆ. ಸುತ್ತಲೂ ಪೊಲೀಸ್ ವಾಹನಗಳನ್ನು ನಿಲ್ಲಿಸಿ ಕಟ್ಟೆಚ್ಚರ ವಹಿಸಲಾಗಿದೆ.

ರಾಜ್ಯದಿಂದ ಸೋನಿಯಾ ಗಾಂಧಿ ಅಭ್ಯರ್ಥಿ?

ರಾಜ್ಯಸಭೆ: ಫೆ.27ರಂದು ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ನಾಲ್ಕು ರಾಜ್ಯಸಭಾ ಸ್ಥಾನಗಳು ಸೇರಿದಂತೆ 15 ರಾಜ್ಯಗಳ 56 ಸ್ಥಾನಗಳಿಗೆ ಫೆ.27ರಂದು ದ್ವೈವಾರ್ಷಿಕ ಚುನಾವಣೆ ನಡೆಯಲಿದೆ.

ಈ ಸಂಬಂಧ ಭಾರತೀಯ ಚುನಾವಣಾ ಆಯೋಗವು ಸೋಮವಾರ ವೇಳಾಪಟ್ಟಿ ಪ್ರಕಟಿಸಿದೆ. ಕರ್ನಾಟಕದಿಂದ ರಾಜ್ಯಸಭೆಗೆ ಚುನಾಯಿತರಾಗಿರುವ ಬಿಜೆಪಿಯ ರಾಜೀವ್ ಚಂದ್ರಶೇಖರ್, ಕಾಂಗ್ರೆಸ್‌ನ ಎಲ್. ಹನುಮಂತಯ್ಯ, ಜಿ.ಸಿ.ಚಂದ್ರಶೇಖರ್ ಹಾಗೂ ಸಯ್ಯದ್ ನಾಸಿರ್ ಹುಸೇನ್ ಅವರು ಏಪ್ರಿಲ್ 2ರಂದು ನಿವೃತ್ತರಾಗಲಿದ್ದಾರೆ. ಈ ಚುನಾವಣೆಯಲ್ಲಿ ರಾಜ್ಯ ವಿಧಾನಸಭೆಯ 224 ಶಾಸಕರು ಮತದಾರರಾಗಿದ್ದು, ವಿಧಾನಸಭೆಯ ಬಲಾಬಲದ ಆಧಾರದಲ್ಲಿ ಕಾಂಗ್ರೆಸ್ ಮೂರು ಹಾಗೂ ಬಿಜೆಪಿ ಒಂದು ಸ್ಥಾನ ಗೆಲ್ಲಬಹುದು.

5ನೇ ಪುಟ ನೋಡಿ

ರಾಜ್ಯ ಬಜೆಟ್ ಗಾತ್ರ ₹3.80 ಲಕ್ಷ ಕೋಟಿಗೆ

ಪ್ರಜಾವಾಣಿ ವಾರ್ತೆ

ತುಮಕೂರು: ಈ ಬಾರಿ ಮಂಡನೆಯಾಗಲಿರುವ ರಾಜ್ಯದ ಬಜೆಟ್ ಗಾತ್ರ ₹3.80 ಲಕ್ಷ ಕೋಟಿಗೆ ಏರಿಕೆಯಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ.

ಈವರೆಗೂ ರಾಜ್ಯದ ಬಜೆಟ್ ಗಾತ್ರ ₹3.27 ಲಕ್ಷ ಕೋಟಿ ದಾಟರಲಿಲ್ಲ. ಆದರೆ ಈ ಬಾರಿ ಅದು ಸುಮಾರು ₹50 ಸಾವಿರ ಕೋಟಿಯಷ್ಟು ಹೆಚ್ಚಳವಾಗಲಿದೆ ಎಂದು ಅವರು ಹೇಳಿದರು.

ನಗರದಲ್ಲಿ ಸೋಮವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮತ್ತು ಫಲಾನುಭವಿಗಳಿಗೆ ಸವಲತ್ತು ವಿತರಿಸಿ ಅವರು ಮಾತನಾಡಿದರು.

'ಐದು ಗ್ಯಾರಂಟಿ ಯೋಜನೆ ಜಾರಿ ನಂತರ ಖಜಾನೆ ಖಾಲಿಯಾಗಿದೆ. ಸರ್ಕಾರ ದಿವಾಳಿಯಾಗಿದೆ' ಎಂದು ವಿರೋಧ ಪಕ್ಷಗಳು ಆರೋಪ ಮಾಡುತ್ತಿವೆ. ಸರ್ಕಾರದ ಖಜಾನೆಯಲ್ಲಿ ಹಣ ಇಲ್ಲದಿದ್ದರೆ ಬಜೆಟ್ ಗಾತ್ರವನ್ನು ₹3.80 ಲಕ್ಷ ಕೋಟಿಗೆ ಏರಿಕೆ ಮಾಡಲು ಸಾಧ್ಯವೇ? ಹಣವಿಲ್ಲದೆ ಇಷ್ಟೊಂದು ದೊಡ್ಡ ಗಾತ್ರದ ಬಜೆಟ್ ಮಂಡಿಸಲು ಸಾಧ್ಯವೇ' ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು.

ನಿತೀಶ್ ನಡೆಗೆ 'ಇಂಡಿಯಾ' ಖಂಡನೆ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಾಲ್ಕು ವರ್ಷಗಳ ಕೋರ್ಸ್‌ಗೆ ಎನ್‌ಸಿಇಆರ್‌ಟಿ ಶಿಫಾರಸು

ಪದವಿ ಕಾಲೇಜುಗಳಲ್ಲೂ ಬಿ.ಇಡಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಮುಂದಿನ ಶೈಕ್ಷಣಿಕ ಸಾಲಿನಿಂದ ನಾಲ್ಕು ವರ್ಷಗಳ ಬಿ.ಇಡಿ ಕೋರ್ಸ್ (ಸಂಯೋಜಿತ ಪದವಿ) ಅಳವಡಿಸಿಕೊಳ್ಳಲು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) ಶಿಫಾರಸು ಮಾಡಿದ್ದು, ಇತರೆ ಪದವಿ ಕಾಲೇಜುಗಳಲ್ಲೂ ಕೋರ್ಸ್ ಆರಂಭಿಸಲು ಅವಕಾಶ ನೀಡಿದೆ.

ವಿಶ್ವದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಜತೆ ಭಾರತದ ವಿದ್ಯಾರ್ಥಿಗಳು ಸ್ಪರ್ಧೆ ನಡೆಸಲು ಗುಣಮಟ್ಟದ ಶಿಕ್ಷಕರನ್ನು ಸಿದ್ಧಗೊಳಿಸಬೇಕಿದೆ. ಶಿಕ್ಷಕರಾಗುವವರಿಗೆ ಪದವಿ ಹಂತದಲ್ಲೇ ಬೋಧನಾ ತರಬೇತಿಯ ಅಗತ್ಯವಿದೆ. ಪಿಯು ಉತ್ತೀರ್ಣರಾದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸೆಳೆದು ಭವಿಷ್ಯದ ಅತ್ಯುತ್ತಮ ಶಿಕ್ಷಕರನ್ನಾಗಿ ರೂಪಿಸಲು ನಾಲ್ಕು ವರ್ಷಗಳ ಬಿ.ಇಡಿ ಕೋರ್ಸ್ ನೆರವಾಗಲಿದೆ ಎಂದು ಎನ್‌ಸಿಇಆರ್‌ಟಿ ತನ್ನ ಶಿಫಾರಸಿನಲ್ಲಿ ಉಲ್ಲೇಖಿಸಿದೆ.

ಕರ್ನಾಟಕದಲ್ಲಿ ಮೊದಲು ಒಂದು ವರ್ಷದ ಬಿ.ಇಡಿ ಕೋರ್ಸ್ ಇತ್ತು. ಕಲಾ ಮತ್ತು ವಿಜ್ಞಾನ ವಿಷಯಗಳಲ್ಲಿ ಪದವಿ ಪೂರೈಸಿದ ವಿದ್ಯಾರ್ಥಿಗಳು ಪ್ರೌಢಶಾಲಾ ಹಂತದವರೆಗೆ ಶಿಕ್ಷಕರಾಗಿ ಕೆಲಸ ಮಾಡಲು ಅರ್ಹತೆ ಪಡೆಯುತ್ತಿದ್ದರು. ಪದವಿಪೂರ್ವ ಉಪನ್ಯಾಸಕರಿಗೆ ಬಿ.ಇಡಿ ಕಡ್ಡಾಯ ಮಾಡಿದ ನಂತರ ವಾಣಿಜ್ಯ ಪದವೀಧರರಿಗೂ ಅವಕಾಶ ನೀಡಲಾಯಿತು. ಎನ್‌ಸಿಇಆರ್‌ಟಿ ಶಿಫಾರಸಿನ ಅನ್ವಯ 2016–17ನೇ ಸಾಲಿನಿಂದ ಎರಡು ವರ್ಷಗಳಿಗೆ ನಿಗದಿ ಮಾಡಲಾಗಿತ್ತು.

5ನೇ ಪುಟ ನೋಡಿ

ಮತ್ತೊಂದು ಬಾರಿ ಅವಕಾಶಕ್ಕೆ ಮನವಿ

ಪಿಯು ಕಾಲೇಜುಗಳ ಉಪನ್ಯಾಸಕರಿಗೆ ಬಿ.ಇಡಿ ಕೋರ್ಸ್ ಮುಗಿಸಲು ಇನ್ನೊಂದು ಬಾರಿ ವೇತನಸಹಿತ ರಜೆಯ ಸೌಲಭ್ಯ ಕಲ್ಪಿಸಬೇಕು ಎಂದು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಸರ್ಕಾರಕ್ಕೆ ಪತ್ರ ಬರೆದಿದೆ.

ರಾಜ್ಯದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ 2008ರಿಂದ ಬಿ.ಇಡಿ ಕಡ್ಡಾಯಗೊಳಿಸಲಾಗಿದೆ. ಅಧಿಸೂಚನೆಯ ನಂತರ ನೇಮಕಾತಿ ಹೊಂದಿದ ಉಪನ್ಯಾಸಕರಿಗೆ ಒಂದು ಬಾರಿ ವೇತನಸಹಿತ ರಜೆ, ಮತ್ತೊಂದು ಬಾರಿ ಶಿಷ್ಯ ವೇತನ ನೀಡಿ ಬಿ.ಇಡಿಗೆ ಅವಕಾಶ ನೀಡಲಾಗಿತ್ತು. ಈಗ ನೇಮಕಾತಿ ಹೊಂದಿ 10 ವರ್ಷಗಳು ಪೂರೈಸಿದ್ದು, ಬಿ.ಇಡಿ ಮಾಡದೇ ಇರುವವರಿಗೆ ಕಾಲಮಿತಿ ವೇತನ ಬಡ್ತಿ ತಡೆಹಿಡಿಯಲಾಗಿದೆ. ಅಂಥವರಿಗೆ ಇನ್ನೊಂದು ಅವಕಾಶ ನೀಡಬೇಕು ಎಂದು ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್ ಸರ್ಕಾರಕ್ಕೆ ಮನವಿ ಮಾಡಿದ್ದಾರೆ .

> **ಎನ್‌ಇಪಿಯಲ್ಲಿನ ನಾಲ್ಕು ವರ್ಷಗಳ ಪದವಿ ರದ್ದತಿ/ಮುಂದುವರಿಕೆ ಕುರಿತು ಎಸ್‌ಇಪಿ ಆಯೋಗ ಪರಿಶೀಲಿಸುತ್ತಿದೆ. ಬಿ.ಇಡಿ ಕುರಿತ ಎನ್‌ಸಿಇಆರ್‌ಟಿ ಶಿಫಾರಸನ್ನೂ ಪರಿಶೀಲಿಸಲಾಗುವುದು**
> **ಡಾ.ಎಂ.ಸಿ.ಸುಧಾಕರ್,** ಉನ್ನತ ಶಿಕ್ಷಣ ಸಚಿವ

ಅಂಕಿ ಅಂಶಗಳು

396 ರಾಜ್ಯದ ಬಿ.ಇಡಿ ಕಾಲೇಜುಗಳು

891 ಬಿ.ಇಡಿ ಪೂರೈಸದ ಪಿಯು ಉಪನ್ಯಾಸಕರು

3,450 ಪ್ರತಿವರ್ಷ ಬಿ.ಇಡಿ ಪೂರೈಸುವ ವಿದ್ಯಾರ್ಥಿಗಳು

ಮಂಗಳವಾರದ ಉಷ್ಣಾಂಶ 29° ಗರಿಷ್ಠ 18° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಶುಭ್ರ ಆಗಸ ಇರಲಿದೆ. ಮುಂಜಾನೆಯ ಸಮಯದಲ್ಲಿ ಮಂಜು ಕವಿದಿರಲಿದೆ

ಮುನ್ನೋಟ: ಬುಧವಾರ 30° 17° | ಗುರುವಾರ 30° 17° | ಶುಕ್ರವಾರ 30° 17°

ಮೇಲ್ಸೇತುವೆ ಅಧ್ಯಯನ ಸಮಿತಿಯ ವರದಿಯಲ್ಲಿ ಉಲ್ಲೇಖ

ಪೀಣ್ಯ ಮೇಲ್ಸೇತುವೆ ಸಾಮರ್ಥ್ಯ ಹೆಚ್ಚಳ

• ಆದಿತ್ಯ ಕೆ.ಎ.

ಬೆಂಗಳೂರು: ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆಗೆ ಹೊಸದಾಗಿ ಅಳವಡಿಸಿರುವ 240 ಕೇಬಲ್‌ಗಳಿಂದಾಗಿ ಮೇಲ್ಸೇತುವೆ ಸಾಮರ್ಥ್ಯ ಹೆಚ್ಚಾಗಿರುವುದು ಅಧ್ಯಯನದಿಂದ ದೃಢಪಟ್ಟಿದೆ. ಅಧ್ಯಯನ ವರದಿಗೆ ಸಮ್ಮತಿ ಸಿಕ್ಕಿದರೆ, ಎರಡು ವರ್ಷಗಳಿಂದ ವಾಹನ ಸವಾರರು ಅನುಭವಿಸಿದ್ದ ಸಂಕಷ್ಟಗಳಿಗೆ ಮುಕ್ತಿ ಸಿಗಲಿದೆ.

'ಸಾಮರ್ಥ್ಯ ಪರೀಕ್ಷೆ'ಯ 20 ಪುಟಗಳ ವರದಿಯನ್ನು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ತಾಂತ್ರಿಕ ತಜ್ಞರನ್ನು ಒಳಗೊಂಡ ಅಧ್ಯಯನ ಸಮಿತಿಯು ಹೆದ್ದಾರಿ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ವರದಿಯಲ್ಲಿ ಮೇಲ್ಸೇತುವೆ ಸುರಕ್ಷತೆ ಕುರಿತು ಸಕಾರಾತ್ಮಕ ಅಂಶಗಳನ್ನು ಉಲ್ಲೇಖಿಸಲಾಗಿದೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ನಗರದ ಪೀಣ್ಯ–ಕೆನ್ನಮೆಟಲ್ (ವಿಡಿಯಾ) ನಡುವೆ ಈ ಮೇಲ್ಸೇತುವೆ ಹಾದುಹೋಗಿದ್ದು, ನಗರದ ಅತ್ಯಂತ ಉದ್ದನೆಯ ಸೇತುವೆಗಳಲ್ಲಿ ಇದು ಸಹ ಒಂದಾಗಿದೆ. ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತಿದ್ದವು. ಸೇತುವೆಯ 8ನೇ ಮೈಲಿನ ಜಂಕ್ಷನ್ ಸಮೀಪದ 102 ಹಾಗೂ 103ನೇ ಪಿಲ್ಲರ್‌ನಲ್ಲಿ ಕೇಬಲ್‌ಗಳು ಬಾಗಿದ್ದವು. 2021ರ ಡಿಸೆಂಬರ್‌ನಿಂದಲೇ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ನಂತರ, ತಜ್ಞರ ಅನುಮತಿ ಪಡೆದು, ಭಾರಿ ವಾಹನಗಳ ಸಂಚಾರ ನಿಷೇಧಿಸಿ, ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಈಗ ದುರಸ್ತಿ ಕಾರ್ಯವೂ ಪೂರ್ಣಗೊಂಡು ಪರೀಕ್ಷೆ ಸಹ ಯಶಸ್ವಿ ಆಗಿದೆ.

ಜ.16ರಿಂದ 19ರ ವರೆಗೆ ನಡೆದಿದ್ದ ಪರೀಕ್ಷೆಯಲ್ಲಿ ಬಂದ ವಿವರಗಳನ್ನು ಸಮೀಕ್ಷಿಸಿಕೊಳ್ಳಲಾಗಿತ್ತು. ಅದನ್ನು ತಾಂತ್ರಿಕವಾಗಿ ಅಧ್ಯಯನ ನಡೆಸಿ ಒಟ್ಟುಗೂಡಿಸಿ ವರದಿ ಸಿದ್ಧಪಡಿಸಲಾಗಿದೆ ಎಂದು ಅಧ್ಯಯನ ಸಮಿತಿ ಸದಸ್ಯ ಚಂದ್ರಕಿಶನ್ ತಿಳಿಸಿದ್ದಾರೆ.

'ಉಷ್ಣಾಂಶ ಹಾಗೂ ತಣ್ಣನೆ (ಹಗಲು–ರಾತ್ರಿ ವೇಳೆ) ವಾತಾವರಣ ಗಮನಿಸಲಾಗಿದೆ. ಭಾರ ಹೊತ್ತ ವಾಹನಗಳು ಸೇತುವೆಯಲ್ಲಿ ಸಂಚರಿಸಿದಾಗ ಸ್ಪ್ರಿಂಗ್‌ಗಳು, ಕೇಬಲ್‌ಗಳು ಕೆಳಕ್ಕೆ ಬಾಗಿವೆಯೇ? ಅಥವಾ ಸೇತುವೆ ಮೂಲ ರಚನೆಯಲ್ಲಿ ವ್ಯತ್ಯಾಸವಾಗಿದೆಯೇ ಎಂಬುದನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅಂತಹ ವ್ಯತ್ಯಾಸ ಕಂಡುಬಂದಿಲ್ಲ. ಮೇಲ್ಸೇತುವೆ ಕಂಪನವು ನಿಗದಿಯಷ್ಟೇ ಇದೆ. 'ಇದರಿಂದ ಆತಂಕ ದೂರವಾಗಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸೇತುವೆ ಮೇಲೆ ಭಾರ ಹೇರಿದ 24 ಗಂಟೆಗಳ ಪರಿಶೀಲನೆ ನಡೆಸಲಾಗಿತ್ತು. ಆಗ ಸೇತುವೆ ಮೂಲ ಸ್ವರೂಪಕ್ಕೆ ಬಂದಿರುವುದು ಕಂಡುಬಂದಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಆರಂಭದಲ್ಲಿ 2 ಟ್ರಕ್‌ಗಳನ್ನು ಮಾತ್ರ ಮೇಲಕ್ಕೆ ಕೊಂಡೊಯ್ದು ಪಿಲ್ಲರ್ ಮೇಲೆ ನಿಲ್ಲಿಸಲಾಗಿತ್ತು. ಆಗ ಸ್ಪ್ರಿಂಗ್‌ಗಳು ಎಷ್ಟು ಕೆಳಕ್ಕೆ ಹೋಗಿವೆ ಎಂಬುದನ್ನು ನಮೂದಿಸಿಕೊಳ್ಳಲಾಗಿತ್ತು. ನಂತರ ಭಾರ ಹೊತ್ತ ಎರಡೆರಡೇ ಟ್ರಕ್‌ಗಳನ್ನು ಸೇತುವೆ ಮೇಲಕ್ಕೆ ತಂದು ಪರೀಕ್ಷೆ ನಡೆಸಲಾಗಿತ್ತು. ಹೀಗೆ 16 ಟ್ರಕ್ ಒಮ್ಮೆಲೇ ನಿಲ್ಲಿಸಿ, ಪರಿಶೀಲನೆ ನಡೆಸಲಾಗಿತ್ತು.

'ವರದಿ ಆಧರಿಸಿ ಫೆ.2ರಂದು ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್‌ಗಳು ಹಾಗೂ ತಜ್ಞರ ನೇತೃತ್ವದಲ್ಲಿ ಸಭೆ ನಡೆಯುವ ಸಾಧ್ಯತೆಯಿದೆ. ನಂತರ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಮೇಲ್ಸೇತುವೆಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ಅನುಮತಿ ಕೋರಲಾಗುವುದು. ಅನುಮತಿ ದೊರೆತ ಮರುದಿನವೇ ಮೇಲ್ಸೇತುವೆಯಲ್ಲಿ ಎಲ್ಲ ಮಾದರಿ ವಾಹನ ಸಂಚಾರವನ್ನು ಆರಂಭಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

'ತುಕ್ಕು ಹಿಡಿದ ಕೇಬಲ್‌ಗಳ ಬದಲಾವಣೆ'

'ಯಾವುದೇ ದೊಡ್ಡ ಕಟ್ಟಡ ಅಥವಾ ಸೇತುವೆಯ ರಚನೆಗಳಲ್ಲಿ ಹೆಚ್ಚಿನ ಕಂಪನ ಕಂಡುಬಂದರೆ ಅಪಾಯವಿದೆ ಎಂದೇ ಭಾವಿಸಬೇಕು. ಹೊಸ ಕೇಬಲ್ ಅಳವಡಿಕೆಯ ನಂತರ ಪೀಣ್ಯ ಮೇಲ್ಸೇತುವೆ ಕ್ಷಮತೆಯಿಂದ ಕೂಡಿರುವುದು ಗೋಚರಿಸಿದೆ. ಹೀಗಾಗಿ ಸೇತುವೆಯನ್ನು ಮತ್ತಷ್ಟು ಭದ್ರ ಪಡಿಸಲು ತುಕ್ಕು ಹಿಡಿದಿದ್ದ 1,200 ಕೇಬಲ್‌ಗಳನ್ನು ಬದಲಾವಣೆ ಮಾಡಲಾಗುವುದು. ಅನುಮತಿ ದೊರೆತ ಮೇಲೆ ಸಂಚಾರವನ್ನು ನಿರ್ಬಂಧಿಸಿದರೆ ಕೇಬಲ್ ಬದಲಾವಣೆ ಕಾಮಗಾರಿ ಕೈಗೊಳ್ಳಲಾಗುವುದು' ಎಂದು ಅಧ್ಯಯನ ಸಮಿತಿ ಸದಸ್ಯ ಚಂದ್ರಕಿಶನ್ ತಿಳಿಸಿದ್ದಾರೆ.

ಪೀಣ್ಯ ಮೇಲ್ಸೇತುವೆ

ಅಂಕಿ ಅಂಶಗಳು

240 ಟನ್ ಭಾರ ಹೇರಿ ಪರೀಕ್ಷೆ

3 ದಿನ ನಡೆದಿದ್ದ ಪರೀಕ್ಷೆ

20 ಚಕ್ರಗಳಿಗೆ ಸಂಪರ್ಕ ಕೂಡಿ ರಾಷ್ಟ್ರೀಯ ಹೆದ್ದಾರಿ 4

ಪ್ರಜಾವಾಣಿ ವಿಶೇಷ

ಟೈಲರ್ ಅಭಿವೃದ್ಧಿ ಮಂಡಳಿ ರಚಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ರಾಜ್ಯದಲ್ಲಿ ಟೈಲರ್ ವೃತ್ತಿ ಮಾಡುವ ಕಾರ್ಮಿಕರ ಜೀವನ ಸುಧಾರಣೆಗಾಗಿ 2024ರ ಬಜೆಟ್‌ನಲ್ಲಿ ಟೈಲರ್ ಅಭಿವೃದ್ಧಿ ಮಂಡಳಿ ಅಥವಾ ನಿಗಮ ರಚಿಸಬೇಕು ಎಂದು ಅಖಿಲ ಕರ್ನಾಟಕ ಟೈಲರ್ ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

'ಅಂಬೇಡ್ಕರ್ ಸಹಾಯ ಹಸ್ತ ಯೋಜನೆಯಲ್ಲಿ ಹೆಸರಿಗೆ ಮಾತ್ರ ನಮ್ಮನ್ನು ಗುರುತಿಸಲಾಗಿದೆ. ಯಾವುದೇ ನೆರವು ಸಿಗುತ್ತಿಲ್ಲ. ಟೈಲರ್ ಅಂಗಡಿ ಮಾಲೀಕರಿಗಾಗಲಿ, ಕಾರ್ಮಿಕರಿಗಾಗಲಿ ಸರ್ಕಾರದ ಕಾರ್ಮಿಕರ ಕಾರ್ಡ್ ಕೂಡ ಸಿಗುತ್ತಿಲ್ಲ' ಎಂದು ಅಖಿಲ ಕರ್ನಾಟಕ ಟೈಲರ್ ಸಂಘದ ರಾಜ್ಯ ಅಧ್ಯಕ್ಷ ಎಂ. ಶ್ರೀನಿವಾಸ್ ಕುಮಾರ್ ಹಾಗೂ ರಾಜ್ಯ ಸಂಘಟನೆ ಕಾರ್ಯದರ್ಶಿ ಕೆ. ಮುರಳಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮಾನವ ಕುಲಕ್ಕೆ ಬಟ್ಟೆ ಹೊಲೆಯುವ ನಮಗೆ ಯಾರೂ ನೆರವು ನೀಡುತ್ತಿಲ್ಲ. ಸರ್ಕಾರ ನಮ್ಮ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ನಮಗೆ ನ್ಯಾಯ ಸಿಗದಿದ್ದರೆ ಸರ್ಕಾರದ ವಿರುದ್ಧ ಧರಣಿ ಹಾಗೂ ಬಹಿರಂಗ ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಸುದ್ದಿ 2 ನಿಮಿಷ

ಕನಿಷ್ಠ ವೇತನ ನೀಡುವಂತೆ ಆಗ್ರಹಿಸಿ ಫೆ. 1ಕ್ಕೆ ಪ್ರತಿಭಟನೆ

ಬೆಂಗಳೂರು: ಕೇಂದ್ರ ಸರ್ಕಾರದ ಕಾರ್ಮಿಕ ನೀತಿಗಳನ್ನು ವಿರೋಧಿಸಿ ಹಾಗೂ ಬಿಸಿಯೂಟ, ಅಂಗನವಾಡಿ, ಕೈಗಾರಿಕಾ ಕಾರ್ಮಿಕರಿಗೆ ₹31,500 ಕನಿಷ್ಠ ವೇತನ ನೀಡುವಂತೆ ಆಗ್ರಹಿಸಿ ಫೆ.1ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಎ. ವಿಜಯಭಾಸ್ಕರ್, 'ಕಾರ್ಖಾನೆ ಕಾಯ್ದೆಗೆ ತಿದ್ದುಪಡಿ ಮಾಡುವ ಮೂಲಕ ಕೆಲಸದ ಅವಧಿಯನ್ನು 8 ಗಂಟೆಯಿಂದ 12 ಗಂಟೆಗೆ ಹೆಚ್ಚಿಸಿರುವುದನ್ನು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

'ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸೆಸ್‌ನಿಂದ ಸಂಗ್ರಹಿಸಿರುವ ಹಣದ ದುರುಪಯೋಗವನ್ನು ತಡೆಯಬೇಕು. ಬೀಡಿ ಕಾರ್ಮಿಕರ ತುಟ್ಟಿಭತ್ಯೆ, ಕನಿಷ್ಠ ವೇತನ ಹಾಗೂ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಗಿಗ್ ಕಾರ್ಮಿಕರಿಗೆ ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ ಒದಗಿಸಬೇಕು. ನಾಲ್ಕು ಸಾರಿಗೆ ನಿಗಮಗಳ ನೌಕರರ ಬೇಡಿಕೆಗಳನ್ನು ಈಡೇರಿಸಬೇಕು' ಎಂದು ಆಗ್ರಹಿಸಿದರು.

ಎಐಟಿಯುಸಿಯ ಕಾರ್ಯಾಧ್ಯಕ್ಷ ಎಂ. ದೀಪಕ್, ರಾಜ್ಯ ಉಪಾಧ್ಯಕ್ಷರಾದ ಬಿ. ಅಮ್ಜದ್, ಎಂ. ಜಯಮ್ಮ, ಕಾರ್ಯದರ್ಶಿ ಎಂ. ಸತ್ಯಾನಂದ ಭಾಗವಹಿಸಿದ್ದರು.

ಅನಿಲ್‌ಕುಮಾರ್‌ಗೆ ಲಾಟರಿ ಮೂಲಕ ಒಲಿದ ಅಧ್ಯಕ್ಷ ಸ್ಥಾನ

ಯಲಹಂಕ: ಲಾಟರಿ ಮೂಲಕ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಬಿ.ಎಸ್.ಅನಿಲ್‌ಕುಮಾರ್ ಬೆಟ್ಟಹಲಸೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 26 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ 9 ಮಂದಿ ಬಿಜೆಪಿ ಬೆಂಬಲಿತ, 17 ಮಂದಿ ಕಾಂಗ್ರೆಸ್ ಬೆಂಬಲಿತ ಸದಸ್ಯರಿದ್ದಾರೆ. ಇದುವರೆಗೂ ಪಂಚಾಯಿತಿಯು ಕಾಂಗ್ರೆಸ್ ತೆಕ್ಕೆಯಲ್ಲಿತ್ತು.

ನೂತನ ಅಧ್ಯಕ್ಷರ ಆಯ್ಕೆಗಾಗಿ ಸೋಮವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ರಾಮಮೂರ್ತಿ, ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಅನಿಲ್‌ಕುಮಾರ್ ನಾಮಪತ್ರ ಸಲ್ಲಿಸಿದ್ದರು. ಅನಿರೀಕ್ಷಿತ ಬೆಳವಣಿಗೆಯಲ್ಲಿ ಕಾಂಗ್ರೆಸ್ ಬೆಂಬಲಿತ ನಾಲ್ವರು, ಬಿಜೆಪಿ ಬೆಂಬಲಿತ ಅಭ್ಯರ್ಥಿಗೆ ಮತ ಚಲಾಯಿಸಿದರು. ಇಬ್ಬರಿಗೂ ತಲಾ 13 ಮತಗಳು ಚಲಾವಣೆಯಾಗಿ ಸಮಬಲದ ಫಲಿತಾಂಶ ಹೊರಬಿದ್ದಿತು. ಅಂತಿಮವಾಗಿ ಲಾಟರಿ ಪ್ರಕ್ರಿಯೆ ಮೂಲಕ ಅಧ್ಯಕ್ಷರ ಆಯ್ಕೆ ನಡೆಯಿತು.

ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪಚುನಾವಣೆ

ಮೈತ್ರಿ ಅಭ್ಯರ್ಥಿ ರಂಗನಾಥ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಗೆ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಜೆಡಿಎಸ್ ಮುಖಂಡ, ವಕೀಲ ಎ.ಪಿ. ರಂಗನಾಥ ಸೋಮವಾರ ನಾಮಪತ್ರ ಸಲ್ಲಿಸಿದರು.

ಪುಟ್ಟಣ್ಣ ಅವರ ರಾಜೀನಾಮೆಯಿಂದ ತೆರವಾಗಿರುವ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಳಿದ ಅವಧಿಗೆ ಉಪ ಚುನಾವಣೆ ನಡೆಯುತ್ತಿದೆ. ಬಿಜೆಪಿ–ಜೆಡಿಎಸ್ (ಎನ್‌ಡಿಎ) ಮೈತ್ರಿಕೂಟದ ಅಭ್ಯರ್ಥಿಯಾಗಿ ರಂಗನಾಥ ಕಣಕ್ಕೆ ಇಳಿದಿದ್ದಾರೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, 'ಕೋರ್ ಕಮಿಟಿ' ಅಧ್ಯಕ್ಷ ಜಿ.ಟಿ. ದೇವೇಗೌಡ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಮತ್ತು ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರೊಂದಿಗೆ ಬೆಂಗಳೂರು ಪ್ರಾದೇಶಿಕ ಆಯುಕ್ತರ ಕಚೇರಿಗೆ ತೆರಳಿದ ರಂಗನಾಥ, ಸಹಾಯಕ ಚುನಾವಣಾಧಿಕಾರಿ ಕೆ. ಹರೀಶ್ ಕುಮಾರ್ ಅವರಿಗೆ ನಾಮಪತ್ರ ಸಲ್ಲಿಸಿದರು.

ಬೆಂಗಳೂರು ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾಗಿ ಜೆಡಿಎಸ್ ಮುಖಂಡ ಎ.ಪಿ. ರಂಗನಾಥ ಅವರು ಸಹಾಯಕ ಚುನಾವಣಾಧಿಕಾರಿ ಕೆ. ಹರೀಶ್ ಕುಮಾರ್ ಅವರಿಗೆ ಸೋಮವಾರ ನಾಮಪತ್ರ ಸಲ್ಲಿಸಿದರು. ಜೆಡಿಎಸ್ 'ಕೋರ್ ಕಮಿಟಿ' ಅಧ್ಯಕ್ಷ ಜಿ.ಟಿ. ದೇವೇಗೌಡ, ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಟಿ.ಎ. ಶರವಣ ಜತೆಗಿದ್ದರು

ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಕಣಕ್ಕೆ

ಬೆಂಗಳೂರು ಶಿಕ್ಷಕರ ಕ್ಷೇತ್ರವನ್ನು ಈ ಹಿಂದೆ ಪ್ರತಿನಿಧಿಸುತ್ತಿದ್ದ ಪುಟ್ಟಣ್ಣ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸಿದರು.

ಸಚಿವರಾದ ಬಿ.ಜೆಡ್. ಜಮೀರ್ ಅಹಮದ್ ಖಾನ್, ಡಾ.ಎಂ.ಸಿ. ಸುಧಾಕರ್, ಶಾಸಕ ಎಚ್.ಸಿ. ಬಾಲಕೃಷ್ಣ ಜತೆಗಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಮಂಗಳವಾರ ಮತ್ತೊಂದು ಪ್ರತಿ ಸಲ್ಲಿಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

₹15.34 ಕೋಟಿ ಆಸ್ತಿ: ಒಟ್ಟು ₹15.34 ಕೋಟಿ ಮೌಲ್ಯದ ಆಸ್ತಿ ಹೊಂದಿರುವುದಾಗಿ ಅವರು ನಾಮಪತ್ರದ ಜತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಘೋಷಿಸಿಕೊಂಡಿದ್ದಾರೆ.

ರಂಗನಾಥ ಬಳಿ ₹31.16 ಲಕ್ಷ ಮೌಲ್ಯದ ಚರಾಸ್ತಿ ಮತ್ತು ₹14.69 ಕೋಟಿ ಮೌಲ್ಯದ ಸ್ಥಿರಾಸ್ತಿಗಳಿವೆ. ಅವರ ಪತ್ನಿ ನಂದಿನಿ ಕೆ.ಎಚ್. ಬಳಿ ₹34.29 ಲಕ್ಷ ಮೌಲ್ಯದ ಚರಾಸ್ತಿಗಳಿವೆ. ರಂಗನಾಥ ₹1.93 ಕೋಟಿ ಮೌಲ್ಯದ ಸಾಲ ಮತ್ತು ಇತರ ಬಾಧ್ಯತೆಗಳನ್ನು ಹೊಂದಿದ್ದಾರೆ.

ಒಂದು ಪ್ರಕರಣ: ಕುವೆಂಪು, ಡಾ.ಬಿ.ಆರ್. ಅಂಬೇಡ್ಕರ್, ಬಸವಣ್ಣ ಮತ್ತಿತರರ ವಿಚಾರಗಳುಳ್ಳ ಪಠ್ಯಗಳನ್ನು ಶಾಲಾ ಪಠ್ಯಕ್ರಮದಿಂದ ಕೈಬಿಟ್ಟಿದ್ದರ ವಿರುದ್ಧ ಪ್ರತಿಭಟನೆಗೆ ಕರೆನೀಡಿ ಕರಪತ್ರ ಹಂಚಿದ್ದ ಆರೋಪದ ಮೇಲೆ ರಂಗನಾಥ ವಿರುದ್ಧ ಹಲಸೂರು ಗೇಟ್ ಠಾಣೆ ಪೊಲೀಸರು ಒಂದನೇ ಎಸಿಎಂಎಂ ನ್ಯಾಯಾಲಯದಲ್ಲಿ ಸಲ್ಲಿಸಿರುವ ಖಾಸಗಿ ದೂರಿನ ಪ್ರಕರಣ ಬಾಕಿ ಇದೆ. ಹೈಕೋರ್ಟ್ ಈ ಪ್ರಕರಣದ ವಿಚಾರಣೆಗೆ ತಡೆಯಾಜ್ಞೆ ನೀಡಿದೆ ಎಂಬ ಮಾಹಿತಿ ಪ್ರಮಾಣಪತ್ರದಲ್ಲಿದೆ.

ಮಾಂಸ ಮಾರಾಟ ನಿಷೇಧ ಇಂದು

ಬೆಂಗಳೂರು: 'ಸರ್ವೋದಯ ದಿನ'ದ ಅಂಗವಾಗಿ ಜ.30ರಂದು ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿ ವಧೆ ಹಾಗೂ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಎಲ್ಲೆಡೆ ಆರೋಗ್ಯ ಮೇಳ: ದಿನೇಶ್

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): 'ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ರಾಜ್ಯದ ಎಲ್ಲ ಕಡೆಗಳಲ್ಲಿ ಆರೋಗ್ಯ ಮೇಳಗಳನ್ನು ನಡೆಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ನನ್ನ ಕ್ಷೇತ್ರದಲ್ಲಿ ಮೇಳ ಆಯೋಜಿಸಿದ್ದ ಸಂದರ್ಭದಲ್ಲಿ, ಬೇರೆಡೆಯೂ ಯಾಕೆ ಆಯೋಜಿಸಬಾರದೆಂದು ಯೋಚಿಸಿದ್ದೆ. ಆರೋಗ್ಯ ಸೌಲಭ್ಯಗಳು ಕಡಿಮೆ ಇರುವ ಗುಡ್ಡಗಾಡು ಪ್ರದೇಶಗಳಲ್ಲಿ, ದೂರದ ತಾಲ್ಲೂಕುಗಳಲ್ಲಿ ನಡೆಸಬೇಕೆಂಬ ಕಾರಣದಿಂದ ಕೊಳ್ಳೇಗಾಲದಲ್ಲಿ ಮೊದಲ ಮೇಳ ಆಯೋಜಿಸಲಾಗಿದೆ' ಎಂದರು.

ಪಿಎಚ್‌.ಡಿ ಪ್ರವೇಶಕ್ಕೆ ಸಿಇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿನ ಪಿಎಚ್‌.ಡಿ ಪ್ರವೇಶಕ್ಕೆ ಮುಂದಿನ ಶೈಕ್ಷಣಿಕ ಸಾಲಿನಿಂದ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ವೃತ್ತಿಪರ ಕೋರ್ಸ್‌ಗಳಿಗೆ ನಡೆಸುವ ಸಿಇಟಿ ಮಾದರಿಯಲ್ಲಿ ಏಕ ರೀತಿಯ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಿ, ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ಎಲ್ಲ ವಿಶ್ವವಿದ್ಯಾಲಯಗಳಿಗೂ ಸೀಟು ಹಂಚಿಕೆ ಮಾಡಲು ಯೋಜನೆ ರೂಪಿಸಲಾಗಿದೆ. ಆಯಾ ವಿಶ್ವವಿದ್ಯಾಲಯಗಳಲ್ಲಿ ಓದಿದವರಿಗೆ ಒಂದಷ್ಟು ಸೀಟುಗಳನ್ನು ಮೀಸಲಿಡಲಾಗುತ್ತಿದೆ. ಇದಕ್ಕೆ ಅನುಮತಿ ಕೋರಿ ಉನ್ನತ ಶಿಕ್ಷಣ ಇಲಾಖೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಸಮ್ಮತಿ ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಪ್ರತಿ ವಿಶ್ವವಿದ್ಯಾನಿಲಯದಲ್ಲೂ ಆಯಾ ವಿಭಾಗಗಳಲ್ಲಿ ಲಭ್ಯವಿರುವ ಸೀಟುಗಳ ಆಧಾರದ ಮೇಲೆ ಪ್ರತ್ಯೇಕವಾಗಿ ಪರೀಕ್ಷೆ ನಡೆಸಿ, ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿವೆ. ಇದರಿಂದ ಭ್ರಷ್ಟಾಚಾರ, ಸ್ವಜನ ಪಕ್ಷಪಾತಕ್ಕೆ ದಾರಿಯಾಗಿದೆ ಎಂಬ ಆರೋಪಗಳು ಪದೇ ಪದೇ ಎದುರಾಗುತ್ತಿರುವುದರಿಂದ ಇಲಾಖೆ ಇಂತಹ ಕ್ರಮಕ್ಕೆ ಮುಂದಾಗಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಸಿಇಟಿ ಮೂಲಕ ಪಿಎಚ್‌.ಡಿ ಸೀಟು ಹಂಚಿಕೆ ಮಾಡಿದರೆ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸ್ವಾಯತ್ತೆಗೆ ಧಕ್ಕೆ ಆಗುತ್ತದೆ. ಸರ್ಕಾರ ಇಂತಹ ವಿಷಯಗಳಲ್ಲಿ ಹಸ್ತಕ್ಷೇಪ ಮಾಡ ಬಾರದು' ಎಂದು ಕುಲಪತಿಯೊಬ್ಬರು ಹೇಳಿದರು.

'ಉದ್ಯೋಗ ಸೌಧ'ದ ಎದುರು ಇಂದು ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರಿ ಹುದ್ದೆ ಆಕಾಂಕ್ಷಿಗಳ ಪರವಾಗಿ ಕೆಪಿಎಸ್‌ಸಿ (ಉದ್ಯೋಗಸೌಧ) ಮುಂಭಾಗದಲ್ಲಿ 'ಒಳಜಗಳ ಸಾಕು, ನ್ಯಾಯ ಬೇಕು' ಎಂದು ಆಗ್ರಹಿಸಿ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಧರಣಿ ಕುಳಿತುಕೊಳ್ಳುತ್ತೇನೆ' ಎಂದು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

ತಮ್ಮ ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಸೋಮವಾರ ಬರೆದುಕೊಂಡಿರುವ ಅವರು, 'ಕೆಪಿಎಸ್‌ಸಿ ಕಾರ್ಯವೈಖರಿಯಿಂದ ನೊಂದಿರುವ 150ಕ್ಕೂ ಹೆಚ್ಚು ಯುವಕರು ಮತ್ತು ಯುವತಿಯರು ಸೋಮವಾರ ಬೆಳಿಗ್ಗೆ ನನ್ನ ಮನೆಗೆ ಬಂದಿದ್ದರು. ಅವರ ಪರಿಸ್ಥಿತಿ ವಿವರಿಸಿ ಈಗಾಗಲೇ ಮುಖ್ಯಮಂತ್ರಿಗೆ ಎರಡು ಪತ್ರ ಬರೆದಿದ್ದೇನೆ. ಆಯೋಗದ ಅಧ್ಯಕ್ಷ, ಕಾರ್ಯದರ್ಶಿಯನ್ನು ಭೇಟಿ ಮಾಡಿದ್ದೇನೆ. ಮುಖ್ಯಮಂತ್ರಿಯ ಕಾರ್ಯದರ್ಶಿಗೂ ವಿಚಾರ ತಿಳಿಸಿದ್ದೇನೆ. ಸಚಿವರಾದ ಕೆ.ಜೆ. ಜಾರ್ಜ್ ಅವರಿಗೂ ವಿವರಿಸಿದ್ದೇನೆ' ಎಂದಿದ್ದಾರೆ.

'ಉದ್ಯೋಗ ಸೌಧ ಎಂದು ಹೆಸರು ಇಟ್ಟುಕೊಂಡಿರುವ ಕೆಪಿಎಸ್‌ಸಿ ಕಟ್ಟಡದಿಂದ ಯುವಕರಿಗೆ ನಿರಂತರ ಅನ್ಯಾಯವಾಗುತ್ತಿದೆ. ಆಯೋಗದ ಅಧ್ಯಕ್ಷರ ವಿಶ್ವಾಸದ ಮಾತು, ಕಾರ್ಯದರ್ಶಿ ಸಹಕರಿಸುತ್ತಿಲ್ಲ ಎಂಬ ಆರೋಪ ಇದ್ಯಾವುದೂ ಸಂತ್ರಸ್ತ ಯುವಕರಿಗೆ ಬೇಕಾಗಿಲ್ಲ. ಅವರಿಗೆ ನ್ಯಾಯಬೇಕಿದೆ. ಹೀಗಾಗಿ, ಯುವ ಸಮೂಹದ ಪರವಾಗಿ ನ್ಯಾಯ ಕೇಳಲು ನಾನೇ ಧರಣಿ ಕುಳಿತುಕೊಳ್ಳುತ್ತಿದ್ದೇನೆ' ಎಂದಿದ್ದಾರೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: E-GSU-ELE-2023-24-OT-12 ದಿನಾಂಕ: 24.01.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ [illegible] ಅಮೃತ ಭಾರತ ಯೋಜನೆಯಡಿ ಪ್ರಸ್ತಾವಿತ ಪ್ರಯಾಣಿಕರ ಲಿಫ್ಟ್ ಮತ್ತು ಎಸ್ಕಲೇಟರ್‌ಗಳಿಗೆ ಬೇಕಾದ ವಿದ್ಯುತ್ ವ್ಯವಸ್ಥಾ ಕಾರ್ಯಗಳು.	ರೂ. 1,21,17,134/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19.02.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್, ಗತಿ ಶಕ್ತಿ ಘಟಕ ಬೆಂಗಳೂರು

PUB/657/AAD/PRB/SWR/2023-24

South Western Railway - SWR | SWRRLY | SWRRLY

DOCUMENT LOST

This is to inform the general public that **K.P.Ashwin Kumar** S/o. K.P.Parthasarathi ,Owner of the Below Mentioned Property and have lost the original sale deeds dt: **15/01/2024** reg as document number **31379 / 2004-05** registered on **11.03.2005,** Exucuted by **G Prasad Reddy** to the favour of **Nithyanandan R** , Registered in South Bangalore in respect of the property bearing Site no.88 formed out of Sy.no29/2A and 29/9 registered Bangalore south In this regard complaint has been lodged at HSR layout Police Station Bangalore lost report number **0903851/2024**.If anyone finds the original sale deeds, kindly handover to below registered address.#1419,20th cross ,4th main,7th sector ,HSR layout, Bangalore - 560102 **7338543444**

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045

ಇಮೇಲ್: comp.secy@astrazeneca.com, ವೆಬ್: www.astrazeneca.com/india ಫೋ: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರ ಕಳೆದಿರುವ ಬಗ್ಗೆ ಸೂಚನೆ

[illegible]	[illegible]	[illegible]	[illegible]	[illegible]
G000208	250	449	13615321 - 13615570	[illegible]

SEBI/HO/MIRSD/MIRSD_RTAMB/P/CIR/2022/8

ಸ್ಥಳ: ಬೆಂಗಳೂರು ದಿನಾಂಕ: 29/01/2024 ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಕರ್ನಾಟಕ ಸರ್ಕಾರ

ಕರ್ನಾಟಕ ಚಲನಚಿತ್ರ ಅಕಾಡೆಮಿ

Karnataka Chalanachitra Academy

ಕನ್ನಡ ಚಲನಚಿತ್ರ ಅಮೃತೋತ್ಸವ ಭವನ ಸಂಕೀರ್ಣ, ನಂ. 20/ಎ, ನಂದಿನಿ ಲೇಔಟ್, ಬೆಂಗಳೂರು–560096. ದೂರವಾಣಿ: 080–23493410

ಸಂಖ್ಯೆ:/15ನೇಬೆಂಅಂಚಿ/ಬ್ರಾಂಡಿಂಗ್ ಅಲ್ಪಾವಧಿ ಇ–ಟೆಂಡರ್/15/2023–24 ದಿನಾಂಕ: 25.01.2024

15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಬ್ರಾಂಡಿಂಗ್ ಕೆಲಸಗಳಿಗೆ

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದ ಬ್ರಾಂಡಿಂಗ್, ಡಿಸ್‌ಪ್ಲೇ, ಪೋಸ್ಟರ್ ಮುದ್ರಣ ಮತ್ತು ಮೀಡಿಯಾ ಸೆಂಟರ್ ತೆರೆಯುವ ಕೆಲಸಗಳಿಗೆ ತಗಲುವ ವೆಚ್ಚದ ಕುರಿತಂತೆ ಇ-ಆಡಳಿತ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಅರ್ಹ ಟೆಂಡರ್‌ದಾರರಿಂದ ಅಲ್ಪಾವಧಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಆಸಕ್ತ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ: 25.01.2024 ರಂದು ಮಧ್ಯಾಹ್ನ 3:00 ಗಂಟೆ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇ-ಟೆಂಡರ್‌ಗಳನ್ನು ಇಎಂಡಿ ಮೊತ್ತ **ರೂ. 67,240/-** (ರೂ. ಅರವತ್ತೇಳು ಸಾವಿರದ ಎರಡುನೂರ ನಲವತ್ತು) ನ್ನು ಇ-ಪೇಮೆಂಟ್ ಮೂಲಕ **ದಿನಾಂಕ: 03.02.2024ರ ಸಂಜೆ 5:30 ಗಂಟೆಯೊಳಗೆ** ಸಲ್ಲಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಅರ್ಹತೆ ಷರತ್ತುಗಳ ವಿವರ ಇತ್ಯಾದಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್‌ನ್ನು ದೂರವಾಣಿ ಸಂಖ್ಯೆ: +91-080-46010000, +91-080-68948777 ನ್ನು ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ **ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಕಚೇರಿ (080–23493410)** ಯನ್ನು ಸಂಪರ್ಕಿಸಬಹುದು.

ಸಹಿ/– ರಿಜಿಸ್ಟ್ರಾರ್

DIPR/CP/BCPL/3276/2023-24

PUBLIC NOTICE

Our client ('**Client**') is desirous of entering into certain transactions with respect to the immovable property more fully described in the '**Schedule**' hereto and hereinafter referred to as the '**Schedule Property**' with Mr. A.M. Muddasar Pasha, residing at Bengaluru ('**Owner**'). The Owner has represented to our Client that he is the sole and absolute owner of the Schedule Property, with unrestricted rights of alienation over the same.

Notice is hereby given to the general public that any person/s other than the present owner, asserting any right, title, charge, lien or any other interest whatsoever in respect of the Schedule Property is hereby called upon to submit to the undersigned, their objection if any, to the proposed transaction. The said objections must be in writing, together with documentary proof of such claim/s, so as to reach us at the address given below within a period of **10 (Ten) days** from the date of publication of this Notice. If no such objection/s are received, it shall be deemed that no one else other than the present owner has/have any right, title, interest or claim whatsoever in respect of the Schedule Property and our Client would be at liberty to proceed with the said transaction in connection with the Schedule Property.

SCHEDULE
(Description of the Schedule Property)

All that piece and parcel of immovable property being converted for 'Layout–Residential' purpose and bearing Survey No. 93/2 measuring 06 Acres 28 Guntas including 02 Guntas of regularized A kharab, situated at Hurulagurki Village, Vijayapura Hobli, Devanahalli Taluk, Bengaluru Rural District and bounded on:

East by : Mudugurki Village Boundary;
West by : Property bearing Survey No. 94;
North by : Property bearing Survey No. 92; and
South by : Mudugurki Village Boundary.

Sd/-
Mr. Srinivas B.R. & Ms. Brijita Prakash, Partners
DSK Legal
Prestige Loka, No. 201, 2nd Floor, No. 7/1 & 7/7, Brunton Road, Craig Park Layout, Bengaluru – 560025, Tel: 080-69548770.

Date : 30-01-2024
Place : Bengaluru

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಶ್ರೀ ವಸಂತವಲ್ಲಭರಾಯ ಸ್ವಾಮಿ ದೇವಾಲಯ ಮತ್ತು ಸಮೂಹ ದೇವಾಲಯಗಳು

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ

ವಸಂತಪುರ, ಬೆಂಗಳೂರು, ದೂರವಾಣಿ : 080–2663874

ಸಂಖ್ಯೆ: ಶ್ರೀ.ವ.ವ.ದೇ.ಸ.ಆರ್/15/20–21 ದಿನಾಂಕ: 29.01.2024

ನೇಮಕಾತಿ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ಬೆಂಗಳೂರು ಗ್ರಾಮದ ಶ್ರೀ ನಾಗೇಶ್ವರ ಸ್ವಾಮಿ ದೇವಾಲಯದಲ್ಲಿ **ಪಾರುಪತ್ತೇದಾರರು–01, ಹಸಲುಕಾವಲುಗಾರರು–01, ರಾತ್ರಿಕಾವಲುಗಾರರು–01** ಒಟ್ಟು 3 ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಾವಳಿಗಳು 2002 (ತಿದ್ದುಪಡಿ ನಿಯಮಾವಳಿ 2011) ನಿಯಮ 12 ರನ್ವಯ ನೇಮಕಾತಿ ಮಾಡಿಕೊಳ್ಳಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. [illegible] **ದಿನಾಂಕ:30.01.2024 ರಿಂದ ದಿನಾಂಕ:13.02.2024** [illegible] **13.02.2024 ರ ಸಂಜೆ 05:30 ರ** [illegible]

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು, ಶ್ರೀ ನಾಗೇಶ್ವರಸ್ವಾಮಿ ದೇವಾಲಯ, ಬೆಂಗಳೂರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ: ಬೆಂಅಪ್ರಾ/ವಿಭೂಸ್ವಾಅ–1/ಡಾ॥ ಎಸ್.ಕೆ.ಎಲ್/56/2023–24 ದಿನಾಂಕ: 29.01.2024

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ, ಲಕ್ಷ್ಮೀಪುರ ಗ್ರಾಮಗಳಿಗೆ ಸಂಬಂಧಿಸಿದಂತೆ ಜಮೀನುಗಳ ಅಧಿಸೂಚಿತ ಖಾತೆದಾರರು, ಅನುಭವದಾರರು, ಆಕ್ಷೇಪಣೆದಾರರು ಹಾಗೂ ಎಲ್ಲಾ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಡಾ॥ ಶಿವರಾಮಕಾರಂತ ಬಡಾವಣೆ ರಚಿಸುವ ಸಲುವಾಗಿ ಸದರಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ: ಬಿಡಿಎ/ಕಮೀಷನರ್/ಡಿಸಿ(ಎಲ್‌ಎ)/ಎಸ್‌ಎಲ್‌ಎಒ/ಎ5/ಪಿಆರ್/283/2008–09, ದಿನಾಂಕ 30/12/2008 ನ್ನು ಹೊರಡಿಸಿದ್ದು, ಅದನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 31/12/2008 ರ ಭಾಗ–3, ಪುಟ ಸಂಖ್ಯೆ 1368 ರಲ್ಲಿ ಪ್ರಕಟಣೆ ಮಾಡಲಾಗಿರುತ್ತದೆ.

Dr. K.Shivarama Karantha Layout (Left out land in the PN and FN which are identified within the layout) ರಚಿಸುವ ಸಲುವಾಗಿ ಸದರಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ: ನಅಇ/265/ಬೆಂಭೂಸ್ವಾ/2022, ದಿನಾಂಕ 16/08/2022 ನ್ನು ಹೊರಡಿಸಿದ್ದು, ಅದನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 23/08/2022 ರ ಭಾಗ–3, ಸಂಪುಟ 157, ಸಂಚಿಕೆ 169 ರಲ್ಲಿ ಪ್ರಕಟಣೆ ಮಾಡಲಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ Civil Appeal No. 7661-63/2018 (Arising out of S.L.P(C) No. 10216-10218/2018) Dated: 03/08/2018 ರ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ ನಅಇ/553/ಬೆಂಭೂಸ್ವಾ/2018 ದಿನಾಂಕ: 29/10/2018 ರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾ. ಕೆ.ಶಿವರಾಮ ಕಾರಂತ ಬಡಾವಣೆಯನ್ನು 3546 ಎಕರೆ 12 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಿಸುವ ಯೋಜನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976 ಕಲಂ 18(3) ರಡಿಯಲ್ಲಿ ಯೋಜನಾ ಮಂಜೂರಾತಿಯನ್ನು ನೀಡಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/553/ಎಂಎನ್‌ಎಕ್ಸ್/2018 ದಿನಾಂಕ: 30/10/2018 ರಂದು ಬಿಡಿಎ ಕಾಯ್ದೆ 1976 ಕಲಂ 19(1) ರನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 01/11/2018 ರಂದು ಪ್ರಕಟಿಸಲಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ Miscellaneous Application Nos: 1614-1616/2019, 1346-1348/2019 in Civil Appeal No. 7661-63/2018 Dated: 29/09/2021 ರ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/553/ಬೆಂಭೂಸ್ವಾ/2018 ದಿನಾಂಕ: 29/10/2018 ರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು Dr. K.Shivarama Karantha Layout (Left out land in the PN and FN which are identified within the layout) ಯೋಜನೆಯನ್ನು 245 ಎಕರೆ 16 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಿಸುವ ಯೋಜನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976 ಕಲಂ 18(3) ರಡಿಯಲ್ಲಿ ಯೋಜನಾ ಮಂಜೂರಾತಿಯನ್ನು ನೀಡಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/265/ಎಂಎನ್‌ಎಕ್ಸ್/2022(ಇ) ದಿನಾಂಕ: 18/10/2022 ರಂದು ಬಿಡಿಎ ಕಾಯ್ದೆ 1976 ಕಲಂ 19(1) ರನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 21/10/2022ರ ಭಾಗ–3, ಸಂಚಿಕೆ 213, ಸಂಪುಟ 157, ಪುಟ ಸಂಖ್ಯೆ 12270 ರಿಂದ 12297 ರವರೆಗೆ ಪ್ರಕಟಿಸಲಾಗಿರುತ್ತದೆ.

ದಿನಾಂಕ: 30/01/2024ರಂದು

1. ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ. 2/3, 2/4, 24/2 ಮತ್ತು 75/1.

ಈ ಜಮೀನುಗಳಿಗೆ ಸಂಬಂಧಪಟ್ಟ ಎಲ್ಲಾ ಖಾತೆದಾರರು, ಅನುಭವದಾರರು ಮತ್ತು ಎಲ್ಲಾ ಆಸಕ್ತ ವ್ಯಕ್ತಿಗಳಿಗೆ ಈಗಾಗಲೇ ಭೂಸ್ವಾಧೀನ ಕಾಯ್ದೆ 12(2)ರಡಿ ಅವಾರ್ಡ್ ನೋಟೀಸ್‌ನ್ನು ಲಭ್ಯವಿರುವ ವಿಳಾಸಗಳಿಗೆ ಸ್ಪೀಡ್ ಪೋಸ್ಟ್ ಮೂಲಕ ಈಗಾಗಲೇ ಜಾರಿ ಮಾಡಲಾಗಿದ್ದು, ಒಂದು ವೇಳೆ 12(2) ನೋಟೀಸ್ ತಲುಪದಿದ್ದಲ್ಲಿ ಸದರಿ ಪ್ರಕಟಣೆಯನ್ನೇ ಭೂಸ್ವಾಧೀನ ಕಾಯ್ದೆ 12(2) ನೋಟೀಸ್ ಎಂದು ಪರಿಗಣಿಸಿ, ಮೇಲ್ಕಂಡ ಸರ್ವೆ ನಂಬರ್‌ಗಳ ಸ್ವತ್ತುಗಳನ್ನು ಮರ–ಮಾಲ್ಕಿ ಕಟ್ಟಡಗಳ ಸಮೇತವಾಗಿ ಜಮೀನಿನ ಸ್ವಾಧೀನವನ್ನು ಭೂಸ್ವಾಧೀನ ಕಾಯ್ದೆ 16(1)ರನ್ವಯ ಹಸ್ತಾಂತರಿಸಲು ಈ ಮೂಲಕ ತಿಳಿಯಪಡಿಸಿದೆ. ಇಲ್ಲವಾದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇರೆಗೆ ಭೂಸ್ವಾಧೀನ ಕಾಯ್ದೆಯನ್ವಯ ಮುಂದಿನ ಕ್ರಮ ಜರುಗಿಸಲಾಗುವುದು. ಈ ಪ್ರಕಟಣೆಯನ್ನು ಭೂಸ್ವಾಧೀನ ಕಾಯ್ದೆ ಕಲಂ 12(2) ಎಂದು ಪರಿಗಣಿಸಿ ನಿಗದಿಪಡಿಸಿದ ದಿನಾಂಕದಂದು ಸ್ಥಳದಲ್ಲಿ ಹಾಜರಿದ್ದು ಜಮೀನನ್ನು ಸ್ವಾಧೀನಕ್ಕೆ ನೀಡುವಲ್ಲಿ ಸಹಕರಿಸಲು ಕೋರಿದೆ.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಡಾ॥ ಕೆ. ಶಿವರಾಮ ಕಾರಂತ ಬಡಾವಣೆ, ಬೆಂಅಪ್ರಾ, ಬೆಂಗಳೂರು

‘ಕಾರಂತ ಬಡಾವಣೆ ಶೀಘ್ರ ಅಭಿವೃದ್ಧಿಯಾಗಲಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ‘ಸುಪ್ರೀಂ’ ನಿರ್ದೇಶನದ ಮೇರೆಗೆ ರಚಿಸಲಾಗಿದ್ದ ತ್ರಿಸದಸ್ಯ ಸಮಿತಿ ರದ್ದು
- ಎಲ್ಲ ಅಹವಾಲು ತಾನೇ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ಸ್ಪಷ್ಟನೆ

ಬೆಂಗಳೂರು: ‘ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿಯಾಗಬೇಕು ಮತ್ತು ಶ್ರೀಸಾಮಾನ್ಯರು ತಮ್ಮ ಜೀವಮಾನದಲ್ಲೊಂದು ಸ್ವಂತ ಸೂರು ಕಟ್ಟಿಕೊಳ್ಳಬೇಕು ಎಂದು ಕಾಣುವ ಕನಸು ಸಾಕಾರವಾಗಬೇಕು ಎಂಬುದೇ ನಮ್ಮ ಉದ್ದೇಶ. ಈ ದಿಸೆಯಲ್ಲಿ ನೀವು ರೂಪಿಸಿಕೊಂಡಿರುವ ಅಭಿವೃದ್ಧಿ ವಿಧಾನಗಳೇನು ಎಂಬುದನ್ನು ತಿಳಿಸಿ’ ಎಂದು ಹೈಕೋರ್ಟ್‌, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಸೂಚಿಸಿದೆ.

ಸುಪ್ರೀಂ ಕೋರ್ಟ್‌ ನಿರ್ದೇಶನದ ಅನುಸಾರ ರೂಪುಗೊಂಡಿರುವ ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್‌ ಮತ್ತು ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ವಿಭಾಗೀಯ ವಿಶೇಷ ನ್ಯಾಯಪೀಠ ಈ ಕುರಿತ ಅರ್ಜಿಗಳನ್ನು ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್‌ ಜನರಲ್‌ ಕೆ.ಶಶಿಕಿರಣ ಶೆಟ್ಟಿ ಅವರು ಬಿಡಿಎ ಪರ ಸುದೀರ್ಘ ವಾದ ಮಂಡಿಸಿ, ಬಡಾವಣೆ ಅಭಿವೃದ್ಧಿ ದಿಸೆಯಲ್ಲಿ ಎದುರಾಗಿರುವ ಅಡೆತಡೆಗಳು ಮತ್ತು ಇದರ ಪರಿಹಾರಾರ್ಥವಾಗಿ ಬಿಡಿಎ ಕೈಗೊಂಡಿರುವ ಕ್ರಮಗಳನ್ನು ನ್ಯಾಯಪೀಠಕ್ಕೆ ವಿವರಿಸಿದರು.

ವಿಚಾರಣೆ ಆಲಿಸಿದ ನ್ಯಾಯಪೀಠ, ‘ಆವಲಹಳ್ಳಿ ವ್ಯಾಪ್ತಿಯಲ್ಲಿನ ವಿವಿಧ ಸರ್ವೆ ನಂಬರ್‌ಗಳಲ್ಲಿರುವ ಒಟ್ಟು 29 ಗುಂಟೆಗೂ ಹೆಚ್ಚಿನ ಜಮೀನಿನಲ್ಲಿ ಈಗಾಗಲೇ ನಿರ್ಮಾಣಗೊಂಡಿರುವ ರಚನೆಗಳಿಗೆ ಅಧಿಸೂಚನೆ ಅನ್ವಯ ಸ್ವಾಧೀನ ಪ್ರಕ್ರಿಯೆ ಅನ್ವಯವಾಗುವುದಿಲ್ಲ’ ಎಂದು ಆದೇಶಿಸಿತು.

ಇದೇ ವೇಳೆ ಬಡಾವಣೆ ನಿರ್ಮಾಣ ಕುರಿತ ದೂರುಗಳನ್ನು ಪರಿಹರಿಸಲು ಸುಪ್ರೀಂ ಕೋರ್ಟ್‌ ನಿರ್ದೇಶನದ ಮೇರೆಗೆ ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್‌ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ತ್ರಿಸದಸ್ಯ ಸಮಿತಿ ರದ್ದುಪಡಿಸಿ ಎಲ್ಲ ಅಹವಾಲುಗಳನ್ನು ತಾನೇ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ಸ್ಪಷ್ಟಪಡಿಸಿತು.

ಸಮಿತಿಯ ವಶದಲ್ಲಿದ್ದ ಸಂಪುಟಗಟ್ಟಲೆ ದಾಖಲೆಗಳನ್ನು ಗಣಕೀಕೃತಗೊಳಿಸಿ ಅವುಗಳನ್ನು ಹೈಕೋರ್ಟ್‌ ಕಂಪ್ಯೂಟರ್‌ ವಿಭಾಗಕ್ಕೆ ವರ್ಗಾಯಿಸುವ ಕುರಿತು ಕ್ರಮ ಕೈಗೊಳ್ಳುವಂತೆ ನ್ಯಾಯಾಂಗ ರಿಜಿಸ್ಟ್ರಾರ್‌ ಅವರಿಗೆ ಸೂಚಿಸಿ ವಿಚಾರಣೆಯನ್ನು ಫೆಬ್ರುವರಿ 7ಕ್ಕೆ ಮುಂದೂಡಿತು.

ಪುನರುಚ್ಚಾರ: ಕಳೆದ ವಿಚಾರಣೆ ವೇಳೆಯಲ್ಲಿ, ‘ಸಮಿತಿಗಾಗಿ ಈವರೆಗೆ ₹ 18 ಕೋಟಿ ವ್ಯಯ ಮಾಡಲಾಗಿದೆ. ಸಮಿತಿಗೆ ಮಾಡಲಾಗಿರುವ ಈ ವೆಚ್ಚ ಸಾರ್ವಜನಿಕ ಹಣವಾಗಿದೆ.

ಹೀಗಾಗಿ, ಸಮಿತಿ ಅಧ್ಯಕ್ಷರೇ ಹೇಳಿರುವಂತೆ ಸಮಿತಿಯನ್ನು ರದ್ದುಗೊಳಿಸಲಾಗುವುದು’ ಎಂದು ತಿಳಿಸಿದ್ದನ್ನು ಪುನರುಚ್ಚರಿಸಿತು.

ಪ್ರಕರಣವೇನು?: ಬೆಂಗಳೂರು ಮಹಾನಗರಕ್ಕೆ ಹೊಂದಿಕೊಂಡಂತೆ 2,700 ಎಕರೆಗೂ ಹೆಚ್ಚಿನ ಪ್ರದೇಶದಲ್ಲಿ ಬಿಡಿಎ ನಿರ್ಮಿಸುತ್ತಿರುವ ಶಿವರಾಮ ಕಾರಂತ ಬಡಾವಣೆ ನಿರ್ಮಾಣದ ನಿಟ್ಟಿನಲ್ಲಿ ಭೂ ಸ್ವಾಧೀನ ಸೇರಿದಂತೆ ಹಲವು ಸಮಸ್ಯೆಗಳು ಎದುರಾಗಿದ್ದವು. ಈ ಕುರಿತು ಹೈಕೋರ್ಟ್‌ ಮತ್ತು ಸುಪ್ರೀಂ ಕೋರ್ಟ್‌ಗಳಲ್ಲಿ ಕಾನೂನು ಹೋರಾಟ ನಡೆದು ಎಲ್ಲ ಹಂತಗಳಲ್ಲಿನ ನ್ಯಾಯಾಲಯಗಳು ಸರ್ಕಾರದ ಭೂ ಸ್ವಾಧೀನ ಪ್ರಕ್ರಿಯೆ ಕ್ರಮವನ್ನು ಎತ್ತಿ ಹಿಡಿದಿದ್ದವು.

ಆದರೆ, ಬಡಾವಣೆ ಅಧಿಸೂಚನೆ ಪ್ರಕಟವಾಗುವುದಕ್ಕೂ ಮುನ್ನ ಆ ಪ್ರದೇಶದಲ್ಲಿನ ಜಮೀನು ಮಾಲೀಕರು ಅಭಿವೃದ್ಧಿಪಡಿಸಿದ್ದ ಲೇ ಔಟ್‌ಗಳು ಮತ್ತು ಉದ್ದೇಶಿತ ಬಡಾವಣೆ ವ್ಯಾಪ್ತಿಯಲ್ಲಿನ ಕಂದಾಯ ನಿವೇಶನಗಳು ಹಾಗೂ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಮಿಸಿಕೊಂಡ ಮನೆಗಳ ಸಕ್ರಮೀಕರಣ, ಪರಿಹಾರ ಹಂಚಿಕೆಯಲ್ಲಿ ತಾರತಮ್ಯ ಸೇರಿದಂತೆ ಹಲವು ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಕೆಲವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಈ ಮೇಲ್ಮನವಿಗಳ ಆಧಾರದಲ್ಲಿ ಸುಪ್ರೀಂ ಕೋರ್ಟ್‌ 2020 ಡಿಸೆಂಬರ್‌ 3ರಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್‌ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿ ರಚಿಸಿತ್ತು. ಈ ಸಮಿತಿಯು ನ್ಯಾಯಾಲಯದ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಪರಿಹಾರ ಸೂಚಿಸಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿತ್ತು. ಸಮಿತಿಯ ಅವಧಿ 2023ರ ಡಿಸೆಂಬರ್‌ 31ಕ್ಕೆ ಮುಕ್ತಾಯವಾಗಿತ್ತು.

ಇದೇ ವೇಳೆ ಸಮಿತಿಯ ಅಧ್ಯಕ್ಷರು, ‘ಸಮಿತಿಗೆ ವಹಿಸಲಾಗಿದ್ದ ಕೆಲಸ ಪೂರ್ಣಗೊಂಡಿರುವ ಕಾರಣ ಸಮಿತಿಯನ್ನು ವಿಸರ್ಜಿಸಬಹುದು’ ಎಂದು ತಿಳಿಸಿದ್ದರು. ಆದರೆ, ಸಮಿತಿಯ ಇತರೆ ಸದಸ್ಯರು, ‘ಬಡಾವಣೆ ನಿರ್ಮಾಣ ಸಂಬಂಧ ಇನ್ನೂ ಇರುವ ಹಲವು ದೂರುಗಳನ್ನು ಪರಿಹರಿಸಲು ಸಮಿತಿಯ ಅಧಿಕಾರಾವಧಿಯನ್ನು ಪುನಃ ಆರು ತಿಂಗಳು ವಿಸ್ತರಿಸಬೇಕು’ ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಈ ಕೋರಿಕೆಯ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ ಹೈಕೋರ್ಟ್‌ಗೆ ವರ್ಗಾಯಿಸಿ, ‘ಸಮಿತಿಯ ಮುಂದು ವರಿಕೆ ಸೇರಿದಂತೆ ಎಲ್ಲ ಅಂಶಗಳ ಬಗ್ಗೆ ನೀವೇ ತೀರ್ಮಾನ ಕೈಗೊಳ್ಳಿ’ ಎಂದು ನಿರ್ದೇಶಿಸಿತ್ತು. ಈ ನಿರ್ದೇಶನದ ಅನುಸಾರ ಈ ವಿಶೇಷ ವಿಭಾಗೀಯ ಪೀಠವನ್ನು ರಚಿಸಲಾಗಿದೆ.

ವಾರ್ಷಿಕ ₹ 14 ಲಕ್ಷ ಪಾವತಿಸಲು ಆದೇಶ

ಬೆಂಗಳೂರು: ‘ವೃದ್ಧ ತಾಯಿಯೊಬ್ಬರ ಜೀವನ ನಿರ್ವಹಣೆಗೆ ವಾರ್ಷಿಕ ತಲಾ ₹7 ಲಕ್ಷ ಪಾವತಿಸಿ’ ಎಂದು ಆಕೆಯ ಪುತ್ರ ಮತ್ತು ಮೊಮ್ಮಗಳಿಗೆ ಹೈಕೋರ್ಟ್‌ ನಿರ್ದೇಶಿಸಿದೆ.

ಈ ಕುರಿತಂತೆ ಅಪ್ಪರಂಡ ಶಾಂತಿ ಬೋಪಣ್ಣ (85) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ಆದೇಶ ನೀಡಿದೆ.

ಪ್ರಕರಣವೇನು?: ಅರ್ಜಿದಾರರಾದ ಅಪ್ಪರಂಡ ಶಾಂತಿ ಬೋಪಣ್ಣ ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನಲ್ಲಿ ತಾವು ಹೊಂದಿದ್ದ 22 ಎಕರೆ ಕಾಫಿ ಎಸ್ಟೇಟ್‌ ಅನ್ನು ತಮ್ಮ ಪುತ್ರ ಹಾಗೂ ಮೊಮ್ಮಗಳಿಗೆ 2016ರಲ್ಲಿ ಉಡುಗೊರೆಯಾಗಿ (ಗಿಫ್ಟ್‌ ಡೀಡ್‌) ನೀಡಿದ್ದರು. ಈ ವೇಳೆ ಅಪ್ಪರಂಡ ಶಾಂತಿ ಬೋಪಣ್ಣ ಅವರ ಜೀವನ ನಿರ್ವಹಣೆಗಾಗಿ ವಾರ್ಷಿಕ ತಲಾ ₹ 7 ಲಕ್ಷವನ್ನು ಬ್ಯಾಂಕಿನಲ್ಲಿ ಠೇವಣಿ ಇರಿಸುವುದಾಗಿ ಪುತ್ರ ಹಾಗೂ ಮೊಮ್ಮಗಳು ಭರವಸೆ ನೀಡಿದ್ದರು. ಅಂತೆಯೇ, 2016ರಿಂದ 2019ರವರೆಗೆ ಹಣ ಪಾವತಿಸಿದ್ದರು. ತದನಂತರ ಹಣ ನೀಡಿರಲಿಲ್ಲ.

ಏತನ್ಮಧ್ಯೆ, ಮಗ ಮತ್ತು ಮೊಮ್ಮಗಳು ಆಸ್ತಿ ಮಾರಾಟ ಮಾಡಲು ಪ್ರಯತ್ನಿಸುತ್ತಿರುವ ಸಂಗತಿ ಶಾಂತಿ ಅವರ ಅರಿವಿಗೆ ಬಂದಿತ್ತು. ಹೀಗಾಗಿ, ಗಿಫ್ಟ್‌ ಡೀಡ್‌ ರದ್ದುಪಡಿಸುವಂತೆ ಕೋರಿ ಅಪ್ಪರಂಡ ಶಾಂತಿ ಬೋಪಣ್ಣ, ‘ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ-2007’ರ ಅಡಿಯಲ್ಲಿ 2019ರಲ್ಲಿ ಉಪ ವಿಭಾಗಾಧಿಕಾರಿಗೆ (ಎಸಿ) ಮನವಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ್ದ ಉಪ ವಿಭಾಗಾಧಿಕಾರಿ 2021ರ ಸೆಪ್ಟೆಂಬರ್‌ 15ರಂದು ಗಿಫ್ಟ್‌ ಡೀಡ್‌ ರದ್ದುಗೊಳಿಸಿ ಆದೇಶಿಸಿದ್ದರು. ಇದನ್ನು ಪ್ರಶ್ನಿಸಿ ಮಗ ಮತ್ತು ಮೊಮ್ಮಗಳು, ಜಿಲ್ಲಾಧಿಕಾರಿಗೆ ಮೇಲ್ಮನವಿ ಸಲ್ಲಿಸಿದ್ದರು. 2023ರ ಮಾರ್ಚ್‌ 23ರಂದು ಉಪವಿಭಾಗಾಧಿಕಾರಿ ಆದೇಶವನ್ನು ರದ್ದುಪಡಿಸಿದ್ದ ಜಿಲ್ಲಾಧಿಕಾರಿ, ಪುತ್ರ ಹಾಗೂ ಮೊಮ್ಮಗಳ ಆಸ್ತಿ ಹಕ್ಕನ್ನು ಮರು ಸ್ಥಾಪಿಸಲು ಆದೇಶಿಸಿದ್ದರು.

ಅಂತೆಯೇ, ವೃದ್ಧ ತಾಯಿಯ ಜೀವಿತಾವಧಿವರೆಗೆ ವಾರ್ಷಿಕ ಜೀವನಾಂಶವನ್ನು ಪಾವತಿಸುವಂತೆ ಪುತ್ರ ಮಗ ಮತ್ತು ಮೊಮ್ಮಗಳಿಗೆ ನಿರ್ದೇಶಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಅಪ್ಪರಂಡ ಶಾಂತಿ ಬೋಪಣ್ಣ ಹೈಕೋರ್ಟ್‌ ಮೆಟ್ಟಿಲೇರಿದ್ದರು.

‘ಎಕ್ಸ್‌ ನಿರ್ಬಂಧಿಸಿದರೆ ಹಾನಿ’

ಬೆಂಗಳೂರು: ‘ಸಾರ್ವಜನಿಕರು ಮುಕ್ತವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದನ್ನೇ ನಮ್ಮ ಉದ್ಯಮ ಆಧರಿಸಿದೆ. ಇದಕ್ಕೆ ನಿರ್ಬಂಧ ಹೇರಿದರೆ ಹಾನಿಯಾಗಲಿದೆ’ ಎಂದು ಎಕ್ಸ್‌ ಕಾರ್ಪ್‌ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಎಕ್ಸ್‌ ಕಾರ್ಪ್‌ (ಟ್ವಿಟರ್‌) ಸಲ್ಲಿಸಿರುವ ಮೇಲ್ಮನವಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಪಿ.ಎಸ್‌.ದಿನೇಶ್‌ ಕುಮಾರ್‌ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಸಜನ್‌ ಪೂವಯ್ಯ, ‘ಮಾಹಿತಿ ತಂತ್ರಜ್ಞಾನ ಕಾಯ್ದೆಯ ನಿಯಮ 14ರಲ್ಲಿ ಸಕಾರಣ ಉಲ್ಲೇಖಿಸಬೇಕು ಎಂದು ಹೇಳಿರುವಾಗ ಮರುಪರಿಶೀಲನಾ ಆದೇಶವು ಅತಿ ಗೋಪ್ಯ ವಿಚಾರ ಹೇಗಾಗುತ್ತದೆ. ನಮ್ಮದು ವಾಕ್‌ ಸ್ವಾತಂತ್ರ್ಯ ಆಧರಿಸಿದ ಉದ್ಯಮ. ಆದರೆ, ವಾಕ್‌ ಸ್ವಾತಂತ್ರ್ಯಕ್ಕೆ ವೇದಿಕೆ ಕಲ್ಪಿಸುವುದಕ್ಕೆ ಹಾನಿ ಮಾಡಲಾಗಿದೆ. ಹೀಗಾದರೆ, ನಾವು ಹೇಗೆ ಉದ್ಯಮ ನಡೆಸಬೇಕು’ ಎಂದು ಪ್ರಶ್ನಿಸಿದರು. ಅಂತೆಯೇ, ‘ಖಾತೆಗಳನ್ನು ಸ್ಥಗಿತಗೊಳಿಸಿರುವ ಆದೇಶದ ಬಗ್ಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸೂಚಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, ‘ಅರ್ಜಿದಾರರ ಮನವಿಗೆ ಸಂಬಂಧಿಸಿದಂತೆ ನಿಮ್ಮ ನಿಲುವು ಏನೆಂಬುದನ್ನು ತಿಳಿಸಿ’ ಎಂದು ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯಕ್ಕೆ ಸೂಚಿಸಿ ವಿಚಾರಣೆ ಮುಂದೂಡಿತು.

ಕೆಲವರ ವೈಯಕ್ತಿಕ ಖಾತೆಗಳನ್ನು ನಿರ್ಬಂಧಿಸಿ ಕೇಂದ್ರ ಸರ್ಕಾರವು 2021ರ ಫೆಬ್ರುವರಿ ಮತ್ತು 2022ರ ಅವಧಿಯಲ್ಲಿ ಹೊರಡಿಸಿದ್ದ ಆದೇಶಗಳನ್ನು ಪ್ರಶ್ನಿಸಲಾಗಿದ್ದ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿ ದಂಡ ವಿಧಿಸಿತ್ತು.

ಬಾಲಕನಿಗೆ ಮುಖ್ಯಮಂತ್ರಿ ಮೆಚ್ಚುಗೆ

ಚನ್ನಪಟ್ಟಣ: ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪುಸ್ತಕ ನೋಡದೆ ಸಂವಿಧಾನ ಪೀಠಿಕೆ ಓದಿರುವ ತಾಲ್ಲೂಕಿನ ಅರಳಾಳುಸಂದ್ರ ಕರ್ನಾಟಕ ಪಬ್ಲಿಕ್‌ ಶಾಲೆ ಪುಟ್ಟ ಬಾಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಮೆಚ್ಚುಗೆಗೆ ಪಾತ್ರನಾಗಿದ್ದಾನೆ.

ಶುಕ್ರವಾರ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಯುಕೆಜಿ ವಿದ್ಯಾರ್ಥಿ ಹರ್ಷವರ್ಧನ್‌, ಸಂವಿಧಾನದ ಪೀಠಿಕೆಯನ್ನು ಪುಸ್ತಕ ನೋಡದೆ ವೇದಿಕೆಯಲ್ಲಿ ಹೇಳಿದ್ದ. ಇದನ್ನು ಶಾಲೆಯ 750 ಮಂದಿ ವಿದ್ಯಾರ್ಥಿಗಳು ಉಚ್ಚಾರಣೆ ಮಾಡಿದ್ದರು. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ವಿಡಿಯೊವನ್ನು ನೋಡಿದ ಸಿದ್ದರಾಮಯ್ಯ, ತಮ್ಮ ‘ಎಕ್ಸ್‌’ ಖಾತೆಯಲ್ಲಿ ಭಾನುವಾರ ಹಂಚಿಕೊಂಡಿದ್ದರು.

ಚಿತ್ರಾವಳಿ

ಅಪಘಾತ ಮಾಡದೆ ಬಸ್‌ ಚಾಲನೆ ಮಾಡಿದ ಬಿಎಂಟಿಸಿ ಪೂರ್ವ ವಲಯದ ಎಂಟು ಘಟಕಗಳ 64 ಚಾಲಕರಿಗೆ ದೊಮ್ಮಲೂರಿನ ಸಾರಿಗೆ ಮತ್ತು ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಬೆಳ್ಳಿ ಪದಕಗಳನ್ನು ಪ್ರದಾನ ಮಾಡಲಾಯಿತು. ನಿವೃತ್ತ ಎಸ್‌ಪಿ ಉಮೇಶ್‌ ಎಸ್‌.ಕೆ., ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ವ.ಚ. ಚನ್ನೇಗೌಡ, ಬಿಎಂಟಿಸಿ ಪೂರ್ವ ವಲಯ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಾಥ್‌ ಎನ್‌. ಭಾಗವಹಿಸಿದ್ದರು.

ಇತ್ತೀಚೆಗೆ ನಿಧನರಾದ ಗಾಂಧಿಬಜಾರ್‌ನ ಪತ್ರಿಕಾ ವಿತರಕ ಕೃಷ್ಣಕುಮಾರ್‌ ಅವರ ಕುಟುಂಬದವರಿಗೆ ನೆರವಿನ ರೂಪವಾಗಿ ಬಸವನಗುಡಿ ಪತ್ರಿಕಾ ವಿತರಕರ ಸಂಘದ ಪದಾಧಿಕಾರಿಗಳು 10 ಸಾವಿರ ಮೊತ್ತದ ಚೆಕ್‌ ಅನ್ನು ಭಾನುವಾರ ನೀಡಿದರು

ನಗರಕ್ಕೆ ಹೊಸ ರೂಪ: ಡಿಕೆಶಿ

ಬೆಂಗಳೂರು: ‘ನಗರದ ಕೆಲವು ಭಾಗಗಳು ಮಾತ್ರ ಯೋಜಿತವಾಗಿ ನಿರ್ಮಾಣವಾಗಿವೆ. ನಾವು ಸಂಪೂರ್ಣ ನಗರಕ್ಕೆ ಬಜೆಟ್‌ ರೂಪಿಸಿ, ಬೆಂಗಳೂರಿಗೆ ಹೊಸ ರೂಪ ನೀಡಲು ಮುಂದಾಗಿದ್ದೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್‌ ಹೇಳಿದರು.

ಡಿ.ಕೆ. ಶಿವಕುಮಾರ್‌

ಬಿಬಿಎಂಪಿಯ 2024-25ನೇ ಸಾಲಿನ ಆಯವ್ಯಯಕ್ಕೆ ಸಂಬಂಧಿಸಿದಂತೆ ಡಿಸಿಎಂ, ನಗರ ವ್ಯಾಪ್ತಿಯ ಸಚಿವರು, ಶಾಸಕರು, ಸಂಸದರು, ವಿಧಾನ ಪರಿಷತ್‌ ಹಾಗೂ ರಾಜ್ಯಸಭೆ ಸದಸ್ಯರೊಂದಿಗೆ ಸೋಮವಾರ ಪೂರ್ವಭಾವಿ ಸಭೆ ನಡೆಸಿದರು.

‘ಸಂಚಾರ ದಟ್ಟಣೆ, ಕುಡಿಯುವ ನೀರು, ಘನತ್ಯಾಜ್ಯ ವಿಲೇವಾರಿ ಸಮಸ್ಯೆ ಇದೆ. 2013ರಿಂದ ಕುಡಿಯುವ ನೀರಿನ ದರ ಹೆಚ್ಚಳವಾಗಿಲ್ಲ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ಶೇ 50ಕ್ಕಿಂತ ಹೆಚ್ಚು ಮಂದಿ ಸರಿಯಾದ ತೆರಿಗೆ ಪಾವತಿ ಮಾಡುತ್ತಿಲ್ಲ. 2020ರಲ್ಲಿ ಆಸ್ತಿ ತೆರಿಗೆ ಮಸೂದೆ ತಿದ್ದುಪಡಿ ಮಾಡಿದಾಗ ದಂಡದ ಪ್ರಮಾಣ ಹೆಚ್ಚಾಗಿದೆ. ಈ ಬಗ್ಗೆ ಯಾರೊಬ್ಬರೂ ಗಮನಹರಿಸಿಲ್ಲ’ ಎಂದರು.

‘ಯಾವುದೇ ಪಕ್ಷ, ನಾಯಕರು ಅನಧಿಕೃತ ಫ್ಲೆಕ್ಸ್‌ ಹಾಕಿದರೂ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಸುಪ್ರೀಂ ಕೋರ್ಟ್‌ ಆದೇಶದಂತೆ 6 ಟಿಎಂಸಿ ಅಡಿ ನೀರನ್ನು ಬೆಂಗಳೂರಿಗೆ ಬಳಸಲು ಸರ್ಕಾರಿ ಆದೇಶ ಹೊರಡಿಸಲಾಗಿದೆ. ನಗರದಲ್ಲಿ ಸಮಸ್ಯೆಗಳ ನಿವಾರಣೆಗೆ ಬಿಬಿಎಂಪಿ, ಬಿಡಿಎ, ಜಲಮಂಡಳಿ, ಬೆಸ್ಕಾಂ ಎಲ್ಲವೂ ಒಟ್ಟಾಗಿ ಕೆಲಸ ಮಾಡಬೇಕಿದೆ’ ಎಂದು ಸೂಚಿಸಿದರು.

ನೀರಿನ ಸಮಸ್ಯೆ: 110 ಹಳ್ಳಿಗಳಿಗೆ ಜಲಮಂಡಳಿ ಕಾವೇರಿ ನೀರನ್ನು ಪೂರೈಸುವ ಭರವಸೆಯನ್ನು ಇನ್ನೂ ಈಡೇರಿಸಿಲ್ಲ ಎಂದು ದಾಸರಹಳ್ಳಿ, ಕೆ.ಆರ್‌. ಪುರ, ಯಶವಂತಪುರ, ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರಗಳ ಶಾಸಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

‘ನಮ್ಮ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಕಾವೇರಿ ನೀರು ಪೂರೈಕೆಯ ಹೊರತಾಗಿ, ಸರ್ಕಾರ ಇತರೆ ಪರ್ಯಾಯ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಶಾಸಕರಾದ ಎಸ್‌. ಮುನಿರಾಜು, ಬೈರತಿ ಬಸವರಾಜು, ಎಸ್‌.ಟಿ. ಸೋಮಶೇಖರ್‌ ಮತ್ತು ಎಂ. ಕೃಷ್ಣಪ್ಪ ಅವರು ಆಗ್ರಹಿಸಿದರು.

ಶೀಘ್ರದಲ್ಲೇ 200 ಫ್ಲ್ಯಾಟ್‌ ನಿರ್ಮಾಣ

ವಲಗೇರಹಳ್ಳಿ: 7ನೇ ಹಂತದ ಯೋಜನೆಗೆ ಟೆಂಡರ್‌; 2 ವರ್ಷದಲ್ಲಿ ಪೂರ್ಣ

• ಆರ್‌. ಮಂಜುನಾಥ್‌

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ತನ್ನ ಬಹುಬೇಡಿಕೆಯ ವಲಗೇರಹಳ್ಳಿ (ಜ್ಞಾನಭಾರತಿ) ವಸತಿ ಬಡಾವಣೆಯಲ್ಲಿ 200 ಫ್ಲ್ಯಾಟ್‌ಗಳನ್ನು ನಿರ್ಮಿಸಲು ಮುಂದಾಗಿದೆ.

ಮೈಸೂರು ರಸ್ತೆಯಲ್ಲಿ ಆರ್‌.ವಿ. ಕಾಲೇಜು ಹಾಗೂ ಕೆಂಗೇರಿ ಮಧ್ಯಭಾಗದಲ್ಲಿರುವ ಜ್ಞಾನಭಾರತಿ ವಸತಿ ಬಡಾವಣೆಯಲ್ಲಿ ಈಗಾಗಲೇ ಆರು ಹಂತದಲ್ಲಿ 2,700ಕ್ಕೂ ಹೆಚ್ಚು ಫ್ಲ್ಯಾಟ್‌ಗಳನ್ನು ಮಾರಾಟ ಮಾಡಲಾಗಿದೆ. ಈ ಪ್ರದೇಶದಲ್ಲಿ ಇನ್ನಷ್ಟು ಫ್ಲ್ಯಾಟ್‌ಗಳಿಗೆ ಬೇಡಿಕೆ ಇದೆ. ಹೀಗಾಗಿ, ಮೂರು ಎಕರೆ ಪ್ರದೇಶದಲ್ಲಿ ಏಳನೇ ಹಂತದಲ್ಲಿ 200 ಫ್ಲ್ಯಾಟ್‌ಗಳನ್ನು ನಿರ್ಮಿಸಲು ಬಿಡಿಎ ಟೆಂಡರ್‌ ಆಹ್ವಾನಿಸಿದೆ.

‘ಲಂಪ್‌ ಸಮ್‌ ಟರ್ನ್‌ ಕೀ’ ಆಧಾರದಲ್ಲಿ ಏಳನೇ ಹಂತದಲ್ಲಿ ಫ್ಲ್ಯಾಟ್‌ಗಳನ್ನು ನಿರ್ಮಿಸಲಾಗುತ್ತಿದೆ. ಗುತ್ತಿಗೆದಾರರು ನಿಗದಿಪಡಿಸಲಾಗಿರುವ ₹81 ಕೋಟಿಗೆ ಎರಡು ವರ್ಷಗಳಲ್ಲಿ ಯೋಜನೆಯನ್ನು ಮುಗಿಸಬೇಕು. ಫೆಬ್ರುವರಿ 5ರಂದು ತಾಂತ್ರಿಕ ಬಿಡ್‌ ತೆರೆಯಲಾಗುತ್ತದೆ. ಅದಾದ ನಂತರ ಪರಿಶೀಲನೆ, ಟೆಂಡರ್‌ ಸಮ್ಮತಿ ಸೇರಿದಂತೆ ಕಾರ್ಯಾದೇಶ ನೀಡಲು ಒಂದು ತಿಂಗಳಾಗುತ್ತದೆ. ಎಲ್ಲ ಪ್ರಕ್ರಿಯೆಗಳನ್ನು ಮುಗಿಸಿ ಮಾರ್ಚ್‌ನಲ್ಲಿ ಕಾಮಗಾರಿ ಆರಂಭಿಸಲು ಯೋಜಿಸಲಾಗಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಜ್ಞಾನಭಾರತಿ ವಸತಿ ಬಡಾವಣೆಯಲ್ಲಿ ನಿರ್ಮಾಣವಾಗಲಿರುವ 7ನೇ ಹಂತದ ಅಪಾರ್ಟ್‌ಮೆಂಟ್‌ ಮಾದರಿ

ಏಳನೇ ಹಂತದಲ್ಲಿ ಎರಡು ಬ್ಲಾಕ್‌ಗಳಿರಲಿದ್ದು, ಪ್ರತಿ ಬ್ಲಾಕ್‌ ನೆಲ ಮಹಡಿ ಸೇರಿದಂತೆ 10 ಅಂತಸ್ತುಗಳನ್ನು ಒಳಗೊಂಡಿರುತ್ತದೆ. ಒಂದನೇ ಬ್ಲಾಕ್‌ನಲ್ಲಿ 2.5 ಬಿಎಚ್‌ಕೆಯ 100 ಫ್ಲ್ಯಾಟ್‌ಗಳಿರುತ್ತವೆ. ಎರಡು ಕೊಠಡಿ ಜೊತೆಗೆ ಒಂದು ‘ಸ್ಟಡಿ ರೂಂ’ ಅನ್ನು ಇದು ಒಳಗೊಂಡಿರುತ್ತದೆ. ಇದರ ಕಾರ್ಪೆಟ್‌ ಏರಿಯಾ 70 ಚದರ ಮೀಟರ್‌. ಎರಡನೇ ಬ್ಲಾಕ್‌ನಲ್ಲಿ 58 ಚದರ ಮೀಟರ್‌ ಕಾರ್ಪೆಟ್‌ ಏರಿಯಾದ 2 ಬಿಎಚ್‌ಕೆಯ 100 ಫ್ಲ್ಯಾಟ್‌ಗಳಿರುತ್ತವೆ.

ಎರಡೂ ಬ್ಲಾಕ್‌ಗಳ ಬೇಸ್‌ಮೆಂಟ್‌ ಹಾಗೂ ಮೇಲ್ಸ್ತ ಹಂತದಲ್ಲಿ ಒಟ್ಟು 200 ಕಾರ್‌ಗಳಿಗೆ ಪಾರ್ಕಿಂಗ್‌ ವ್ಯವಸ್ಥೆ ಇರುತ್ತದೆ. ಒಟ್ಟಾರೆ ಅಪಾರ್ಟ್‌ಮೆಂಟ್‌ 33.6 ಮೀಟರ್‌ ಎತ್ತರವಿರುತ್ತದೆ. 2027ರ ಆರಂಭದಲ್ಲಿ ಈ ಫ್ಲ್ಯಾಟ್‌ಗಳು ಸಿದ್ಧವಾಗಲಿವೆ ಎಂದು ಎಂಜಿನಿಯರ್‌ಗಳು ಮಾಹಿತಿ ನೀಡಿದರು.

2018ರಲ್ಲಿ 2ಬಿಎಚ್‌ಕೆ ಫ್ಲ್ಯಾಟ್‌ಗಳನ್ನು ₹44 ಲಕ್ಷಕ್ಕೆ ಮಾರಾಟ ಮಾಡಲಾಗಿತ್ತು. ಈ ಬಾರಿ ನಿರ್ಮಾಣ ವೆಚ್ಚ (ಎಸ್‌ಆರ್‌ ದರ) ಹೆಚ್ಚಾಗಿರುವುದರಿಂದ ಸುಮಾರು ₹60 ಲಕ್ಷ ದರದಲ್ಲಿ ಮಾರಾಟ ಮಾಡುವ ಯೋಜನೆ ಹೊಂದಲಾಗಿದೆ ಎಂದರು.

ಆರಂಭ ಪೂರ್ವ ಕೊಡುಗೆ!

‘ಖಾಸಗಿ ಅಪಾರ್ಟ್‌ಮೆಂಟ್‌ಗಳ ಮಾಲೀಕರು ಫ್ಲ್ಯಾಟ್‌ಗಳ ಮಾರಾಟಕ್ಕೆ ಆರಂಭ ಪೂರ್ವ ಕೊಡುಗೆ(ಪ್ರೀ ಲಾಂಚ್‌ ಆಫರ್‌) ನೀಡುತ್ತಾರೆ. ಮೊದಲೇ ಬುಕಿಂಗ್‌ ಹಣ ಪಾವತಿಸಿಕೊಳ್ಳುತ್ತಾರೆ. ಅದರಂತೆಯೇ ಬಿಡಿಎ ಕೂಡ ಇಂತಹ ಮಾರುಕಟ್ಟೆ ಪ್ರಯೋಗಗಳನ್ನು ನಡೆಸಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ ಹೇಳಿದ್ದರು.

ಜ್ಞಾನಭಾರತಿ ವಸತಿ ಬಡಾವಣೆಯ 7ನೇ ಹಂತದ ಫ್ಲ್ಯಾಟ್‌ಗಳ ಮಾರಾಟಕ್ಕೆ ಬಿಡಿಎ ಮೊದಲ ಬಾರಿಗೆ ‘ಪ್ರೀ ಲಾಂಚ್‌ ಆಫರ್‌’ ಪ್ರಯೋಗ ಮಾಡುವ ಸಾಧ್ಯತೆ ಇದೆ. ಡಿಸಿಎಂ ಹಾಗೂ ಬಿಡಿಎ ಅಧ್ಯಕ್ಷರು ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಂಡರೆ, ಕಾಮಗಾರಿ ಆರಂಭವಾಗುವ ಸಂದರ್ಭದಲ್ಲಿ ನಾಗರಿಕರಿಗೆ ಈ ಕೊಡುಗೆ ನೀಡಬಹುದು ಎಂದು ಎಂಜಿನಿಯರ್‌ಗಳು ಅಭಿಪ್ರಾಯಪಟ್ಟರು.

‘ರಾಜಕೀಯ ನೆಲೆಗಾಗಿ ಜನರ ಎತ್ತಿಕಟ್ಟುವ ಬಿಜೆಪಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಂಡ್ಯದಲ್ಲಿ ರಾಜಕೀಯ ನೆಲೆ ಇಲ್ಲದ ಬಿಜೆಪಿ ಅಸ್ತಿತ್ವ ಕಂಡುಕೊಳ್ಳಲು ಜನರನ್ನು ಎತ್ತಿಕಟ್ಟುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ ಅವರು ಟೀಕಿಸಿದರು.

ಮಂಡ್ಯ ಜಿಲ್ಲೆಯ ಕೆರಗೋಡು ಗ್ರಾಮದಲ್ಲಿನ ಹನುಮ ಧ್ವಜ ವಿಚಾರವಾಗಿ ಎದ್ದಿರುವ ವಿವಾದದ ಕುರಿತು ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಬಿಜೆಪಿ ನಾಯಕರು ಪ್ರಯತ್ನಿಸುತ್ತಿದ್ದಾರೆ. ರಾಜ್ಯದಲ್ಲಿ ಶಾಂತಿ ಸ್ಥಾಪನೆ ಮಾಡುವುದು ನಮ್ಮ ಆದ್ಯತೆ’ ಎಂದರು.

‘ಬಿಜೆಪಿ ಅಭ್ಯರ್ಥಿಗಳು ಅನೇಕ ಕಡೆಗಳಲ್ಲಿ ಠೇವಣಿ ಕಳೆದುಕೊಂಡಿರುವ ಕಾರಣ ಜೆಡಿಎಸ್‌ ಜತೆ ಸೇರಿಕೊಂಡಿದ್ದಾರೆ. ಮಂಡ್ಯದಲ್ಲಿ ರಾಜಕೀಯ ನೆಲೆ ಕಂಡುಕೊಳ್ಳಲು ಇಂಥ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಅದರಿಂದ ಏನೂ ಪ್ರಯೋಜನವಿಲ್ಲ. ಮಂಡ್ಯದ ಜನರು ಸಹಿಷ್ಣುತೆ ಉಳ್ಳವರು, ಜಾತ್ಯತೀತರು. ಇಂಥ ವಿಚಾರಗಳಿಗೆ ಮಾರು ಹೋಗುವುದಿಲ್ಲ’ ಎಂದರು.

‘ಹಿಂದೂ ವಿರೋಧಿ ಕಾಂಗ್ರೆಸ್‌ ಸರ್ಕಾರ’ ಎಂಬ ಬಿಜೆಪಿ ನಾಯಕರ ಟೀಕೆಗೆ ಪ್ರತಿಕ್ರಿಯಿಸಿದ ಅವರು, ‘ಯಾರು ಹಿಂದೂ ವಿರೋಧಿ? ನಾವೆಲ್ಲರೂ ಮೊದಲು ಭಾರತೀಯರು. ಅಲ್ಲಿನ ದಲಿತ ಸಂಘರ್ಷ ಸಮಿತಿ, ಕೆಂಪೇಗೌಡ ಸಮಿತಿ ಸೇರಿದಂತೆ ಅನೇಕರು ನಾವು ಬಾವುಟ ಹಾಕುತ್ತೇವೆ ಎಂದು ಕೇಳುತ್ತಿದ್ದಾರೆ. ನಾವೆಲ್ಲರೂ ಹಿಂದೂಗಳಲ್ಲವೇ? ನಮ್ಮ ಹಳ್ಳಿಯಲ್ಲಿರುವ ಜನ ಹಿಂದೂಗಳಲ್ಲವೇ? ಸಮಾಜದಲ್ಲಿ ಅಶಾಂತಿ ಮೂಡಿಸಲು ಬಿಜೆಪಿ ಈ ಪ್ರಯತ್ನ ಮಾಡುತ್ತಿದೆ’ ಎಂದು ಆರೋಪಿಸಿದರು.

‘ಹಿಂದೂ ಆಗಿ ಎಲ್ಲರನ್ನೂ ಪ್ರೀತಿಸುವೆ’

ಬೆಂಗಳೂರು: ‘ನಾನು ಕೂಡ ಒಬ್ಬ ಹಿಂದೂ. ಸಂವಿಧಾನದಲ್ಲಿ ಹೇಳಿರುವ ಜಾತ್ಯತೀತ ತತ್ವ, ಸಹಬಾಳ್ವೆ, ಸಹಿಷ್ಣುತೆಯಲ್ಲಿ ನನಗೆ ನಂಬಿಕೆ ಇದೆ. ಹಿಂದೂ ಧರ್ಮೀಯನಾಗಿ ಎಲ್ಲ ಧರ್ಮದ ಜನರನ್ನೂ ಪ್ರೀತಿಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಭಗವಾಧ್ವಜ ಹಾರಿಸುವುದಕ್ಕೆ ನಮ್ಮ ವಿರೋಧವಿಲ್ಲ. ಮಂಡ್ಯದ ಕೆರಗೋಡಿನಲ್ಲಿ ರಾಷ್ಟ್ರ ಧ್ವಜ ಹಾರಿಸಲು ಅನುಮತಿ ಪಡೆಯಲಾಗಿತ್ತು. ರಾಷ್ಟ್ರ ಧ್ವಜವನ್ನೇ ಹಾರಿಸಬೇಕಿತ್ತು. ಆದರೆ, ಅಲ್ಲಿ ಭಗವಾಧ್ವಜ ಹಾರಿಸಿದ್ದರಿಂದ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ. ಬಿಜೆಪಿಯವರು ಅನಗತ್ಯವಾಗಿ ಸಮಸ್ಯೆ ಸೃಷ್ಟಿಸುತ್ತಿದ್ದಾರೆ’ ಎಂದರು.

ಗ್ರಾಮ ಪಂಚಾಯಿತಿಯವರು ನೀಡಿದ್ದ ಅನುಮತಿಯಲ್ಲಿನ ಷರತ್ತುಗಳನ್ನು ಪಾಲಿಸಿದ್ದರೆ ಜಿಲ್ಲಾಡಳಿತವು ಮಧ್ಯಪ್ರವೇಶ ಮಾಡುತ್ತಿರಲಿಲ್ಲ ಎಂದು ಹೇಳಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಮತ್ತು ಜೆಡಿಎಸ್‌ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮಂಡ್ಯಕ್ಕೆ ಭೇಟಿನೀಡಿ ಜನರನ್ನು ಪ್ರಚೋದಿಸುತ್ತಿದ್ದಾರೆ, ಚುನಾವಣೆ ಸಮೀಪಿಸುತ್ತಿರುವುದರಿಂದ ಈ ರೀತಿ ಮಾಡುತ್ತಿದ್ದಾರೆ ಎಂದು ದೂರಿದರು.

‘ಮೋದಿ ಪ್ರಶ್ನಿಸಲು ಧೈರ್ಯವಿಲ್ಲ’

ಬೆಂಗಳೂರು: ‘ರಾಜ್ಯದ ರೈತರಿಗೆ ಪರಿಹಾರದ ಹಣ ನೀಡದೆ ಐದು ತಿಂಗಳಿನಿಂದ ಗೋಳಾಡಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಲಾಗದ ಪುಕ್ಕಲು ಬಿಜೆಪಿ ನಾಯಕರು, ನಮ್ಮ ವಿರುದ್ಧ ‘ಪರಿಹಾರ ಕೊಡಿ ಅಥವಾ ಕುರ್ಚಿ ಬಿಡಿ’ ಎಂಬ ನಾಟಕ ಪ್ರದರ್ಶನಕ್ಕೆ ಹೊರಟಿರುವುದು ಹಾಸ್ಯಾಸ್ಪದ. ಅಷ್ಟೇ ಅಲ್ಲ, ರೈತರಿಗೆ ಬಗೆಯುತ್ತಿರುವ ದ್ರೋಹ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

‘ರೈತರಿಗೆ ಪರಿಹಾರ ಕೊಡಿ, ಇಲ್ಲವೇ ಕುರ್ಚಿ ಬಿಡಿ’ ಎಂಬ ಘೋಷಣೆಯೊಂದಿಗೆ ಬಿಜೆಪಿ ಹಮ್ಮಿಕೊಂಡಿರುವ ಪ್ರತಿಭಟನೆ ಬಗ್ಗೆ ಟೀಕಿಸಿರುವ ಮುಖ್ಯಮಂತ್ರಿ, ‘ರಾಜ್ಯದ ಬಿಜೆಪಿ ನಾಯಕರಿಗೆ ಕರ್ನಾಟಕದ ನೆಲದ ಮಣ್ಣು ಮತ್ತು ನೀರಿನ ಋಣ ಇದ್ದರೆ ದೆಹಲಿಗೆ ಹೋಗಿ ಕನ್ನಡಿಗರ ಬಗ್ಗೆ ಯಾಕಿಷ್ಟು ನಿಮಗೆ ದ್ವೇಷ? ಎಂದು ಪ್ರಧಾನಿಯನ್ನು ಕೇಳಬೇಕು. ಪರಿಹಾರಕ್ಕಾಗಿ ಒತ್ತಾಯಿಸಿ ಪ್ರಧಾನಿ ಕಾರ್ಯಾಲಯದ ಎದುರು ಧರಣಿ ಕುಳಿತುಕೊಳ್ಳಬೇಕು. ಬಿಜೆಪಿಯವರ ಆಟಾಟೋಪಗಳೇನಿದ್ದರೂ ರಾಜ್ಯದಲ್ಲಿ ಮಾತ್ರ. ಇಲ್ಲಿ ಎಲ್ಲರೂ ಹುಲಿ-ಸಿಂಹಗಳೇ. ಪ್ರಧಾನಮಂತ್ರಿ, ಗೃಹ ಸಚಿವರನ್ನು ಕಂಡ ತಕ್ಷಣ ಬಾಲ ಮುದುರಿದ ಇಲಿಗಳಾಗುತ್ತಾರೆ’ ಎಂದು ವ್ಯಂಗ್ಯವಾಡಿದ್ದಾರೆ.

‘ಓಪನ್‌ ಹಾರ್ಟ್‌’ ಕಾರ್ಯಕ್ರಮದಲ್ಲಿ ಮಾಜಿ ರಾಷ್ಟ್ರಪತಿ ಕೋವಿಂದ್‌

‘ಸಂಸ್ಕೃತಿಯ ಬೇರು ಉಳಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವು ಅದ್ಭುತ ಸಾಧನೆಗಳನ್ನು ಮಾಡುತ್ತಿದೆ. ಆಧುನಿಕತೆ ಮತ್ತು ವೈಚಾರಿಕತೆಯನ್ನು ಅಳವಡಿಸಿಕೊಳ್ಳುತ್ತಿದೆ. ನಮ್ಮ ಸಂಸ್ಕೃತಿಯ ಬೇರುಗಳನ್ನು ಉಳಿಸಿಕೊಂಡೇ ಆಧುನಿಕತೆಗೆ ತೆರೆದುಕೊಳ್ಳಬೇಕು’ ಎಂದು ಮಾಜಿ ರಾಷ್ಟ್ರಪತಿ ರಾಮನಾಥ್‌ ಕೋವಿಂದ್‌ ಸಲಹೆ ನೀಡಿದರು.

ನಗರದ ಸೇಂಟ್‌ ಜೋಸೆಫ್‌ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ‘ಓಪನ್‌ ಹಾರ್ಟ್‌’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಆಧುನಿಕತೆ ಎನ್ನುವುದು ಮೇಲೆ ಕಾಣುವ ಮರದಂತೆ. ಸಂಸ್ಕೃತಿ, ಪರಂಪರೆ ಎನ್ನುವುದು ಭೂಮಿಯಾಳಕ್ಕೆ ಇಳಿದ ಬೇರುಗಳಂತೆ. ಬೇರು ಗಟ್ಟಿಯಾಗಿದ್ದಾಗ ಎಂಥ ಗಾಳಿ ಬಂದರೂ ಮರ ಬೀಳುವುದಿಲ್ಲ. ಅದೇ ರೀತಿ ನಮ್ಮ ಸಂಸ್ಕೃತಿಯ ಬೇರುಗಳನ್ನು ಗಟ್ಟಿಮಾಡಿಕೊಂಡೇ ನೀವು ಆಧುನಿಕರಾಗಿ. ಆಗ ಯಾವುದೇ ರೀತಿಯ ಸವಾಲುಗಳು ಬಂದರೂ ಎದುರಿಸಲು ಈ ಬೇರು ಸಹಾಯಕವಾಗುತ್ತದೆ’ ಎಂದು ವಿಶ್ಲೇಷಿಸಿದರು.

ನಗರದ ಸೇಂಟ್‌ ಜೋಸೆಫ್‌ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ‘ಓಪನ್‌ ಹಾರ್ಟ್‌’ ಕಾರ್ಯಕ್ರಮದಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ್‌ ಕೋವಿಂದ್‌ ಮತ್ತು ವಿಶ್ವವಿದ್ಯಾಲಯದ ಕುಲಪತಿ ಫಾ. ವಿಕ್ಟರ್‌ಲೋಬೊ ಅವರು ಮಾತುಕತೆಯಲ್ಲಿ ತೊಡಗಿದ್ದರು. ವಿಶ್ವವಿದ್ಯಾಲಯದ ಸಾರ್ವಜನಿಕ ಸಂಪರ್ಕ ಅಧಿಕಾರಿ ಕಿರಣ್‌ ಜೀವನ್‌, ಕುಲಸಚಿವ ಮೆಲ್ವಿನ್‌ ಕೊಲಸೊ, ಸಹಕುಲಪತಿ ರೊನಾಲ್ಡ್‌ ಜೆ. ಮಸ್ಕರೇನಸ್‌, ಐಐಟಿ ನಿರ್ದೇಶಕ ಫಾ. ಡೆಂಜಿಲ್‌ ಲೋಬೊ, ಸಹಕುಲಪತಿ ರೆಜಿನಾ ಮಥಾಯಿಸ್‌ ಭಾಗವಹಿಸಿದ್ದರು.

‘ಹೆಲಿಕಾಪ್ಟರ್‌ಗಳನ್ನು, ವಿಮಾನಗಳನ್ನು ನಾವೇ ತಯಾರಿಸುತ್ತಿದ್ದೇವೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಅಗಾಧ ಪ್ರಗತಿ ಸಾಧಿಸಿದ್ದೇವೆ. ಚಂದ್ರನ ದಕ್ಷಿಣ ಧ್ರುವದಲ್ಲಿ ಗಗನನೌಕೆ ಇಳಿಸಿದ ಮೊದಲ ದೇಶ ನಮ್ಮದು. ಚಂದ್ರನ ಮೇಲೆ ಯಶಸ್ವಿಯಾಗಿ ಇಳಿದ ಕೆಲವೇ ರಾಷ್ಟ್ರಗಳಲ್ಲಿ ಭಾರತವೂ ಒಂದು ಎಂಬ ಹಿರಿಮೆ ನಮ್ಮದು. ಚಂದ್ರಯಾನ–3 ಮತ್ತು ಆದಿತ್ಯ ಎಲ್‌–1 ಮಿಷನ್‌ನಿಂದಾಗಿ ಭಾರತದ ಚಿತ್ರಣವೇ ಬದಲಾಯಿತು. ಜಿ–20 ಶೃಂಗಸಭೆಯ ಆತಿಥ್ಯ ವಹಿಸುವ ಅವಕಾಶವೂ ಭಾರತಕ್ಕೆ ದೊರಕಿತು’ ಎಂದು ಶ್ಲಾಘಿಸಿದರು.

‘ಡಿಜಿಟಲ್‌ ಕ್ರಾಂತಿಯಿಂದಾಗಿ ಇಂದು ಬ್ಯಾಂಕ್‌ ಮನೆ ಮನೆಗೆ ತಲುಪಿದೆ. ಕುಳಿತಲ್ಲಿಂದಲೇ ಹಣ ವರ್ಗಾವಣೆ, ವ್ಯವಹಾರ ನಡೆಸಲು ಇದು ಕಾರಣವಾಗಿದೆ’ ಎಂದರು.

‘ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲರೂ ಓಡಬೇಕು. ಜೀವನದ ಓಟದಲ್ಲಿ ಯಾವುದೇ ಸವಾಲು ಬಂದರೂ ಬೆನ್ನು ಹಾಕದೇ ಎದುರಿಸುವ ಆತ್ಮಸ್ಥೈರ್ಯ ಇರಬೇಕು. ನಿಮ್ಮ ಯೋಚನೆ, ನಿರ್ಧಾರ ಮತ್ತು ಕ್ರಿಯೆ ಸಕಾರಾತ್ಮಕವಾಗಿ ಇದ್ದರೆ ಫಲಿತಾಂಶವೂ ಸಕಾರಾತ್ಮಕವಾಗಿರುತ್ತದೆ. ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ’ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

‘ಹಿರಿಯರನ್ನು, ಗುರುಗಳನ್ನು ಗೌರವಿಸುವುದು ನಮ್ಮ ಸಂಸ್ಕೃತಿ. ಅದನ್ನು ಯಾವತ್ತೂ ಬಿಡಬಾರದು. ನೀವೇ ಸಾಧಕರಾಗಬೇಕು. ಸಾಂಸ್ಕೃತಿಕ ರಾಯಭಾರಿಗಳೂ ಆಗಬೇಕು’ ಎಂದು ಆಶಿಸಿದರು.

ನಗರದಲ್ಲಿ ಇಂದು

ಟೈಲರ್‌ ವೃತ್ತಿ ಬಾಂಧವರ ಸಮಾವೇಶ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಯು.ಟಿ. ಖಾದರ್‌, ಡಿ.ಕೆ. ಶಿವಕುಮಾರ್‌, ಆರ್‌. ಅಶೋಕ, ಎಚ್‌.ಡಿ. ಕುಮಾರಸ್ವಾಮಿ, ಸಂತೋಷ್‌ ಎಸ್‌. ಲಾಡ್‌, ಕೋಟ ಶ್ರೀನಿವಾಸ್‌ ಪೂಜಾರಿ, ಜಮೀರ್‌ ಅಹಮದ್‌ ಖಾನ್‌, ರಾಮಲಿಂಗಾರೆಡ್ಡಿ, ಕೃಷ್ಣಬೈರೇಗೌಡ, ಎನ್‌.ಎಸ್‌. ಬೋಸರಾಜ್‌, ಅಧ್ಯಕ್ಷತೆ: ಬಿ.ಎ.ನಾರಾಯಣ, ಆಯೋಜನೆ: ಕರ್ನಾಟಕ ಸ್ಟೇಟ್‌ ಟೈಲರ್ಸ್‌ ಅಸೋಸಿಯೇಶನ್‌, ಸ್ಥಳ: ಶಾಲಿನಿ ಮೈದಾನ, ಜಯನಗರ 5ನೇ ಬ್ಲಾಕ್‌, ಬೆಳಿಗ್ಗೆ 10

‘ಆಹಾರ, ಪೌಷ್ಟಿಕತೆ, ಆರೋಗ್ಯ ಮತ್ತು ನೈರ್ಮಲ್ಯ’ದ ಕುರಿತು ಕಾರ್ಯಾಗಾರ: ಉದ್ಘಾಟನೆ: ಡಾ. ಶರಣಪ್ರಕಾಶ ಪಾಟೀಲ, ಅತಿಥಿಗಳು: ಉಮಾ ಮಹದೇವನ್‌, ಪಿ.ಐ. ಶ್ರೀವಿದ್ಯಾ, ಆಯೋಜನೆ: ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆ, ರಾಷ್ಟ್ರೀಯ ಜೀವನೋಪಾಯ ಅಭಿಯಾನ, ಸ್ಥಳ: ರ್‍ಯಾಡಿಸನ್‌ ಬ್ಲ್ಯೂ ಹೋಟೆಲ್‌, ಬೆಳಿಗ್ಗೆ 10

ರಕ್ತದಾನ ಶಿಬಿರ: ಉದ್ಘಾಟನೆ: ದಿನೇಶ್‌ ಗುಂಡೂರಾವ್‌, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್‌ ನೌಕರರ ಸಂಘ, ಸ್ಥಳ: ಚೆನ್ನಬಸಪ್ಪ ಸಭಾಂಗಣ, ಸಚಿವಾಲಯ ಕ್ಲಬ್‌, ಕಬ್ಬನ್‌ ಉದ್ಯಾನ, ಬೆಳಿಗ್ಗೆ 10ರಿಂದ

‘ವೃತ್ತಿ ನಿರ್ವಹಣೆ’ ಕುರಿತು ವಿಚಾರಸಂಕಿರಣ: ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ಗಿರಿನಾರಾಯಣ ಜಿ., ಜವರೇಗೌಡ ಟಿ., ಸಿ.ಎಸ್‌. ಆನಂದ ಕುಮಾರ್‌, ವಿಜಯಲಕ್ಷ್ಮಿ ಎಂ.ವಿ., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯದ ಒಬಿಸಿ, ಮೈನಾರಿಟಿ ಸೆಲ್‌, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್‌ ಕಾಲೇಜಿನ ಆವರಣ, ಬೆಳಿಗ್ಗೆ 10.30

ಸರ್ವೋದಯ ದಿನಾಚರಣೆ: ಆಯೋಜನೆ ಮತ್ತು ಸ್ಥಳ: ಮಹಾತ್ಮ ಗಾಂಧಿ ಉದ್ಯಾನ ವಾಯುವಿಹಾರಿಗಳ ಸಂಘ, ನಾಗರಬಾವಿ, 2ನೇ ಹಂತ, ಬೆಳಿಗ್ಗೆ 10.30

ಸರ್ವೋದಯ ದಿನಾಚರಣೆ: ಅತಿಥಿಗಳು: ಜಿ.ಎಸ್‌. ಜಯದೇವ, ವಿಕ್ರಂ ಶ್ರೀಧರ್‌, ಪ್ರತಾಪ್‌ ಲಿಂಗಯ್ಯ, ಎಚ್‌.ಎನ್‌. ಮುರಳೀಧರ್‌, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಇಲಾಖೆ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್‌, ಬೆಳಿಗ್ಗೆ 11

ಆರ್‌. ರಾಜಗೋಪಾಲ ಅವರಿಗೆ ‘ಸ್ನೇಹಜೀವಿ’ ಅಭಿನಂದನಾ ಗ್ರಂಥ ಸಮರ್ಪಣೆ: ಎಚ್‌.ಎಲ್‌. ಪುಷ್ಪ, ಅಧ್ಯಕ್ಷತೆ: ಬಿ.ಆರ್‌. ರವಿಕಾಂತೇಗೌಡ, ಅಭಿನಂದಿಸುವವರು: ಕೆ.ಎನ್‌. ರಮೇಶ್‌, ಅಭಿನಂದಿತರು: ಆರ್‌. ರಾಜಗೋಪಾಲ್‌, ಅಭಿನಂದನಾ ನುಡಿ: ವಡ್ಡಗೆರೆ ನಾಗರಾಜಯ್ಯ, ಅತಿಥಿಗಳು: ಆನಂದರಾಜ್‌ ಎ., ಎ.ಎಚ್‌. ನಿಂಗೇಗೌಡ, ಆಯೋಜನೆ: ಆರ್‌. ರಾಜಗೋಪಾಲ್‌ ಅಭಿನಂದನಾ ಸಮಿತಿ, ಸ್ಥಳ: ಇಂಡಿಯನ್‌ ಇನ್‌ಸ್ಟಿಟ್ಯೂಟ್‌ ಆಫ್‌ ವರ್ಲ್ಡ್‌ ಕಲ್ಚರ್‌, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11.30

ಉಪನ್ಯಾಸ ಮಾಲೆ: ಉದ್ಘಾಟನೆ: ಕೆ.ಎಂ. ಮಂಜುನಾಥ್‌, ಅಧ್ಯಕ್ಷತೆ: ಆರ್‌. ನಾಗೇಂದ್ರ ಪ್ರಸಾದ್‌, ‘ವಚನಗಳಲ್ಲಿ ವ್ಯಕ್ತಿತ್ವ ವಿಕಸನ’ದ ಕುರಿತು: ಎಸ್‌. ಪಿನಾಕಪಾಣಿ, ಅತಿಥಿಗಳು: ಮಧುರ ಅಶೋಕ್‌ ಕುಮಾರ್‌, ಮಂಜುನಾಥ ಗವಿಯಪ್ಪ, ಅಡವೀಶಯ್ಯ, ಉಪಸ್ಥಿತಿ: ಎಚ್‌. ವಿಶ್ವನಾಥ್‌, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಎಂ.ಇ.ಐ ಪಾಲಿಟೆಕ್ನಿಕ್‌ ಕಾಲೇಜು ಸಭಾಂಗಣ, ರಾಜಾಜಿನಗರ, ಮಧ್ಯಾಹ್ನ 2

‘ಕನ್ನಡ ಕಾಯಕ ಮೂರುವರ್ಷದ ಹಿನ್ನೋಟ’ ಹೊತ್ತಿಗೆ ಅನಾವರಣ: ರಾ.ನಂ. ಚಂದ್ರಶೇಖರ, ಉಪನ್ಯಾಸ ಮಾಲಿಕೆ ಉದ್ಘಾಟನೆ: ಪದ್ಮಿನಿ ನಾಗರಾಜು, ಉಪನ್ಯಾಸ: ಎಂ. ವೆಂಕಟಸ್ವಾಮಿ, ಅತಿಥಿಗಳು: ಪ್ರದೀಪ್‌ ಕುಮಾರ್‌, ಮಹೇಶ್‌ ಅಂಗಡಿ, ಎಚ್‌. ಲಿಂಗರಾಜು, ಆಯೋಜನೆ: ಎಚ್‌ಎಎಲ್‌ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಬಿ. ವಿಜಯಕುಮಾರ್‌ ಸಭಾಂಗಣ, ಹಳೇ ಎಸ್‌ಬಿಐ ಕಟ್ಟಡ, ಎಚ್‌ಎಎಲ್‌, ಮಧ್ಯಾಹ್ನ 3.30ರಿಂದ

ಡಾ. ಸಿ.ಎನ್‌. ಮಂಜುನಾಥ್‌ ಬೀಳ್ಕೊಡುಗೆ ಸಮಾರಂಭ: ಆಯೋಜನೆ: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಸ್ಥಳ: ಜಯದೇವ ಆಸ್ಪತ್ರೆಯ ಆವರಣ, ಬನ್ನೇರುಘಟ್ಟ ರಸ್ತೆ, ಸಂಜೆ 4

ಸೌಹಾರ್ದ ಮಾನವ ಸರಪಳಿ, ಸೌಹಾರ್ದ ಸಭೆ: ಭಾಗವಹಿಸುವವರು: ಜಿ. ರಾಮಕೃಷ್ಣ, ಕೆ. ಮರುಳಸಿದ್ಧಪ್ಪ, ಬರಗೂರು ರಾಮಚಂದ್ರಪ್ಪ, ಮೂಡ್ನಾಕೂಡು ಚಿನ್ನಸ್ವಾಮಿ, ವಿಜಯ, ಎಚ್‌. ಎನ್‌. ನಾಗಮೋಹನ ದಾಸ್‌, ಬಿ. ಸುರೇಶ್‌, ವಿಶುಕುಮಾರ್‌, ವಸುಂಧರ ಭೂಪತಿ, ಕೆ. ಷರೀಫಾ, ಮಲ್ಲಿಕಾರ್ಜುನ ಕಡಕೋಳ, ಆಯೋಜನೆ: ಸೌಹಾರ್ದ ಕರ್ನಾಟಕ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಸಂಜೆ 5



ಬರಗೂರು ರಾಮಚಂದ್ರಪ್ಪ

‘ಬೇಂದ್ರೆ ನಮನ-ಗಂಗಾವತರಣ’: ಅತಿಥಿಗಳು: ಶ್ರೀಕಾಂತ್‌ ವಾಲ್ಗಾಡ್‌, ಆರ್‌. ಪಿ. ಮೋಹನ್‌, ಅಧ್ಯಕ್ಷತೆ: ನರಸಿಂಹ ನಾಯ್ಕ, ಗಂಗಾವತರಣ ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ, ಆಯೋಜನೆ: ಭಾರತ್‌ ಎಲೆಕ್ಟ್ರಾನಿಕ್ಸ್‌ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6ರಿಂದ

ಹಂಸಗೀತೆ ನೃತ್ಯ: ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್‌, ಅತಿಥಿಗಳು: ಜಿ. ಪರಮೇಶ್ವರ್‌, ಎಚ್‌.ಸಿ. ಮಹದೇವಪ್ಪ, ಬರಗೂರು ರಾಮಚಂದ್ರಪ್ಪ, ದರ್ಶನ್‌, ತಾರಾ ಅನುರಾಧ, ಉಪಸ್ಥಿತಿ: ಭಾವನ ರಾಮಣ್ಣ, ಆಯೋಜನೆ: ಹೂವು ಫೌಂಡೇಶನ್‌ ಫಾರ್‌ ಆರ್ಟ್ಸ್‌, ಹೋಂ ಟೌನ್‌ ಪ್ರೊಡಕ್ಷನ್ಸ್‌, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

Azadi Ka Amrit Mahotsav

सेन्ट्रल बैंक ऑफ़ इंडिया Central Bank of India

ಚಂದ್ರಮುಖಿ, ನಾರಿಮನ್ ಪಾಯಿಂಟ್, ಮುಂಬೈ – 400 021
ಫೋನ್: 022–66387680 ಫ್ಯಾಕ್ಸ್: 022–22044336 ವೆಬ್‌ಸೈಟ್: www.centralbankofindia.co.in

ಸಾರ್ವಜನಿಕ ಪ್ರಕಟಣೆ

ಸಫಾಯಿ ಕರ್ಮಚಾರಿ ಕಂ ಸಬ್–ಸ್ಟಾಫ್ ಮತ್ತು/ಅಥವಾ ಸಬ್–ಸ್ಟಾಫ್ 2024–25 ನೇಮಕಾತಿ

ದಿನಾಂಕ 21.12.2023 ಮತ್ತು 11.01.2024 ರಂದು ಪ್ರಕಟವಾಗಿರುವ ನಮ್ಮ ನೇಮಕಾತಿ ಅಧಿಸೂಚನೆಗೆ ಸಂಬಂಧಿತ ಪತ್ರಿಕಾ ಪ್ರಕಟಣೆಯ ವಿಷಯದ ಮುಂದುವರಿದ ಭಾಗವಾಗಿ, ಈ ಸಾರ್ವಜನಿಕ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಮಾನ್ಯ ಮುಂಬೈ ಉಚ್ಚ ನ್ಯಾಯಾಲಯವು ಔರಂಗಾಬಾದ್‌ನ ರಿಟ್ ಪಿಟಿಷನ್ ನಂ. 379/2024 ಪ್ರಕರಣಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಆದೇಶದ ಪ್ರಕಾರ, **ಸಫಾಯಿ ಕರ್ಮಚಾರಿ ಕಂ ಸಬ್–ಸ್ಟಾಫ್ ಮತ್ತು/ಅಥವಾ ಸಬ್–ಸ್ಟಾಫ್ 2024–25 ನೇಮಕಾತಿ ಅಧಿಸೂಚನೆಯನ್ನು** ರದ್ದುಪಡಿಸಿ ಮುಂದಿನ ಪ್ರಕ್ರಿಯೆ ಕೈಗೊಳ್ಳಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಅಭ್ಯರ್ಥಿಗಳು ಪಾವತಿಸಿರುವ ಅರ್ಜಿಶುಲ್ಕವನ್ನು ಮರುಪಾವತಿಸಲಾಗುತ್ತದೆ. ಸಾರ್ವಜನಿಕ ಮಾಹಿತಿಗಾಗಿ ಈ ಪ್ರಕಟಣೆ ಹೊರಡಿಸಲಾಗಿದೆ.

ದಿನಾಂಕ: 25.01.2024 ಮಹಾ ಪ್ರಬಂಧಕರು (ಹೆಚ್‌ಸಿಎಂ)

₹85 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ: ಬಿಐಎಸ್ ಅಧಿಕಾರಿಗಳ ಸೋಗಿನಲ್ಲಿದ್ದ ನಾಲ್ವರ ಬಂಧನ

ಚಿನ್ನಾಭರಣ ಅಂಗಡಿಯಲ್ಲಿ ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಮಾನಕ ಬ್ಯೂರೊ (ಬಿಐಎಸ್) ಅಧಿಕಾರಿಗಳ ಸೋಗಿನಲ್ಲಿ ಚಿನ್ನಾಭರಣ ಮಳಿಗೆಗೆ ನುಗ್ಗಿ ದರೋಡೆ ಮಾಡಿದ್ದ ನಾಲ್ವರು ಆರೋಪಿಗಳನ್ನು ಕೆ.ಆರ್.ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಎರ್ನಾಕುಲಂ ಜಿಲ್ಲೆಯ ಸಂಬತ್ ಕುಮಾರ್ ಅಲಿಯಾಸ್ ಸಂಪತ್ (55), ತ್ರಿಶೂಲ್ ಜಿಲ್ಲೆಯ ಜೋಶಿ ಆರ್. ಥಾಮಸ್ (54), ಉತ್ತರ ಪ್ರದೇಶ ಗಾಜಿಯಾಬಾದ್ ಜಿಲ್ಲೆಯ ಸಂದೀಪ್ ಶರ್ಮಾ (48) ಹಾಗೂ ಅವಿನಾಶ್ ಕುಮಾರ್ (27) ಬಂಧಿತರು. ಇವರಿಂದ 1 ಕೆ.ಜಿ 248 ಗ್ರಾಂ ತೂಕದ ಚಿನ್ನಾಭರಣ, ಸಿ.ಸಿ.ಟಿ.ವಿ ಕ್ಯಾಮೆರಾ ಡಿವಿಆರ್ ಹಾಗೂ ಕಾರು ಜಪ್ತಿ ಮಾಡಲಾಗಿದೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಶಿವಕುಮಾರ್ ತಿಳಿಸಿದರು.

'ಭಟ್ಟರಹಳ್ಳಿ ಆರ್.ಎಂ.ಎಸ್ ಕಾಲೊನಿ ಬಳಿಯ ಮಹಾಲಕ್ಷ್ಮಿ ಆಭರಣ ಮಳಿಗೆಯಲ್ಲಿ ಜ. 27ರಂದು ದರೋಡೆ ನಡೆದಿತ್ತು. ದಾಖಲಾದ ದೂರು ಆಧರಿಸಿ ತನಿಖೆ ಕೈಗೊಂಡು ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಹೇಳಿದರು.

ಪರಿಶೀಲನೆ ನೆಪ: 'ಬಿಐಎಸ್ ಅಧಿಕಾರಿಗಳ ಸೋಗಿನಲ್ಲಿ ಮಳಿಗೆಗೆ ನುಗ್ಗಿದ್ದ ಆರೋಪಿಗಳು, ಚಿನ್ನಾಭರಣಗಳ ಹಾಲ್‌ಮಾರ್ಕ್ ಹಾಗೂ ಜಿಎಸ್‌ಟಿ ದಾಖಲೆಗಳನ್ನು ಪರಿಶೀಲಿಸಬೇಕೆಂದು ಹೇಳಿದ್ದರು. ಅವರ ಮಾತು ನಂಬಿದ್ದ ಅಂಗಡಿ ಕೆಲಸಗಾರರು, ಚಿನ್ನಾಭರಣ ಹಾಗೂ ದಾಖಲೆಗಳನ್ನು ತೋರಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'40 ನಿಮಿಷ ಮಳಿಗೆಯಲ್ಲಿದ್ದ ಆರೋಪಿಗಳು, ಚಿನ್ನಾಭರಣ ಜಪ್ತಿ ಮಾಡಿದ್ದರು. ಕೆಲಸಗಾರರ ಕೈಗೆ ನೋಟಿಸ್ ನೀಡಿ, ಮಾಲೀಕರನ್ನು ತಮಿಳುನಾಡಿನ ಕಚೇರಿಗೆ ಕಳುಹಿಸುವಂತೆ ಹೇಳಿ ಸ್ಥಳದಿಂದ ಹೊರಟಿದ್ದರು. ಪುರಾವೆ ಸಿಗಬಾರದೆಂದು ಸಿಸಿಟಿವಿ ಕ್ಯಾಮೆರಾ ಡಿವಿಆರ್ ಸಹ ಕಿತ್ತೊಯ್ದಿದ್ದರು' ಎಂದು ಹೇಳಿದರು.

ನಕಲಿ ನೋಂದಣಿ ಸಂಖ್ಯೆ ಫಲಕ: 'ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಕಾರಿಗೆ ನಕಲಿ ನೋಂದಣಿ ಸಂಖ್ಯೆ ಫಲಕ ಅಳವಡಿಸಿದ್ದರು. ಕಾರು ಸ್ಥಳದಿಂದ ಹೊರಡುವ ಸಂದರ್ಭದಲ್ಲಿ ಅನುಮಾನಗೊಂಡಿದ್ದ ಕೆಲಸಗಾರ ಹೇಮರಾಜ್, ಕಾರಿಗೆ ಅಡ್ಡವಾಗಿ ನಿಂತಿದ್ದರು. ಅವರ ಮೇಲೆ ಕಾರು ಹತ್ತಿಸಿದ್ದ ಆರೋಪಿಗಳು ಕೊಲೆಗೂ ಯತ್ನಿಸಿ ಸ್ಥಳದಿಂದ ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ದರೋಡೆ ಹಾಗೂ ಕೊಲೆ ಯತ್ನ ಆರೋಪದಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಕೃತ್ಯ ನಡೆದ ಎರಡು ಗಂಟೆಯೊಳಗೆ ಆರೋಪಿಗಳನ್ನು ಬಂಧಿಸಲಾಗಿದೆ.'

'ಆರೋಪಿ ಸಂಪತ್, ಮಂಡ್ಯ ಜಿಲ್ಲೆಯಲ್ಲಿ ಕಳ್ಳತನ ಪ್ರಕರಣದಲ್ಲಿ ಸಿಕ್ಕಿಬಿದ್ದು ಕೆಲ ತಿಂಗಳು ಜೈಲಿನಲ್ಲಿದ್ದ. ಜಾಮೀನು ಮೇಲೆ ಇತ್ತೀಚೆಗೆ ಬಿಡುಗಡೆಗೊಂಡಿದ್ದ. ಇತರೆ ಆರೋಪಿಗಳ ಜೊತೆ ಸೇರಿ ಕೃತ್ಯಕ್ಕೆ ಸಂಚು ರೂಪಿಸಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

ಬಂಧಿತ ಆರೋಪಿಗಳು

ಗಂಡನಿಗೆ ಗಂಡಾಂತರ: ಪೂಜೆ ನೆಪದಲ್ಲಿ ಆಭರಣ ಕದ್ದೊಯ್ದ

ಬೆಂಗಳೂರು: ಗಂಡನಿಗೆ ಗಂಡಾಂತರವಿರುವುದಾಗಿ ಹೇಳಿ ಮಹಿಳೆಯೊಬ್ಬರನ್ನು ಬೆದರಿಸಿ ಪೂಜೆ ನೆಪದಲ್ಲಿ ಚಿನ್ನಾಭರಣ ಕದ್ದೊಯ್ಯಲಾಗಿದ್ದು, ಈ ಸಂಬಂಧ ಕೊತ್ತನೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸ್ಥಳೀಯ ಜನತಾ ಕಾಲೊನಿ ನಿವಾಸಿಯಾಗಿರುವ 25 ವರ್ಷ ವಯಸ್ಸಿನ ಮಹಿಳೆ ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಜ.28ರಂದು ಬೆಳಿಗ್ಗೆ ಮನೆ ಬಳಿ ಬಂದಿದ್ದ ಆರೋಪಿ, ಮಹಿಳೆಯನ್ನು ಮಾತನಾಡಿಸಿದ್ದ. 'ನಿಮ್ಮ ಗಂಡನಿಗೆ ಗಂಡಾಂತರವಿದೆ. ಇದನ್ನು ತಪ್ಪಿಸಲು ವಿಶೇಷ ಪೂಜೆ ಮಾಡಬೇಕು. ಇಲ್ಲದಿದ್ದರೆ, ಗಂಡ ತೀರಿಕೊಳ್ಳುತ್ತಾರೆ' ಎಂದು ಹೇಳಿ ಬೆದರಿಸಿದ್ದ. ಆತನ ಮಾತು ನಂಬಿದ್ದ ಮಹಿಳೆ, ಪೂಜೆ ಮಾಡಿಸಲು ಒಪ್ಪಿದ್ದರು.'

'ಪೂಜೆ ಮಾಡಲು ಮುಂದಾಗಿದ್ದ ಆರೋಪಿ, ಮಡಿಕೆ ತರಿಸಿದ್ದ. ಅದರೊಳಗೆ ಅರಿಶಿನ, ಕುಂಕುಮ, ಅಕ್ಕಿ ಹಾಕಿದ್ದ. ಅದೇ ಮಡಿಕೆಯೊಳಗೆ ಚಿನ್ನಾಭರಣ ಬಿಚ್ಚಿಡುವಂತೆ ಮಹಿಳೆಗೆ ಹೇಳಿದ್ದ. ಅದನ್ನೂ ನಂಬಿದ್ದ ಮಹಿಳೆ ಕಿವಿಯೊಲೆ ಬಿಚ್ಚಿ ಮಡಿಕೆಯೊಳಗೆ ಹಾಕಿದ್ದರು' ಎಂದು ಪೊಲೀಸರು ತಿಳಿಸಿದರು.

'ಮಡಿಕೆ ಸುತ್ತಲೂ ದಾರ ಕಟ್ಟಿದ್ದ ಆರೋಪಿ, 'ಪೂಜೆ ಮುಕ್ತಾಯವಾಗಿದೆ. ನಿಮ್ಮ ಗಂಡ ಮನೆಗೆ ಬಂದ ನಂತರ ಮಡಿಕೆ ತೆರೆದು ನೋಡಿ. ಗಂಡಾಂತರ ನಿವಾರಣೆಯಾಗುತ್ತದೆ' ಎಂದು ಹೇಳಿ ಮನೆಯಿಂದ ಹೊರಟು ಹೋಗಿದ್ದರು. ಸಂಜೆ ಗಂಡ ಮನೆಗೆ ಬಂದಾಗ ಮಡಿಕೆ ತೆರೆದಿದ್ದರು. ಅದರಲ್ಲಿ ಕಿವಿಯೋಲೆಗಳು ಇರಲಿಲ್ಲ. ಅವಾಗಲೇ ಕಳ್ಳತನ ಸಂಗತಿ ಗೊತ್ತಾಗಿದೆ' ಎಂದು ಹೇಳಿದರು.

ಡೆಲಿವರಿ ಬಾಯ್ ಸೇರಿ ಇಬ್ಬರ ಸಾವು

ಬೆಂಗಳೂರು: ರಾಜಾಜಿನಗರ ಹಾಗೂ ಕೆಂಗೇರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಡೆಲಿವರಿ ಬಾಯ್ ಸೇರಿ ಇಬ್ಬರು ಮೃತಪಟ್ಟಿದ್ದಾರೆ. ಮೈಲಸಂದ್ರದ ಮಂಜುನಾಥ್ (27) ಹಾಗೂ ಪ್ರಕಾಶನಗರ ನಿವಾಸಿ ವಿಜಯ್ (29) ಮೃತರು.

ಹಂಪ್ಸ್‌ನಿಂದ ಹಾರಿಬಿದ್ದ ಬೈಕ್: 'ಇ–ಕಾಮರ್ಸ್ ಕಂಪನಿಯೊಂದರ ಡೆಲಿವರಿ ಬಾಯ್ ಆಗಿದ್ದ ಮಂಜುನಾಥ್, ಸ್ನೇಹಿತ ಚಂದ್ರು ಜೊತೆ ಬೈಕ್‌ನಲ್ಲಿ ಹೊರಟಿದ್ದರು. ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಕೆಂಗೇರಿ ಸಂಚಾರ ಪೊಲೀಸರು ಹೇಳಿದರು.

'ರಸ್ತೆಯಲ್ಲಿ ಹಂಪ್ಸ್ ಇರುವುದನ್ನು ಮಂಜುನಾಥ್ ಗಮನಿಸಿರಲಿಲ್ಲ. ಹಂಪ್ಸ್‌ನಲ್ಲಿ ಹಾರಿದ್ದ ಬೈಕ್ ಉರುಳಿ ಬಿದ್ದಿತ್ತು. ಅಪಘಾತದಿಂದಾಗಿ ತಲೆಗೆ ತೀವ್ರ ಪೆಟ್ಟು ಬಿದ್ದು ಮಂಜುನಾಥ್ ಮೃತಪಟ್ಟಿದ್ದಾರೆ. ಸ್ನೇಹಿತ ಚಂದ್ರು ಅವರಿಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ತಿಳಿಸಿದರು.

ಬೈಕ್‌ಗೆ ವಾಹನ ಡಿಕ್ಕಿ: 'ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ವಿಜಯ್, ರಾಜಾಜಿನಗರದ ಸುಜಾತಾ ರಸ್ತೆ ಕಡೆಯಿಂದ ನವರಂಗ್ ವೃತ್ತದ ಕಡೆಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ರಾತ್ರಿ 9.10 ಗಂಟೆ ಸುಮಾರಿಗೆ ದ್ವಿಚಕ್ರ ವಾಹನಕ್ಕೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದಿತ್ತು' ಎಂದು ರಾಜಾಜಿನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಬೈಕ್ ಸಮೇತ ಬಿದ್ದು ತೀವ್ರ ಗಾಯಗೊಂಡಿದ್ದ ವಿಜಯ್ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿತ್ತು. ಮಾರ್ಗಮಧ್ಯೆ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು. ಅಪಘಾತದ ಬಳಿಕ ವಾಹನ ಸಮೇತ ಚಾಲಕ ಪರಾರಿಯಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

'ಶೀಘ್ರದಲ್ಲೇ ಕಂದಾಯ ಅದಾಲತ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಹಣಿಗಳಲ್ಲಿನ ದೋಷಗಳನ್ನು ಸರಿಪಡಿಸುವುದಕ್ಕಾಗಿ ರಾಜ್ಯದಾದ್ಯಂತ ಕಂದಾಯ ಅದಾಲತ್‌ಗೆ ಶೀಘ್ರದಲ್ಲಿ ಚಾಲನೆ ನೀಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಕಂದಾಯ ಅದಾಲತ್ ಆರಂಭಕ್ಕೆ ಸಿದ್ಧತೆ ಕುರಿತು ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಅವರು, 'ಡಿಜಿಟಲೀಕರಣಗೊಂಡಿರುವ ಪಹಣಿಗಳಲ್ಲಿ ದೋಷಗಳನ್ನು ತಿದ್ದುಪಡಿ ಮೂಲಕ ಸರಿಪಡಿಸಲು ಹಿಂದೆ ಕಂದಾಯ ಅದಾಲತ್ ನಡೆಸಲಾಗಿತ್ತು. ಇನ್ನೂ ದೋಷಗಳು ದೊಡ್ಡ ಸಂಖ್ಯೆಯಲ್ಲಿ ಉಳಿದಿವೆ. ಅವುಗಳನ್ನು ಸರಿಪಡಿಸಲು ಅದಾಲತ್‌ಗೆ ಮರು ಚಾಲನೆ ನೀಡಲಾಗುವುದು' ಎಂದರು.

2023ರ ಡಿಸೆಂಬರ್ 31ಕ್ಕೆ ಕಂದಾಯ ಅದಾಲತ್ ಅಂತ್ಯಗೊಂಡಿದೆ. ಅದಾಲತ್ ಸಿದ್ಧತೆ ಕುರಿತು ಈಗಾಗಲೇ ಆದೇಶ ಹೊರಡಿಸಲಾಗಿದೆ. ಶೀಘ್ರದಲ್ಲಿಯೇ ದಿನಾಂಕವನ್ನು ಅಂತಿಮಗೊಳಿಸಲಾಗುವುದು. ಆಕಾರ್ ಬಂದ್, ಕಾಲಂ 3, ಕಾಲಂ 9 ಸೇರಿದಂತೆ ಪಹಣಿಗಳಲ್ಲಿನ ವಿವಿಧ ದೋಷಗಳನ್ನು ಸರಿಪಡಿಸಲಾಗುವುದು ಎಂದು ತಿಳಿಸಿದರು.

ಭೂಮಿ ತಂತ್ರಾಂಶದಲ್ಲಿ ಒಟ್ಟು 1.89 ಕೋಟಿ ಪಹಣಿಗಳಿವೆ. ಈ ಪೈಕಿ 80.53 ಲಕ್ಷ ಪಹಣಿಗಳ ಡಿಜಿಟಲೀಕರಣ ಬಾಕಿ ಇದೆ. ಈ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಪೋಡಿ ಪ್ರಕರಣಗಳ ಅರ್ಜಿಗಳನ್ನೂ ಶೀಘ್ರವಾಗಿ ವಿಲೇವಾರಿ ಮಾಡಬೇಕು ಎಂದು ಸೂಚಿಸಿದರು.

ಕಂದಾಯ ಆಯುಕ್ತ ಪಿ. ಸುನೀಲ್ ಕುಮಾರ್, ಭೂಮಾಪನ ಇಲಾಖೆಯ ಆಯುಕ್ತ ಮಂಜುನಾಥ್ ಸಭೆಯಲ್ಲಿ ಇದ್ದರು.

ಸುದ್ದಿ 2 ನಿಮಿಷ

'ಮಕ್ಕಳಲ್ಲಿ ಉತ್ತಮ ಹವ್ಯಾಸ ಬೆಳೆಸಿ'

ಕೆ.ಆರ್.ಪುರ: ಪಾಲಕರು ತಮ್ಮ ಮಕ್ಕಳಿಗೆ ಉತ್ತಮವಾದ ಹವ್ಯಾಸಗಳನ್ನು ಬೆಳೆಸುವ ಮೂಲಕ ಮಕ್ಕಳಲ್ಲಿ ಮಾನಸಿಕ ದೃಢತೆಯನ್ನು ಬೆಳೆಸಬೇಕು ಎಂದು ರಾಜ್ಯ ಕೊಕ್ಕೊ ಅಸೋಸಿಯೇಷನ್ ಅಧ್ಯಕ್ಷ ಲೋಕೇಶ್ವರ ಹೇಳಿದರು.

ಸಮೀಪದ ಮಹದೇವಪುರದಲ್ಲಿ ಕ್ಯಾಪಿಟಲ್ ಪಬ್ಲಿಕ್ ಶಾಲೆಯ ಸ್ಪಾರ್ಕ್ಸ್- 2024 ವಾರ್ಷಿಕೋತ್ಸವ ಉದ್ಘಾಟಿಸಿದ ಅವರು ಮಾತನಾಡಿದರು.

ಇಂದಿನ ಸಮಾಜದಲ್ಲಿ ಶಾರೀರಿಕ ಆರೋಗ್ಯದಂತೆ ಮಾನಸಿಕ ಆರೋಗ್ಯವೂ ಬಹಳ ಮುಖ್ಯ. ನಮ್ಮ ಸಮಾಜಕ್ಕೆ ಉತ್ತಮವಾದ ಪ್ರಜೆಗಳನ್ನು ನೀಡುವುದು ಸಂಸ್ಥೆಗಳ ಉದ್ದೇಶ ಆಗಬೇಕು ಎಂದರು.

ಚಿಂತಕಿ ಸುಧಾ ಬರಗೂರು ಮಾತನಾಡಿ, 'ನಾವು ನಮ್ಮ ಜೀವನದಲ್ಲಿ ಧನಾತ್ಮಕ ಚಿಂತನೆಯನ್ನು ಹೊಂದಿರಬೇಕು. ನಾವು ಶ್ರಮ ಪಟ್ಟರೆ ನಮ್ಮ ಜೀವನ ಉತ್ತಮವಾಗುತ್ತದೆ. ನಮಗೆ ಆತ್ಮ ಸ್ಥೈರ್ಯ ಇರಬೇಕು' ಎಂದರು.

ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ರಮೇಶ್, ನಿರ್ದೇಶಕಿ ಸುಷ್ಮಾ, ಪ್ರಾಂಶುಪಾಲರಾದ ಪ್ರಿಯ ವಾಸುದೇವನ್ ಇದ್ದರು.

ವಿದ್ಯಾರ್ಥಿ ವೇತನ ವಿತರಣೆ

ಕೆ.ಆರ್.ಪುರ: 'ವಿದ್ಯೆ ಯಾರ ಸ್ವತ್ತೂ ಅಲ್ಲ. ವಿದ್ಯೆಯಿಂದ ಮನುಷ್ಯನ ಘನತೆ ಹೆಚ್ಚುತ್ತದೆ' ಎಂದು ರಾಜ್ಯ ಬ್ರಾಹ್ಮಣರ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಎಚ್.ಎಸ್.ಸಚ್ಚಿದಾನಂದಮೂರ್ತಿ ಹೇಳಿದರು.

ಶ್ರೀವೆಂಕಟೇಶ್ವರ ಸಮೂಹ ಸಂಸ್ಥೆಗಳ ವತಿಯಿಂದ ಹಮ್ಮಿಕೊಂಡಿದ್ದ 10ನೇ ತರಗತಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ 85ಕ್ಕೂ ಹೆಚ್ಚು ಅಂಕ ಪಡೆದ ಎಸ್‌ಸಿ, ಎಸ್‌ಟಿ ಹಾಗೂ ಇತರ ಸಮುದಾಯದ 270ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಎಲ್ಲ ರಂಗಗಳಲ್ಲಿ ಸಾಧಕರಾಗಲು ಆದರ್ಶ ಗುಣ ಹೊಂದಬೇಕು. ಶ್ರೀವೆಂಕಟೇಶ್ವರ ವಿದ್ಯಾಸಂಸ್ಥೆ ಮೂಲಕ ಪ್ರತಿವರ್ಷ ಇಪ್ಪತ್ತೈದು ಲಕ್ಷಕ್ಕೂ ಹೆಚ್ಚು ಹಣವನ್ನು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಮೂಲಕ ಸರ್ಕಾರ ಮಾಡಬೇಕಾದ ಕೆಲಸವನ್ನು ಸಂಸ್ಥೆ ಮಾಡಿದೆ ಎಂದು ಹೇಳಿದರು.

ಕಾಲೇಜು ನಿರ್ದೇಶಕ ಪ್ರೊ.ವಿ.ಎಂ. ರವಿ ಮಾತನಾಡಿ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ 270ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಿದ್ದೇವೆ ಎಂದರು.

ಕಾಲೇಜು ಸಂಸ್ಥಾಪಕ ಡಾ.ಕೆ.ವಿ. ಮುನಿಸ್ವಾಮಿ, ಆಡಳಿತಾಧಿಕಾರಿ ಡಾ.ಕೆ. ಪುಟ್ಟರಾಜು, ಪ್ರಾಂಶುಪಾಲ ಡಾ.ಜೆ.ಇ. ಪ್ರಕಾಶ್, ಗೀತಾಂಜಲಿ, ಚಂದ್ರಯ್ಯ ಇದ್ದರು.

ಬರ ಪರಿಹಾರ ಬಿಜೆಪಿ ಪ್ರತಿಭಟನೆ

ಕೋಲಾರ: 'ರೈತರಿಗೆ ಪರಿಹಾರ ಕೊಡಿ, ಇಲ್ಲ ಕುರ್ಚಿ ಬಿಡಿ' ಘೋಷಣೆಯೊಂದಿಗೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಹಾಗೂ ಶಾಸಕ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಸೋಮವಾರ ಪ್ರತಿಭಟನೆ ನಡೆಸಿತು.

ಬಿಜೆಪಿ ಕಾರ್ಯಕರ್ತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಂಡ್ಯ ಜಿಲ್ಲೆಯ ಕೆರಗೋಡಿನಲ್ಲಿ ಹನುಮ ಧ್ವಜ ತೆರವು ಮಾಡಿದವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ನಗರದಲ್ಲಿ ಸೋಮವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದ ಬಿಜೆಪಿಯ 68 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದು, ಸಂಜೆ ಬಿಡುಗಡೆಗೊಳಿಸಿದರು.

ಹನುಮ ಧ್ವಜ ತೆರವು ಖಂಡಿಸಿ ಬಿಜೆಪಿ ಮುಖಂಡರು ರಾಜ್ಯದಾದ್ಯಂತ ಪ್ರತಿಭಟನೆಗೆ ಕರೆ ನೀಡಿದ್ದರು. ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಘೋಷಣೆ ಕೂಗಿದರು.

'ಕಾಂಗ್ರೆಸ್ ಸರ್ಕಾರದಲ್ಲಿ ರಾಮ ಭಕ್ತರಿಗೆ ರಕ್ಷಣೆ ಇಲ್ಲದಂತಾಗಿದೆ. ಹನುಮ ಧ್ವಜ ಹಾರಿಸಲು ಅವಕಾಶ ಇಲ್ಲದಂಥ ವಾತಾವರಣ ನಿರ್ಮಾಣವಾಗಿದೆ. ಹಿಂದೂಗಳಿಗೆ ಆಗುತ್ತಿರುವ ಅನ್ಯಾಯ ಖಂಡಿಸಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಪ್ರತಿಭಟನಕಾರರು ಹೇಳಿದರು.

'ಕೆರಗೋಡಿನ ಸ್ಥಳೀಯ ಶಾಸಕ ರವಿ ಗಣಿಗ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಹನುಮ ಭಕ್ತರ ಮೇಲೆ ಸುಖಾಸುಮ್ಮನೇ ಲಾಠಿ ಬೀಸಿರುವ ಪೊಲೀಸರ ವಿರುದ್ಧವೂ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಶಿಸ್ತುಕ್ರಮ ಜರುಗಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಅನುಮತಿ ಪಡೆಯದೇ ಪ್ರತಿಭಟನೆ: ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲು ಪೊಲೀಸರು ಅನುಮತಿ ನೀಡಿರಲಿಲ್ಲ. ಪ್ರತಿಭಟನಾ ಸ್ಥಳದಲ್ಲಿದ್ದ ಪೊಲೀಸರು, 'ಪ್ರತಿಭಟನೆಗೆ ಅವಕಾಶವಿಲ್ಲ. ದಯವಿಟ್ಟು ಸ್ಥಳದಿಂದ ಹೊರಟು ಹೋಗಿ' ಎಂದು ಕೋರಿದರು. ಅದಕ್ಕೆ ಒಪ್ಪದ ಬಿಜೆಪಿ ಕಾರ್ಯಕರ್ತರು, ಪ್ರತಿಭಟನೆ ಮುಂದುವರಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಪೊಲೀಸರು, 68 ಮಂದಿಯನ್ನು ವಶಕ್ಕೆ ಪಡೆದು ಬಿಎಂಟಿಸಿ ಬಸ್‌ಗಳಲ್ಲಿ ಮೈಸೂರು ರಸ್ತೆಯಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆಯ ಮೈದಾನಕ್ಕೆ ಕರೆದೊಯ್ದಿದ್ದರು. ಕೆಲ ಗಂಟೆಗಳ ಬಳಿಕ ಎಲ್ಲರನ್ನೂ ಬಿಟ್ಟು ಕಳುಹಿಸಿದರು.

ಎಫ್‌ಐಆರ್ ದಾಖಲು: 'ಶಾಸಕರಾದ ಸಿ.ಕೆ. ರಾಮಮೂರ್ತಿ, ಎ. ಕೃಷ್ಣಪ್ಪ, ಮುಖಂಡರಾದ ಎಂ. ಗೌತಮ್ ಕುಮಾರ್, ಭಾಸ್ಕರ್ ರಾವ್ ಸೇರಿದಂತೆ 68 ಮಂದಿಯನ್ನು ವಶಕ್ಕೆ ಪಡೆಯಲಾಗಿತ್ತು. ಅಕ್ರಮವಾಗಿ ಗುಂಪು ಸೇರಿ ಪ್ರತಿಭಟನೆ ನಡೆಸಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ಹೇಳಿದರು.

ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಿಎಂಟಿಸಿ ಬಸ್‌ನಲ್ಲಿ ಕರೆದೊಯ್ದರು – ಪ್ರಜಾವಾಣಿ ಚಿತ್ರ

ಕಾಳ್ಗಿಚ್ಚು ನಿಗ್ರಹಕ್ಕೆ ಕಟ್ಟೆಚ್ಚರ: ಖಂಡ್ರೆ ಸೂಚನೆ

ಬೆಂಗಳೂರು: ರಾಜ್ಯದ ಯಾವುದೇ ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡರೂ ಕೆಲವೇ ಗಂಟೆಗಳೊಳಗೆ ಮಾಹಿತಿ ನೀಡಲು ಸಾಮರ್ಥ್ಯ ಇರುವ ದೂರಸಂವೇದಿ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಸೂಚನೆ ನೀಡಿದರು.

ಕಾಳ್ಗಿಚ್ಚು ತಡೆ–ನಿಯಂತ್ರಣ ಸಿದ್ಧತೆ ಕುರಿತು ನಗರದ ಅರಣ್ಯ ಭವನದಲ್ಲಿ ಸೋಮವಾರ ಸಭೆ ನಡೆಸಿದ ಅವರು ಮಾತನಾಡಿದರು.

ಕಾಳ್ಗಿಚ್ಚಿನ ಕುರಿತು ಸಕಾಲದಲ್ಲಿ ಮಾಹಿತಿ ನೀಡುವ ದೂರಸಂವೇದಿ ತಂತ್ರಜ್ಞಾನ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದ ಖಂಡ್ರೆ, 'ಅರಣ್ಯ ಇಲಾಖೆಯ ಅಗ್ನಿನಿಗ್ರಹ ಕೋಶದಿಂದ ಸತತ ನಿಗಾ ಇಡಬೇಕು' ಎಂದೂ ಸೂಚಿಸಿದರು.

ರಾಜ್ಯದ ಕೆಲವು ಅರಣ್ಯಗಳ ನಿರ್ದಿಷ್ಟ ಪ್ರದೇಶ ಗಳಲ್ಲಿ ಪದೇ ಪದೇ ಕಾಳ್ಗಿಚ್ಚು ಸಂಭವಿಸುತ್ತಿದೆ. 15 ವರ್ಷಗಳ ದತ್ತಾಂಶ ಆಧಾರದಲ್ಲಿ, ಇಂತಹ ಪ್ರದೇಶಗಳನ್ನು 'ಹಾಟ್‌ಸ್ಪಾಟ್'ಗಳೆಂದು ಗುರುತಿಸಲಾಗಿದೆ ಎಂಬ ಮಾಹಿತಿ ಪಡೆದ ಸಚಿ ವರು, 'ಈ ಪ್ರದೇಶಗಳಲ್ಲಿ ಹೆಚ್ಚಿನ ಅಗ್ನಿವೀಕ್ಷಕ ರನ್ನು ನಿಯೋಜಿಸಬೇಕು ಮತ್ತು ಡ್ರೋನ್ ಕ್ಯಾಮೆರಾ ಮೂಲಕ ಕಣ್ಗಾವಲು ಇಡಬೇಕು' ಎಂದು ಹೇಳಿದರು.

ದೂರಸಂವೇದಿ ಉಪಗ್ರಹಗಳ ಮೂಲಕ ಬಹಳ ವರ್ಷಗಳಿಂದಲೂ ಮಾಹಿತಿ ಪಡೆಯಲಾಗುತ್ತಿದೆ. ಈ ಹಿಂದೆ ನಾಸಾದಿಂದ ಕಾಳ್ಗಿಚ್ಚಿನ ಮಾಹಿತಿ ಇಸ್ರೊ ರಾಷ್ಟ್ರೀಯ ದೂರಸಂವೇದಿ ಕೇಂದ್ರಕ್ಕೆ ಬರುತ್ತಿತ್ತು. ಆ ಬಳಿಕವೇ ಇಲಾಖೆಗೆ ಬರುತ್ತಿತ್ತು. ಈಗ ನೇರವಾಗಿ ನಾಸಾದಿಂದ ಇಸ್ರೊ ರಾಷ್ಟ್ರೀಯ ದೂರ ಸಂವೇದಿ ಕೇಂದ್ರಕ್ಕೆ ಬಂದು ಅಲ್ಲಿಂದ ಕರ್ನಾಟಕ ದೂರಸಂವೇದಿ ಸಂಸ್ಥೆಗೆ ಬರುತ್ತಿದೆ ಎಂದು ಅಧಿಕಾರಿಗಳು ವಿವರಿಸಿದರು.

ಸರ್ಕಾರಿ ಕಾರಿಗೆ ₹8 ಸಾವಿರ ದಂಡ: ವಸೂಲಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸರ್ಕಾರ' ನಾಮಫಲಕ ಹಾಕಿಕೊಂಡು ನಗರದಲ್ಲಿ ಸಂಚರಿಸುವ ಕಾರಿನಿಂದ 13 ಬಾರಿ ಸಂಚಾರ ನಿಯಮ ಉಲ್ಲಂಘನೆ ಆಗಿದ್ದು, ದಂಡ ವಸೂಲಿಗೆ ಸಂಚಾರ ಪೊಲೀಸರು ಹಿಂದೇಟು ಹಾಕುತ್ತಿದ್ದಾರೆಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಿದ್ದ ಕಾರಿನ (ಕೆಎ 04 ಜಿಎ 3600) ಫೋಟೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿರುವ ಹಲವರು, 'ಕಾರಿನ ಮೇಲೆ ₹ 8 ಸಾವಿರ ದಂಡ ಬಾಕಿ ಇದೆ. ಕೂಡಲೇ ವಸೂಲಿ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

'ಸಾಮಾನ್ಯ ಜನರು ಸಂಚಾರ ನಿಯಮ ಉಲ್ಲಂಘನೆ ಮಾಡಿದರೆ, ತ್ವರಿತವಾಗಿ ದಂಡ ವಸೂಲಿ ಮಾಡಲಾಗುತ್ತದೆ. ಮನೆಗೂ ನೋಟಿಸ್ ಕಳುಹಿಸಲಾಗುತ್ತದೆ. ವಾಹನಗಳನ್ನು ಜಪ್ತಿ ಮಾಡಲಾಗುತ್ತದೆ. ಆದರೆ, ಸರ್ಕಾರದ ಕಾರಿನ ಚಾಲಕರು ಹಲವು ಬಾರಿ ನಿಯಮ ಉಲ್ಲಂಘನೆ ಮಾಡಿದ್ದಾರೆ. ಅವರಿಗೆ ಏಕೆ ವಿನಾಯಿತಿ' ಎಂದು ಜನರು ಪ್ರಶ್ನಿಸಿದ್ದಾರೆ.

'ಚಾಲುಕ್ಯ ವೃತ್ತ, ದೊಮ್ಮಲೂರು, ಚಿಕ್ಕಪೇಟೆ, ಕೆ.ಎಚ್. ರಸ್ತೆ, ಎಚ್‌ಎಎಲ್ ಹಳೇ ವಿಮಾನ ನಿಲ್ದಾಣ ರಸ್ತೆ, ಜಯನಗರ, ಭಾಷ್ಯಂ ವೃತ್ತ ಸೇರಿದಂತೆ ಹಲವೆಡೆ ಸಂಚರಿಸಿರುವ ಕಾರಿನಿಂದ 13 ಬಾರಿ ನಿಯಮ ಉಲ್ಲಂಘನೆ ಆಗಿದೆ. ಸಿಗ್ನಲ್ ಜಂಪ್, ಸೀಟ್ ಬೆಲ್ಟ್ ಧರಿಸದಿರುವುದು, ಪಾದಚಾರಿ ಮಾರ್ಗದಲ್ಲಿ ನಿಲುಗಡೆ ಮಾಡಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಜನರು ಮಾಹಿತಿ ಹಂಚಿಕೊಂಡಿದ್ದಾರೆ.

'ಇನ್ನೋವಾ ಕ್ರಿಸ್ಟಾ' ಸರ್ಕಾರಿ ಕಾರನ್ನು ಯಾರು ಬಳಸುತ್ತಿದ್ದಾರೆ ಎಂಬ ಮಾಹಿತಿ ಸದ್ಯಕ್ಕೆ ಲಭ್ಯವಾಗಿಲ್ಲ. ಸಂಚಾರ ಪೊಲೀಸರು ನಗರದ ಹಲವೆಡೆ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿಯೂ ಕಾರಿನ ನಿಯಮ ಉಲ್ಲಂಘನೆ ಫೋಟೊಗಳು ಸೆರೆಯಾಗಿವೆ.

13 ಬಾರಿ ಸಂಚಾರ ನಿಯಮ ಉಲ್ಲಂಘಿಸಿರುವ ಸರ್ಕಾರಿ ಕಾರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

SOUNDARYA INSTITUTE OF MANAGEMENT & SCIENCE
(A Unit of Soundarya Educational Trust)
Soundarya Nagar, Sidedahalli, Hesarghatta Road, Nagasandra Post, Bengaluru-560073
Invites Applications for the MCA, MBA, BBA and BCA Programs for the below positions :
• Professor
• Associate Professor
• Assistant Professor
Experienced candidates with good communication skills can apply and email us a detailed CV immediately. Salary will not be a constraint for the right candidate.
Contact us: 9902068883
E-mail: careers@soundaryainstitutions.in

REAL ESTATE BUYING

Sites

Vishweshwariah Layout

URGENTLY REQUIRED BDA 30x40 Site or 60x40 Site in Vishweshwaraiah Layout (any block). Brokers Excuse. Contact: 9448018447.

BUSINESS

Business Offers

Finance

WANTED BUSINESS Partners Gold Business 5, 10, 25 Lakhs Investment Monthly Income 1Lakhs WE PURCHASE GOLD Contact: 8892501007/ 9606701007

NRI'S INVESTMENTS and Finance through Banking Available On-low interest against Properties,Land&Building,Sites,Flat also take over Loans NPA cases from Any Banks:7204995189

PERSONAL

Change of Name

I, SUNDER Hegde K s/o Narasimha Hegde K residing at B.311 Sterling Park, Kodigehalli, Main Road, Opposite More Store, SanjeeviNagar, Sahakarnagar Post, Bangalore-92 have changed my name to Sunder Hegde Kundapur s/o Narasimha Hegde Kundapur vide affidavit dated 19-01-2024 before Notary S.R.Paramashivaiah, Bangalore

CHANGE OF NAME
I, VAIBHAV ALI, Residing at # 7, 3rd Cross, Shridi Sai Nagar, R. K. Hegde Nagar, Bengaluru-560077 have changed my name to VAIBHAVV ALI vide affidavit dt:29-01-2024, before Notary A. Gerard, Bengaluru. Henceforth I shall be called VAIBHAVV ALI only

I, MUBARAK UNNISA ALIAS SHAMA TAJ, Residing at Opp. to Police Station, Basaveshwara Complex, K.S.Road, Vijayapura, Devanahalli Taluk, have changed my name to MUBARAK TAJ Vide Affidavit dated 24.01.2024 sworn before advocate and notary K.H. Venkatappa, Chickaballapur.

I, CYNTHY G PINTO residing no.06, Raj Road, Chikkabommasandra, GKVK Post, Bangalore North, Bangalore-560065 have changed my name to CYNTHIA GRACY PINTO vide affidavit dated 29/01/2024 sworn before notary G.R.Ravindra Reddy, Bangalore

SMT JASADA BASU, Mother/o, 6495553X, HAV/ASH, SUBHAS BASU, Vill- Asannagar, Krishnagar, Nadia, West Bengal changed name SMT JASADA BASU to JASHODA BASU, 25/01/2024, Notary K.V. Mani, Bangalore

CHANGE OF NAME
I, REENA SUNIL, R/at # E-002, Sterling Terraces, 100 Feet Mysore Ring Road, Ittamadu, BSK 3rd Stage, Bengaluru-85 have changed my name to REENA PHILIP KOVOOR vide affidavit dt:29-01-2024, before Notary S. Samuel Solomon, Bengaluru. Henceforth I shall be called REENA PHILIP KOVOOR only

I,M.RISHENDRA CHOWDARY S/o M.Bhanuprakash Chowdhary R/a #1268,1st Cross,10th Main GKVK Post, Yelahanka Court Layout, Bangalore-560065 Declare that M RISHENDRA CHOWDARY and MIKKILINENI RISHENDHRA CHOWDHARY both names are belongs to me only.Vide affidavit dated 19-01-2024 before Notary H.Sridhar Rao,Bangalore. Henceforth I called as M.RISHENDRA CHOWDARY only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Announcements

ANNOUNCEMENT
I , AMRUTHA VARSHINI MYSORE JAYAKRISHNA, Residing at #Flat no 1602, Tower 5, The Close North, Nirvana Country, Sector 50, South City, Gurgaon, Haryana 122018, As per my Adhar card my Date of birth is mentioned as 13/04/1986, whereas my passport it is mentioned as 13/04/1984. My correct DOB is 13/04/1986, vide affidavit dt. 28-01-2024, before Notary Shivakumara M.N., Bengaluru.

Lost

ಕಳೆದಿದೆ
ಬೆಂಗಳೂರಿನ ಉತ್ತರಹಳ್ಳಿಯ ಪೂರ್ಣಪ್ರಜ್ಞ ಲೇಔಟ್‌ನ ಅಕ್ಷಯ ರೆಸಿಡೆನ್ಸಿ ನಿವಾಸಿಯಾದ ವೈಷ್ಣವಿ ದೇಶ್‌ಪಾಂಡೆ ಇವರಿಗೆ ಸಂಬಂಧಿಸಿದ ಮೂಲ ದಾಖಲಾತಿ ಕ್ರಯಪತ್ರ ಸಂಖ್ಯೆ: 3484/10-11 ಕಳೆದಿದೆ. (#3160, ಜನಪ್ರಿಯ ಟೌನ್‌ಶಿಪ್, 14ನೇ ಬ್ಲಾಕ್, ಮಾಗಡಿ ರಸ್ತೆ, ಕಡಬಗೆರೆ, ಬೆಂಗಳೂರು–562130). ಸಿಕ್ಕಿದ್ದಲ್ಲಿ ದಯವಿಟ್ಟು ಸಂಪರ್ಕಿಸಿ: 8310939373 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ.

LOST
I, Ashwath K. have lost while Travel on 20.1.2024 below Property Original Documents: 1) Allotment letter dated 22.04.1981. 2) Possession Certificate dated 01.02.1983. 3) Conditional Sale Deed No 2201/1987-88. 4) Sale Deed No 4856/1993-94.
If anybody found above documents Please call: 9686756346, 9880512904. or nearby Police Station.

ಮೇಖ್ರಿ ವೃತ್ತದಿಂದ ಕೇಂದ್ರೀಯ ರೇಷ್ಮೆ ಮಂಡಳಿಯ ಕಾರಿಡಾರ್ ಮಾರ್ಗ ಅಂತಿಮ

27 ಕಿ.ಮೀ ಸುರಂಗ ರಸ್ತೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾಹನ ಸಂಚಾರವನ್ನು ಸುಗಮಗೊಳಿಸಲು 60 ಕಿ.ಮೀ ಸುರಂಗ ರಸ್ತೆಯನ್ನು ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಮೊದಲು ಉತ್ತರ–ದಕ್ಷಿಣ ಕಾರಿಡಾರ್ ನಿರ್ಮಾಣಕ್ಕೆ ಸಮ್ಮತಿ ನೀಡಲಾಗಿದೆ.

ಮೇಖ್ರಿ ವೃತ್ತದಿಂದ ಕೇಂದ್ರೀಯ ರೇಷ್ಮೆ ಮಂಡಳಿವರೆಗೆ ಸುಮಾರು 27 ಕಿ.ಮೀ ಸುರಂಗ ರಸ್ತೆಯನ್ನು ನಿರ್ಮಿಸಲು ಅಲ್ಟಿನೋಕ್ ಇಂಡಿಯಾ ಸಂಸ್ಥೆ ಯೋಜನೆ ರೂಪಿಸುತ್ತಿದೆ. ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿ, ಪ್ರಾಯೋಗಿಕವಾಗಿ ಹೆಬ್ಬಾಳದಿಂದ ಮೇಖ್ರಿ ವೃತ್ತದವರೆಗೆ 3 ಕಿ.ಮೀ ರಸ್ತೆಯನ್ನು ಕೂಡಲೇ ಪ್ರಾರಂಭಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ.

ಬಿಬಿಎಂಪಿ ಎಂಜಿನಿಯರ್‌ಗಳು, ಯೋಜನಾ ತಜ್ಞರೊಂದಿಗೆ ಸೋಮವಾರ ನಡೆದ ಸಭೆಯಲ್ಲಿ ಡಿಸಿಎಂ, 'ರಾಜ್ಯದ ಮುಂದಿನ ಬಜೆಟ್‌ನಲ್ಲಿ ಸುರಂಗ ರಸ್ತೆ ನಿರ್ಮಿಸಲೆಂದೇ ಅನುದಾನ ನೀಡಲಾಗುತ್ತದೆ. ಉತ್ತರ–ದಕ್ಷಿಣ ಕಾರಿಡಾರ್‌ನಲ್ಲಿ 3 ಕಿ.ಮೀ ಪ್ರಾಯೋಗಿಕವಾಗಿ ರಸ್ತೆ ನಿರ್ಮಿಸಲು ಕಾಮಗಾರಿ ಆರಂಭಿಸಿ. ಕಾರಿಡಾರ್‌ನ ಪೂರ್ಣ ಮಾರ್ಗ ಪೂರ್ಣಗೊಳಿಸಲೂ ಡಿಪಿಆರ್ ಸಿದ್ಧಪಡಿಸಿ' ಎಂದು ಆದೇಶಿಸಿದ್ದಾರೆ.

ಎರಡು 'ಪಾಯಿಂಟ್': 'ಹೆಬ್ಬಾಳ ಕೆರೆಯ ಮುಂಭಾಗದಿಂದ ಉತ್ತರ–ದಕ್ಷಿಣ ಸುರಂಗ ರಸ್ತೆ ಕಾರಿಡಾರ್ ಆರಂಭವಾಗಿ, ಕೇಂದ್ರೀಯ ರೇಷ್ಮೆ ಮಂಡಳಿಯವರೆಗೆ ಸಾಗಲಿದೆ. ಕೆರೆಯ ಮುಂಭಾಗ ವಾಹನಗಳ ಪ್ರವೇಶ ಹಾಗೂ ನಿರ್ಗಮನಕ್ಕೆ ಅವಕಾಶವಿರುತ್ತದೆ. ಇದಾದ ನಂತರ, ಹೆಬ್ಬಾಳ ಪಶುವೈದ್ಯ ಆಸ್ಪತ್ರೆ ಬಳಿ ವಾಹನಗಳ ನಿರ್ಗಮನ ಮತ್ತು ಪ್ರವೇಶಕ್ಕಾಗಿ 'ಪಾಯಿಂಟ್' ನಿರ್ಮಿಸಲಾಗುತ್ತದೆ. ಮೇಖ್ರಿ ವೃತ್ತದ ಅರಮನೆ ಮೈದಾನ , ಗಾಲ್ಫ್ ಮೈದಾನ ಮತ್ತು ಮಹಾರಾಣಿ ಕಾಲೇಜಿನ ಬಳಿಯಲ್ಲಿ 'ಪಾಯಿಂಟ್' ನಿರ್ಮಿಸಲು ಸದ್ಯಕ್ಕೆ ಯೋಜಿಸಲಾಗಿದೆ. ಪ್ರಾಯೋಗಿಕ ನಿರ್ಮಾಣದಲ್ಲಿ ಮೇಖ್ರಿ ವೃತ್ತದವರೆಗೆ ಸುರಂಗ ರಸ್ತೆ ಇರಲಿದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

'ಸುರಂಗ ರಸ್ತೆ ಮೂಲಕ ಬೈಪಾಸ್, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳನ್ನು ಸಂಪರ್ಕಿಸುವ ಯೋಜನೆ ರೂಪಿಸಿ, ಆ ಇಲಾಖೆಗಳಿಂದಲೂ ಅನುದಾನ ಪಡೆದುಕೊಳ್ಳುವ ಕಾರ್ಯಸಾಧ್ಯತಾ ವರದಿ ಸಲ್ಲಿಸಲು ಶಿವಕುಮಾರ್ ಸೂಚಿಸಿದ್ದಾರೆ. ಸುರಂಗ ರಸ್ತೆ ಮಾಡುವುದರಿಂದ ಭೂ ಸ್ವಾಧೀನ, ಗಿಡ–ಮರಗಳ ಕಡಿತ, ಸಂಚಾರ ಮಾರ್ಗ ಬದಲಾವಣೆಯಂತಹ ಸಮಸ್ಯೆಗಳು ಎದುರಾಗುವುದಿಲ್ಲ. ಪ್ರತಿ ಕಿ.ಮೀ ಸುರಂಗ ರಸ್ತೆಗೆ ₹500 ಕೋಟಿ ವೆಚ್ಚವಾಗಲಿದೆ. ಹೆಚ್ಚು ದೂರ ನಿರ್ಮಿಸಿದರೆ ವೆಚ್ಚ ಕಡಿಮೆಯಾಗಲಿದೆ' ಎಂದರು.

ಮುಖ್ಯಾಂಶಗಳು

- ಪೂರ್ವ– ಪಶ್ಚಿಮ ಕಾರಿಡಾರ್, ಉತ್ತರ– ದಕ್ಷಿಣ ಕಾರಿಡಾರ್ ನಿರ್ಮಾಣ
- ರಾಷ್ಟ್ರೀಯ ಹೆದ್ದಾರಿ 7 ಹಾಗೂ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಸಂಪರ್ಕ
- ಪ್ರಮುಖ ರಸ್ತೆ, ಬೈಪಾಸ್ ರಸ್ತೆಗಳಲ್ಲಿ ಪ್ರವೇಶ– ನಿರ್ಗಮನಕ್ಕೆ ಅನುವು

ಅಂಕಿ ಅಂಶಗಳು

- **500** ಕೋಟಿ — ಪ್ರತಿ ಕಿ.ಮೀಗೆ ವೆಚ್ಚ
- **30** ಮೀಟರ್ — ಆಳದಲ್ಲಿ ರಸ್ತೆ
- **60** ಕಿ.ಮೀ. — ಸುರಂಗ ರಸ್ತೆ ಯೋಜನೆ ಒಟ್ಟು ಉದ್ದ
- **₹3,000** ಕೋಟಿ — ಯೋಜನೆಯ ಅಂದಾಜು ವೆಚ್ಚ

'ನಮ್ಮ ಮೆಟ್ರೊ' ಆಸಕ್ತಿ

'ಬಿಬಿಎಂಪಿ ಸುರಂಗ ರಸ್ತೆ ನಿರ್ಮಿಸುವ ಮಾರ್ಗದಲ್ಲಿ ಬಿಎಂಆರ್‌ಸಿಎಲ್ 'ನಮ್ಮ ಮೆಟ್ರೊ' ಸಂಚಾರ ಮಾರ್ಗವನ್ನು ನಿರ್ಮಿಸುವ ಪ್ರಸ್ತಾವವನ್ನೂ ಇರಿಸಿದೆ. ಹೀಗಾಗಿ, 'ನಮ್ಮ ಮೆಟ್ರೊ' ಮಾರ್ಗ ಹಾಗೂ ರಸ್ತೆಯನ್ನು ಸುರಂಗದಲ್ಲಿ ನಿರ್ಮಿಸುವ ಬಗ್ಗೆಯೂ ಯೋಜನೆ ರೂಪಿಸಲು ಡಿಸಿಎಂ ಸೂಚಿಸಿದ್ದಾರೆ. ಒಟ್ಟಾರೆ ಯೋಜನೆಯನ್ನು ರೂಪಿಸಿ, ಶೀಘ್ರವೇ ಅನುಷ್ಠಾನ ಮಾಡಲಾಗುತ್ತದೆ. ನಮ್ಮ ಮೆಟ್ರೊ ಮಾರ್ಗ ಕೂಡ ಇದೇ ಸುರಂಗದಲ್ಲಿ ಬಂದರೆ, 'ಡಬಲ್ ಡೆಕ್' ರೀತಿಯಲ್ಲಿ ಯೋಜನೆ ನಿರ್ಮಾಣವಾಗಲಿದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿ ಮೊಬೈಲ್ ವ್ಯಾನ್‌ಗಳಲ್ಲಿ ಚಿಲ್ಲರೆ ವಸ್ತು ಪೂರೈಕೆ ಮಾಡುತ್ತಿದ್ದು, ಅದರ ಉಪಯೋಗ ಪಡೆದುಕೊಳ್ಳುವಂತೆ ಶಾಸಕ ಕೆ. ಗೋಪಾಲಯ್ಯ ನೇತೃತ್ವದಲ್ಲಿ ನಂದಿನಿ ಲೇಔಟ್ ವಾರ್ಡ್‌ನಲ್ಲಿ ಜಾಗೃತಿ ಮೂಡಿಸಲಾಯಿತು

'ಅಗತ್ಯ ವಸ್ತು ತಲುಪಿಸಲು ಮೊಬೈಲ್ ವ್ಯಾನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರು ನಿತ್ಯ ಬಳಸುವ ಅಗತ್ಯ ವಸ್ತುಗಳನ್ನು ಮೊಬೈಲ್ ವ್ಯಾನ್‌ಗಳ ಮೂಲಕ ಪೂರೈಸುತ್ತಿದ್ದು, ಜನರು ಇದರ ಉಪಯೋಗವನ್ನು ಪಡೆದುಕೊಳ್ಳಬೇಕು ಎಂದು ಶಾಸಕ ಕೆ. ಗೋಪಾಲಯ್ಯ ಮನವಿ ಮಾಡಿದರು.

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರದ ನಂದಿನಿ ಲೇಔಟ್ ವಾರ್ಡ್‌ನಲ್ಲಿ ಕೇಂದ್ರ ಸರ್ಕಾರದ ನ್ಯಾಷನಲ್ ಕೋ ಆಪರೇಟಿವ್ ಫೆಡರೇಷನ್ ಆಫ್ ಇಂಡಿಯಾದ ಬೆಂಗಳೂರು ಶಾಖೆ ವತಿಯಿಂದ ಮೊಬೈಲ್ ವ್ಯಾನ್‌ಗಳಲ್ಲಿ ಚಿಲ್ಲರೆ ವಸ್ತು ಪೂರೈಕೆ ವಾಹನಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್‌ಶಾ ಸಹಕಾರದಲ್ಲಿ ಈ ಯೋಜನೆ ಆರಂಭಗೊಂಡಿದೆ. ಅಗತ್ಯ ವಸ್ತುಗಳಾದ ಭಾರತ್ ತೊಗರಿಬೇಳೆ, ಭಾರತ್ ಗೋಧಿ ಹಿಟ್ಟು ಮೂಟೆಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ ಎಂದು ವಿವರಿಸಿದರು.

ಮಾಜಿ ಶಾಸಕ ನರೇಂದ್ರಬಾಬು, ನ್ಯಾಷನಲ್ ಕೋ ಆಪರೇಟಿವ್ ಫೆಡರೇಷನ್– ಕರ್ನಾಟಕದ ಮುಖ್ಯಸ್ಥ ಜಾನ್, ಸಾದಾಖಾನ್, ಎಂ ಮಹದೇವ ಮುಖಂಡರಾದ ಶ್ರೀನಿವಾಸ್, ಜಯಸಿಂಹ, ಬಿ.ಡಿ. ಶ್ರೀನಿವಾಸ್, ರಾಘವೇಂದ್ರ, ಪುಟ್ಟಣ್ಣ ಭಾಗವಹಿಸಿದ್ದರು.

ಬಿಎಂಆರ್‌ಸಿಎಲ್ ನೌಕರರ ಪ್ರತಿಭಟನೆ

ಮೆಟ್ರೊ ಡಿಪೊ: ಗಣರಾಜ್ಯೋತ್ಸವದಲ್ಲಿ ಅಂಬೇಡ್ಕರ್ ಭಾವಚಿತ್ರವಿಡಲು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವದ ಸಂದರ್ಭದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರ ಇಡಲು ಒಪ್ಪಿಗೆ ನೀಡದ ಅಧಿಕಾರಿಯ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಸೋಮವಾರ ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಶನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ನೌಕರರು ಬೈಯಪ್ಪನಹಳ್ಳಿ ಮೆಟ್ರೊ ಡಿಪೊದಲ್ಲಿ ಪ್ರತಿಭಟನೆ ನಡೆಸಿದರು.

'ಮಹಾತ್ಮ ಗಾಂಧೀಜಿ ಭಾವಚಿತ್ರದ ಜೊತೆಗೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನು ಇಡಲು ಬಿಎಂಆರ್‌ಸಿಎಲ್ ಎಸ್‌ಸಿ–ಎಸ್‌ಟಿ ಎಂಪ್ಲಾಯಿಸ್ ವೆಲ್ಫೇರ್ ಅಸೋಸಿಯೇಶನ್ ತಯಾರಿ ನಡೆಸಿತ್ತು. ಆದರೆ, ಗಾಂಧೀಜಿ ಫೋಟೊ ಸಾಕೆಂದು ಅಧಿಕಾರಿ ಶಂಕರ್ ತಿಳಿಸಿದ್ದರು. ಕಾರ್ಯಕ್ರಮ ಸರಾಗವಾಗಿ ನಡೆಯಲಿ ಎಂಬ ಕಾರಣಕ್ಕೆ ಅವತ್ತು ಯಾವುದೇ ಪ್ರತಿಭಟನೆ ಮಾಡಿಲ್ಲ. ಆ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಲಾಗಿತ್ತು. ಮೂರು ದಿನ ಕಳೆದರೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಪ್ರತಿಭಟನಕಾರರು ಆರೋಪಿಸಿದರು.

ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಶನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ನೌಕರರು ಸೋಮವಾರ ಬೈಯಪ್ಪನಹಳ್ಳಿ ಮೆಟ್ರೊ ಡಿಪೊ ಆವರಣದಲ್ಲಿ ಪ್ರತಿಭಟನೆ ನಡೆಸಿದರು

ಸಂವಿಧಾನವನ್ನು ರಚಿಸಿದವರ ಭಾವಚಿತ್ರವೇ ಸಂವಿಧಾನ ಜಾರಿಗೆ ಬಂದ ದಿನ ಬೇಡ ಎಂದಿರುವುದು ಅಂಬೇಡ್ಕರ್ ವಿರೋಧಿ ಮಾತ್ರವಲ್ಲ, ಸಂವಿಧಾನದ ವಿರೋಧಿಯೂ ಆಗಿದೆ. ಸರ್ಕಾರವೇ ಅಂಬೇಡ್ಕರ್ ಫೋಟೊ ಇಡಬೇಕು ಎಂಬ ಸುತ್ತೋಲೆ ಹೊರಡಿಸಿದ್ದರೂ ಬಿಎಂಆರ್‌ಸಿಎಲ್ ಅಧಿಕಾರಿಗಳು ನಿಯಮ ಉಲ್ಲಂಘಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಪ್ಪಿತಸ್ಥ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳದೇ ಹೋದರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಬಿಎಂಆರ್‌ಸಿಎಲ್ ಎಸ್‌ಸಿ–ಎಸ್‌ಟಿ ಎಂಪ್ಲಾಯಿಸ್ ವೆಲ್ಫೇರ್ ಅಸೋಸಿಯೇಶನ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಂತೋಷ್, ಶ್ರೀನಿವಾಸಮೂರ್ತಿ, ಗೋಪಾಲ್ ಸಹಿತ 50ಕ್ಕೂ ಅಧಿಕ ನೌಕರರು ಭಾಗವಹಿಸಿದ್ದರು.

ಬೆಂಗಳೂರಿನ ಕೆರೆಗಳಲ್ಲಿ ಕಡಿಮೆ ಆಮ್ಲಜನಕ ಮಟ್ಟ

ಮಾಲಿನ್ಯ: ವಿವರಣೆ ಕೇಳಿದ ಎನ್‌ಜಿಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಕೆರೆಗಳಲ್ಲಿ ಕಡಿಮೆ ಆಮ್ಲಜನಕ ಮಟ್ಟಕ್ಕೆ ಸಂಬಂಧಿಸಿದಂತೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಬಿಬಿಎಂಪಿಯಿಂದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ವಿವರಣೆ ಕೇಳಿದೆ.

ಮಾಧ್ಯಮ ವರದಿ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡ ಪ್ರಧಾನ ಪೀಠದ ಮುಖ್ಯಸ್ಥ ಪ್ರಕಾಶ್ ಶ್ರೀವಾಸ್ತವ ಹಾಗೂ ತಜ್ಞ ಸದಸ್ಯ ಡಾ.ಎ.ಸೆಂಥಿಲ್ ವೇಲ್ ನೇತೃತ್ವದ ಪೀಠ, 'ಕರಗಿದ ಆಮ್ಲಜನಕವು ಕನಿಷ್ಠ ಮಟ್ಟಕ್ಕೆ ಕುಸಿದಿರುವುದರಿಂದ ಹಾಗೂ ಕೋಲಿಫಾರ್ಮ್ ಗರಿಷ್ಠ ಮಟ್ಟಕ್ಕೆ ಏರಿರುವುದರಿಂದ ಬೆಂಗಳೂರಿನ ಶೇ 10ರಷ್ಟು ಕೆರೆಗಳು ಗಂಭೀರ ಸ್ಥಿತಿಯಲ್ಲಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದು ಕಳವಳಕಾರಿ' ಎಂದು ಅಭಿಪ್ರಾಯಪಟ್ಟಿತು.

ಮಡಿವಾಳ, ಹೇರೋಹಳ್ಳಿ, ಕರಿಓಬನಹಳ್ಳಿ, ದಾಸರಹಳ್ಳಿ, ವರ್ತೂರು, ಉತ್ತರಹಳ್ಳಿ ದೊರೆಕೆರೆ, ಮುಗಳೂರು ಬಳಿಯ ದಕ್ಷಿಣ ಪಿನಾಕಿನಿ ನದಿ, ದೇವರಬೀಸನಹಳ್ಳಿ, ರಾಂಪುರ, ಕಮ್ಮಸಂದ್ರ, ಚಂದಾಪುರ, ಹೊಸಕೆರೆಹಳ್ಳಿ ಕೆರೆಗಳಲ್ಲಿ ನವೆಂಬರ್ ತಿಂಗಳಲ್ಲಿ ಆಮ್ಲಜನಕ ಮಟ್ಟ ಕಡಿಮೆ ಇದೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವಿಶ್ಲೇಷಣಾ ವರದಿಯಲ್ಲಿ ತಿಳಿಸಲಾಗಿದೆ.

ಈ ಜಲಮೂಲಗಳಲ್ಲಿ ಫೀಕಲ್ ಕೋಲಿಫಾರ್ಮ್ ಬ್ಯಾಕ್ಟೀರಿಯಾ ಪತ್ತೆಯಾಗಿವೆ. ಕೊಳೆಯುತ್ತಿರುವ ಸಾವಯವ ಪದಾರ್ಥ ಸಹ ಕಡಿಮೆ ಆಮ್ಲಜನಕ ಸಾಂದ್ರತೆಗೆ ಕಾರಣ ಎಂಬುದನ್ನು ಎನ್‌ಜಿಟಿ ಗಮನಿಸಿದೆ.

ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿರುವ ಪೀಠವು, ಒಂದು ವಾರದಲ್ಲಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ. ಹೆಚ್ಚಿನ ವಿಚಾರಣೆಗಾಗಿ ಪ್ರಕರಣವನ್ನು ದಕ್ಷಿಣ ವಲಯ ಪೀಠಕ್ಕೆ ವರ್ಗಾಯಿಸಿದೆ.

ಶತಾವಧಾನಿ ಆರ್. ಗಣೇಶಗೆ ಪ್ರಶಸ್ತಿ

ಹೊನ್ನಾವರ: 'ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ನೀಡುವ ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿಗೆ ಶತಾವಧಾನಿ ಆರ್. ಗಣೇಶ ಆಯ್ಕೆ ಆಗಿದ್ದಾರೆ. ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ' ಎಂದು ಮಂಡಳಿಯ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ತಿಳಿಸಿದ್ದಾರೆ.

ಆರ್. ಗಣೇಶ

ಕೆರೆಮನೆ ಗಜಾನನ ಹೆಗಡೆ ಪ್ರಶಸ್ತಿಗೆ ಚಿಂತಕ ಮತ್ತು ಯಕ್ಷಗಾನ ತಾಳಮದ್ದಲೆ ಅರ್ಥಧಾರಿ ಲಕ್ಷ್ಮಿನಾರಾಯಣ ಸಾಮಗ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹15 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ.

'ಗುಣವಂತೆಯ ಯಕ್ಷಾಂಗಣದಲ್ಲಿ ಮಾರ್ಚ್ 16ರಿಂದ 20ರವರೆಗೆ ನಡೆಯುವ 'ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ'ದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಅವರು ತಿಳಿಸಿದ್ದಾರೆ.

ವಿಪರೀತ ಸಂಚಾರ ದಟ್ಟಣೆ ಮೇಲ್ಸೇತುವೆಯಲ್ಲಿ ಕುಳಿತ ಟೆಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಸೋಮವಾರ ವಿಪರೀತ ದಟ್ಟಣೆ ಕಂಡುಬಂತು.

ಹೊರವರ್ತುಲ ರಸ್ತೆ ಹಾಗೂ ಕೇಂದ್ರ ವಾಣಿಜ್ಯ ಪ್ರದೇಶದ ರಸ್ತೆಗಳಲ್ಲಿ ವಾಹನಗಳು ನಿಧಾನಗತಿಯಲ್ಲಿ ಸಾಗಿದವು. ಕೆಲ ರಸ್ತೆಗಳಲ್ಲಿ 15 ನಿಮಿಷ ವಾಹನಗಳು ನಿಂತಲ್ಲೇ ನಿಲ್ಲುವ ಸ್ಥಿತಿ ನಿರ್ಮಾಣವಾಗಿತ್ತು.

ಹೊರವರ್ತುಲ ರಸ್ತೆಯಲ್ಲಿ ಸೋಮವಾರ ಬೆಳಿಗ್ಗೆ ವಿಪರೀತ ದಟ್ಟಣೆ ಇತ್ತು. ಸಾಫ್ಟ್‌ವೇರ್ ಎಂಜಿನಿಯರೊಬ್ಬರು (ಟೆಕಿ) ಇದೇ ಮಾರ್ಗವಾಗಿ ಕಚೇರಿಗೆ ಹೊರಟಿದ್ದರು. ಮೇಲ್ಸೇತುವೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ, ಬೈಕ್ ಮುಂದಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಅರ್ಧ ಗಂಟೆ ಬೈಕ್ ನಿಂತಲ್ಲೇ ನಿಂತಿತ್ತು.



ಹೊರವರ್ತುಲ ರಸ್ತೆಯಲ್ಲಿ ಉಂಟಾಗಿದ್ದ ದಟ್ಟಣೆಯಿಂದ ಬೇಸತ್ತ ಸಾಫ್ಟ್‌ವೇರ್ ಎಂಜಿನಿಯರೊಬ್ಬರು, ಬೈಕ್ ಬಂದ್ ಮಾಡಿ ಮೇಲ್ಸೇತುವೆಯಲ್ಲಿ ಕುಳಿತಿದ್ದರು

ದಟ್ಟಣೆಯಿಂದ ಬೇಸತ್ತ ಎಂಜಿನಿಯರ್, ಬೈಕ್ ಬಂದ್ ಮಾಡಿ ಮೇಲ್ಸೇತುವೆ ಪಕ್ಕದಲ್ಲಿ ಕುಳಿತು, ಮೊಬೈಲ್ ನೋಡುವುದರಲ್ಲಿ ತಲ್ಲೀನರಾಗಿದ್ದರು. ಅವರ ಫೋಟೊ ಸೆರೆಹಿಡಿದು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿರುವ ಜನರು, 'ದಟ್ಟಣೆಯಿಂದ ರಸ್ತೆಗೆ ಬಂದ ಎಂಜಿನಿಯರ್' ಎಂದು ಅಡಿ ಬರಹ ಬರೆದಿದ್ದಾರೆ. ಈ ಫೋಟೊವನ್ನು ಹಲವರು ಹಂಚಿಕೊಂಡಿದ್ದು, ಬೆಂಗಳೂರು ದಟ್ಟಣೆ ಸಮಸ್ಯೆಗೆ ಮುಕ್ತಿ ಯಾವಾಗ ? ಎಂದು ಪ್ರಶ್ನಿಸಿದ್ದಾರೆ.

ಸೊರೇನ್ ವಿಚಾರಣೆಗೆ ಇ.ಡಿ. ಹುಡುಕಾಟ

ನವದೆಹಲಿ/ರಾಂಚಿ (ಪಿಟಿಐ): ಜಮೀನು ಅಕ್ರಮದ ಹಗರಣವೊಂದಕ್ಕೆ ಸಂಬಂಧಿಸಿದಂತೆ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆ ನಡೆಸಲು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ತಂಡವೊಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ದೆಹಲಿ ನಿವಾಸಕ್ಕೆ ಸೋಮವಾರ ಭೇಟಿ ನೀಡಿತ್ತು. ತಂಡವು ಅಲ್ಲಿ 13 ತಾಸುಗಳವರೆಗೆ ಇತ್ತು.

ಆದರೆ ಮನೆಯಲ್ಲಿ ಸೊರೇನ್ ಇರಲಿಲ್ಲ, ಅವರನ್ನು ಸಂಪರ್ಕಿಸಲು ಸಾಧ್ಯವಾಗಲಿಲ್ಲ ಎಂದು ಮೂಲಗಳು ಹೇಳಿವೆ. ಇದನ್ನು ಸೊರೇನ್ ಕುಟುಂಬದ ಸದಸ್ಯರು ಅಲ್ಲಗಳೆದಿದ್ದಾರೆ. ಸೊರೇನ್ ತಮ್ಮ ಹೇಳಿಕೆಯನ್ನು ರಾಂಚಿಯ ನಿವಾಸದಲ್ಲಿ ಜನವರಿ 31ರಂದು ನೀಡಲು ಸಿದ್ಧರಿರುವುದಾಗಿ ಅಧಿಕಾರಿಗಳಿಗೆ ಮತ್ತೆ ಮತ್ತೆ ತಿಳಿಸಿದ್ದಾರೆ ಎಂದು ಕುಟುಂಬದ ಸದಸ್ಯರೊಬ್ಬರು ಹೇಳಿದ್ದಾರೆ.

ಇ.ಡಿ. ಅಧಿಕಾರಿಗಳು ದೆಹಲಿಯ ಸೊರೇನ್ ನಿವಾಸವನ್ನು ಬೆಳಿಗ್ಗೆ 9ರ ಸುಮಾರಿಗೆ ತಲುಪಿದರು. ಕೆಲವು ಅಧಿಕಾರಿಗಳು ರಾತ್ರಿ 10.30ರ ಸುಮಾರಿಗೆ ಅಲ್ಲಿಂದ ವಾಪಸ್ಸಾಗಿದ್ದಾರೆ. ಆದರೆ ಎಲ್ಲ ಅಧಿಕಾರಿಗಳೂ ಅಲ್ಲಿಂದ ವಾಪಸ್ಸಾಗಿದ್ದಾರೆಯೇ ಎಂಬುದು ಸ್ಪಷ್ಟವಾಗಿಲ್ಲ.

ಇ.ಡಿ. ಕಾರ್ಯಾಚರಣೆಯಿಂದ ಬೆದರಿರುವ ಸೊರೇನ್ 18 ತಾಸುಗಳಿಂದ ತಲೆಮರೆಸಿಕೊಂಡಿದ್ದಾರೆ ಎಂದು ಜಾರ್ಖಂಡ್ ಬಿಜೆಪಿ ಘಟಕವು ಆರೋಪಿಸಿದೆ.

'ವಿಚಾರಣೆಗಾಗಿ ನಮ್ಮ ತಂಡವು ಮುಖ್ಯಮಂತ್ರಿ ನಿವಾಸ, ಜಾರ್ಖಂಡ್ ಭವನ ಮತ್ತು ಇತರ ಕೆಲವು ಸ್ಥಳಗಳಿಗೆ ತೆರಳಿದೆ. ಆದರೆ ಎಲ್ಲಿಯೂ ಮುಖ್ಯಮಂತ್ರಿ ಇರಲಿಲ್ಲ' ಎಂದು ಮೂಲಗಳು ಹೇಳಿವೆ.

ಈ ವಿಚಾರವಾಗಿ ಮುಖ್ಯಮಂತ್ರಿ ಕಚೇರಿ ಪ್ರತಿಕ್ರಿಯೆ ನೀಡಿಲ್ಲ. ಪರಿಸ್ಥಿತಿಯನ್ನು ಅವಲೋಕಿಸುತ್ತಿರುವುದಾಗಿ ಜಾರ್ಖಂಡ್ ರಾಜ್ಯಪಾಲ ರಾಧಾಕೃಷ್ಣನ್ ಹೇಳಿದ್ದಾರೆ. ಸಮಸ್ಯೆಯೊಂದು ನಿಜವಾಗಿಯೂ ಎದುರಾಗುವವರೆಗೆ ಅದರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯ ಇಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದ್ದಾರೆ.

'ಮಾಧ್ಯಮ ಮೂಲಗಳ ಪ್ರಕಾರ, ಹೇಮಂತ್ ಅವರು ತಮ್ಮ ಮುಖವನ್ನು ಮುಚ್ಚಿಕೊಂಡು ದೆಹಲಿಯ ನಿವಾಸದಿಂದ ಪರಾರಿಯಾಗಿದ್ದಾರೆ. ಅವರ ಭದ್ರತಾ ಸಿಬ್ಬಂದಿ ಅಜಯ್ ಸಿಂಗ್ ಅವರೂ ನಾಪತ್ತೆಯಾಗಿದ್ದಾರೆ' ಎಂದು ಜಾರ್ಖಂಡ್ ಬಿಜೆಪಿ ಅಧ್ಯಕ್ಷ ಬಾಬುಲಾಲ್ ಮರಾಂಡಿ ಆರೋಪಿಸಿದ್ದಾರೆ.

'ಇಲ್ಲಿನ ಪರಿಸ್ಥಿತಿಯು ಹಿಂದೆಂದೂ ಕಾಣದಂಥದ್ದು. ಮುಖ್ಯಮಂತ್ರಿ ಎಲ್ಲಿದ್ದಾರೆ ಎಂಬುದು ಯಾರಿಗೂ ಗೊತ್ತಿಲ್ಲ' ಎಂದು ಜಾರ್ಖಂಡ್ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಗ್ಯಾರಂಟಿ' ನಿಲ್ಲಿಸಲ್ಲ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ತುಮಕೂರು: ಎಷ್ಟೇ ಹಣ ವೆಚ್ಚವಾದರೂ ಐದು ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನರಿಗೆ ಭರವಸೆ ನೀಡಿದ್ದಾರೆ.

ನಗರದಲ್ಲಿ ಸೋಮವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮತ್ತು ಫಲಾನುಭವಿಗಳಿಗೆ ಸವಲತ್ತು ವಿತರಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳಿಗಾಗಿ ಈ ವರ್ಷ ₹38 ಸಾವಿರ ಕೋಟಿ ಖರ್ಚು ಮಾಡುತ್ತಿದ್ದೇವೆ. ಮುಂದಿನ ವರ್ಷ ₹58 ಸಾವಿರ ಕೋಟಿ ಮೀಸಲು ಇಡಲಾಗುವುದು. ಗ್ಯಾರಂಟಿ ಯೋಜನೆಗಳ ಜತೆಗೆ ಇತರ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಹಣ ಕೊಡಲಾಗಿದೆ. ಹಣ ಇಲ್ಲದೆ ಯಾವುದೇ ಅಭಿವೃದ್ಧಿ ಕೆಲಸಗಳೂ ನಿಂತಿಲ್ಲ ಎಂದು ಅವರು ಸಮರ್ಥಿಸಿಕೊಂಡರು.

ಸರ್ಕಾರದ ಬಳಿ ಹಣ ಇಲ್ಲ ಎಂದು ಹೇಳುವವರಿಗೆ ಜಾರಿ ಮಾಡಿರುವ ಗ್ಯಾರಂಟಿಗಳೇ ಉತ್ತರ ನೀಡುತ್ತವೆ. ಖಜಾನೆ ಬರಿದಾಗಿದೆ ಎಂಬ ವಿರೋಧ ಪಕ್ಷಗಳ ಆರೋಪ ಸತ್ಯಕ್ಕೆ ದೂರವಾದದ್ದು. ಇದು ಜನರನ್ನು ದಾರಿ ತಪ್ಪಿಸುವ ಕೆಲಸ ಎಂದರು.

ಕೇಂದ್ರ ನಿರ್ಲಕ್ಷ್ಯ: ಬರ ಪರಿಹಾರ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ಸತಾಯಿಸುತ್ತಿದೆ. ಕೇಂದ್ರ ಬರ ಅಧ್ಯಯನ ತಂಡ ರಾಜ್ಯಕ್ಕೆ ಬಂದು ಅಧ್ಯಯನ ನಡೆಸಿ ವರದಿ ಸಲ್ಲಿಸಿ ನಾಲ್ಕು ತಿಂಗಳಾದರೂ ಹಣ ಕೊಟ್ಟಿಲ್ಲ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರೂ ಸ್ಪಂದಿಸಿಲ್ಲ. ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿ ಸಂಸದರು ಪ್ರಧಾನಿ ಮೇಲೆ ಒತ್ತಡ ತಂದು ಪರಿಹಾರದ ಹಣ ಬಿಡುಗಡೆ ಮಾಡಿಸುವ ಕೆಲಸ ಮಾಡುತ್ತಿಲ್ಲ ಎಂದು ಸಿದ್ದರಾಮಯ್ಯ ಆರೋಪಿಸಿದರು.

ಕೇಂದ್ರದ ಪರಿಹಾರ ಬರುವುದು ತಡವಾದ ಕಾರಣ ರಾಜ್ಯ ಸರ್ಕಾರ ಮೊದಲ ಕಂತಾಗಿ ಪ್ರತಿ ರೈತರಿಗೆ ₹2 ಸಾವಿರ ಇನ್‌ಪುಟ್ ಸಬ್ಸಿಡಿ ಕೊಡುತ್ತಿದೆ. ಈವರೆಗೆ ₹555 ಕೋಟಿಯನ್ನು 21.21 ಲಕ್ಷ ರೈತರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗಿದೆ. ವಿರೋಧ ಪಕ್ಷದವರು ಇದನ್ನು ಗಮನಿಸಿ ಆರೋಪ ಮಾಡಬೇಕು ಎಂದು ತಿರುಗೇಟು ನೀಡಿದರು.



भारत इलेक्ट्रॉनिक्स
BHARAT ELECTRONICS
QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)

(CIN: L32309KA1954GOI000787)

ನೋಂದಾಯಿತ ಮತ್ತು ಪ್ರಧಾನ ಕಚೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045. ಇ–ಮೇಲ್: secretary@bel.co.in
ವೆಬ್‌ಸೈಟ್: www.bel-india.in ಫೋನ್: 080–25039300 ಫ್ಯಾಕ್ಸ್: 080–25039266

31ನೇ ಡಿಸೆಂಬರ್ 2023ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳಿನ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕರಿಸಿದ ಲೆಕ್ಕಪರಿಶೋಧಿತವಾಗದ ಹಣಕಾಸಿನ ಫಲಿತಾಂಶಗಳ ಸಾರಾಂಶ

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಸ್ಟ್ಯಾಂಡ್ ಅಲೋನ್						ಕ್ರೋಢೀಕೃತ					
		ತ್ರೈಮಾಸಿಕ ಅಂತ್ಯಗೊಂಡ			ಒಂಭತ್ತು ತಿಂಗಳ ಅಂತ್ಯಕ್ಕೆ		ವರ್ಷಾಂತ್ಯಕ್ಕೆ	ತ್ರೈಮಾಸಿಕ ಅಂತ್ಯಗೊಂಡ			ಒಂಭತ್ತು ತಿಂಗಳ ಅಂತ್ಯಕ್ಕೆ		ವರ್ಷಾಂತ್ಯಕ್ಕೆ
		31.12.2023	30.09.2023	31.12.2022	31.12.2023	31.12.2022	31.03.2023	31.12.2023	30.09.2023	31.12.2022	31.12.2023	31.12.2022	31.03.2023
		(ಲೆಕ್ಕಪರಿಶೋಧಿತ ವಲ್ಲದ)			(ಲೆಕ್ಕಪರಿಶೋಧಿತ ವಲ್ಲದ)		(ಲೆಕ್ಕಪರಿಶೋಧಿತ)	(ಲೆಕ್ಕಪರಿಶೋಧಿತ ವಲ್ಲದ)			(ಲೆಕ್ಕಪರಿಶೋಧಿತ ವಲ್ಲದ)		(ಲೆಕ್ಕಪರಿಶೋಧಿತ)
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	4,13,669	3,99,332	4,13,101	11,64,085	11,18,962	17,64,620	4,16,216	4,00,906	4,15,312	11,70,416	11,25,532	17,73,444
2.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಅವಧಿಯ ನಿವ್ವಳ ಲಾಭ	1,17,226	1,07,294	80,043	2,94,895	2,20,339	3,98,488	1,13,195	1,04,146	80,624	2,87,614	2,14,135	3,92,291
3.	ತೆರಿಗೆ ಮುಂಚಿನ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	1,17,226	1,07,294	80,043	2,94,895	2,20,339	3,98,488	1,13,195	1,04,146	80,624	2,87,614	2,14,135	3,92,291
4.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	89,330	81,234	59,877	2,23,648	1,64,131	3,00,667	86,026	78,971	61,350	2,18,857	1,60,423	2,98,624
5.	ಒಟ್ಟುಸಮಗ್ರ ಅವಧಿಯ ಆದಾಯ [ಅವಧಿಯ ಲಾಭ ಸಹಿತ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	85,688	81,803	60,635	2,26,538	1,66,961	2,84,043	82,383	79,541	62,108	2,21,747	1,63,254	2,82,022
6.	ಪಾವತಿಸಿದ ಇಕ್ವಿಟಿ ಷೇರು ಬಂಡವಾಳ	73,098	73,098	73,098	73,098	73,098	73,098	73,098	73,098	73,098	73,098	73,098	73,098
7.	ಮರುಮೌಲ್ಯಗೊಳಿಸಿದ ಮೀಸಲು ನಿಧಿಯ ಹೊರತಾದ ಇತರೆ ಇಕ್ವಿಟಿಗಳು	-	-	-	-	-	12,85,101	-	-	-	-	-	13,13,065
8.	ಪ್ರತಿ ಷೇರಿನ ಗಳಿಕೆ (₹1/- ರಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರಿಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ಪರಿವರ್ತಿತ (₹ ನಲ್ಲಿ)	1.22	1.11	0.82	3.06	2.25	4.11	1.17	1.08	0.83	2.99	2.19	4.09

ಟಿಪ್ಪಣಿಗಳು:

1. ಈ ಮೇಲಿನವುಗಳು ಸೆಬಿಯ ನಿಯಂತ್ರಣ ಅಧಿನಿಯಮ 33 (ಪಟ್ಟಿ ನಿರ್ಬಂಧ ಮತ್ತು ಪ್ರಕಟಗೊಳಿಸಿದ ಅಗತ್ಯಗಳು), 2015 ರ ಅಡಿಯಲ್ಲಿ ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ವಾರ್ಷಿಕ ಹಣಕಾಸಿನ ವಿಸ್ತೃತ ರೂಪವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ನಲ್ಲಿ (**www.bseindia.com** ಮತ್ತು **www.nseindia.com**) ಮತ್ತು ಕಂಪೆನಿಯ ವೆಬ್‌ಸೈಟ್ (**www.bel-india.in**) ನಲ್ಲಿ ಲಭ್ಯವಿದೆ.
2. ಹಣಕಾಸು ಫಲಿತಾಂಶಗಳ ಈ ಮೇಲಿನ ವಿವರಣೆಯನ್ನು ಲೆಕ್ಕ ಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಮತ್ತು ದಿನಾಂಕ 29 ಜನವರಿ, 2024 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಗಿದೆ.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಭಾನು ಪ್ರಕಾಶ್ ಶ್ರೀವಾಸ್ತವ
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು (ಹೆಚ್ಚುವರಿ ಪ್ರಭಾರಿ)

ಸ್ಥಳ: ಛತ್ರಪತಿ ಸಂಭಾಜಿನಗರ್
ದಿನಾಂಕ: 29 ಜನವರಿ, 2024

ಕ್ಷೇಮ ಕುಶಲ

ಅಯ್ಯೋ! ಭಯಂಕರ ತಲೆನೋವು!

ಡಾ. ಕೆ. ಎಸ್. ಶುಭ್ರತಾ

ತಲೆನೋವು ಬರದ ವ್ಯಕ್ತಿ ವಿರಳವೇ ಅನ್ನಬಹುದು. ತಲೆನೋವುಗಳಲ್ಲೂ ವಿಧಗಳುಂಟು. ಸಾಮಾನ್ಯವಾಗಿ ವಯಸ್ಸಿನ ಭೇದವಿಲ್ಲದೆ ಕಾಣಿಸಿಕೊಳ್ಳುವ ತಲೆನೋವಿನ ಒಂದು ವಿಧ 'ಮೈಗ್ರೇನ್'. ಜಗತ್ತಿನಾದ್ಯಂತ ಸುಮಾರು ಶೇ 10ರಷ್ಟು ಜನರು ಮೈಗ್ರೇನ್‌ನಿಂದ ಬಳಲುತ್ತಾರೆ. ಮೈಗ್ರೇನ್ ಕಾರಣಕ್ಕೆ ಸಾಕಷ್ಟು ಜನರು ಕೆಲಸಗಳನ್ನು ಮಾಡಲಾರದೇ ಒದ್ದಾಡುತ್ತಾರೆ. ದುರದೃಷ್ಟಕರ ವಿಚಾರವೆಂದರೆ, ರೋಗ ಪತ್ತೆ ಆಗದೇ ಶೇ 50ರಷ್ಟು ಮೈಗ್ರೇನ್ ಕಾಯಿಲೆಗೆ ಸರಿಯಾಗಿ ಚಿಕಿತ್ಸೆ ಸಿಗುವುದಿಲ್ಲ. ಹಾಗೆಯೇ ನೋವುನಿವಾರಕ ಮಾತ್ರೆಗಳಿಗೆ ದಾಸರಾಗಿಬಿಡುತ್ತಾರೆ.

ಕಾರಣವೇನು?

ಮೈಗ್ರೇನ್ – ಇದು ಮಿದುಳಿಗೆ ಸಂಬಂಧಪಟ್ಟ ಕಾಯಿಲೆ. ಈ ಮೊದಲು, ಮಿದುಳಿನಲ್ಲಿ ರಕ್ತಸಂಚಾರದ ವ್ಯತ್ಯಾಸದಿಂದ ಇದು ಆಗುತ್ತದೆಂದು ನಂಬಿದ್ದರೂ, ಈಗ ಇದೊಂದೇ ಕಾರಣವಲ್ಲವೆಂದು ಸಾಬೀತಾಗಿದೆ. ಸೆರೋಟೋನಿನ್, ಡೋಪಮಿನ್‌ನಂತಹ ನರವಾಹಕಗಳ ಏರುಪೇರು, ನರಕೋಶಗಳ ಪ್ರಚೋದನೆಯಲ್ಲಿ ವ್ಯತ್ಯಾಸ ಇತ್ಯಾದಿ ಕಾರಣಗಳನ್ನು ಪ್ರತಿಪಾದಿಸುತ್ತದೆ. ಮೈಗ್ರೇನ್ ವಂಶಪಾರಂಪರಿಕವಾಗಿಯೂ ಬರುವುದರಿಂದ, ವಂಶವಾಹಿನಿಯಲ್ಲೂ ಬರಬಹುದೆಂದು ಹೇಳಲಾಗುತ್ತದೆ.

ಹೇಗಿರುತ್ತದೆ ಅಟ್ಯಾಕ್?

ಸುಮಾರು ನಾಲ್ಕು ಗಂಟೆಗಳಿಂದ ಮೂರು ದಿನಗಳ ತನಕ ಇರಬಹುದಾದ ಈ ತಲೆನೋವು, ತಲೆಯ ಒಂದೇ ಬದಿಯಲ್ಲಿ ಕಾಣಿಸಿಕೊಂಡು, 'ಪಟ್‌ಪಟ್' ಎಂದು ಹೊಡೆದುಕೊಳ್ಳುವ ರೀತಿಯದ್ದಾಗಿರುತ್ತದೆ (Pulsatile quality). ವಾಕರಿಕೆ, ವಾಂತಿ, ಬೆಳಕು ನೋಡಲು ಆಗದಿರುವುದು (Photophobia) ಹಾಗೂ ತೀವ್ರ ಶಬ್ದಗಳನ್ನು ಕೇಳಲು ಆಗದಿರುವುದು (Phonophobia) ಕೂಡ ಇರುತ್ತದೆ.

ಶೇ 30-40 ಜನರಲ್ಲಿ ಈ ತಲೆನೋವು ಪ್ರಾರಂಭವಾಗುವುದಕ್ಕೆ ಮುಂಚೆ 'ಆರಾ' (Aura) ಎಂಬ ಪ್ರಕ್ರಿಯೆ ಕಾಣಿಸುತ್ತದೆ. ಬೆಳಕಿನ ಮಿಂಚು, ಅಂಕುಡೊಂಕು ರೇಖೆಗಳು, ಮುಖದ ಒಂದು ಭಾಗದಲ್ಲಿ ಝುಂಝುಂಗುಟ್ಟುವಿಕೆ, ಕಿವಿಯಲ್ಲಿ 'ಗೂಂ' ಎಂಬ ಶಬ್ದ, ಮಾತಿನಲ್ಲಿ ತೊದಲು, ಕೈಕಾಲು ನಿಶ್ಶಕ್ತಿ ಇತ್ಯಾದಿ'ಆರಾ'ದಲ್ಲಿ ಕಾಣಿಸಬಹುದು. ಈ ಸ್ಥಿತಿ ತಾತ್ಕಾಲಿಕವಾಗಿ ಕೆಲವು ನಿಮಿಷಗಳಷ್ಟೆ ಇದ್ದು, ಕಡಿಮೆಯಾಗಿ ನಂತರದಲ್ಲಿ ತಲೆನೋವು ಪ್ರಾರಂಭವಾಗುತ್ತದೆ.

ತಲೆನೋವಿನ ಡೈರಿ

'ತಲೆನೋವಿನ ಡೈರಿ'ಯನ್ನು ಮೈಗೇನ್‌ನಿಂದ ಬಳಲುತ್ತಿರುವ ಪ್ರತಿಯೊಬ್ಬರೂ ಕಾಪಿಡಬೇಕು. ಪ್ರತಿ ಬಾರಿ ತಲೆನೋವು ಬಂದಾಗ ದಿನ, ಸಮಯ, ತಲೆನೋವು ಇದ್ದ ಅವಧಿ – ಇವನ್ನು ಈ ಪುಸ್ತಕದಲ್ಲಿ ಬರೆಯಬೇಕು. ಹಾಗೆಯೇ ಮುಖ್ಯವಾದದ್ದು, ಅದು ಬರುವುದಕ್ಕೆ ಮುಂಚೆ ಏನಾದರೂ ಕಾರಣಗಳು (Triggers) ಇವೆಯೇ ಎಂಬುದು. ಬಿಸಿಲಿಗೆ ಹೋಗಿದ್ದೆ ಅಥವಾ ತಣ್ಣೀರಿನಲ್ಲಿ ತಲೆಸ್ನಾನ ಮಾಡಿದೆ ಅಥವಾ ಮನಸ್ಸಿಗೆ ತುಂಬಾ ನೋವಾಗಿ ಅತ್ತಿದ್ದೆ – ಹೀಗೆ ಬೇರೆ ಬೇರೆ ಕಾರಣಗಳಿರಬಹುದು. ಚಿಕಿತ್ಸೆ ನೀಡುವುದಕ್ಕೆ ಮತ್ತು ನಂತರದಲ್ಲಿ ರೋಗಿ ಹೇಗೆ ಗುಣಮುಖರಾಗಿದ್ದಾರೆ ಎಂದು ತಿಳಿದುಕೊಳ್ಳುವುದಕ್ಕೆ ಈ ತಲೆನೋವಿನ ಡೈರಿ ತುಂಬಾ ಸಹಕಾರಿ.

ಚಿಕಿತ್ಸೆ

ಮೈಗ್ರೇನ್‌ನಿಂದ ಬಳಲುತ್ತಿರುವವರಿಗೆ ಎರಡು ತರಹದ ಚಿಕಿತ್ಸೆ ಲಭ್ಯವಿದೆ. ಮೊದಲನೆಯದು, ಈ ಮೈಗ್ರೇನ್ ಅಟ್ಯಾಕ್ ಆದಾಗ ನೀಡುವ ಚಿಕಿತ್ಸೆಯಾದರೆ, ಎರಡನೆಯದು ಈ ಅಟ್ಯಾಕ್‌ಗಳನ್ನು ಆಗದ ಹಾಗೆ ತಡೆಗಟ್ಟುವ ಚಿಕಿತ್ಸೆ.

ಮೈಗ್ರೇನ್ ಅಟ್ಯಾಕ್ ಆದಾಗ ವೈದ್ಯರನ್ನು ಕೇಳಿಯೇ ನೋವಿನ ಮಾತ್ರೆಯನ್ನು ತೆಗೆದುಕೊಳ್ಳಬೇಕು. ಒಂದು ಬಾರಿ ವೈದ್ಯರನ್ನು ಸಮಾಲೋಚಿಸಿದ್ದರೆ, ಅವರು ಈ ಮೈಗ್ರೇನ್ ಅಟ್ಯಾಕ್ ಆದಾಗ ಯಾವ ಮಾತ್ರೆ ತೆಗೆದುಕೊಳ್ಳಬಹುದೆಂದು ಹೇಳುತ್ತಾರೆ. ಅದೂ ತಲೆನೋವು ಪ್ರಾರಂಭ ಆಗುವ ಸಮಯದಲ್ಲೇ ತೆಗೆದುಕೊಂಡರೆ ಕೆಲಸ ಮಾಡುತ್ತದೆ. ತಲೆನೋವು ತೀವ್ರವಾದ ನಂತರ, ಈ ಮಾತ್ರೆಗಳು ಕೆಲಸ ಮಾಡಲಿಕ್ಕಿಲ್ಲ.

ಎಚ್ಚರಿಕೆಯ ಕರೆಗಂಟೆಗಳು

ಈ ಕೆಳಗಿನವುಗಳಲ್ಲಿ ಯಾವುದಾದರೂ ಲಕ್ಷಣಗಳು ಇದ್ದರೆ, 'ರೆಡ್ ಫ್ಲಾಗ್ ಸೈನ್' ಎನ್ನುತ್ತೇವೆ; ತಕ್ಷಣ ವೈದ್ಯರನ್ನು ಕಾಣಬೇಕು.

- ಜೀವನದಲ್ಲಿ ಮೊದಲ ಬಾರಿಗೆ ನೀವು ತಲೆನೋವು ಅನುಭವಿಸುತ್ತಿದ್ದೀರಾ ಎಂದರೆ ಅದು ಗಂಭೀರವೇ.
- 'ನನ್ನ ಜೀವನದ ಅತಿ ತೀವ್ರ ತಲೆನೋವು ಇದು' ಎಂದು ಅನ್ನಿಸಿದರೆ, ಆಗಲೂ ಅದನ್ನು ಅಲಕ್ಷ್ಯ ಮಾಡಬಾರದು.
- ತಲೆನೋವಿನೊಂದಿಗೆ ನಿರಂತರವಾಗಿ ವಾಂತಿ, ದೃಷ್ಟಿಯ ಸಮಸ್ಯೆಗಳು, ಕೈ-ಕಾಲು ಸ್ವಾಧೀನವನ್ನು ಕಳೆದುಕೊಳ್ಳುವುದು.
- 'ತಲೆ ಒಡೆದೇ ಹೋಗುತ್ತದೆ' ಎಂಬಂಥ ನೋವು.
- ಈಗಾಗಲೇ ಕ್ಯಾನ್ಸರ್, ಎಚ್.ಐ.ವಿ.ಯಂಥ ಸಮಸ್ಯೆಗಳು ಇದ್ದರೆ, ಅಂಥವರಲ್ಲಿನ ತಲೆನೋವು.

ತಲೆನೋವು ಬರದ ಹಾಗೆ ತಡೆಗಟ್ಟಲು ಚಿಕಿತ್ಸೆ ನೀಡಲಾಗುತ್ತದೆ. ತಿಂಗಳಿಗೆ ನಾಲ್ಕಕ್ಕಿಂತ ಹೆಚ್ಚು ಬಾರಿ ತಲೆನೋವಿನಿಂದ ತೀವ್ರವಾದ ದೈನಂದಿನ ಚಟುವಟಿಕೆಗಳ ವ್ಯತ್ಯಾಸ, ಬಂದ ತಲೆನೋವು ಮೂರು ನಾಲ್ಕು ದಿನಗಳಾದರೂ ಹೋಗದಿರುವುದು, ಅತಿಯಾದ ನೋವಿನ ಮಾತ್ರೆಗಳ ಬಳಕೆ ಹೀಗೆ ಇದ್ಯಾವುದಿದ್ದರೂ ತಲೆನೋವು ತಡೆಗಟ್ಟುವ ಮಾತ್ರೆಗಳನ್ನು ನೀಡಬೇಕಾಗುತ್ತದೆ. ಈ ಮಾತ್ರೆಗಳನ್ನು ಮೂರರಿಂದ ಆರು ತಿಂಗಳ ತನಕ ಕೊಡಲಾಗುತ್ತದೆ.

ಎದೆಗುಂದದಿರಿ

ಮೈಗ್ರೇನ್ ಸಾಮಾನ್ಯವಾದ ಕಾಯಿಲೆ; ಜೀವಕ್ಕೆ ಭಯವೇನಿಲ್ಲ. ಮಾತ್ರೆಗಳೊಂದೇ ಇದಕ್ಕೆ ಚಿಕಿತ್ಸೆಯಲ್ಲ. ಅದರ ಜೊತೆ ನಮ್ಮ ಜೀವನಶೈಲಿ ಬದಲಾವಣೆಗಳನ್ನೂ ಮಾಡಿಕೊಳ್ಳಬೇಕು.

- ಚಿಕಿತ್ಸೆಯಿಂದ ಮೈಗ್ರೇನ್ ಅಟ್ಯಾಕ್ಸ್ ಕಡಿಮೆಯಾಗಬಹುದೇ ಹೊರತು ಮೈಗ್ರೇನ್ ಸಂಪೂರ್ಣವಾಗಿ ಬರದ ಹಾಗೆ ಮಾಡಲು ಸಾಧ್ಯವಿಲ್ಲ. ಈ ವಿಷಯವನ್ನು ಮಾನಸಿಕವಾಗಿ ಒಪ್ಪಿಕೊಳ್ಳಬೇಕು.
- ತಲೆನೋವು ಬರಲು ಪ್ರತಿಯೊಬ್ಬರಿಗೂ ಒಂದೊಂದು ರೀತಿಯ ಕಾರಣಗಳು (Trigger) ಇರುತ್ತವೆ. ಉದಾಹರಣೆಗೆ ಹಸಿವು, ನಿದ್ರಾಹೀನತೆ, ತೀವ್ರ ಪರಿಮಳ, ಮಲಬದ್ಧತೆ, ಬಿಸಿಲು, ಪ್ರಯಾಣ, ಗಲಾಟೆ ಇತ್ಯಾದಿ. ಇದರಲ್ಲಿ ಕೆಲವನ್ನು ನಾವು ತಡೆಯಬಹುದು. ಕೆಲವೊಂದಕ್ಕೆ ನಮ್ಮ ವರ್ತನೆಯಲ್ಲಿ ಬದಲಾವಣೆ ತಂದುಕೊಳ್ಳಬೇಕು. ಬಿಸಿಲಿಗೆ ಹೋಗುವಾಗ ಛತ್ರಿ ಹಿಡಿಯುವುದು, ತಂಪಿನ ಕನ್ನಡಕ, ಟೋಪಿ ಧರಿಸುವುದು, ಚೆನ್ನಾಗಿ ನೀರನ್ನು ಕುಡಿಯುವುದು, ಊದಿನ ಕಡ್ಡಿಯ ವಾಸನೆಯಿಂದ ದೂರ ಇರುವುದು ಇತ್ಯಾದಿ.
- ಒತ್ತಡ ಮತ್ತು ಮೈಗ್ರೇನ್‌ಗೆ ನಿಕಟ ಸಂಬಂಧವಿದೆ. ತೀವ್ರತರದ ನಕಾರಾತ್ಮಕ ಯೋಚನೆ, ಖಿನ್ನತೆ, ಆತಂಕಗಳೂ ಮೈಗ್ರೇನ್ ಅಟ್ಯಾಕ್‌ಗೆ ದಾರಿಯಾಗಬಹುದು. ಒತ್ತಡ ನಿರ್ವಹಣೆ ಕಲಿಯುವುದು ಅತ್ಯಗತ್ಯ. ಪ್ರತಿನಿತ್ಯ ಮನಸ್ಸಿಗೆ ಖುಷಿ/ನೆಮ್ಮದಿ ಕೊಡುವ ಚಟುವಟಿಕೆಗಳಾದ ಯೋಗ, ಸಂಗೀತವನ್ನು ಆಲಿಸುವುದು, ಧ್ಯಾನ, ನಡಿಗೆ, ಸ್ನೇಹಿತರೊಂದಿಗೆ ಹರಟೆ – ಇಂಥವನ್ನು ರೂಢಿಸಿಕೊಳ್ಳಬೇಕು.

ವಸಂತಾಗಮನದಲ್ಲಿ ಆರೋಗ್ಯದ ದಾರಿ

ಡಾ. ವಿಜಯಲಕ್ಷ್ಮಿ ಪಿ.

ವಸಂತಋತುವು ಹೂವುಗಳ ಕಂಪನ್ನು ತರುವುದರೊಂದಿಗೆ ಅನೇಕ ಮಂದಿಗೆ ದೂಳು ಕೇಸರದ ಕಣಗಳ ಅಲರ್ಜಿಗಳನ್ನೂ ಹೊತ್ತು ತರುತ್ತದೆ!

ವಸಂತದಲ್ಲಿ ಅಲರ್ಜಿಯಿಂದ ದೂರವಿರಬೇಕೆಂದರೆ ಹೇಮಂತ-ಶಿಶಿರದಲ್ಲೇ ತಯಾರಿ ಪ್ರಾರಂಭಿಸಬೇಕು. ಅತಿ ಶೀತದಿಂದಾಗಿ ಕಫವಾತಗಳೆರಡೂ ಏಕಕಾಲಕ್ಕೆ ಪ್ರಕೋಪವಾಗುತ್ತದೆ. ಅದು ವಾತಾವರಣದಲ್ಲಿ ಬಿಸಿ ಏರಿದಂತೆ, ಘನೀಭೂತವಾದ ಕಫವು ಕರಗಲು ಪ್ರಾರಂಭಿಸುತ್ತದೆ.

ಕಫದ ಕರಗುವಿಕೆಗೆ ಹೊಂದುವಂತೆ ವಾತದ ಗತಿಯೂ ಇದ್ದರೆ, ವಸಂತದಲ್ಲಿ ಯಾವುದೇ ಅಡಚಣೆಗಳಿಲ್ಲದೆ ಬದುಕಬಹುದು. ಅವುಗಳಲ್ಲಿ ಹೊಂದಾಣಿಕೆ ಬಾರದಿದ್ದಾಗ, ದೇಹದಲ್ಲಿ ಅನೇಕ ವಿಧವಾದ ಕಾಯಿಲೆಗಳು ಹುಟ್ಟಿಕೊಳ್ಳುತ್ತವೆ. ಕಫದ ಗಟ್ಟಿಯಾಗುವಿಕೆ ಹೆಚ್ಚಾಗಿದ್ದರೆ ಉಸಿರಾಟಕ್ಕೆ ಅಥವಾ ಜೀರ್ಣಕ್ರಿಯೆಗೆ ಸಂಬಂಧಿಸಿದ ರೋಗಗಳು ಹೆಚ್ಚಾಗುತ್ತವೆ. ಜತೆಗೆ ವಾತದ ಗತಿಯೂ ಸರಿ ಇಲ್ಲದಿದ್ದಾಗ ಚರ್ಮಕ್ಕೆ ಮತ್ತು ಹೃದಯಕ್ಕೆ ಸಂಬಂಧಿಸಿದ ರೋಗಗಳೂ ಹೆಚ್ಚಾಗುತ್ತವೆ. ಈ ಕಫವಾತಗಳಲ್ಲಿ ಹೊಂದಾಣಿಕೆ ಕಾಪಾಡಿಕೊಂಡು ಪಿತ್ತವು ಉಲ್ಬಣವಾಗದಂತೆ ತಡೆಗಟ್ಟಿದರೆ ಆರೋಗ್ಯವು ಲಭಿಸಿದಂತೆ. ಇದಕ್ಕಾಗಿ ವೈದ್ಯಶಾಸ್ತ್ರಕ್ಕೆ ಪೂರಕವಾದ ಸಂಪ್ರದಾಯಗಳು ಆಚರಣೆಯಲ್ಲಿವೆ.

ಭಾರತದ ಬೇರೇ ಬೇರೇ ಪ್ರಾಂತ್ಯಗಳಲ್ಲಿ ಅಲ್ಲಿಯ ವಾತಾವರಣಕ್ಕೆ ಅನುಗುಣವಾಗಿ ವಿಧ ವಿಧವಾದ ಆಹಾರಪದ್ಧತಿಗಳು ರೂಢಿಯಲ್ಲಿವೆ. ಹಾಗೆಯೇ ಅನೇಕ ಹಬ್ಬಗಳ ಆಚರಣೆ, ಆಗ ತಯಾರಿಸಬೇಕಾದ ಆಹಾರಪದಾರ್ಥಗಳು, ಹಬ್ಬದ ನೀತಿನಿಯಮಗಳು ವಿಭಿನ್ನವಾಗಿದ್ದರೂ ಆಯಾ ದೇಶ ಮತ್ತು ಕಾಲಸ್ವಭಾವಕ್ಕೆ ಸೂಕ್ತವಾಗಿರುತ್ತವೆ.

ಚಳಿಗಾಲದಲ್ಲಿ ಸೂರ್ಯೋದಯ ತಡವಾದರೂ ಬೇಗ ಆಹಾರವನ್ನು ಸೇವಿಸಲು ಧನುರ್ಮಾಸದ ಆಚರಣೆಯನ್ನು ತಿಳಿಸುತ್ತದೆ ಶಾಸ್ತ್ರ. ಆಗಿನ ಪ್ರಧಾನವಾದ ಆಹಾರ ಹುಗ್ಗಿ ಅಥವಾ ಪೊಂಗಲ್. ಇದಕ್ಕೆ ಬಳಸುವ ಪದಾರ್ಥಗಳು ಕಫವಾತಗಳ ಏರುಪೇರನ್ನು ತಗ್ಗಿಸಿ, ಜೀರ್ಣಕ್ರಿಯೆಯನ್ನು ಹೆಚ್ಚಿಸಿ, ದೇಹದ ಧಾತುಮಲಗಳು ತಮ್ಮ ಕೆಲಸವನ್ನು ತಡೆಯಿಲ್ಲದೆ ಮಾಡಲು ಸಹಾಯ ಮಾಡುತ್ತದೆ. ಅದಕ್ಕೆ ಉಪಯೋಗಿಸುವ ತುಪ್ಪವು ವಾತ-ಪಿತ್ತಗಳನ್ನು ಸಮವಾಗಿರಿಸಿದರೆ, ಎಳ್ಳು, ಒಣಕೊಬ್ಬರಿ ವಾತದ ಗತಿಗೆ ತಡೆಯಾಗದಂತೆ ಕಾಪಾಡುತ್ತದೆ, ಅಕ್ಕಿ ಹೆಸರುಬೇಳೆಗಳು ಧಾತುಪೋಷಣವನ್ನು ಮಾಡುವುದರೊಂದಿಗೆ, ಮಲಪ್ರವೃತ್ತಿಯೂ ಸರಿಯಾಗಿರುವಂತೆ ನೋಡಿಕೊಳ್ಳುತ್ತದೆ.

ಜೀರಿಗೆ-ಮೆಣಸುಗಳು ಅಜೀರ್ಣವಾಗದಂತೆ, ದೇಹದ ಆಂತರಿಕ ಉಷ್ಣತೆ ಕಡಿಮೆಯಾಗದಂತೆ, ನೋಡಿಕೊಳ್ಳುತ್ತವೆ. ಹೀಗೆಯೆ ಸಿಹಿಹುಗ್ಗಿ ಅಥವಾ ಪೊಂಗಲ್‌ನಲ್ಲಿರುವ ಬೆಲ್ಲದ ಸಿಹಿ ಧಾತುಪೋಷಕವಾಗಿಯೂ, ಸಂದುಗಳಲ್ಲಿರುವ ಜಿಡ್ಡಿನ ಅಂಶವನ್ನು ಸರಿದೂಗಿಸಿಕೊಡುತ್ತದೆ. ಆದ್ದರಿಂದ ಚಳಿಗಾಲದಲ್ಲಿ ಸಾಂಪ್ರದಾಯಿಕವಾದ ಆಹಾರಸೇವನೆಯು ಚಳಿಗಾಲದಲ್ಲಿ ಬರುವ ರೋಗಗಳನ್ನು ತಡೆಗಟ್ಟುವುದರ ಜೊತೆಗೆ ಕಫವಾತಗಳ ಸಮತ್ವದಿಂದಾಗಿ ವಸಂತದಲ್ಲಿ ಕಫವಾಗಲೀ ವಾತವಾಗಲೀ ರೋಗೋತ್ಪತ್ತಿ ಮಾಡದಂತೆ ತಡೆಗಟ್ಟುತ್ತದೆ.

ಚಳಿಗಾಲದಲ್ಲಿ ನಿತ್ಯಾಭ್ಯಂಗವು ವಾತಾವರಣದ ರೂಕ್ಷತೆಯಿಂದ ಚರ್ಮ ಒಡೆಯುವುದು, ಸಂದುನೋವುಗಳನ್ನು ತಡೆಗಟ್ಟುವುದರ ಜೊತೆಗೆ ವಾತದ ಗತಿಯನ್ನು ಸರಿಯಾಗಿಡುವುದರಿಂದ ಚರ್ಮಕ್ಕೆ ಸಂಬಂಧಿಸಿದ ಅಲರ್ಜಿಗಳು ಬಾರದಂತೆ ತಡೆಗಟ್ಟುತ್ತವೆ. ಚಳಿಗಾಲದಲ್ಲಿ ಮಾಡುವ ವ್ಯಾಯಾಮವೂ ದೇಹದಾರ್ಢ್ಯವನ್ನೂ, ಆಂತರಿಕ ಉಷ್ಣತೆಯನ್ನೂ ಹೆಚ್ಚಿಸುತ್ತದೆ.

ವಸಂತದ ಬಿಸಿಲು ಪ್ರಾರಂಭವಾಗುವಾಗ ವಮನ ಅಥವಾ ವಾಂತಿ ಮಾಡಿಸುವ ಮೂಲಕ ಘನೀಕರಿಸಿದ, ಅಗತ್ಯಕ್ಕಿಂತ ಹೆಚ್ಚಾದ ಕಫವನ್ನು ಹೊರಹಾಕಬೇಕೆಂದು ಆಯುರ್ವೇದ ಹೇಳುತ್ತದೆ. (ಇದನ್ನು ವೈದ್ಯರ ಸಲಹೆ-ಮಾರ್ಗದರ್ಶನಗಂತೆಯೇ ಮಾಡಬೇಕು.) ಕರಗುತ್ತಿರುವ, ಅಗತ್ಯಕ್ಕಿಂತ ಹೆಚ್ಚಾಗಿರುವ ಕಫವನ್ನು, ದೇಹದಿಂದ ಮೂತ್ರದ ಮೂಲಕ ಹೊರಹಾಕುವುದು ಸೂಕ್ತ. ಅದಕ್ಕಾಗಿ ಬಿಸಿಲು ಹೆಚ್ಚಾಗುವಾಗ ನೀರನ್ನು ಹೆಚ್ಚಾಗಿ ಸೇವಿಸಬೇಕು. ಕೆಲವೊಮ್ಮೆ ತಣ್ಣೀರನ್ನು ಹೆಚ್ಚಾಗಿ ಸೇವಿಸುವುದು ಹಸಿವೆಯನ್ನು ಕಡಿಮೆ ಮಾಡಿ, ಅಜೀರ್ಣವನ್ನು ಉತ್ಪತ್ತಿ ಮಾಡಬಹುದು. ಇದು ಬಿಸಿಲು ಹೆಚ್ಚಾದಂತೆ ವಾತಾವರಣಕ್ಕೆ ದೇಹವು ಹೊಂದಿಕೊಳ್ಳದಂತೆ ತಡೆಗಟ್ಟಿ, ಕೆಮ್ಮು, ದಮ್ಮು, ಗಂಟುನೋವು, ಚರ್ಮರೋಗಗಳಿಗೆ ಕಾರಣವಾಗುತ್ತದೆ. ಆದ್ದರಿಂದ ನೀರಿಗೆ ಶುಂಠಿ, ಕೊನ್ನಾರಿ ಗಡ್ಡೆ, ಮುಂತಾದವುಗಳನ್ನು ನೀರಿಗೆ ಹಾಕಿ ಕುದಿಸಿ ಕುಡಿಯಬೇಕು. ಇದು ಹೆಚ್ಚಾದ ಕಫವು ಮೂತ್ರದಲ್ಲಿ ಹೊರಹೋಗುವಂತೆ ಮಾಡುತ್ತದೆ; ಆದರೆ ಆಜೀರ್ಣವಾಗದಂತೆಯೂ ತಡೆಗಟ್ಟುತ್ತದೆ.

ಹೆಚ್ಚಾದ ಕಫವನ್ನು ಒಣಗಿಸಲು, ಕಫ ವೃದ್ಧಿಯಿಂದಾಗುವ ಅಗ್ನಿಮಾಂದ್ಯವನ್ನು ನಿಯಂತ್ರಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಲು ಶಿವರಾತ್ರಿಯ ಉಪವಾಸ, ರಾತ್ರಿ ಜಾಗರಣೆಯನ್ನು ವಿಧಿಸಿದ್ದಾರೆ ಎನಿಸುತ್ತದೆ. ಬಿಸಿಯಿಂದಾಗಿ ಪಿತ್ತವು ಅತಿಯಾಗದಂತೆ ದ್ರಾಕ್ಷಿ, ಮಾವು, ಇವುಗಳ ಸೇವನೆ, ತಂಪಾಗಿ ಗಾಳಿ ಬೀಸುವ, ನೆರಳಿರುವ, ಉದ್ಯಾನ, ನದಿ ಮುಂತಾದ ಪ್ರದೇಶಗಳ ವಿಹಾರ, ಮಾನಸಿಕ ಉಲ್ಲಾಸ, ಬದುಕಿನಲ್ಲಿ ಉತ್ಸಾಹ ತುಂಬುವ ಚಟುವಟಿಕೆಗಳು ವಸಂತದಲ್ಲಿ ಆರೋಗ್ಯವನ್ನು ಕಾಪಾಡುತ್ತವೆ.

ಯುಗಾದಿಯಲ್ಲಿ ಸೇವಿಸುವ ಬೇವು-ಬೆಲ್ಲಗಳೂ ವಸಂತದಲ್ಲಿ ಕಹಿ ಮತ್ತು ಸಿಹಿಗಳನ್ನು ಸಮನಾಗಿ ಸೇವಿಸಿದರೆ ಆರೋಗ್ಯಕರವೆಂದು ಸೂಚಿಸುವ ಆಚರಣೆಯೇ ಆಗಿದೆ. ವಸಂತದಲ್ಲಿ ಹೀರೆ, ಸೋರೆ, ಹೊಂಗೆ, ಬೇವಿನ ಹೂವು, ಇವುಗಳಿಂದ ತಯಾರಿಸಿದ, ಮಜ್ಜಿಗೆ ಹುಳಿ, ಮೇಲೋಗರ, ಗೊಜ್ಜು ಇವುಗಳು ಸ್ವಾಸ್ಥ್ಯವರ್ಧಕ ಆಹಾರಗಳು.

ಹೀಗೆ ನಮ್ಮ ಸಾಂಪ್ರದಾಯಿಕ ಆಚರಣೆಗಳು ಮತ್ತು ವೈದ್ಯಶಾಸ್ತ್ರದ ಸಲಹೆಗಳನ್ನು ಅರಿತು ನಡೆದರೆ ಆರೋಗ್ಯ ಪ್ರಾಪ್ತಿಯಾಗುವುದರಲ್ಲಿ ಎರಡು ಮಾತಿಲ್ಲ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಕೊಟ್ಟಿರುವ ಚಿತ್ರದಲ್ಲಿ ಶಂಕುವಿನ ಭಿನ್ನಕದ ಘನಫಲ ...



(A) $\pi(r_1 + r_2)l$

(B) $\pi(r_1 - r_2)l$

(C) $\frac{1}{3}\pi h(r_1^2 - r_2^2 - r_1 r_2)$

(D) $\frac{1}{3}\pi h(r_1^2 + r_2^2 + r_1 r_2)$

ಉತ್ತರ:– (ಡಿ) (ಮಾರ್ಚ್–2022)

2) (Sin 30°+cos 60°)-(sin 60° + cos 30°) ಇದು ಈ ಕೆಳಗಿನ ಯಾವುದಕ್ಕೆ ಸಮವಾಗಿದೆ?

(a) 0 (b) 1+2√3
(c) 1-√3 (d) 1+√3

ಉತ್ತರ : (c) 1-√3

ವಿವರಣೆ: sin 30° = ½, sin 60° = √3/2,
cos 30° = √3/2 and cos 60° = ½
(½+½)-(√3/2+√3/2)
= 1 – [(2√3)/2]
= 1 – √3

4) $\tan x = \frac{7}{24}$ ಆದರೆ cot xಗೆ ಸಮನಾದುದು ....

A) 7 B) 24
C) $\frac{7}{24}$ D) $\frac{24}{7}$

ಉತ್ತರ : (D) $\frac{24}{7}$

3) ಎರಡು ಸಂಖ್ಯೆಗಳ ವರ್ಗಗಳ ವ್ಯತ್ಯಾಸವು 180 ಆಗಿದೆ. ಚಿಕ್ಕ ಸಂಖ್ಯೆಯ ವರ್ಗವು ದೊಡ್ಡ ಸಂಖ್ಯೆಯ ಎಂಟರಷ್ಟಿದ್ದರೆ ಆ ಎರಡು ಸಂಖ್ಯೆಗಳು ಯಾವುವು?

ಎ) 18.. 19 ಬಿ) 18, 12
ಸಿ) 14 , 19 ಡಿ) 5, 10

ಉತ್ತರ:– (ಬಿ) 18, 12

ಪರಿಹಾರ:– ದೊಡ್ಡ ಸಂಖ್ಯೆಯು x ಆಗಿರಲಿ

ಚಿಕ್ಕ ಸಂಖ್ಯೆಯ ವರ್ಗ = 8 (ದೊಡ್ಡ ಸಂಖ್ಯೆ) = 8x ಆಗಿರಲಿ

ಚಿಕ್ಕ ಸಂಖ್ಯೆ $=\sqrt{8x}$

ಸಮಸ್ಯೆಯ ಪ್ರಕಾರ

$\Rightarrow x^2 + 8x = 180$

$$x = \frac{-b \pm \sqrt{b^2 - 4ac}}{2a}$$
$$= \frac{-(-8) \pm \sqrt{(-8)^2 - 4(1)(-180)}}{2(1)}$$
$$= \frac{8 \pm \sqrt{64+720}}{2}$$
$$= \frac{8 \pm \sqrt{784}}{2}$$
$$= \frac{8 \pm 28}{2}$$
$$= \frac{8+28}{2} . \frac{8-28}{2}$$
$$x = 18, -10$$

–10 ಸರಿ ಹೊಂದಲಾರದು

$\therefore x = 18$

$\therefore \sqrt{8x} = \sqrt{8x18} = \sqrt{144} = \pm 12$

ಹೀಗಾಗಿ ಆ ಎರಡು ಸಂಖ್ಯೆಗಳು 18, 12

5) ΔABC ಮತ್ತು ΔBDEಗಳು ಎರಡು ಸಮಬಾಹು ತ್ರಿಭುಜಗಳು Dಯು BCಯ ಮಧ್ಯಬಿಂದು ಆದರೆ ΔABC ಮತ್ತು ΔBDEಗಳ ವಿಸ್ತೀರ್ಣಗಳ ಅನುಪಾತ

(A) 2 : 1 (B) 1 : 2
(C) 4 : 1 (D) 1 : 4

ಉತ್ತರ:–ಸಿ

ಪರಿಹಾರ:– ΔABC ಮತ್ತು ΔBDEಗಳು ಎರಡು ಸಮಬಾಹು ತ್ರಿಭುಜಗಳು Dಯು BCಯ ಮಧ್ಯಬಿಂದು:



∴ BD = DC = 1/2BC

ತ್ರಿಭುಜದ ಪ್ರತಿಯೊಂದು ಬಾಹುವು 2a.ಆಗಿರಲಿ

, ΔABC ~ ΔBDE

∴ವಿಸ್ತೀರ್ಣ(ΔABC)/ವಿಸ್ತೀರ್ಣ (ΔBDE) = AB^2/BD^2
$= (2a)^2/(a)^2$
$= 4a^2/a^2 = 4/1 = 4:1$

6) (2, 3) ಮತ್ತು (4, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳು

A) (3, 5) B) (7, 3)
C) (3, 4) D) (8, 3)

ಉತ್ತರ: (A) (3, 5)

7) ಈ ಕೆಳಗಿನ ದತ್ತಾಂಶಗಳ ಸರಾಸರಿಯು..........

ಅಂಕಗಳು	1	3	5	7

A) 16 B) 5
C) 1.6 D) 4

ಉತ್ತರ:– (ಡಿ)4

(ಮುಂದಿನ ಸಂಚಿಕೆಗೆ..........)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

REVISION and MODEL QUESTIONS

31. a) What is coagulation of a sol? Name two methods by which a lyophobic sol can be coagulated.

b) What is the change in enthalpy and entropy during adsorption of gas on a solid?

Ans:- a) The process of settling of colloidal particles is called coagulation of the sol.

The methods by which a lyophobic sol can be coagulated are -

(i) By electrophoresis OR
(ii) By boiling OR
(iii) By adding an electrolyte OR
(iv) By mixing two oppositely charged sols.

(Note:- Write any two of the above)

b) The change in enthalpy and entropy during adsorption of gas on a solid is as follows -

Enthalpy decreases (or) Δ H is negative.

Entropy decreases (or) Δ S is negative.

32. a) Mention the major product formed in the following reactions:

i) 2-bromopentane $\xrightarrow{alc\ KOH,\ \Delta}$

ii)  **$+ CH_3COCl \xrightarrow{anhyd.\ AlCl_3}$**

iii) $C_2H_5Br + AgCN \xrightarrow{\Delta}$

b) Write the equations for the steps in S_N1 mechanism of the conversion of *tert*-butyl bromide into *tert*-butyl alcohol.

Ans:-

a) (i) 2-bromopentane $\xrightarrow{alc\ KOH,\ \Delta} CH_3 - CH = CH - CH_2 - CH_3$ (or) pent–2–ene

(ii)  $+ CH_3COCl \xrightarrow{anhyd.\ AlCl_3}$ 4- chloroacetophenone

(iii) $C_2H_5Br + AgCN \xrightarrow{\Delta} C_2H_5NC$ (or) ethylisocyanide (or) ethylisonitrile (or) ethylcarbylamine

b) The equations for the steps in S_N1 mechanism of the conversion of *tert*-butyl bromide into *tert*-butyl alcohol.

Step – 1:

Step - 2:



33. a) Explain with equations:

i) Kolbe's reaction

ii) Williamson's ether synthesis

b) A carbonyl compound (P) with the formula C_2H_4O reacts with CH_3MgX followed by hydrolysis to form an alcohol (Q). Name the alcohol Q.

Ans:-. a) **i) Kolbe's reaction** - Sodium phenate undergoes electrophile substitution reaction with CO_2 a weak electrolyte, finally to form orthohydroxybenzoic acid as main product.



ii) Williamson's ether synthesis – Alkyl halides reacts with sodium alkoxide to form ether

$R - X + Na-O-R \rightarrow R - O - R + NaX$
Alkyl halide, Sodium hydroxide, ether

b) When a carbonyl compound (P) with the formula C_2H_4O reacts with CH_3MgX followed by hydrolysis to form an alcohol (Q).

The alcohol Q is propan-2-ol

34) a) Write equations for:

i) Gatterman-Koch reaction to convert benzene into benzaldehyde.

ii) the formation of oxime from carbonyl compounds

iii) the reaction between carboxylic acid and PCl_5.

b) Give reasons:-

i) α -hydrogen atoms of aldehydes and ketones are acidic.

ii) An electron donating group decreases the acid strength of carboxylic acid.

Ans:- a) i) Gatterman-Koch reaction to convert benzene into benzaldehyde.



ii) the formation of oxime from carbonyl compounds

$>C=O + H_2NOH \longrightarrow >C=N-OH + H_2O$

iii) the reaction between carboxylic acid and PCl_5.

$R-COOH + PCl_5 \longrightarrow R-COCl + POCl_3 + HCl$

b) i) α -hydrogen atoms of aldehydes and ketones are acidic due to strong electron withdrawing effect of carbonyl group and resonance stabilisation of conjugate base.

ii) An electron donating group decreases the acid strength of carboxylic acid because an electron donating group destabilises the carboxylate anion or the conjugate base.

ಪೋಷಕರು, ಗ್ರಾಮಸ್ಥರ ಆಕ್ರೋಶ • ಮುಖ್ಯ ಶಿಕ್ಷಕಿ ಅಮಾನತು

ಮಕ್ಕಳಿಂದ ಶೌಚಾಲಯ ಸ್ವಚ್ಛತೆ

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಕುದುಪಕುಂಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯವನ್ನು ವಿದ್ಯಾರ್ಥಿಗಳಿಂದ ಸ್ವಚ್ಛಗೊಳಿಸಲಾಗಿದೆ.

ಮಕ್ಕಳಿಂದ ಶೌಚಾಲಯ ಸ್ವಚ್ಛ ಮಾಡಿಸುತ್ತಿರುವುದನ್ನು ಗ್ರಾಮಸ್ಥರು ವಿಡಿಯೊ ಮಾಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲೆ ಮುಖ್ಯಶಿಕ್ಷಕಿ ಬಿ.ರೇಣುಕಾ ಅವರನ್ನು ಅಮಾನತುಗೊಳಿಸಲಾಗಿದೆ.

ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಜಿ.ಮುನಿರಾಜ, ಕ್ಷೇತ್ರ ಶಿಕ್ಷಣಾಧಿಕಾರಿ ನರೇಂದ್ರಕುಮಾರ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಜಗದೀಶ್ ಸೋಮವಾರ ಶಾಲೆಗೆ ಭೇಟಿ ನೀಡಿದರು. ಮಕ್ಕಳು, ಶಿಕ್ಷಕಿ ಹಾಗೂ ಪೋಷಕರೊಂದಿಗೆ ಚರ್ಚಿಸಿ, ಹೇಳಿಕೆ ಪಡೆದರು.

'ವಿದ್ಯಾರ್ಥಿಗಳನ್ನು ಗೋಪ್ಯವಾಗಿ ವಿಚಾರಣೆ ನಡೆಸಿದ್ದೇವೆ. ಗ್ರಾಮಸ್ಥರಿಂದ ಮಾಹಿತಿ ಸಹ ಪಡೆದಿದ್ದೇವೆ. ಮುಖ್ಯ ಶಿಕ್ಷಕಿಯನ್ನು ಅಮಾನತುಗೊಳಿಸಲಾಗಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ನರೇಂದ್ರಕುಮಾರ್ ತಿಳಿಸಿದರು.

ಶಿಕ್ಷಕಿಯ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಪೋಷಕರು ಹಾಗೂ ಗ್ರಾಮಸ್ಥರು, ಶಾಲೆಗೆ ಬೇರೆ ಶಿಕ್ಷಕರನ್ನು ನಿಯೋಜಿಸುವಂತೆ ಮನವಿ ಮಾಡಿದರು. ಮಕ್ಕಳಿಂದ ಶಾಲೆಗಳ ಶೌಚಾಲಯ ಸ್ವಚ್ಛ ಮಾಡಿಸದಂತೆ ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಆದರೂ ಇಲ್ಲಿ ಮಕ್ಕಳಿಂದ ಶೌಚಾಲಯ ಸ್ವಚ್ಛತೆ ಮಾಡಿಸಲಾಗಿದೆ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಾಂಶಗಳು
- ವಿಡಿಯೊ ಚಿತ್ರೀಕರಣ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆ
- ಶಾಲೆಗೆ ತಾ.ಪಂ ಇ.ಒ ಮತ್ತು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಭೇಟಿ
- ಶಿಕ್ಷಕಿಯ ಕಾರ್ಯವೈಖರಿ ಬಗ್ಗೆ ಅಸಮಾಧಾನ

ಶೌಚಾಲಯ ಸ್ವಚ್ಛಗೊಳಿಸುತ್ತಿರುವ ವಿದ್ಯಾರ್ಥಿನಿ

'ಶೇ 100ರಷ್ಟು ಪರಿಹಾರ ಇಲ್ಲ'

ಬೆಂಗಳೂರು: 'ದ್ವಿಚಕ್ರ ವಾಹನದಲ್ಲಿ ನಿಗದಿಗಿಂತ ಹೆಚ್ಚಿನ ಪ್ರಯಾಣಿಕರಿದ್ದು, ಅದು ಅಪಘಾತಕ್ಕೀಡಾದರೆ ಅದಕ್ಕೆ ಸವಾರರ ನಿರ್ಲಕ್ಷ್ಯವೂ ಕಾರಣ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, 'ಈ ಅಂಶದ ಆಧಾರದಡಿ ಶೇ 100ರಷ್ಟು ಪರಿಹಾರ ನೀಡಲು ಸಾಧ್ಯವಿಲ್ಲ' ಎಂದು ಹೇಳಿದೆ.

ಬಜಾಜ್ ಅಲಯನ್ಸ್ ಜನರಲ್ ಇನ್ಶುರೆನ್ಸ್ ಕಂಪನಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹಂಚಾಟೆ ಸಂಜೀವ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಕಂಪನಿಯ ಮೇಲ್ಮನವಿಯನ್ನು ಭಾಗಶಃ ಮಾನ್ಯ ಮಾಡಿದ್ದು, ಅಪಘಾತ ನ್ಯಾಯಮಂಡಳಿ ನಿಗದಿಪಡಿಸಿದ್ದ ಪರಿಹಾರ ಆದೇಶವನ್ನು ಮಾರ್ಪಾಡು ಮಾಡಿದೆ. ಪರಿಹಾರ ಕೋರಿರುವವರದ್ದೂ ಶೇ 20ರಷ್ಟು ನಿರ್ಲಕ್ಷ್ಯ ಇರುವ ಕಾರಣ ವಿಮಾ ಕಂಪನಿಯಿಂದ ಅರ್ಜಿದಾರರು ಶೇ 80ರಷ್ಟು ಮಾತ್ರವೇ ಪರಿಹಾರ ಪಡೆಯಲು ಅರ್ಹರು' ಎಂದಿದೆ.

ಶಾಮನೂರು, ರಾಜಣ್ಣಗೆ ಎಚ್ಚರಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕಮಾಂಡ್ ವಿರುದ್ಧವೇ ಧ್ವನಿ ಎತ್ತಿದ ಸಹಕಾರ ಸಚಿವ ಕೆ.ಎನ್. ರಾಜಣ್ಣ ಮತ್ತು ಬಿಜೆಪಿ ಸಂಸದ ಬಿ.ವೈ. ರಾಘವೇಂದ್ರ ಅವರನ್ನು ಶಿವಮೊಗ್ಗದಲ್ಲಿ ಮತ್ತೊಮ್ಮೆ ಗೆಲ್ಲಿಸಿ' ಎಂದು ಹೇಳಿಕೆ ನೀಡಿದ ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ಪಕ್ಷದ ವರಿಷ್ಠರು ಎಚ್ಚರಿಕೆ ನೀಡಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ರಾಜಣ್ಣ ಅವರಿಗೆ ಕರೆ ಮಾಡಿದ ವರಿಷ್ಠರು, 'ನಿಮಗೆ ಚುನಾವಣೆಯಲ್ಲಿ ಟಿಕೆಟ್ ಪಡೆಯಲು, ಗೆಲ್ಲಲು, ಬಳಿಕ ಮಂತ್ರಿ ಮಾಡಲು ಹೈಕಮಾಂಡ್ ಬೇಕಾಗಿತ್ತಲ್ಲವೇ? ನಿಮಗೆ ತೋಚಿದಂತೆ ಮಾತನಾಡುತ್ತಿರುವುದರಿಂದ ನಿಮಗಲ್ಲ, ಪಕ್ಷದ ವರ್ಚಸ್ಸಿಗೆ ಧಕ್ಕೆ ಆಗುತ್ತಿದೆ. ಇದೇ ಮೊದಲು, ಇದೇ ಕೊನೆ. ಇದೇ ರೀತಿ ಮಾತನಾಡಿದರೆ ಮುಂದಿನ ದಿನಗಳಲ್ಲಿ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ತಾಕೀತು ಮಾಡಿದ್ದಾರೆ ಎಂದು ಗೊತ್ತಾಗಿದೆ.

ಶಾಮನೂರು ಅವರಿಗೂ ಕರೆ ಮಾಡಿರುವ ವರಿಷ್ಠರು, 'ಪಕ್ಷದಲ್ಲಿ ಅತ್ಯಂತ ಹಿರಿಯರಾದ ನೀವು, 'ಇನ್ನೊಂದು ಪಕ್ಷದವರನ್ನು ಗೆಲ್ಲಿಸಿ ಎಂದು ಕರೆ ಕೊಡುವುದು ಸರಿಯಲ್ಲ? ನಿಮ್ಮ ಹಿರಿತನಕ್ಕೆ ಗೌರವ ಕೊಟ್ಟಿದ್ದೇವೆ. ಈ ರೀತಿ ಹೇಳಿಕೆ ಕೊಡುವುದು ಸರಿಯಲ್ಲ' ಎಂದು ಎಚ್ಚರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ನಿಗಮ ಮಂಡಳಿಗಳಿಗೆ ನೇಮಕ ವಿಚಾರದಲ್ಲಿ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲವೆಂದು ಪಕ್ಷದ ಹೈಕಮಾಂಡ್ ವಿರುದ್ಧ ಇತ್ತೀಚೆಗೆ ಆಕ್ರೋಶ ವ್ಯಕ್ತಪಡಿಸಿದ್ದ ರಾಜಣ್ಣ, 'ನಾವೇನು ಹೈಕಮಾಂಡ್ ಗುಲಾಮರಾ? ಈ ರೀತಿ ಸವಾರಿ ಮಾಡುವುದನ್ನು ಸಹಿಸುವುದಿಲ್ಲ' ಎಂದಿದ್ದರು.

ಶಿವಮೊಗ್ಗದಲ್ಲಿ 'ಗುರು ಬಸವಶ್ರೀ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ್ದ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರೂ ಆಗಿರುವ ಶಾಮನೂರು, 'ಶಿವಮೊಗ್ಗ ಜಿಲ್ಲೆಯಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳನ್ನು ಗಮನಿಸಿದರೆ ನೀವು ಉತ್ತಮ ಸಂಸದರನ್ನೇ ಆಯ್ಕೆ ಮಾಡಿದ್ದೀರಿ ಎಂಬುವುದು ತಿಳಿಯುತ್ತದೆ. ಮುಂಬರುವ ಲೋಕಸಭೆ ಚುನಾವಣೆಯಲ್ಲೂ ಬಿ.ವೈ. ರಾಘವೇಂದ್ರ ಅವರನ್ನೇ ಆಯ್ಕೆ ಮಾಡಿ' ಎಂದು ಹೇಳಿದ್ದರು.

ಅಪಘಾತ: ನಾಲ್ವರು ವಿದ್ಯಾರ್ಥಿಗಳ ಸಾವು

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ನೋಡಿಕೊಂಡು ಭಾನುವಾರ ರಾತ್ರಿ ಕ್ರೂಸರ್ ವಾಹನದಲ್ಲಿ ಮನೆಗೆ ಮರಳುತ್ತಿದ್ದಾಗ ಸಂಭವಿಸಿದ ರಸ್ತೆ ಅಪಘಾತದಲ್ಲಿ ಕವಟಗಿ ಗ್ರಾಮದ ನಾಲ್ವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ವಿದ್ಯಾರ್ಥಿಗಳಾದ ಗೋವಿಂದ ಸದಾಶಿವ ಜಂಬಗಿ (11), ಶ್ವೇತಾ ಪಾಟೀಲ(11), ಬಸವರಾಜ ಕೊಟ್ಟಾರ(15) ಮತ್ತು ಸಾಗರ ಗುರಲಿಂಗ ಕಡಕೋಳ(16) ಮೃತರು. ಇನ್ನೂ ಎಂಟು ಜನರಿಗೆ ಗಂಭೀರ ಗಾಯಗಳಾಗಿವೆ.

ಮೃತರು ಆಲಗೂರ ಗ್ರಾಮದ ಮಹಾವೀರ ಅಲ್ಪಸಂಖ್ಯಾತರ ಕನ್ನಡ ಹಾಗೂ ಇಂಗ್ಲಿಷ್ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಚಂದ್ರವ್ವ ರಾ ನ್ಯಾಮಗೌಡ ಪ್ರೌಢಶಾಲೆಯ ವಿದ್ಯಾರ್ಥಿಗಳು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಮೃತರ ಕುಟುಂಬದವರಿಗೆ ₹2 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ' ಎಂದು ಕುಟುಂಬಸ್ಥರ ಮನೆಗೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ತಿಳಿಸಿದರು.

ರಾಜ್ಯಸಭೆ: ಫೆ.27ರಂದು ಚುನಾವಣೆ

ಒಂದನೇ ಪುಟದಿಂದ

ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆ ಕಡಿಮೆ. ಹೀಗಾಗಿ, ಅವರನ್ನು ಕರ್ನಾಟಕ ಇಲ್ಲವೆ ಹಿಮಾಚಲ ಪ್ರದೇಶದಿಂದ ರಾಜ್ಯಸಭಾ ಚುನಾವಣೆಯಲ್ಲಿ ಕಣಕ್ಕೆ ಇಳಿಸುವ ಕುರಿತು ಹೈಕಮಾಂಡ್ ಮಟ್ಟದಲ್ಲಿ ಈಗಾಗಲೇ ಚರ್ಚೆಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.

ಹಿಮಾಚಲ ಪ್ರದೇಶದಿಂದ ರಾಜ್ಯಸಭೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಆಯ್ಕೆಯಾಗಿದ್ದಾರೆ. ಅವರ ಅವಧಿ ಏಪ್ರಿಲ್‌ನಲ್ಲಿ ಮುಗಿಯಲಿದೆ. ವಿಧಾನಸಭೆಯ ಬಲಾಬಲದ ಆಧಾರದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಗೆಲ್ಲುವ ಸಾಧ್ಯತೆ ಹೆಚ್ಚು. ಹಾಗಾಗಿ, ನಡ್ಡಾ ಅವರು ಬೇರೆ ರಾಜ್ಯದಿಂದ ಸ್ಪರ್ಧಿಸುವ ಸಂಭವ ಇದೆ.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರಿಗೆ ಬಿಜೆಪಿ ವರಿಷ್ಠರು ಸಲಹೆ ನೀಡಿದ್ದಾರೆ. ಅವರನ್ನು ಕೇರಳದಿಂದ ಕಣಕ್ಕೆ ಇಳಿಸಲು ವರಿಷ್ಠರು ಉತ್ಸುಕರಾಗಿದ್ದಾರೆ. ತಮ್ಮ ನಿಲುವು ತಿಳಿಸಲು ರಾಜೀವ್ ಅವರು ಕಾಲಾವಕಾಶ ಕೇಳಿದ್ದಾರೆ. ರಾಜೀವ್ ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದರೆ ರಾಜ್ಯಸಭೆ ಚುನಾವಣೆಯಲ್ಲಿ ಬೇರೆಯವರಿಗೆ ಅವಕಾಶ ಕಲ್ಪಿಸಲಾಗುವುದು. ತಮ್ಮನ್ನು ರಾಜ್ಯಸಭೆಗೆ ಆಯ್ಕೆ ಮಾಡುವಂತೆ ಮಾಜಿ ಸಚಿವ ವಿ.ಸೋಮಣ್ಣ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಮನವಿ ಮಾಡಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಕಷ್ಟದ ಮೂರು ಕ್ಷೇತ್ರಗಳನ್ನು ಗೆಲ್ಲಿಸಿಕೊಡುವ ಬದ್ಧತೆಯೊಂದಿಗೆ ಸೋಮಣ್ಣ ಅವರು ಪ್ರಸ್ತಾವ ಮುಂದಿಟ್ಟಿದ್ದಾರೆ.

ಎನ್‌ಡಿಎ ಬಲ ಹೆಚ್ಚಳ: ರಾಜ್ಯಸಭೆಯಲ್ಲಿ ಸದ್ಯ ಎನ್‌ಡಿಎ ಮೈತ್ರಿಕೂಟದ 114 ಸದಸ್ಯರು ಇದ್ದಾರೆ. ಇದರಲ್ಲಿ ಬಿಜೆಪಿ ಸದಸ್ಯರ ಸಂಖ್ಯೆ 93. ಕಮಲ ಪಾಳಯದ 28 ಸದಸ್ಯರು ಏಪ್ರಿಲ್‌ನಲ್ಲಿ ನಿವೃತ್ತರಾಗುತ್ತಿದ್ದಾರೆ. ಚುನಾವಣೆಯಲ್ಲಿ ಈ ಎಲ್ಲ ಸ್ಥಾನಗಳನ್ನು ಬಿಜೆಪಿ ಉಳಿಸಿಕೊಳ್ಳುವ ಸಾಧ್ಯತೆ ಇದೆ. ಜೆಡಿಯು ಹಾಗೂ ಆರ್‌ಜೆಡಿ ಸಖ್ಯ ತೊರೆದು ನಿತೀಶ್ ಕುಮಾರ್ ಅವರು ಎನ್‌ಡಿಎ ಜತೆ ಕೈಜೋಡಿಸಿರುವುದರಿಂದ ಎನ್‌ಡಿಎ ಬಲ ಹೆಚ್ಚಾಗಲಿದೆ. ಬಿಹಾರದಲ್ಲಿ ಬಿಜೆಪಿ ಮತ್ತು ಜೆಡಿಯು ಕೂಟ ಆರು ಸ್ಥಾನಗಳಲ್ಲಿ ಗೆಲ್ಲಲಿದೆ ಎಂದು ಲೆಕ್ಕಾಚಾರ ಹಾಕಲಾಗಿದೆ. ಆಗ ಎನ್‌ಡಿಎ ಸದಸ್ಯರ ಸಂಖ್ಯೆ 120ಕ್ಕೆ ಏರಲಿದೆ.

ಯಾವ ರಾಜ್ಯ, ಎಷ್ಟು ಸ್ಥಾನ	
ಉತ್ತರ ಪ್ರದೇಶ	10
ಬಿಹಾರ, ಮಹಾರಾಷ್ಟ್ರ	6
ಪಶ್ಚಿಮ ಬಂಗಾಳ, ಮಧ್ಯಪ್ರದೇಶ	5
ಕರ್ನಾಟಕ, ಗುಜರಾತ್	4
ಆಂಧ್ರ ಪ್ರದೇಶ, ತೆಲಂಗಾಣ, ಒಡಿಶಾ, ರಾಜಸ್ಥಾನ	3
ಹರಿಯಾಣ, ಹಿಮಾಚಲ ಪ್ರದೇಶ, ಛತ್ತೀಸಗಢ, ಉತ್ತರಾಖಂಡ	1

ಚುನಾವಣಾ ವೇಳಾಪಟ್ಟಿ	
ಫೆ.8	ಚುನಾವಣಾ ಅಧಿಸೂಚನೆ ಪ್ರಕಟ
ಫೆ.15	ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ
ಫೆ.16	ನಾಮಪತ್ರ ಪರಿಶೀಲನೆ
ಫೆ.20	ನಾಮಪತ್ರ ವಾಪಸ್ ಪಡೆಯಲು ಕಡೆಯ ದಿನ
ಫೆ.27	ಮತದಾನ (ಬೆಳಿಗ್ಗೆ 9ರಿಂದ ಸಂಜೆ 4)
ಫೆ.27	ಮತ ಎಣಿಕೆ (ಸಂಜೆ 5ರಿಂದ)

ಪದವಿ ಕಾಲೇಜುಗಳಲ್ಲೂ ಬಿ.ಇಡಿ ಕೋರ್ಸ್‌ಗೆ ಅವಕಾಶ

ಒಂದನೇ ಪುಟದಿಂದ

ಇತರೆ ಶಿಕ್ಷಣ ಸಂಸ್ಥೆಗಳಿಗೂ ಅವಕಾಶ: ಖಾಸಗಿ, ಅನುದಾನಿತ ಹಾಗೂ ಸರ್ಕಾರಿ ಕಾಲೇಜುಗಳು ಸೇರಿ ಎಲ್ಲ ಶಿಕ್ಷಣ ಮಹಾವಿದ್ಯಾಲಯಗಳಲ್ಲೂ ಎರಡು ವರ್ಷದ ಕೋರ್ಸ್ ಅಳವಡಿಸಿಕೊಳ್ಳಲಾಗಿದೆ. ಈ ಕಾಲೇಜುಗಳು ಎನ್‌ಸಿಆರ್‌ಟಿ ಶಿಫಾರಸಿನ ಅನ್ವಯ ನಾಲ್ಕು ವರ್ಷಗಳ ಬಿ.ಇಡಿ ಕೋರ್ಸ್ ಅಳವಡಿಸಿಕೊಳ್ಳಬಹುದು. ಇಲ್ಲವೇ ಹಿಂದಿನಂತೆ ಎರಡು ವರ್ಷದ ಕೋರ್ಸ್ ಮುಂದುವರಿಸಬಹುದು.

ಅಲ್ಲದೇ, ಬಿ.ಎ, ಬಿ.ಎಸ್ಸಿ, ಬಿ.ಕಾಂ ಸೇರಿದಂತೆ ವಿವಿಧ ಪದವಿ ಶಿಕ್ಷಣ ನೀಡುತ್ತಿರುವ ಇತರೆ ಶಿಕ್ಷಣ ಸಂಸ್ಥೆಗಳು ಹೊಸದಾಗಿ ನಾಲ್ಕು ವರ್ಷಗಳ ಬಿ.ಇಡಿ ಕೋರ್ಸ್ ಆರಂಭಿಸಲು ಅನುಮತಿ ಪಡೆಯಬಹುದು. ಈಗಾಗಲೇ ಎಂಟು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಸಂಯೋಜಿತ ಬಿ.ಇಡಿ ಪದವಿ ಆರಂಭಿಸಲು ಬೇಡಿಕೆ ಸಲ್ಲಿಸಿವೆ.

'ಸಂಯೋಜಿತ ಶಿಕ್ಷಕರ ಶಿಕ್ಷಣ ಮತ್ತು ತರಬೇತಿ ಯೋಜನೆ ಅಡಿ ನಾಲ್ಕು ವರ್ಷಗಳ ಬಿ.ಇಡಿ ಪದವಿ ನಿಗದಿ ಮಾಡಲಾಗಿದೆ. ಪಿಯು ನಂತರ ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್ ಆಯ್ಕೆ ಮಾಡಿಕೊಳ್ಳುವ ಮಕ್ಕಳು ಬಿ.ಇಡಿ ಪದವಿ ಮಾಡಬಹುದು. ಆ ಮೂಲಕ ಪ್ರತಿಭಾವಂತರನ್ನು ಶಿಕ್ಷಣ ಕ್ಷೇತ್ರದತ್ತ ಸೆಳೆಯುವ ಗುರಿ ಹೊಂದಲಾಗಿದೆ' ಎನ್ನುತ್ತಾರೆ ಎನ್‌ಸಿಇಆರ್‌ಟಿ ಅಧಿಕಾರಿಗಳು.

ರಾಜ್ಯದ ಶೇ 50ರಷ್ಟು ಬಿ.ಇಡಿ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸಿದೆ. 4 ವರ್ಷಗಳ ಕೋರ್ಸ್‌ನಿಂದ ಹಲವು ಕಾಲೇಜುಗಳು ಬಾಗಿಲು ಮುಚ್ಚುತ್ತವೆ

ಎನ್.ಎಸ್.ರುದ್ರೇಶ್, ಉಪನ್ಯಾಸಕರು, ರಾಘವೇಂದ್ರ ಶಿಕ್ಷಣ ಮಹಾವಿದ್ಯಾಲಯ, ಮಲ್ಲಾಡಿಹಳ್ಳಿ

ಅಧ್ಯಕ್ಷ ವಜಾಕ್ಕೆ ಕಾರ್ಯದರ್ಶಿ ಪತ್ರ

ಒಂದನೇ ಪುಟದಿಂದ

ತಮ್ಮ ಹುದ್ದೆಯ ಜವಾಬ್ದಾರಿಗಳನ್ನು ಅರಿಯಲು ಅಧ್ಯಕ್ಷರು ಮತ್ತು ಕೆಲವು ಸದಸ್ಯರು ವಿಫಲರಾಗಿದ್ದು, ಪರಿಪಕ್ವತೆ ಇಲ್ಲದವರಂತೆ ವರ್ತಿಸಿದ್ದಾರೆ' ಎಂದು ಕಾರ್ಯದರ್ಶಿ ದೂರಿದ್ದಾರೆ.

'ಕಾನೂನು ಕೋಶದ ಮುಖ್ಯಸ್ಥರ ಹುದ್ದೆಯ ನೇಮಕಾತಿ ಆದೇಶ ಹೊರಡಿಸುವವರೆಗೆ ಯಾವುದೇ ಕಡತ ಸಲ್ಲಿಸದಂತೆ ಅಧ್ಯಕ್ಷರಿಂದ ಟಿಪ್ಪಣಿ ಬಂದ ಸುಮಾರು ಒಂದೂವರೆ ತಿಂಗಳಿನಿಂದ ಯಾವುದೇ ಕಾರ್ಯಕಲಾಪಗಳನ್ನು ನಿರ್ವಹಿಸಿಲ್ಲ. ಇದು ಆಡಳಿತಾತ್ಮಕ ವಿಷಯಗಳಲ್ಲಿ ಅಧ್ಯಕ್ಷರ ಜ್ಞಾನದ ಕೊರತೆಯನ್ನು ತೋರಿಸುತ್ತದೆ. ಯಾವುದೇ ಕಡತವನ್ನು ಅನಗತ್ಯವಾಗಿ ಬಾಕಿ ಇರಿಸಿ ಅನುಮೋದನೆ ವಿಳಂಬ ಮಾಡಿದರೆ ಮತ್ತು ಸಕಾರಣಗಳು ಇಲ್ಲದೇ ಕಡತಗಳನ್ನು ಹಿಂದಿರುಗಿಸಿದರೆ ಕಡತಗಳು ಅನುಮೋದನೆಯಾಗಿವೆ ಎಂದು ಪರಿಗಣಿಸಲಾಗುತ್ತದೆ' ಎಂದು ತಿಳಿಸಿದ್ದಾರೆ.

'ಆಡಳಿತದಲ್ಲಿ ನುರಿತ, ಅನುಭವವಿರುವ ಅಧ್ಯಕ್ಷರು ಮತ್ತು ಸದಸ್ಯರನ್ನು ಆಯೋಗಕ್ಕೆ ನೇಮಿಸುವುದು ಸೂಕ್ತವೆಂದು ಪಿ.ಸಿ. ಹೋಟಾ ಸಮಿತಿಯ ವರದಿಯಲ್ಲಿ ತಿಳಿಸಲಾಗಿದೆ. ಈ ಎಲ್ಲ ಅಂಶಗಳನ್ನು ತಮ್ಮ ಗಮನಕೆ ತಂದರೆ, ನೀವು ಸೂಕ್ತ ಕ್ರಮ ತೆಗೆದುಕೊಂಡು, ನೇಮಕಾತಿ ಪ್ರಕ್ರಿಯೆಗಳು ಸುಗಮವಾಗಿ ನಡೆಯಲು ಮತ್ತು ಹುದ್ದೆಗಳಿಗೆ ಮುಕ್ತ, ನಿಷ್ಪಕ್ಷಪಾತ ಮತ್ತು ಅರ್ಹತೆ ಆಧಾರಿತ ನೇಮಕಾತಿಗಳನ್ನು ಕೈಗೊಳ್ಳಲು ಸಾಧ್ಯವಾಗಲಿದೆ ಎಂಬ ಭರವಸೆಯಿದೆ' ಎಂದು ಪತ್ರದಲ್ಲಿ ಕಾರ್ಯದರ್ಶಿ ಉಲ್ಲೇಖಿಸಿದ್ದಾರೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667 ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಎಸ್/03/1/1250 ದಿನಾಂಕ: 29-01-2024

ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಬ್ಲಾಕ್ ಚೈನ್ ಆಧಾರಿತ ಪ್ಲಾಟ್‌ಫಾರ್ಮ್ ಮುಖಾಂತರ ಪೀರ್-ಟು-ಪೀರ್ ಸೌರ ವಿದ್ಯುತ್ ವ್ಯವಹರಣೆ ಅನುಷ್ಠಾನ) ವಿನಿಯಮಗಳು, 2024 ಬಗ್ಗೆ.

ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಬ್ಲಾಕ್ ಚೈನ್ ಆಧಾರಿತ ಪ್ಲಾಟ್‌ಫಾರ್ಮ್ ಮುಖಾಂತರ ಪೀರ್-ಟು-ಪೀರ್ ಸೌರ ವಿದ್ಯುತ್ ವ್ಯವಹರಣೆ ಅನುಷ್ಠಾನ) ವಿನಿಯಮಗಳು, 2024 ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ 17-01-2024 ರಂದು ಪ್ರಕಟಿಸಲಾಗಿದೆ. ಕ.ವಿ.ನಿ.ಆ.ದ ವೆಬ್‌ಸೈಟ್: https://kerc.karnataka.gov.in ನಲ್ಲಿ ಕರಡು ವಿನಿಯಮಗಳು ಲಭ್ಯವಿದೆ. ಆಸಕ್ತರು ಕರಡು ವಿನಿಯಮಗಳ ಬಗ್ಗೆ ತಮ್ಮ ಲಿಖಿತ ಅಭಿಪ್ರಾಯ / ವಿಮರ್ಶೆ / ಸಲಹೆಗಳು ಇದ್ದಲ್ಲಿ, **ಆಯೋಗದ ಕಾರ್ಯದರ್ಶಿಯವರಿಗೆ** ಮೇಲೆ ತಿಳಿಸಿದಂತೆ ಕರಡು ವಿನಿಯಮಗಳು ರಾಜ್ಯ ಪತ್ರದಲ್ಲಿ ಪ್ರಕಟವಾದ 30 ದಿನದೊಳಗೆ ಸಲ್ಲಿಸಲು ಕೋರಲಾಗಿದೆ.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/3290/2023-24

ಕರ್ನಾಟಕ ಸರ್ಕಾರ

ಚಿತ್ರದುರ್ಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋದನಾ ಸಂಸ್ಥೆ, ಚಿತ್ರದುರ್ಗ.

Chitradurga Medical College and Research Institute, Chitradurga.

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

ದೂವಾ/ಫ್ಯಾಕ್ಸ್ ನಂ:08194-234710. ಇಮೇಲ್:-deancmcri@gmail.com

ಸಂ:ಅಭಿವೃದ್ಧಿ/ವೈ.ಕಾ/4-3/2024-25 ದಿನಾಂಕ: 25.01.2024

ನೇರ ನೇಮಕಾತಿಯ ತಿದ್ದುಪಡಿ ಅಧಿಸೂಚನೆ

ದಿನಾಂಕ 20.01.2024 ರ ಪತ್ರಿಕಾ ಪ್ರಕಟಣೆಯ ಕೆಲ ತಿದ್ದುಪಡೆಗಳನ್ನು ಈ ಕೆಳಗಿನಂತೆ ಸಾರ್ವಜನಿಕರ ಮಾಹಿತಿಗಾಗಿ ತಿಳಿಸಿದೆ. ಕ್ರಮ ಸಂಖ್ಯೆ 02: Physiology ವಿಭಾಗದ Assistant Professor 03 ಹುದ್ದೆ ಬದಲಾಗಿ 02 ಎಂದು, General Surgery ವಿಭಾಗದ Assistant Professor ಹುದ್ದೆ 03 ಬದಲಾಗಿ 02 ಎಂದು ಓದಿಕೊಳ್ಳತಕ್ಕದ್ದು ಹಾಗೂ Assistant Professor ಗಳ ಒಟ್ಟು 30 ಹುದ್ದೆಗಳ ಬದಲಾಗಿ 28 ಹುದ್ದೆಗಳು ಎಂದು ಓದಿಕೊಳ್ಳತಕ್ಕದ್ದು.

ಸಹಿ/- ವಿಶೇಷಾಧಿಕಾರಿಗಳು,
ಚಿತ್ರದುರ್ಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋದನಾ ಸಂಸ್ಥೆ, ಚಿತ್ರದುರ್ಗ.

DIPR/CTA/KSMCA/518/2023-24

ಪತ್ರಿಕಾ ಪ್ರಕಟಣೆ

2023-24ನೇ ಸಾಲಿನಲ್ಲಿ ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು ವಿಭಾಗದ ಲಕ್ಕವಳ್ಳಿ ವನ್ಯಜೀವಿ ವಲಯದ ಆಲ್ದೂರು ಶಾಖೆಯ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಉಪಯೋಗಿಸಿದ ರೈಲ್ವೆ ಹಳಿಗಳಿಂದ ಆನೆ ತಡೆ ಬ್ಯಾರಿಕೇಡ್ ನಿರ್ಮಾಣ ಮಾಡುವ ಒಂದು (01) ಕಾಮಗಾರಿಗೆ ಅಂದಾಜು ಮೊತ್ತ ರೂ. 87.91172 ಲಕ್ಷಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು 31-01-2024ರವರೆಗೆ ನಿಗಧಿಪಡಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಅರಣ್ಯ ಇಲಾಖೆಯಲ್ಲಿ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿರುವ ಅರ್ಹ ಪಿ.ಡಬ್ಲ್ಯೂ.ಡಿ. ಎರಡನೇ ದರ್ಜೆ ಅಥವಾ ಮೇಲ್ಪಟ್ಟ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿರುವ ಅರ್ಹ ಗುತ್ತಿಗೆದಾರರು ಭಾಗವಹಿಸಿ ತಮ್ಮ ಕನಿಷ್ಠ ಟೆಂಡರ್ ದರಗಳನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲದಲ್ಲಿ https://kppp.karnataka.gov.in ನಲ್ಲಿ ಪಡೆಯಬಹುದು.

ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು

ಕ-ರೈಡ್

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ

(ಕರ್ನಾಟಕ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)

ಬೆಂಗಳೂರು ಉಪನಗರ ರೈಲ್ವೆ ಯೋಜನೆ

ಕ-ರೈಡ್ K RIDE

CIN: U60100KA2000SGC028171

ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ರಾಜಾಜಿನಗರ, ಬೆಂಗಳೂರು-10

Email: dgm@kride.in

ಸಂ· KRIDE/HR/195/Vacancy Notification/01/2024 ದಿನಾಂಕ: 29-01-2024

ನೇಮಕಾತಿ ಅಧಿಸೂಚನೆ

ಕ-ರೈಡ್, ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರದ ಜಂಟಿ ಉದ್ಯಮವಾಗಿದ್ದು, ಬೆಂಗಳೂರು ಉಪನಗರ ರೈಲು ಯೋಜನೆ ಮತ್ತು ರೈಲು ದ್ವಿಗುಣಗೊಳಿಸುವ ಯೋಜನೆಗಳಿಗಾಗಿ ಈ ಕೆಳಗಿನ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಖಾಲಿ ಹುದ್ದೆ ಸೂಚನೆ ಸಂ.	ಹುದ್ದೆ	ನೇಮಕಾತಿ ಮಾದರಿ	ಹುದ್ದೆ ಸಂಖ್ಯೆ	ದರ್ಜೆ
01/2024	ಪ್ರಧಾನ ವ್ಯವಸ್ಥಾಪಕರು/ಎಲೆಕ್ಟ್ರಿಕಲ್	ನಿಯೋಜನೆ/ ಗುತ್ತಿಗೆ	1	E8
02/2024	ಪ್ರಧಾನ ವ್ಯವಸ್ಥಾಪಕರು/ಹಣಕಾಸು	ನಿಯೋಜನೆ	1	E8

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29-02-2024**. ವಿವರವಾದ ಅರ್ಹತಾ ಮಾನದಂಡ, ನಿಯಮಗಳು ಮತ್ತು **ಆನ್‌ಲೈನ್ ಅರ್ಜಿಗಳಿಗಾಗಿ** ದಯವಿಟ್ಟು https://kride.in/careers-in-k-ride/ ಗೆ ಭೇಟಿ ನೀಡಿ.

ಸಹಿ/-
ಪ್ರಧಾನ ವ್ಯವಸ್ಥಾಪಕರು/ಹೆಚ್.ಆರ್./ಕೆ-ರೈಡ್

DIPR/CP/3271/VCPL/23-24

ಕರ್ನಾಟಕ ಸರ್ಕಾರ

ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ:ಎ6/ಬಿಜಿಟಿ/ಟೆಂಡರ್/ಸಿಆರ್-02/2023-24 ದಿನಾಂಕ: 25.01.2024

ಇ-ಟೆಂಡರ್ ಪ್ರಕಟಣೆ

(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2023-24 ನೇ ಸಾಲಿನಲ್ಲಿ 4406-Capital Outlay on Forestry & Wildlife 01-Forestry-101-0-03-Afforestration on Forest Areas-139-MW-DDF or Other Scheme & 4406-Capital Outlay on Forestry & Wildlife - 01-Forestry-101 - Forest Conservation Development and Regeneration -0 -02-Flexi Fund - 139 MW ಲೆಕ್ಕ ಶೀರ್ಷಿಕೆ ರಡಿ ಶಿವಮೊಗ್ಗ ಅರಣ್ಯ ವಿಭಾಗದ, ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಮುಂಗಡ ಕಾಮಗಾರಿ ಮತ್ತು ಸಸಿಗಳನ್ನು ಬೆಳೆಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2023-24 ನೇ ಸಾಲಿಗೆ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿ:02.02.2024 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka. gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/155/01/23-24/1139

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆ.ವಿಜಯನಗರ ಜಿಲ್ಲೆ

ಸಂಖ್ಯೆ: EE/RWS&SD/HPT/e-tender/Tech/2023-24/1067 ದಿನಾಂಕ:25-01-2024.

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ-14/2023-24.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರು 2022-23ನೇ ಸಾಲಿನ ಜೆ.ಜೆ.ಎಂ ಯೋಜನೆಯಡಿ ಅನುಮೋದನೆಯಾದ ಹೊಸಪೇಟೆ ತಾಲ್ಲೂಕಿನ 03 ಕಾಮಗಾರಿಗಳಿಗೆ, ಹಡಗಲಿ ತಾಲ್ಲೂಕಿನ 01 ಕಾಮಗಾರಿಗೆ, ಕೆಕೆಆರ್.ಡಿ.ಬಿ ಯಫಜನೆಯಡಿ ಹೊಸಪೇಟೆ ತಾಲ್ಲೂಕಿನ 02 ಕಾಮಗಾರಿಗಳಿಗೆ ಮತ್ತು ಕೂಡ್ಲಿಗಿ ತಾಲ್ಲೂಕಿನ 01 ಕಾಮಗಾರಿಗೆ , ಎಸ್.ಡಿ.ಪಿ. ಯೋಜನೆಯಡಿ ಕೂಡ್ಲಿಗಿ ತಾಲ್ಲೂಕಿನ 01 ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ-ಪ್ರೋಕ್ಯೂರಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ **25-01-2024 ರಿಂದ 02.02.2024**ರ ಸಾಯಂಕಾಲ **05.00** ಗಂಟೆಯವರೆಗೆ ನಿಗದಿಪಡಿಸಲಾಗಿದೆ ಮತ್ತು ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ **ದಿನಾಂಕ: 03-02-2024**ರಂದು ಸಾಯಂಕಾಲ **05.05** ಗಂಟೆಗೆ ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ವೆಬ್‌ಸೈಟ್‌ನಲ್ಲಿ ಪಡೆಯಬಹುದು. **(www.kppp.karnataka.gov.in)** ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನೀಯರ್,
ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.ವಿಜಯನಗರ ಜಿಲ್ಲೆ

ಡಿಐಪಿಆರ್/ವಿಜಯನಗರ/352/ಕೆಎಸ್‌ಎಂಸಿಎ/2023-24

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ.

ಜಿಲ್ಲಾಡಳಿತ ಭವನ, ದಾವಣಗೆರೆ. ದೂರವಾಣಿ ಸಂಖ್ಯೆ:-08192-234640

E-mail Id:- deo.davanagere@gmail.com

ನಂ. ರಾಚು/ಸಿಆರ್/120/2023-24 ದಿನಾಂಕ: 23.01.2024

ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಮುಂಬರುವ 2024 ರ ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣೆ ಕಾರ್ಯಗಳಿಗೆ ಅಗತ್ಯವಿರುವ ವಾಹನಗಳನ್ನು ಮಾಸಿಕ ಬಾಡಿಗೆ ರೂಪದಲ್ಲಿ ಪಡೆಯುವ ಕುರಿತು ದ್ವಿ-ಲಕೋಟೆ ಪದ್ಧತಿಯಲ್ಲಿ (Two Covers System) ಇ-ಪ್ರಕ್ಯೂರ್‌ಮೆಂಟ್ ಮೂಲಕ ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

ವಿವರ:- 2024 ರ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣೆ ಕಾರ್ಯಗಳಿಗೆ ಅಗತ್ಯವಿರುವ ವಾಹನಗಳನ್ನು ಮಾಸಿಕ ಬಾಡಿಗೆ ರೂಪದಲ್ಲಿ ಪಡೆಯುವ ಕುರಿತು. ಇಂಡೆಂಟ್ ನಂ:RD/2023-24/SE0118

ಟೆಂಡರ್‌ಗೆ ಇಟ್ಟ ಮೊತ್ತ:- ರೂ. 50.00 ಲಕ್ಷ. ಇ.ಎಂ.ಡಿ. ಮೊತ್ತ:- 1,25,000/-

ಇ-ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:- 07.02.2024

ತಾಂತ್ರಿಕ ಬಿಡ್ ತೆರೆಯುವ ದಿನಾಂಕ:- 09.02.2024

ಆರ್ಥಿಕ ಬಿಡ್ ತೆರೆಯುವ ದಿನಾಂಕ:- 13.02.2024

ಸದರಿ ಟೆಂಡರ್ ವಿವರ ಹಾಗೂ ಇತರೆ ಷರತ್ತುಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಚುನಾವಣೆಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಯನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು. ದಿನ ಪತ್ರಿಕೆ ಅಥವಾ ಯಾವುದೇ ಜಾಹೀರಾತು ಪ್ರಕಟಣೆ ನೀಡಲಾಗುವುದಿಲ್ಲ.

ವಾಸಾಇ/ದಾವಣಗೆರೆ/532/ಕೆಎಸ್‌ಎಂಸಿಎ/2023-24

ಸಹಿ/- ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ-591304, ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2023-24/3097 ದಿನಾಂಕ:23.01.2024

ಅಲ್ಪಾವಧಿ ಟೆಂಡರ ಅಧಿಸೂವನೆ

(ಇ-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್-2 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kppp.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ1)ರೂ.369.60ಲಕ್ಷ 2)ರೂ.396.03ಲಕ್ಷ 3)ರೂ.474.48ಲಕ್ಷ 4)ರೂ.494.42 ಲಕ್ಷ 5)ರೂ.372.78ಲಕ್ಷ 6)ರೂ.385.61 ಲಕ್ಷ 7)ರೂ.479.34 ಲಕ್ಷ 8)ರೂ.455.58 ಲಕ್ಷ 9)ರೂ 479.87ಲಕ್ಷ 10) ರೂ 499.42 ಲಕ್ಷ 11)ರೂ 469.40 ಲಕ್ಷ 12)ರೂ 460.16 ಲಕ್ಷ 13) ರೂ 326.31 ಲಕ್ಷ 14)ರೂ 499.71ಲಕ್ಷ 15) ರೂ 456.34 ಲಕ್ಷ 16) ರೂ 490.62 ಲಕ್ಷ 17) ರೂ 362.47 ಲಕ್ಷ 18) ರೂ 485.74 ಲಕ್ಷ 19) ರೂ 486.03 ಲಕ್ಷ 20) ರೂ 456.75 ಲಕ್ಷ.

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:30.01.2024 ರ 10.30 ಬೆಳಿಗ್ಗೆ ರಿಂದ 06.02.2024 ರ ಸಾಯಂಕಾಲ 4.00 ಗಂಟೆ ವರಗೆ, 2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:05.02.2024 ರ ಸಾಯಂಕಾಲ 4.00 ವರೆಗೆ, 3:ಫ್ರಿ ಬಿಡ್ ಮಿಟಿಂಗ್ ದಿನಾಂಕ: (ಕಾ.ನಿ.ಇಂ. ಕನಿನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 05.02.2024 ರ 11.00 ಬೆಳಿಗ್ಗೆ, 4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:30.01.2024 ರ 10.30 ಬೆಳಿಗ್ಗೆ ರಿಂದ 06.02. 2024 ರ ಸಾಯಂಕಾಲ 4.00 ಗಂಟೆ ವರಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ): 08.02.2024 ರ ಬೆಳಿಗ್ಗೆ 11.00 ಗಂಟೆಗೆ. 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:12.02.2024 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ),7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ:09.02.2024 ಬೆಳ್ಳಿಗ್ಗೆ 11.00 ಗಂಟೆಗೆ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp. karnataka.gov.in/kpp-protal/index.seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-ಎಸ್.ಜಿ. ಶ್ರೀನಾಥ್, ಕಾರ್ಯನಿರ್ವಾಹಕ ಇಂಜಿನೀಯರರು, ಎಚ್.ಬಿ.ಸಿ ವಿಭಾಗ, ಅಥಣಿ

DIPR/BGM/RO-NO-1009/KSMCA/2023-24

ನಗರಸಭಾ ಕಾರ್ಯಾಲಯ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ-573201.

ದೂ.ಸಂ: 08172-268276, 233702 Email: commn_hassan@yahoo.com

ಸಂ:ಪೌಆ/ಹಾನಸ/ಇ.ವಿ/ಟೆಂಡರ್ ಶಾಖೆ/10/2023-24 ದಿನಾಂಕ:29-01-2024

ಟೆಂಡರ್ ಪ್ರಕಟಣೆ: ಕೆ.ಪಿ.ಪಿ ಪೋಟ್ರಲ್ ಮೂಲಕ

ಹಾಸನ ನಗರಸಭಾ ವ್ಯಾಪ್ತಿಯಲ್ಲಿ 2023-24ನೇ ಸಾಲಿನ ಎಸ್.ಎಫ್.ಸಿ.ವಿಶೇಷ ಅನುದಾನದಡಿಯಲ್ಲಿ ಪ್ಯಾಕೇಜ್ ಕಾಮಗಾರಿಯು ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಆಧ್ಯಾದೇಶ 2000ದ ಅನ್ವಯ ಐಟಂವಾರು ದರಗಳ ಟೆಂಡರನ್ನು ಕೆ.ಪಿ.ಪಿ. ಪೋರ್ಟಲ್ (https://kppp.karnataka.gov.in) ಮೂಲಕ ಕರೆಯಲಾಗಿದ್ದು, ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:12-02-2024ರ ಸಂಜೆ 5.30 ಗಂಟೆಯೊಳಗೆ ಕೆಲಸಗಳಿಗೆ ಅನ್ವಯಿಸುವ ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ನಗರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ: 08172-268276. ಕಾಮಗಾರಿಯ ವಿವರ ಈ ಕೆಳಕಂಡಂತಿದೆ. 2023-24ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನ ಕ್ರ.ಸಂ.1)ಕಾಮಗಾರಿ ಹೆಸರು:ಹಾಸನ ನಗರದ ವಾರ್ಡ್ ನಂ:1 ದೇವಮ್ಮ ಬಡಾವಣೆ 6ನೇ ಅಡ್ಡರಸ್ತೆಯಲ್ಲಿ ಮಳೆ ನೀರು ಚರಂಡಿ ನಿರ್ಮಿಸುವುದು ಹಾಗೂ ಇತರೆ ಅಡ್ಡರಸ್ತೆಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ಹಾಸನ ನಗರದ ವಾರ್ಡ್ ನಂ:9ರ ಎಂ.ಜಿ.ರಸ್ತೆ ಕುಮಾರ ಸ್ವಾಮಿ ರವರ ಮುಂಬಾಗ ಮಳೆ ನೀರು ಚರಂಡಿ ನಿರ್ಮಿಸುವುದು ಹಾಗೂ ಇತರೆ ಅಡ್ಡರಸ್ತೆಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ಹಾಸನ ನಗರದ ವಾರ್ಡ್ ನಂ:16ರ ಶಾಂತಿನಗರ ದಿ::ಆರ್.ಆರ್.ನಾಗರಾಜು ರವರ ಮನೆ ರಸ್ತೆಯಲ್ಲಿ ಮಳೆ ನೀರು ಚರಂಡಿ ನಿರ್ಮಿಸುವುದು ಹಾಗೂ ಅಡ್ಡ ರಸ್ತೆಗಳ ಅಭಿವೃದ್ಧಿ ಕಾಮಗಾರಿ, ಹಾಸನ ನಗರದ ವಾರ್ಡ್ ನಂ:22ರ ಮೆಹಬೂಬ್ ನಗರ ಚಿಲ್ಲರೆ ಅಂಗಡಿಯಿಂದ ರಫೀಕ್ ಮನೆಯಿಂದ ಗೌಸ್ ಮನೆವರೆಗೂ ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತು ಹಾಸನ ನಗರದ ವಾರ್ಡ್ ನಂ:28ರ ಸಲೀಂ ನಗರ ಅಡ್ಡರಸ್ತೆಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. ಹಾಸನ ನಗರದ ವಾರ್ಡ್ ನಂ:10ರ ವಿದ್ಯುತ್ ನಗರ, ಪಾರ್ಕ್ ಒಳಬಾಗ ಇಂಟರ್‌ಲಾಕ್ ಅಳವಡಿಸುವುದು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿ. (Indent no : DMA/2023-24/OW/WORK_INDENT12785) ಅಂದಾಜು ಮೊತ್ತ(ರೂ. ಲಕ್ಷಗಳಲ್ಲಿ) 69.71 ಕಾಲಾವಧಿ: 6 ತಿಂಗಳು ಮಳೆಗಾಲ ಹೊರತುಪಡಿಸಿ ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-3 ಸೂಚನೆ:- ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವಜನಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನ ಹೊರತುಪಡಿಸಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.

ಸಹಿ/-ಪೌರಾಯುಕ್ತರು, ನಗರಸಭೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/694/ಕೆಎಸ್‌ಎಂಸಿಎ/699/2023-24

ಲೋಕೋಪಯೋಗಿ ಇಲಾಖೆ. ತುಮಕೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ-1:ಟೆಂಡರ್21/2023-24 ದಿನಾಂಕ: 24.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.21/2023-24 ದಿನಾಂಕ: 24.01.2024

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 21/2023-24:ದಿನಾಂಕ 24-01-2024 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054-04-337-0-01-154 ಜಿಲ್ಲಾ ಮತ್ತು ಇತರೆ ರಸ್ತೆಗಳು ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 06 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.82.99 ಲಕ್ಷಗಳು, ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ: 38.47 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ. 165976/- ಮತ್ತು ಕನಿಷ್ಠ ಮೊತ್ತ ರೂ.76941/-, ಅರ್ಹ ಗುತ್ತಿಗೆದಾರರು : 3ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 03 ರಿಂದ 06 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 08-02-2024 ರ 17-30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 25-01-2024 ರಿಂದ 09-02-2024 ರ 17-00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 09-02-2024 ರ ಸಂಜೆ 17-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 12-02-2024 ರ ಬೆಳಿಗ್ಗೆ 10-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 13-02-2024 ರ ಬೆಳಿಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/474/KSMCA/2023-24

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

(CIN-UO4010KA2002SGC030438)

ಸಂಖ್ಯೆ: ಅಇಂ(ವಿ)/ಬೆಂದವೃ/ಉಲೆನಿ/ಹಿಆಸ/2023-24

ಅಂತಿಮ ಮರುಕರೆ ಸೂಚನೆ

ಶ್ರೀ ಹನುಮಂತ.ಕೆ, ಸಹಾಯಕ ಆದ ನೀವು ದಿನಾಂಕ: 31.10.2022 ರಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಗು.ವಿ.ಸ.ಕಂ.ನಿ., ಕಲಬುರಗಿ ಇಂದ ಎಸ್-4 ಉಪವಿಭಾಗಕ್ಕೆ ವರ್ಗಾವಣೆ ಹೊಂದಿ, ವರದಿ ಮಾಡಿಕೊಂಡಿರುವುದು ಸರಿಯಷ್ಟೆ, ಉಪವಿಭಾಗದಲ್ಲಿ ನೀವು ಹೆಚ್.ಟಿ ಸ್ಥಾವರಗಳ ಬಿಲ್ಲಿಂಗ್ ಹಾಗೂ ಆಂತರಿಕ ಪರಿಶೋಧನಾ ವರದಿಗಳ ವಿಷಯ ನಿರ್ವಾಹಕರಾಗಿ ಕಾರ್ಯನಿರ್ವಹಿಸಲು ಸೂಚಿಸಲಾಗಿರುತ್ತದೆ. ಆದರೆ, ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ದಿನಾಂಕ: 04.10.2023 ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಸಹಾಯಕ ಲೆಕ್ಕಾಧಿಕಾರಿಯವರಿಗೆ ಮೊಬೈಲ್ ಮೂಲಕ ಕಛೇರಿಗೆ ಬರಲು ಸಾಧ್ಯವಾಗುವುದಿಲ್ಲ ಬೇಕಾದಲ್ಲಿ ಈ ಬಗ್ಗೆ ಮೇಲಾಧಿಕಾರಿಗಳಿಗೆ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಲು ತಿಳಿಸಿರುತ್ತೀರ. ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎಸ್-4 ಉಪವಿಭಾಗ ರವರು ಕಾರಣ ಕೇಳಿ ನೋಟಿಸ್ ಜಾರಿಗೊಳಿಸಿದ್ದರೂ ಸಹಾ ನಿಮ್ಮಿಂದ ಯಾವುದೇ ಸಮಜಾಯಿಷಿ/ಹೇಳಿಕೆಯು ಸ್ವೀಕೃತಗೊಂಡಿರುವುದಿಲ್ಲ. ಈ ಹಿಂದೆಯೂ ಹಲವು ಬಾರಿ ಕಛೇರಿಗೆ ಗೈರು ಹಾಜರಾಗಿರುವ ಕಾರಣ ನಿಮಗೆ ಮೇಲಾಧಿಕಾರಿಗಳು ಮೌಖಿಕವಾಗಿ ಎಚ್ಚರಿಕೆ ನೀಡಿದ್ದರೂ ಪುನಃ ರಜೆಗೆ ಕಾರಣ ಮತ್ತು ಅರ್ಜಿಯನ್ನು ಸಲ್ಲಿಸದೇ ಪೂರ್ವಾನುಮತಿಯನ್ನು ಸಹ ಪಡೆದಿರುವುದಿಲ್ಲ. ಅಲ್ಲದೇ, ಈ ಹಿಂದೆಯೂ ನೀವು ಅನಾರೋಗ್ಯದ ಕಾರಣ ತಿಳಿಸಿ ಅನಧಿಕೃತ ಗೈರು ಹಾಜರಾಗಿ ಈ ರೀತಿ ತಪ್ಪು ಮಾಡುವುದಿಲ್ಲವೆಂದು ಆಶ್ವಾಸನೆ ನೀಡಿ ಕೆಲಸಕ್ಕೆ ವರದಿ ಮಾಡಿಕೊಂಡು, ಕೆಲ ದಿನಗಳ ನಂತರ ನಿಮ್ಮ ಹಿಂದಿನ ಪ್ರವೃತ್ತಿಯನ್ನೇ ಮುಂದುವರೆಸಿಕೊಂಡು ಬಂದು ಪದೇ ಪದೇ ಕೆಲಸಕ್ಕೆ ಗೈರುಹಾಜರಾಗುವುದನ್ನು ಪುನರವರ್ತಿಸಿರುತ್ತೀರ. ಇದರಿಂದ, ಕಛೇರಿಯ ವಾತಾವರಣವು ಪ್ರಕ್ಷುಬ್ಧಗೊಂಡಿರುವುದಲ್ಲದೇ, ನಿಮಗೆ ವಹಿಸಿರುವ ಕೆಲಸಗಳು ಅಪೂರ್ಣವಾಗಿದ್ದು, ಅವುಗಳನ್ನು ಇತರರ ಕೈಯಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ.

ನೀವು ಕೋರಮಂಗಲ ವಿಭಾಗದ ಎಸ್-4 ಉಪವಿಭಾಗದ ಕಛೇರಿಯಲ್ಲಿ ಸಹಾಯಕ ಆಗಿ ಕಾರ್ಯನಿರ್ವಹಿಸುತ್ತಿದ್ದು, ನಿಮ್ಮ ಗೈರು ಹಾಜರಾತಿಯಿಂದ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ತೀವ್ರ ಅಡಚಣೆಯುಂಟಾಗಿರುತ್ತದೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೋರಮಂಗಲ ವಿಭಾಗ ರವರು ಪತ್ರ **ಸಂಖ್ಯೆ: ಕಾನಿಇಂ(ವಿ)/ಕೋವಿ/ಲೆ/ಸಲೆ/4214-15 ದಿನಾಂಕ: 02.11.2023** ರಲ್ಲಿ ವರದಿ ಸಲ್ಲಿಸಿ, ನಿಮ್ಮ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕೋರಿರುತ್ತಾರೆ.

ಆದ್ದರಿಂದ, ನಿಮ್ಮ ಅನಧಿಕೃತ ಗೈರು ಹಾಜರಾತಿಗೆ ಸೂಕ್ತ ಸಮಜಾಯಿಷಿಯೊಂದಿಗೆ ಈ ಕೆಳ ಸಹಿದಾರರ ಮುಂದೆ ಖುದ್ದಾಗಿ ವಿಚಾರಣೆಗೆ ಜಾಹಿರಾತು ಪ್ರಕಟಣೆಗೊಂಡ ದಿನಾಂಕದಿಂದ 10 ದಿನಗಳ ಒಳಗಾಗಿ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಮೇಲ್ಕಾಣಿಸಿದ ಆಪಾದನೆಗೆ ನಿಮ್ಮಿಂದ ಯಾವುದೇ ಸಮಜಾಯಿಷಿ ಇರುವುದಿಲ್ಲವೆಂದು ಭಾವಿಸಿ ಕವಿಪ್ರನಿನಿ ಸಿ.ಡಿ.ಸಿ ಮತ್ತು ಎ 1987 ರ ನಿಯಮಾವಳಿಗಳ ಪ್ರಕಾರ ಮತ್ತೊಮ್ಮೆ ಯಾವುದೇ ಸೂಚನೆ ನೀಡದೇ ಶಿಸ್ತು ಕ್ರಮ ಜರುಗಿಸಲಾಗುವುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಅನ್ನು, ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/-
ಡಿ. ತಿಮ್ಮೇಗೌಡ
ಅಧೀಕ್ಷಕ ಇಂಜಿನಿಯರ್(ವಿ) (ಕಾ ಮತ್ತು ಪಾ), ಬೆ.ವಿ.ಕಂ, ಬೆಂಗಳೂರು ದಕ್ಷಿಣ ವೃತ್ತ.

❦ ಸುಭಾಷಿತ ❦

ಒಳ್ಳೆಯವರು ಬೇಕಾದಷ್ಟು ಮಂದಿ ಇರಬಹುದು. ಆದರೆ, ನಿಖರವಾದ ನಿಲುವು ಮತ್ತು ಶಿಸ್ತುಬದ್ಧವಾಗಿ ಇರುವವರ ಸಂಖ್ಯೆ ಅತ್ಯಂತ ಕಡಿಮೆ.

–ಆ್ಯಂಟನ್ ಚೆಖೋವ್

ಪಾಳಯ ಬದಲಿಸಿದ ನಿತೀಶ್ ಕುಮಾರ್ ಮುಂಗಾಣ್ಕೆ ಇಲ್ಲದ 'ಇಂಡಿಯಾ' ಕೂಟ

ಬಿಹಾರದಲ್ಲಿ ನಿತೀಶ್ ಕುಮಾರ್ ಮತ್ತು ಅವರ ಜೆಡಿಯು ಪಕ್ಷವು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್‌ಡಿಎ) ತೆಕ್ಕೆಗೆ ಮರಳಿರುವುದು ವಿರೋಧ ಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ'ಕ್ಕೆ ದೊಡ್ಡ ಏಟು. ವಾಸ್ತವದಲ್ಲಿ 'ಇಂಡಿಯಾ' ಮೈತ್ರಿಕೂಟವು ಸ್ಪಷ್ಟ ರೂಪಪಡೆಯುವಂತೆ ಪಡೆದುಕೊಳ್ಳಲು ಇನ್ನೂ ಹೆಣಗಾಡುತ್ತಲೇ ಇದೆ. ಹೆಸರಿಗೆ ಈ ಮೈತ್ರಿಕೂಟ ಇದೆ ಹಾಗೂ ತನ್ನ ಉದ್ದೇಶಕ್ಕೆ ಸಂಬಂಧಿಸಿದಂತೆ ಒಂದಿಷ್ಟು ಹೇಳಿಕೆಗಳನ್ನು ನೀಡಿದೆ ಎಂಬುದನ್ನು ಹೊರತುಪಡಿಸಿದರೆ 'ಇಂಡಿಯಾ' ಮೈತ್ರಿಕೂಟವು ಪರಿಪೂರ್ಣವಾಗಿ ಅಸ್ತಿತ್ವಕ್ಕೆ ಬಂದಿದ್ದೇ ಇಲ್ಲ. ತನ್ನ ಉದ್ದೇಶ ಹಾಗೂ ಗುರಿಯನ್ನು ಕಾರ್ಯರೂಪಕ್ಕೆ ತರುವುದು ಹೇಗೆ ಎಂಬ ಬಗ್ಗೆ ಗಂಭೀರವಾದ ಮಾತುಕತೆಗಳನ್ನು ಈ ಮೈತ್ರಿಕೂಟವು ಇನ್ನೂ ಆರಂಭಿಸಬೇಕಿತ್ತು. ನಿತೀಶ್ ಕುಮಾರ್ ಅವರು ಈ ಮೈತ್ರಿಕೂಟದ ಪಾಲಿಗೆ ಒಂದು ಆಧಾರಸ್ತಂಭದಂತೆ ಇದ್ದರು. ಹಲವು ಪಕ್ಷಗಳನ್ನು ಒಂದು ವೇದಿಕೆಗೆ ಕರೆತರುವ ಹೊಣೆಯನ್ನು ಅವರು ವಹಿಸಿಕೊಂಡಿದ್ದರು. ಅವರೇ ಈಗ 'ಇಂಡಿಯಾ' ಮೈತ್ರಿಕೂಟದ ವಿರೋಧಿ ಪಾಳಯವನ್ನು ಸೇರಿರುವ ಕಾರಣ, ಮೈತ್ರಿಕೂಟವು ದುರ್ಬಲಗೊಂಡಂತೆ ಆಗಿದೆ. ನಿತೀಶ್ ಅವರಿಗೆ ಎನ್‌ಡಿಎ ಮೈತ್ರಿಕೂಟದ ಕಾರ್ಯವಿಧಾನ ಏನಿರುತ್ತದೆ ಎಂಬುದರ ಅರಿವು ಇದೆ. ಅಲ್ಲದೆ, ಅವರು ಅನುಭವಿಯೂ ಹೌದು, ಸಂಪನ್ಮೂಲ ಹೊಂದಿರುವ ನಾಯಕ ಕೂಡ ಹೌದು. ಬಿಹಾರವು ದೊಡ್ಡ ರಾಜ್ಯ, ಅದು 40 ಲೋಕಸಭಾ ಸ್ಥಾನಗಳನ್ನು ಹೊಂದಿದೆ. ಇಲ್ಲಿ ದೊಡ್ಡ ಸಂಖ್ಯೆಯಲ್ಲಿ ಸ್ಥಾನಗಳನ್ನು ಗೆದ್ದುಕೊಳ್ಳುವುದು ಯಾವುದೇ ಮೈತ್ರಿಕೂಟಕ್ಕೆ ಮಹತ್ವದ ವಿಚಾರವೇ ಆಗಿರುತ್ತದೆ.

ರಾಜಕಾರಣದಲ್ಲಿ ಶಾಶ್ವತ ಶತ್ರುಗಳು ಹಾಗೂ ಶಾಶ್ವತ ಮಿತ್ರರು ಇಲ್ಲ ಎಂಬ ಮಾತು ನಿಜವಾದರೂ, ನಿತೀಶ್ ಅವರ ರಾಜಕಾರಣ ತೀರಾ ಅತಿರೇಕದ ಒಂದು ಮಾದರಿ

ತಾನು 'ಇಂಡಿಯಾ' ಮೈತ್ರಿಕೂಟವನ್ನು ತೊರೆಯುವಂತಹ ಪರಿಸ್ಥಿತಿ ಸೃಷ್ಟಿಯಾದುದಕ್ಕೆ ಕಾಂಗ್ರೆಸ್ ಕಾರಣ ಎಂದು ಜೆಡಿಯು ಆರೋಪಿಸಿದೆ. ಕಾಲಹರಣ ಮಾಡಿದ, ಅದರಲ್ಲೂ ಮುಖ್ಯವಾಗಿ ಈಚೆಗೆ ನಡೆದ ವಿಧಾನಸಭಾ ಚುನಾವಣೆಗಳವರೆಗೆ ಸುಮ್ಮನೆ ಕುಳಿತಿದ್ದ ದೋಷವನ್ನು ಕಾಂಗ್ರೆಸ್ ಹೊರಬೇಕು ಎಂಬುದು ನಿಜ. ಆ ಚುನಾವಣೆ ನಡೆದ ನಂತರವೂ ಮೈತ್ರಿಕೂಟದ ನಾಯಕತ್ವದ ರೂಪುರೇಷೆಗಳನ್ನು ಅಂತಿಮಗೊಳಿಸುವ ವಿಚಾರದಲ್ಲಿ ಹಾಗೂ ಪಾಲುದಾರ ಪಕ್ಷಗಳ ನಡುವೆ ಸೀಟು ಹಂಚಿಕೆಯ ವಿಚಾರದಲ್ಲಿ ಹೆಚ್ಚಿನ ಪ್ರಗತಿಯೇನೂ ಆಗಿರಲಿಲ್ಲ. 'ಇಂಡಿಯಾ' ಮೈತ್ರಿಕೂಟದ ಸಂಚಾಲಕ ಆಗುವ ಬಯಕೆಯನ್ನು ನಿತೀಶ್ ಹೊಂದಿದ್ದರು. ಆ ವಿಚಾರದಲ್ಲಿ ಅನಿಶ್ಚಿತತೆ ಮನೆ ಮಾಡಿದ್ದಾಗ, ನಿತೀಶ್ ಅವರು ಇನ್ನೊಂದು ಪಾಳಯದತ್ತ ಕಣ್ಣು ಹಾಯಿಸಲು ಆರಂಭಿಸಿದ್ದಿರಬಹುದು. ರಾಮ ಮಂದಿರದ ಉದ್ಘಾಟನೆ ಕಾರ್ಯಕ್ರಮ ಅಯೋಧ್ಯೆಯಲ್ಲಿ ನಡೆದಿದ್ದು ಅದರ ಪರಿಣಾಮ ತಮ್ಮ ಮತ ಶೇಖರಣೆ ಸಹ ನಿರ್ಧರಿಸಿದ್ದಿರಬಹುದು. ಪದೇ ಪದೇ ನಿಲುವು ಬದಲಾಯಿಸುವುದಕ್ಕೆ ಹಾಗೂ ತತ್ತ್ವಗಳಿಗೆ ಹೆಚ್ಚಿನ ಮಹತ್ವ ನೀಡದೇ ಇರುವುದಕ್ಕೆ ನಿತೀಶ್ ಮೊದಲಿನಿಂದಲೂ ಹೆಸರಾದವರು. ಮೈತ್ರಿಕೂಟಗಳನ್ನು ನಿತೀಶ್ ಅವರಷ್ಟು ಸಲೀಸಾಗಿ ಬದಲಾಯಿಸಿದ ಇನ್ನೊಬ್ಬ ಹಿರಿಯ ರಾಜಕಾರಣಿ ದೇಶದ ರಾಜಕೀಯದಲ್ಲಿ ಇಲ್ಲ. ಬಿಜೆಪಿಯು ಅವಕಾಶವನ್ನು ಬಳಸಿಕೊಂಡಿತು. ಬಿಹಾರದ ಕರ್ಪೂರಿ ಠಾಕೂರ್ ಅವರಿಗೆ ಭಾರತರತ್ನ ಪುರಸ್ಕಾರ ಘೋಷಿಸಿತು. ಹಲವು ರಾಜಕಾರಣಿಗಳ ಭವಿಷ್ಯದ ಬಗ್ಗೆ ಕಳವಳಕೊಳ್ಳದೆ, ವರ್ತಮಾನದ ಆಗತ್ಯಗಳಿಗೆ ಸ್ಪಂದಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ತಮ್ಮ ಎದುರು ಇರುವ ಅವಕಾಶವನ್ನು ಬಳಸಿಕೊಳ್ಳಲು ಅವರು ಹಿಂದೆ ಮುಂದೆ ನೋಡುವುದಿಲ್ಲ. ಅವಕಾಶವಾದಿ ರಾಜಕಾರಣವನ್ನು ಬಳಸಿಕೊಳ್ಳುವ ಅವರ ಬಹಳ ಚೆನ್ನಾಗಿ ಒಗ್ಗಿಸಿಕೊಂಡಿದ್ದಾರೆ. ರಾಜಕಾರಣದಲ್ಲಿ ಶಾಶ್ವತ ಶತ್ರುಗಳು ಹಾಗೂ ಶಾಶ್ವತ ಮಿತ್ರರು ಇಲ್ಲ ಎಂಬ ಮಾತು ನಿಜವಾದರೂ, ನಿತೀಶ್ ಅವರ ರಾಜಕಾರಣ ತೀರಾ ಅತಿರೇಕದ ಒಂದು ಮಾದರಿ. ಆದರೆ ಅದು ಇತರ ಹಲವು ವಿಚಾರಗಳಲ್ಲಿ ಅವರ ಹೆಸರಿಗೆ ಕಳಂಕ ತಂದಿದೆ.

'ಇಂಡಿಯಾ' ಮೈತ್ರಿಕೂಟವು ಇನ್ನೂ ಹಲವೆಡೆ ಅನಿಶ್ಚಿತತೆಯನ್ನು ಎದುರಿಸುತ್ತಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಜೊತೆ ಸೀಟು ಹಂಚಿಕೆ ಇಲ್ಲ ಎಂದು ಹೇಳಿದ್ದಾರೆ. ಆದರೆ ಅವರ ಈ ಮಾತೇ ಅಂತಿಮ ಆಗಲಿಕ್ಕಿಲ್ಲ. ಪಂಜಾಬ್‌ನಲ್ಲಿ ಕಾಂಗ್ರೆಸ್ ಮತ್ತು ಎಎಪಿ ನಡುವೆ ಸೀಟು ಹಂಚಿಕೆ ಇರುವುದಿಲ್ಲ ಎಂದು ಅಲ್ಲಿನ ಮುಖ್ಯಮಂತ್ರಿ ಭಗವಂತ್ ಮಾನ್ ಹೇಳಿದ್ದಾರೆ. ಇತರ ಕೆಲವು ರಾಜ್ಯಗಳಲ್ಲಿಯೂ 'ಇಂಡಿಯಾ' ಕೂಟವು ಅನಿಶ್ಚಿತತೆಯನ್ನು ಎದುರಿಸುತ್ತಿದೆ. ಚುನಾವಣೆ ಎದುರಾಗುವುದಕ್ಕೆ ಇನ್ನು ಕೆಲವೇ ವಾರಗಳು ಬಾಕಿ ಇವೆ. ಈ ಸಂದರ್ಭದಲ್ಲಿ ಮೈತ್ರಿಕೂಟವು ಮುಂಗಾಣ್ಕೆ ಇಲ್ಲದೆ ಬಿಕ್ಕಟ್ಟಿಗೆ ಸಿಲುಕಿದೆ.

ನನ್ನ ಕಲ್ಪನೆಯ ರಾಮನಿಗೆ ಹುಟ್ಟಿಲ್ಲ, ಸಾವಿಲ್ಲ, ಅವನು ಶಾಶ್ವತ ಎಂದಿದ್ದರು ಬಾಪೂ

ಬೇಕೆನ್ನ ಹೃದಯಕ್ಕೆ ಗಾಂಧಿ ರಾಮ!



ಅನುಸಂಧಾನ

ರವೀಂದ್ರ ಭಟ್ಟ

ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆಯಾಗಿದೆ. ದೇಶದಾದ್ಯಂತ ರಾಮನ ಸ್ಮರಣೆ ಸಮೂಹ ಸನ್ನಿಭಾಗಿಲ್ಲಿದೆ. ದಶದಿಕ್ಕುಗಳಲ್ಲಿಯೂ 'ಜೈಶ್ರೀರಾಮ್' ಘೋಷಣೆ ಮೊಳಗುತ್ತಿದೆ. ರಾಮನನ್ನು ಒಪ್ಪದವರು, ಒಪ್ಪದವರೂ ಘೋಷಣೆ ಕೂಗುತ್ತಿದ್ದಾರೆ. ಅಕ್ಷೇಪದ ಧ್ವನಿಗೆ 'ದೇಶದ್ರೋಹ'ದ ಪಟ್ಟ ಕಟ್ಟುವ ಕೆಲಸ ನಡೆದಿದೆ. ದೇವರು, ಧರ್ಮ ಎನ್ನುವುದು ವೈಯಕ್ತಿಕ ನಂಬಿಕೆಯ ವಿಷಯ ಎಂದರೂ ಅದನ್ನು ಕೇಳುವ ಸ್ಥಿತಿ ಇಲ್ಲ. ಅದಕ್ಕಾಗಿಯೇ, ಸಮಾವಾದಿ ಹಿನ್ನೆಲೆಯ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ 'ಜೈಶ್ರೀರಾಮ್' ಘೋಷಣೆ ಕೂಗಿದ್ದಾರೆ. ಆ ಮಟ್ಟಿಗೆ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಎಲ್ಲರ ಹೃದಯದಲ್ಲಿಯೂ ಆಗಿದೆ.

ಉತ್ತರ ಕನ್ನಡ ಲೋಕಸಭಾ ಸದಸ್ಯ ಅನಂತಕುಮಾರ ಹೆಗಡೆ 'ಇನ್ನೊಂದು ಹೆಜ್ಜೆ ಮುಂದೆ ಹೋಗಿ, 'ಭಟ್ಕಳದ ಚಿನ್ನದಪಳ್ಳಿ ಮಸೀದಿ, ಶಿರಸಿಯ ಸಿ.ಪಿ. ಬಜಾರ್ ನಲ್ಲಿರುವ ಮಸೀದಿ, ಶ್ರೀರಂಗಪಟ್ಟಣದಲ್ಲಿರುವ ದೊಡ್ಡ ಮಸೀದಿ ಸೇರಿದಂತೆ ಹಿಂದೂ ಧಾರ್ಮಿಕ ಮಂದಿರಗಳನ್ನು ಅಪಮಾನಗೊಳಿಸಿ ನಿರ್ಮಿಸಿರುವ ಎಲ್ಲ ಸಂಕೇತಗಳನ್ನು ಧ್ವಂಸಗೊಳಿಸುತ್ತೇವೆ' ಎಂದು ಹೇಳಿದ್ದಾರೆ. ಐದು ಸಾವಿರ ವರ್ಷಗಳ ನೆಲವನ್ನು ತೀಲಿಸಿಕೊಳ್ಳುವುದಾಗಿ ಹೂಂಕರಿಸಿದ್ದಾರೆ. ಹಿಂದೂ ರಾಷ್ಟ್ರ ಸ್ಥಾಪನೆಗೆ ನರೇಂದ್ರ ಮೋದಿ ಅವರನ್ನು ಮತ್ತೆ ಗೆಲ್ಲಿಸುವಂತೆ ಮನವಿಯನ್ನೂ ಮಾಡಿದ್ದಾರೆ. 'ಇನ್ನೊಂದೆಡೆ, ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರು 'ಅಯೋಧ್ಯೆಯಲ್ಲಿ ಸ್ಥಾಪನೆಯಾಗಿರುವುದು ಬಿಜೆಪಿಯ ರಾಮ. ನಾವು ಗಾಂಧಿ ರಾಮನನ್ನು ಬೆಂಬಲಿಸುತ್ತೇವೆ' ಎಂದು ಹೇಳಿದ್ದಾರೆ. ಹಾಗಾದರೆ ಗಾಂಧಿ ರಾಮ ಯಾರು? ಹೇಗಿದ್ದ?

1929ರಲ್ಲಿಯೇ ಮಹಾತ್ಮ ಗಾಂಧಿ ಅವರು 'ಹಿಂದ್ ಸ್ವರಾಜ್'ನಲ್ಲಿ ಬರೆದ ಲೇಖನದಲ್ಲಿ ತಮ್ಮ ಕಲ್ಪನೆಯ ರಾಮ ಮತ್ತು ರಾಮರಾಜ್ಯದ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. 'ನನ್ನ ಕಲ್ಪನೆಯ ರಾಮ ಈ ಭೂಮಿಯ ಮೇಲೆ ಬದುಕಿದ್ದ ಅಥವಾ ಇಲ್ಲ ಎನ್ನುವುದು ಮುಖ್ಯವಲ್ಲ. ನನಗೆ ರಾಮ ಮತ್ತು ರಹೀಮ ಇಬ್ಬರೂ ಪೂಜ್ಯರು. ರಾಮರಾಜ್ಯ ಎಂದರೆ ಹಿಂದೂರಾಜ್ಯ ಅಲ್ಲ. ಅದೊಂದು ಪವಿತ್ರ ರಾಜ್ಯ. ಸತ್ಯ ಮತ್ತು ಸದಾಚಾರವೇ ಅಲ್ಲಿ ದೇವರು. ಇದನ್ನಲ್ಲದೆ ಬೇರೆ ಯಾವುದೇ ದೇವರನ್ನು ನಾನು ಒಪ್ಪುವುದಿಲ್ಲ' ಎಂದು ಹೇಳಿದ್ದರು.

1946ರ ಏಪ್ರಿಲ್ 4ರಂದು ದೆಹಲಿಯ ಪ್ರಾರ್ಥನಾ ಸಭೆಯಲ್ಲಿ ಮಾತನಾಡಿದ ಅವರು, 'ನನ್ನ ರಾಮ, ನನ್ನ ಪ್ರಾರ್ಥನೆಯ ರಾಮ ಅಯೋಧ್ಯೆಯ ರಾಜ ದಶರಥನ ಮಗನಲ್ಲ. ಐತಿಹಾಸಿಕ ಅಥವಾ ಪುರಾಣದ ರಾಮನೂ ಅಲ್ಲ. ಅವನು ಶಾಶ್ವತ. ಹುಟ್ಟಿಲ್ಲದವನು. ಸಾವಿಲ್ಲದವನು' ಎಂದಿದ್ದರು.

1934ರಲ್ಲಿ ಅವರು 'ನನ್ನ ಕನಸಿನ ರಾಮರಾಜ್ಯದಲ್ಲಿ ರಾಜಕುಮಾರ ಮತ್ತು ಬಡ ಸಮಾನ ಇಬ್ಬರಿಗೂ ಸಮಾನ ಹಕ್ಕು ಇರುತ್ತದೆ. ಶುದ್ಧ ನೈತಿಕತೆಯ ಆಧಾರದಲ್ಲಿ ಜನರ ಸಾರ್ವಭೌಮತ್ವ ಇರುತ್ತದೆ. ರಾಮರಾಜ್ಯದ ರೂಪದಲ್ಲಿ ದೇವರನ್ನು ಕಾಣಬೇಕು ಎಂದರೆ ಮೊದಲು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ನಮ್ಮ ತಪ್ಪುಗಳನ್ನು ಸಾಕ್ಷ್ಯ ಕನ್ನಡಿಯಿಂದ ನೋಡಬೇಕು. ಪಕ್ಕದವರ ತಪ್ಪುಗಳ ಬಗ್ಗೆ ಕೆಂಂಡ ಕಾರುವುದಾಗಿಲ್ಲ. ನಿಜವಾದ ಪ್ರಗತಿಗೆ ಇದೊಂದೇ ದಾರಿ' ಎಂದು ಹೇಳಿದ್ದರು. ಈಗ ನಮಗೆ ನಮ್ಮ ತಪ್ಪುಗಳು ಕಾಣುತ್ತಿಲ್ಲ. ಪರರ ತಪ್ಪುಗಳು ದೊಡ್ಡದಾಗಿ ಕಾಣುತ್ತವೆ. ಇತರರ ತಪ್ಪುಗಳನ್ನು ಸರಿಮಾಡುವ ಉಮೇದು ಕಾಣುತ್ತಿದೆ. ಅದರೆ, ಗಾಂಧೀಜಿ ದೃಷ್ಟಿಯಲ್ಲಿ ನಾವೀಗ ಪ್ರಗತಿಯ ಹಾದಿಯಲ್ಲಿ ಇಲ್ಲ. ಹೀಗೆ ಸಾಗಿದರೆ ನಾವು ಪ್ರಗತಿ ಕಾಣುವುದೇ ಇಲ್ಲ ಎಂದೇ ಗಾಂಧಿ ನಂಬಿದ್ದರು.

ಗಾಂಧೀಜಿ ತಮ್ಮನ್ನು ಸನಾತನ ಹಿಂದೂ ಎಂದು ಕರೆದುಕೊಂಡಿದ್ದರು. ಅದರ 'ನನ್ನ ಹಿಂದೂ ಧರ್ಮ, ರಾಮಾಯಣ, ಮಹಾಭಾರತ, ವೇದ, ಪುರಾಣಗಳು ನನಗೆ ನಾನು ಪರಿಪೂರ್ಣ ಹಿಂದೂ ಆಗುವುದನ್ನು ಕಲಿಸಿವೆ. ಜೊತೆಗೆ ಇತರ ಧರ್ಮಗಳನ್ನು ಸಮಾನವಾಗಿ ನೋಡುವ ಗುಣವನ್ನೂ ಕಲಿಸಿವೆ' ಎಂದು ಅವರು ಹೇಳುತ್ತಿದ್ದರು. ದೇಶದ ಇಂದಿನ ವಿದ್ಯಮಾನವನ್ನು ನೋಡಿದರೆ, ನಾವು ಪರಿಪೂರ್ಣ ಹಿಂದೂಗಳ ಹಾಗೆ ಕಾಣುತ್ತಿಲ್ಲ. ಪರಿಪೂರ್ಣ ಮುಸ್ಲಿಮರೂ ಕಾಣಸಿಗುತ್ತಿಲ್ಲ.

ತಮ್ಮ ಪ್ರಾರ್ಥನಾ ಸಭೆಗಳಲ್ಲಿ ಸರ್ವಧರ್ಮ ಪ್ರಾರ್ಥನೆಗೆ ಒತ್ತು ನೀಡುತ್ತಿದ್ದ ಗಾಂಧೀಜಿ, ತುಲಸಿದಾಸರ 'ರಘುಪತಿ ರಾಘವ ರಾಜಾರಾಂ, ಪತಿತ ಪಾವನ ಸೀತಾರಾಂ' ಪದ್ಯಕ್ಕೆ 'ಈಶ್ವರ ಅಲ್ಲಾ ತೇರೆ ನಾಮ್' ಎಂಬ ಸಾಲನ್ನು ಸೇರಿಸಿ ಹಾಡುತ್ತಿದ್ದರು. ಆದರೆ ಈಗ ಆ ಸಾಲನ್ನು ತೆಗೆಯಲಾಗಿದೆ. ಈಶ್ವರ ಮತ್ತು ಅಲ್ಲಾನನ್ನು ಬೇರೆ ಮಾಡಲಾಗಿದೆ. ಗಾಂಧೀಜಿ ಅವರು ಹಿಂದೂ ಮುಸ್ಲಿಮ್ ಏಕತೆಯ ಬಗ್ಗೆ ಬಹಳಷ್ಟು ಬರೆದಿದ್ದಾರೆ. ಅಲ್ಲದೆ ತಮ್ಮ ಭಾಷಣದಲ್ಲಿಯೂ ಈ ಬಗ್ಗೆ ಪದೇಪದೇ ಹೇಳಿದ್ದಾರೆ. ಹಿಂದೂ–ಮುಸ್ಲಿಮ್ ಏಕತೆ ಇಲ್ಲದೆ ಈ ದೇಶ ಉದ್ಧಾರವಾಗದು ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ.

1930ರಲ್ಲಿ ಸಾಬರಮತಿ ಆಶ್ರಮದಲ್ಲಿ ಒಂದು ಘಟನೆ ನಡೆಯಿತು. ಆಶ್ರಮದ ಕೆಲವು ವಾಸಿಗಳು 'ಆಶ್ರಮದಲ್ಲಿ ಪೂಜೆ ಸಲ್ಲಿಸಲು ಮಂದಿರ ಮತ್ತು ಮೂರ್ತಿ ಬೇಕು' ಎಂಬ ಬೇಡಿಕೆ ಇಟ್ಟರು. ಗಾಂಧೀಜಿ ಅದನ್ನು ಸಾರಾಸಗಟಾಗಿ ತಿರಸ್ಕರಿಸಿದರು. 'ಆಶ್ರಮದ ಅಂಗಳವೇ ಪ್ರಾರ್ಥನಾ ಮಂದಿರ. ಪ್ರಾರ್ಥನೆಗೆ ಯಾವುದೇ ಆವರಣ ಅಥವಾ ಮಂದಿರದ ಅಗತ್ಯವಿಲ್ಲ. ಅಂತಹ ಪ್ರಾರ್ಥನಾ ಮಂದಿರದ ಮೇಲ್ಛಾವಣಿ ಆಕಾಶವೇ ಆಗಿರುತ್ತದೆ. ನಾಲ್ಕು ದಿಕ್ಕುಗಳೇ ಗೋಡೆಗಳು. ಮಿತಿ ಇಲ್ಲದ ಸಭಾಂಗಣದಲ್ಲಿ ಪ್ರಾರ್ಥನೆ ಮಾಡುವುದು ಧರ್ಮ, ರಾಷ್ಟ್ರೀಯತೆ ಎಂಬ ಸಂಕುಚಿತ ಭಾವವನ್ನು ಬೆಳೆಸುವ ಎಲ್ಲ ಮಿತಿಗಳನ್ನೂ ಮೀರಿದೆ' ಎಂದು ಹೇಳಿದ್ದರು.

ಈಗ ದೇಶದಲ್ಲಿ ನಡೆಯುತ್ತಿರುವ ಎಲ್ಲ ವಿದ್ಯಮಾನಗಳೂ ಗಾಂಧಿ ಮಾರ್ಗಕ್ಕೆ ವಿರುದ್ಧವಾಗಿಯೇ ಇವೆ. ರಾಮ ಮಂದಿರ ಕಟ್ಟಿಯಾಯಿತು, ಮುಂದೇನು ಎಂದು ಕೇಳಿದರೆ, 'ನಮ್ಮ ಮುಂದಿನ ದಾರಿ ಮಥುರಾ, ಕೃಷ್ಣ ಮಂದಿರ' ಎಂದು ನಾವು ಎದೆಯುಬ್ಬಿಸಿ ಹೇಳುತ್ತಿದ್ದೇವೆ. ಇಂತಹ ಹೇಳಿಕೆಗಳು ಯಾರ ಮೇಲೆ ಯಾವ ಬಗೆಯ ಪರಿಣಾಮ ಬೀರುತ್ತವೆ ಎನ್ನುವುದನ್ನೂ ನಾವು ಲೆಕ್ಕಿಸುತ್ತಿಲ್ಲ. ಇದಕ್ಕಾಗಿಯೇ ಒಮ್ಮೆ ಗಾಂಧೀಜಿ 'ಈ ಕ್ಷಣದ ಅವಶ್ಯಕತೆ ಒಂದು ಧರ್ಮವಲ್ಲ, ವಿವಿಧ ಧರ್ಮದ ಭಕ್ತರ ನಡುವೆ ಪರಸ್ಪರ ಗೌರವ ಮತ್ತು ಸಹಿಷ್ಣುತೆ. ಈಗ ನಾವು ವಿವಿಧತೆಯಲ್ಲಿ ಏಕತೆ ಸಾಧಿಸಬೇಕು' ಎಂದು ಹೇಳಿದ್ದರು. ಅದನ್ನು ಕೇಳಿಸಿಕೊಳ್ಳುವ ಕಿವಿಗಳಿಗೆ ನಾವೀಗ ಹುಡುಕಾಟ ನಡೆಸಬೇಕಾಗಿದೆ.

1935ರ ಜನವರಿಯಲ್ಲಿ ಡಾ. ಎಸ್.ರಾಧಾಕೃಷ್ಣನ್ ಅವರು ಗಾಂಧೀಜಿ ಅವರಿಗೆ 'ನಿಮ್ಮ ಧರ್ಮ ಯಾವುದು?' ಎಂದು ಕೇಳಿದಾಗ, 'ನನ್ನ ಧರ್ಮ ಹಿಂದೂ. ನನ್ನ ಧರ್ಮ ಹಿಂದೂವೊಬ್ಬ ಮಾನವೀಯ ಹಿಂದೂ ಆಗಲು, ಮುಸ್ಲಿಮನೊಬ್ಬ ಮಾನವೀಯ ಮುಸ್ಲಿಂ ಆಗಲು, ಕ್ರಿಶ್ಚಿಯನ್ನನೊಬ್ಬ ನಿಜ ಕ್ರಿಶ್ಚಿಯನ್ ಆಗಲು ಪ್ರೇರೇಪಿಸುತ್ತದೆ. ನಾನು ನನ್ನ ಧರ್ಮದ ಮೇಲೆ ಪ್ರಮಾಣ ಮಾಡುತ್ತೇನೆ. ಅದಕ್ಕಾಗಿ ಸಾಯುತ್ತೇನೆ. ಆದರೆ ಅದು ನನ್ನ ವೈಯಕ್ತಿಕ ವಿಚಾರ. ರಾಜ್ಯಕ್ಕೂ ರಾಜಕೀಯಕ್ಕೂ ಅದಕ್ಕೂ ಸಂಬಂಧವಿಲ್ಲ' ಎಂದು ಹೇಳಿದ್ದರು.

'ದೇವರ ಅನುಗ್ರಹ, ದೇವರ ಸಾಕ್ಷಾತ್ಕಾರವು ಯಾವ ಜಾತಿಗೂ ಯಾವ ರಾಷ್ಟ್ರಕ್ಕೂ ಗುತ್ತಿಗೆಯಲ್ಲ. ದೇವರಲ್ಲಿ ಶ್ರದ್ಧೆ ಇಟ್ಟು ಅವನ ಬಾಗಿಲಿನಲ್ಲಿ ಕಾಯುವ ಎಲ್ಲರಿಗೂ ಅದು ಸಮಾನವಾಗಿ ಲಭಿಸುತ್ತದೆ. ಯಾವ ರಾಷ್ಟ್ರ, ಯಾವ ಮತ ಅನ್ಯಾಯಕ್ಕೆ, ಅಸತ್ಯಕ್ಕೆ, ಹಿಂಸೆಗೆ ಮಡಿಲು ಕಟ್ಟುತ್ತದೆಯೋ ಅದು ಈ ಭೂಮಿಯಿಂದ ಮಾಯವಾಗುತ್ತದೆ' ಎಂದು ಗಾಂಧೀಜಿ ಹೇಳಿದ್ದರು. ಈ ಮಾತನ್ನಾದರೂ ನಾವು ಕೇಳಿಸಿಕೊಳ್ಳಬೇಕಲ್ಲವೇ?

ಈಗ ದೇಶದಲ್ಲಿ ರಾಜಕೀಯಕ್ಕೂ ಧರ್ಮಕ್ಕೂ ನಡುವಿನ ಗೆರೆ ಅಳಿಸಿಹೋಗಿದೆ. ನಿಜ ಹಿಂದೂವನ್ನು, ನಿಜ ಮುಸ್ಲಿಮನನ್ನು ದುರ್ಬೀನು ಹಾಕಿ ಹುಡುಕಬೇಕಿದೆ. ಪ್ರಭುಗಳು ಅಮಲಿನಲ್ಲಿದ್ದಾರೆ. ಪ್ರಜೆಗಳು ಮಾತ್ರ ಕಂಗಾಲಾಗಿದ್ದಾರೆ. ಭವ್ಯ ರಾಮ ಮಂದಿರದ ಮುಂದೆ ನಿಂತು 'ಸಬ್ ಕೊ ಸನ್ಮತಿ ದೇ ಭಗವಾನ್' ಎಂದು ಬೇಡುವ ಸ್ಥಿತಿ ಅವರಿಗೆ ಬಂದಿದೆ. ರಾಮ ರಾಮ!

ಚುರುಮುರಿ

ಚಾಲುಜ್ಞಾನ

• ಲಿಂಗರಾಜು ಡಿ.ಎಸ್.

'ಕಷ್ಟ ಅನ್ನೋದು ಯಾವಾಗಲೂ ನಮ್ಮ ಬಡ್ಡೇಗೆ ಬಂದು ಅಮರಿಕ್ಯತದಲ್ಲಾ' ಯಂಟಪ್ಪಣ್ಣ ನಿಟ್ಟುಸಿರು ಬುಟ್ಟಿತು.

'ಸತುವಂತ್ರೆಲ್ಲಾ ಸತ್ಯಯುಗದೇಲಿ, ತ್ರೇತಾಯುಗದೇಲಿ, ದ್ವಾಪರಯುಗದೇಲಿ ಇದ್ದು ಕಡೆದು ಹೊಂಟೋದ್ರು. ಇದು ಕಲಿಗಾಲ ಕನಣ್ಣೆ' ತುರೇಮಣೆ ವಿವರಿಸಿದರು.

'ರಾಜಕೀಯದ ಸುಳ್ಳಿನ ಅಸತ್ಯಯುಗ, ಜನರನ್ನು ಕಾಡಿಸೋ ಪ್ರೇತಾಯುಗ, ರಾಜಕೀಯದಲ್ಲೂ ಬಿಜಿನೆಸ್ ಮಾಡೋ ವ್ಯಾಪಾರಯುಗ, ಜನರನ್ನ ಸುಲಿಯೋ ಸುಲಿಯುಗ ದಿನಪರ್ತಿ ನಡೆಯುತ್ತೆ ಕನ್ರೋ' ಅಂತು ಯಂಟಪ್ಪಣ್ಣ.

'ಅಲ್ಲಾ ಕನಣ್ಣೆ, ನೀವೇನು ಕಾಲಜ್ಞಾನ ಹೇಳ್ತಿದೀರ ಹ್ಯಂಗೆ?' ಅನುಮಾನದೇಲಿ ಕೇಳಿದೆ.

'ಹ್ಞೂಂ ಕಯ್ಯಾ, ಇದು ರಾಜಕೀಯದ ಕಾಲುಜ್ಞಾನ! ಎಲೆಕ್ಷನ್ ಹತ್ತಿರಾಯ್ತಿದ್ದಂಗೇ ಅತ್ತಿಂದ ಇತ್ತಗೆ ಇತ್ತಿಂದ ಅತ್ತಗೆ ಕಾಲಾಡೋ ಪಕ್ಷಾಂತರದ ಕಾಲುಜ್ಞಾನ' ಅಂತ ತುರೇಮಣೆ ಬುಸುಗರೆದರು.

'ಇದು ಕಾಲುಜ್ಞಾನ ಮಾತ್ರವಲ್ಲ, ಚಾಲುಜ್ಞಾನವೂ ಹೌದು ಕನ್ರೋ. ಪಕ್ಷಾಂತರಿಗಳು ಆರು ಕೊಟ್ಟರೆ ಅತ್ತೆ ಕಡೆ, ಮೂರು ಕೊಟ್ಟರೆ ಸೊಸೆ ಕಡೆ ಅನ್ನೋ ಚಾಲುಗಲಿತವ್ರೆ' ಅಂತು ಯಂಟಪ್ಪಣ್ಣ.

'ಹೌದು ಕನಣ್ಣೆ, ವ್ಯವಸ್ಥೆ ಜಡ್ಡು ಹಿಡಿದು ಹೋಗ್ಯದೆ. ಮೂರು ಸಾರಿ ಶಾಸಕರಾಗಿ ಗೆದ್ದೋರು, ಅವರ ಸಂತಾನ ಮತ್ತೆ ಎಲೆಕ್ಷನ್ನಿಗೆ ನಿಲ್ಲಂಗುಲ್ಲ, ನಿಗಮ-ಮಂಡಲಿಗಳಲ್ಲಿ ಕಾರ್ಯಕರ್ತರಿಗೆ ಮಾತ್ರ ಅಂತ ಕಾನೂನು ಮಾಡಬಕು' ಚಂದ್ರು ಸಿಟ್ಟಾದ.

'ಪಕ್ಷಾಂತರದ ಕಾಲುಜ್ಞಾನದ ಅಡಾವುಡೀಲಿ ಬಡಭರತರ ಹೆಸರುಬಲಕ್ಕೆ ಗೋಚಾರಫಲ ಯಂಗದೆ ಸಾ?' ಅಂತ ತುರೇಮಣೆಗೆ ಪ್ರಶ್ನಿಸಿದೆ.

'ಅಧಿಕಾರದಲ್ಲಿರೋರ ಸ್ವಂತ ಅಭಿವೃದ್ಧಿ ಬುಟ್ರೆ ಬೇರೆ ಏನೂ ನಡೀತಿಲ್ಲ. ಎಲ್ಲ ಪಕ್ಷಗಳೂ ಅಧಿಕಾರ ತಕ್ಕಂಡೇ ತಕ್ಕಬೇಕು ಅಂತ ಜನಕ್ಕೆ ಮಂಕುಬೂದಿ ಎರಚಲು ಕಾದು ನಿಂತವೆ. ಈ ಹುನ್ನಾರ ಅರೀದ ಜನ ಪುಗಸಟ್ಟೆ ಸಿಕ್ಕೋ ಫಾಯ್ದೆಗಳ ಬೆಲ್ಲದನ್ನದ ಖುಷಿ ಅನುಭವಿಸೋದ್ರಲ್ಲೇ ಬಿಜಿಯಾಗವ್ರೆ' ಅಂತ ವಿವರಣೆ ಕೊಟ್ಟರು.

'ಹೌದೇಳ್ರಿ ಸಾ, ರಾಜಕೀಯದ ಚಾಲುಜ್ಞಾನದೇಲಿ ನ್ಯಾಯ-ನೀತಿ ಗೈರುವಿಲೆ ಆಗೋಗ್ಯದೆ, ಯಾವುದೂ ಊರ್ಜಿತ ಆಯ್ತಿಲ್ಲ' ಅಂತ ನಿಟ್ಟುಸಿರುಬುಟ್ಟೆ.

ದಿನದ ಟ್ವೀಟ್

ಹಾಡು ನೆನಪಾಗುತ್ತಿದೆ...

ರಾಜಕಾರಣಿಗಳು ಅಂಗಿ ಬದಲಿಸಿದಷ್ಟು ಸಲೀಸಾಗಿ ಪಕ್ಷ ಬದಲಾಯಿಸುವುದು, ಮೈತ್ರಿ ಮಾಡಿಕೊಳ್ಳುವುದು, ಮುರಿದು-ಕೊಳ್ಳುವುದು ಎಲ್ಲ ನೋಡಿದ ಮೇಲೆ ಒಟ್ಟಾರೆ ರಾಜಕೀಯದ ಬಗ್ಗೆಯೇ ಒಂಥರ ಹೇಸಿಗೆ ಬರುತ್ತಿದೆ. ಯಾವ ಪಕ್ಷದಲ್ಲೂ ತತ್ವ, ಸಿದ್ಧಾಂತ, ನೈತಿಕತೆ ಅಂತ ಎದೆ ತಟ್ಟಿ ಮಾತಾಡುವ ಒಬ್ಬರಾದರೂ ಉಳಿದಿದ್ದಾರಾ ಅಂತಲೇ ಅನುಮಾನವಾಗುತ್ತಿದೆ. ಒಂದು ಹಾಡು ನೆನಪಾಗುತ್ತಿದೆ 'ಈ ದೇಶದ ಕತೆ ಇಷ್ಟೇ ಕಣಣ್ಣೋ, ಇಲ್ಲ ಚಿಂತೆ ಮಾಡಿ ಲಾಭ ಇಲ್ಲಣ್ಣೋ...'

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ

ಈ ಹುಡುಗಿಯನ್ನು ಸಮಾಜ ಫೇಲ್ ಮಾಡಲಿಲ್ಲ, ಆಕೆಯ ತಂದೆತಾಯಿ ಮಾಡಿದ್ದಾರೆ. 18 ವರ್ಷದ ಹುಡುಗಿಗೆ ಕೆಲವು ವಾಕ್ಯಗಳನ್ನೇ ಸರಿಯಾಗಿ ಬರೆಯಲು ಸಾಧ್ಯವಾಗಲಿಲ್ಲ ಎಂದಾದರೆ, ಆಕೆ ಐಐಟಿಯಲ್ಲಿ ಜಯ ಸಾಧಿಸುವ ಸಾಧ್ಯತೆ ತೀರಾ ಕಡಿಮೆಯೇ ಇರುತ್ತದೆ. ಈ ವಾಸ್ತವವನ್ನು ಒಪ್ಪಿಕೊಳ್ಳಲು ಬಯಸದ ಹಲವು ಪೋಷಕರು ತಮ್ಮ ಮಗ ಅಥವಾ ಮಗಳನ್ನು ತೀವ್ರ ಸ್ಪರ್ಧೆಗೆ ಒಡ್ಡುತ್ತಾರೆ ಮತ್ತು ಅವರಿಗೆ ಅದನ್ನು ಎದುರಿಸಲು ಸಾಧ್ಯವಾಗದೇ ಇದ್ದಾಗ ಅಚ್ಚರಿಯಾದಂತೆ ನಟಿಸುತ್ತಾರೆ.

(ಜೆಇಇ ಪರೀಕ್ಷೆ ಎದುರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಪತ್ರ ಬರೆದಿಟ್ಟು ಕೋಟಾದಲ್ಲಿ ವಿದ್ಯಾರ್ಥಿನಿಯೊಬ್ಬಳು ಸಾವಿಗೆ ಶರಣಾಗಿದ್ದು, ಇಂಗ್ಲಿಷ್‌ನಲ್ಲಿರುವ ಆ ಪತ್ರವು ವ್ಯಾಕರಣ ದೋಷದಿಂದ ಕೂಡಿರುವುದಕ್ಕೆ ಪ್ರತಿಕ್ರಿಯೆ)

ಕಾರ್ತಿಕ್ ಬಾಲಚಂದ್ರನ್, ಎಂಡೊಕ್ರೈನಾಲಜಿಸ್ಟ್

25 ವರ್ಷಗಳ ಹಿಂದೆ

ಶನಿವಾರ, 30-1-1999

• **ಪಡಿತರ ಅಕ್ಕಿ, ಗೋಧಿ, ಸಕ್ಕರೆ ಬೆಲೆ ಹೆಚ್ಚಳಕ್ಕೆ ವ್ಯಾಪಕ ವಿರೋಧ**

ನವದೆಹಲಿ, ಜ. 29 (ಯುಎನ್‌ಐ, ಪಿಟಿಐ)– ಪಡಿತರ ಆಹಾರ ವಸ್ತುಗಳು ಮತ್ತು ಯೂರಿಯಾ ಬೆಲೆ ಏರಿಕೆಯನ್ನು ತಡೆ ಹಿಡಿಯಬೇಕೆಂದು ಹಾಗೂ ಈ ಸಂಬಂಧ ಮುಖ್ಯಮಂತ್ರಿಗಳ ಸಭೆ ಕರೆಯಬೇಕೆಂದು ಆಂಧ್ರ ಮುಖ್ಯಮಂತ್ರಿ ಒತ್ತಾಯಿಸಿದರೆ, ಕಾಂಗ್ರೆಸ್ ಪಕ್ಷ ಬೆಲೆ ಏರಿಕೆ ವಿರುದ್ಧ ರಾಷ್ಟ್ರದಾದ್ಯಂತ ಚಳವಳಿ ನಡೆಸುವುದಾಗಿ ಹೇಳಿದೆ.

ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರೂ ಬೆಲೆ ಏರಿಕೆಯನ್ನು ಟೀಕಿಸಿದ್ದಾರೆ. ಇಂಡಿಯನ್ ನ್ಯಾಷನಲ್ ಲೋಕದಳ, ಬೆಲೆ ಏರಿಕೆಯನ್ನು ವಾಪಸ್ ಪಡೆಯದಿದ್ದರೆ ತಾನು ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂದಕ್ಕೆ ಪಡೆಯುವುದಾಗಿ ಎಚ್ಚರಿಕೆ ನೀಡಿದೆ.

ಎ.ಬಿ. ವಾಜಪೇಯಿ ನೇತೃತ್ವದ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿರುವ ಟಿಡಿಪಿಯ ಅಧ್ಯಕ್ಷ ಚಂದ್ರಬಾಬು ನಾಯ್ಡು, ಬೆಲೆ ಏರಿಕೆಯು 'ಭಯಾನಕ' ಎಂದಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 30-1-1974

• **ಶ್ರೀಲಂಕಾದಲ್ಲಿರುವ ಭಾರತೀಯ ಸಂಜಾತರ ಬಗ್ಗೆ ಪೂರ್ಣ ಒಪ್ಪಂದ**

ನವದೆಹಲಿ, ಜ. 29– ಬಹುಕಾಲದಿಂದ ಅನಿಶ್ಚಿತವಾಗಿದ್ದ ಶ್ರೀಲಂಕಾದಲ್ಲಿನ ಒಂದೂವರೆ ಲಕ್ಷ ಮಂದಿ ಭಾರತೀಯ ಸಂಜಾತರ ಭವಿಷ್ಯದ ಬಗ್ಗೆ ಭಾರತ ಮತ್ತು ಶ್ರೀಲಂಕಾ ಅಂತಿಮವಾಗಿ ಒಪ್ಪಂದ ಮಾಡಿಕೊಂಡಿವೆ.

ಶ್ರೀಲಂಕಾದಲ್ಲಿನ ಸುಮಾರು 8.25 ಲಕ್ಷ ಮಂದಿ ಭಾರತೀಯ ಸಂಜಾತರ ಭವಿಷ್ಯದ ಬಗ್ಗೆ 1964ರಲ್ಲಿ ಮಾಡಿಕೊಂಡ ಒಪ್ಪಂದದ ಅನುಷ್ಠಾನದ ಬಗ್ಗೆ ಎರಡೂ ದೇಶಗಳ ಪ್ರಧಾನಿಗಳು ತೃಪ್ತಿ ವ್ಯಕ್ತಪಡಿಸಿದ್ದಾರೆ. ಉಳಿದಿದ್ದ ಒಂದೂವರೆ ಲಕ್ಷ ಮಂದಿಯಲ್ಲಿ 75 ಸಾವಿರ ಮಂದಿಗೆ ಶ್ರೀಲಂಕಾ ಈಗ ಪೌರತ್ವ ನೀಡುವುದು, 75 ಸಾವಿರ ಮಂದಿಯನ್ನು ಭಾರತ ಹಿಂದಕ್ಕೆ ಕರೆಸಿಕೊಳ್ಳುವುದು.

• **ಕಾಗದದ ಅಭಾವ ನೀಗಲು ರಾಜ್ಯ ಸರ್ಕಾರದ ಕ್ರಮ ಕಾರ್ಖಾನೆಗಳೊಡನೆ ಒಪ್ಪಂದ**

ಬೆಂಗಳೂರು, ಜ. 29– ರಾಜ್ಯದಲ್ಲಿ ಜನತೆ ಎದುರಿಸುತ್ತಿರುವ ಬರವಣಿಗೆ ಹಾಗೂ ಮುದ್ರಣ ಕಾಗದದ ಅಭಾವ ನೀಗಿಸಲು ಸರ್ಕಾರ ಕೈಗೊಂಡ ಕ್ರಮದ ಫಲವಾಗಿ, ರಾಜ್ಯದ ಮೂರು (ದಾಂಡೇಲಿ, ಭದ್ರಾವತಿ ಹಾಗೂ ಮಂಡ್ಯ) ಕಾಗದದ ಕಾರ್ಖಾನೆಗಳು ತಮ್ಮ ಉತ್ಪನ್ನದಲ್ಲಿ ಶೇ 40ರಷ್ಟನ್ನು ಸರ್ಕಾರಕ್ಕೆ ಕೊಡಲು ಒಪ್ಪಿವೆಯೆಂದೂ, ಅದರ ಬಗ್ಗೆ ಸರ್ಕಾರದ ಸಹಿಯಾಗಿದೆಯೆಂದೂ ಕೈಗಾರಿಕಾ ಸಚಿವ ಶ್ರೀ ಎಸ್.ಎಂ. ಕೃಷ್ಣ ಅವರು ಇಂದು ವರದಿಗಾರರಿಗೆ ತಿಳಿಸಿದರು.

ಸಂಗತ

ಸ್ವಚ್ಛತೆ: ಆಗಬೇಕಿದೆ ಆಂದೋಲನ

ಸ್ವಚ್ಛತಾ ಕೆಲಸಗಳಿಗೆ ಸಾಮೂಹಿಕ ಸ್ಪರ್ಶ ದಕ್ಕಿದಾಗ ಬದ್ಧತೆ ಗಟ್ಟಿಗೊಳ್ಳುತ್ತದೆ

• ಎಚ್.ಬಿ. ಚಂದ್ರಶೇಖರ್

ಶಾಲೆಯ ಸ್ವಚ್ಛತಾ ಕೆಲಸಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಪರ-ವಿರೋಧದ ಅಭಿಪ್ರಾಯಗಳ ಸಹಿತ ಚರ್ಚೆ ನಡೆದಿದೆ. ಜಾಗತಿಕ ಮಟ್ಟದಲ್ಲಿ ರೂಪುಗೊಂಡಿರುವ ಸುಸ್ಥಿರ ಅಭಿವೃದ್ಧಿ ಗುರಿಯ ಅನುಸಾರ, ವಿಶ್ವದ ಪ್ರತಿ ಶಾಲೆಯಲ್ಲಿ ಸುರಕ್ಷಿತ, ಅಹಿಂಸಾತ್ಮಕ, ಒಳಗೊಳ್ಳುವ ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣ ಇರಬೇಕು ಎಂದು ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಪ್ರತಿ ಶಾಲೆಯಲ್ಲಿ ಶುದ್ಧ ಕುಡಿಯುವ ನೀರು, ಆರೋಗ್ಯ, ನೈರ್ಮಲ್ಯದ ವ್ಯವಸ್ಥೆ ಎಲ್ಲ ಮಕ್ಕಳಿಗೆ ಲಭ್ಯವಿರಬೇಕು.

ಯುನಿಸೆಫ್‌ನ 2021ರ ವರದಿಯ ಪ್ರಕಾರ, ವಿಶ್ವದ ಶೇಕಡ 71ರಷ್ಟು ಶಾಲೆಗಳಲ್ಲಿ ಕುಡಿಯುವ ನೀರು ಹಾಗೂ ಶೇ 72ರಷ್ಟು ಶಾಲೆಗಳಲ್ಲಿ ಶೌಚಾಲಯದ ಲಭ್ಯತೆ ಇದೆ. ಉಳಿದಂತೆ 54.60 ಕೋಟಿ ಮಕ್ಕಳಿಗೆ ಶಾಲೆಯಲ್ಲಿ ಕುಡಿಯುವ ನೀರಿನ ಲಭ್ಯತೆ ಇಲ್ಲ. 3.90 ಕೋಟಿ ಮಕ್ಕಳಿಗೆ ಶಾಲೆಯಲ್ಲಿ ಶೌಚಾಲಯ ಸೌಲಭ್ಯ ಇಲ್ಲ. ನಮ್ಮ ದೇಶದಲ್ಲಿನ 36.97 ಕೋಟಿ ಶಾಲಾ ಮಕ್ಕಳ ಪೈಕಿ ಶೇ 74ರಷ್ಟು ಮಕ್ಕಳಿಗೆ ಉತ್ತಮವಾದ ಕುಡಿಯುವ ನೀರಿನ ಲಭ್ಯತೆ ಇದೆ. ಶೇ 21ರಷ್ಟು ಶಾಲಾ ಮಕ್ಕಳಿಗೆ ಕುಡಿಯುವ ನೀರಿನ ಕನಿಷ್ಠ ಸೌಲಭ್ಯಗಳಷ್ಟೇ ಇವೆ. ಉಳಿದ ಶೇ 4ರಷ್ಟು ಶಾಲಾ ಮಕ್ಕಳಿಗೆ ಕುಡಿಯುವ ನೀರಿನ ಸೌಲಭ್ಯವೇ ಇಲ್ಲ. ಅದೇ ರೀತಿ ಶೇ 86ರಷ್ಟು ಶಾಲಾ ಮಕ್ಕಳಿಗೆ ಉಪಯೋಗಿಸಲು ಸಾಧ್ಯ ಆಗುವಂತಹ ಶೌಚಾಲಯ ವ್ಯವಸ್ಥೆ ಇದೆ. ಉಳಿದ ಶೇ 14ರಷ್ಟು ಮಕ್ಕಳಿಗೆ ಶೌಚಾಲಯ ಸೌಲಭ್ಯ ಇಲ್ಲ. ಇದನ್ನು ಗಮನಿಸಿದರೆ ಜಾಗತಿಕ ಮಟ್ಟದಲ್ಲಿ, ಅಂತೆಯೇ ನಮ್ಮ ದೇಶದ ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ಲಭ್ಯತೆಯ ವ್ಯವಸ್ಥೆಗಳನ್ನು ಉತ್ತಮಗೊಳಿಸುವ ಅಗತ್ಯ ಇದೆ.

ಶುದ್ಧ ಕುಡಿಯುವ ನೀರು ಹಾಗೂ ಶೌಚಾಲಯ ಲಭ್ಯತೆಯು ಶಾಲಾ ಸ್ವಚ್ಛತೆಯ ಮೇಲೆ ಪ್ರಭಾವ ಬೀರುತ್ತದೆ. ನೀರಿನ ಸಮರ್ಪಕ ಲಭ್ಯತೆ ಇಲ್ಲದಿದ್ದಲ್ಲಿ ಶೌಚಾಲಯಗಳಲ್ಲಿ ಸ್ವಚ್ಛತೆಯನ್ನು ಖಾತರಿಪಡಿಸುವುದು ಸಾಧ್ಯವಾಗದು. ಕೆಲವು ಪ್ರದೇಶಗಳ ಜನರು ತಮ್ಮ ಮನೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಂಡಾಗ್ಯೂ ಅವುಗಳನ್ನು ಸಮರ್ಪಕವಾಗಿ ಬಳಕೆ ಮಾಡುವಲ್ಲಿ ಉತ್ಸಾಹ ತೋರಿಸುತ್ತಿಲ್ಲ ಎಂಬ ವರದಿಗಳಿವೆ. ತಮ್ಮ ಮನೆಯೊಳಗೆ ಶೌಚಾಲಯಗಳನ್ನು ಹೊಂದುವ ಕುರಿತೇ ಮಡಿವಂತಿಕೆ ಇರುವ ಜನರು, ಅವುಗಳನ್ನು ತಾವೇ ಮನಃಪೂರ್ವಕವಾಗಿ ಸ್ವಚ್ಛಗೊಳಿಸುತ್ತಾರೆ ಎನ್ನುವಂತಿಲ್ಲ. ಇಂತಹ ಮನಃಸ್ಥಿತಿಯು ನಿಧಾನವಾಗಿ ಬದಲಾಗುತ್ತಿರುವುದು ಆಶಾದಾಯಕ ಬೆಳವಣಿಗೆ.

ಜನ ತಮ್ಮ ಮನೆಯೊಳಗಿನ ಪ್ರದೇಶದ ಸ್ವಚ್ಛತೆಗೆ ಆದ್ಯತೆ ನೀಡಿದಷ್ಟು ಮನೆಯ ಹೊರಗಿನ ಪ್ರದೇಶವನ್ನು ಸ್ವಚ್ಛವಾಗಿ ಇರಿಸಿಕೊಳ್ಳುವಲ್ಲಿ ವಿಫಲರಾಗುತ್ತಿರುವುದನ್ನು ಗಮನಿಸುತ್ತಿದ್ದೇವೆ. ಇಂತಹ ಪರಿಸ್ಥಿತಿಯನ್ನು ಸುಧಾರಿಸಲು ಮಕ್ಕಳಿಗೆ ಶಾಲಾ ಹಂತದಿಂದಲೇ ತಿಳಿವಳಿಕೆ ನೀಡಬೇಕು. ನಾಗರಿಕರಲ್ಲಿ ಅರಿವು ಮೂಡಿಸಬೇಕು. ಮಕ್ಕಳಿಗೆ ಯಾವುದೇ ರೀತಿ ಬಾಧಕ ಆಗದ ರೀತಿಯಲ್ಲಿ, ಸಾಧ್ಯವಿರುವ ಕಡೆ ಮಕ್ಕಳನ್ನು ಶಾಲಾ ಹಂತದಲ್ಲಿ ಸ್ವಚ್ಛತೆಯ ಕೆಲಸಗಳಲ್ಲಿ ಸಹಭಾಗಿಗಳನ್ನಾಗಿ ಮಾಡಿಕೊಳ್ಳುವುದು ಪರಿಣಾಮಕಾರಿಯಾಗುತ್ತದೆ ಎಂಬ ಭಾವನೆ ಇದೆಯಾದರೂ ಮಕ್ಕಳನ್ನು ಸ್ವಚ್ಛತಾ ಕೆಲಸಗಳಲ್ಲಿ ಸಹಭಾಗಿ ಮಾಡಿಕೊಳ್ಳಲು ಪೋಷಕರು, ಸಮುದಾಯದ ಅಂಗೀಕಾರ ಅಗತ್ಯ. ಇದರ ಜೊತೆ ಸ್ವಚ್ಛತೆಗೆ ಅಗತ್ಯವಾದ ಪರಿಕರ ಹಾಗೂ ಸೌಲಭ್ಯಗಳ ಲಭ್ಯತೆಯೂ ಮುಖ್ಯವಾಗುತ್ತದೆ.

ಜಪಾನ್ ದೇಶದಲ್ಲಿ ಶಾಲಾ ಮಕ್ಕಳು ತಮ್ಮ ಶಾಲೆಗಳ ಆವರಣ, ಶಾಲಾ ಮೈದಾನ ಹಾಗೂ ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಸುದ್ದಿ, ವಿಡಿಯೊಗಳು ಹರಿದಾಡುತ್ತಿವೆ. ಜಪಾನ್ ದೇಶವು ಹಲವಾರು ವರ್ಷಗಳಿಂದ ಶಾಲಾ ಮಕ್ಕಳನ್ನು ಸ್ವಚ್ಛತೆಯ ಕೆಲಸಗಳಲ್ಲಿ ಸಹಭಾಗಿಗಳನ್ನಾಗಿ ಮಾಡಿದೆ. ಅಂದಮಾತ್ರಕ್ಕೆ ಸ್ವಚ್ಛತೆಗೆ ಅಲ್ಲಿ ಕೆಲಸಗಾರರನ್ನೇ ನಿಯೋಜಿಸುವುದಿಲ್ಲ, ಮಕ್ಕಳೇ ಎಲ್ಲ ರೀತಿಯ ಸ್ವಚ್ಛತಾ ಕಾರ್ಯ ಕೈಗೊಳ್ಳುತ್ತಾರೆ ಎಂದಲ್ಲ. ಕೆಲವು ಶಾಲೆಗಳಲ್ಲಿ ಶೌಚಾಲಯಸಹಿತ ಶಾಲೆಯ ಎಲ್ಲ ಪ್ರದೇಶಗಳ ಸ್ವಚ್ಛತಾ ಕೆಲಸದಲ್ಲಿ ಮಕ್ಕಳ ತೊಡಗುವಿಕೆ ಇದೆ. ಕೆಲವು ಶಾಲೆಗಳಲ್ಲಿ ಶೌಚಾಲಯ ಹೊರತುಪಡಿಸಿ ಶಾಲೆಯ ತರಗತಿ ಕೋಣೆ ಹಾಗೂ ಇತರ ಪ್ರದೇಶಗಳನ್ನು ಸ್ವಚ್ಛಗೊಳಿಸುವ ಕೆಲಸದಲ್ಲಿ ಮಕ್ಕಳು ಸಹಭಾಗಿ ಆಗುವುದಿದೆ.

ಮಕ್ಕಳಿಗೆ ತಮ್ಮ ತರಗತಿಯ ಜೊತೆ ಶಾಲೆಯ ಇತರ ಎರಡು ಜಾಗಗಳಲ್ಲಿ ಸ್ವಚ್ಛತೆ ಕೈಗೊಳ್ಳುವ ಜವಾಬ್ದಾರಿ ನೀಡಲಾಗುತ್ತದೆ. ಚಿಕ್ಕ ತಂಡಗಳಲ್ಲಿ ಮಕ್ಕಳು ಖುಷಿ, ಸಂತಸದಿಂದ ಜೊತೆಗೂಡಿ ಮಾತನಾಡುತ್ತಾ ವಾರಕ್ಕೆ ನಾಲ್ಕು ಬಾರಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುತ್ತಾರೆ. ವರ್ಷಕ್ಕೆ ಮೂರು ಬಾರಿ ಇಡೀ ಶಾಲೆಯ ಎಲ್ಲ ವಿದ್ಯಾರ್ಥಿಗಳು ಸೇರಿ ಸಂಪೂರ್ಣ ಶಾಲೆಯನ್ನು ಸಾಮೂಹಿಕವಾಗಿ ಸ್ವಚ್ಛಗೊಳಿಸುತ್ತಾರೆ. ಜಪಾನ್ ದೇಶದಿಂದ ಸ್ಫೂರ್ತಿ ಪಡೆದ ಸಿಂಗಪುರ ಸಹ 2016ರಲ್ಲಿ ಶೌಚಾಲಯ ಹೊರತುಪಡಿಸಿ, ತರಗತಿ ಕೋಣೆ ಹಾಗೂ ಶಾಲೆಯ ಆವರಣವನ್ನು ಮಕ್ಕಳಿಂದ ಸ್ವಚ್ಛಗೊಳಿಸುವ ಕಾರ್ಯವನ್ನು ಪ್ರಾರಂಭಿಸಿದೆ.

ಸ್ವಚ್ಛತೆಯನ್ನು ಸಾಮೂಹಿಕ ಕ್ರಿಯೆಯಾಗಿ ಅಳವಡಿಸಿಕೊಳ್ಳುವ ದಿಸೆಯಲ್ಲಿ ನಾವು ಕೂಡ ಚಿಂತಿಸಬಹುದು. ಶಾಲಾಕಾಲೇಜು ಆವರಣಗಳು ಮಾತ್ರವಲ್ಲದೆ, ಕಚೇರಿಗಳು, ಗ್ರಾಮ ಪಂಚಾಯಿತಿ ಆವರಣಗಳು, ಮೈದಾನಗಳಂತಹ ಎಲ್ಲ ಕಡೆಗೂ ಇದನ್ನು ವಿಸ್ತರಿಸಬಹುದು. ಮಕ್ಕಳು, ಶಿಕ್ಷಕರು, ಶಾಲಾಕಾಲೇಜು, ಕಚೇರಿಗಳ ಸಿಬ್ಬಂದಿ ಜೊತೆ ಆಸಕ್ತ ಸಾರ್ವಜನಿಕರೂ ಸೇರಿ ಸಾಮೂಹಿಕವಾಗಿ ಇಂತಹ ಕೆಲಸಗಳಲ್ಲಿ ತೊಡಗಿಕೊಂಡಾಗ ಅದರ ಪರಿಣಾಮ ದೊಡ್ಡ ಮಟ್ಟದಲ್ಲಿ ಇರುತ್ತದೆ. ಸ್ವಚ್ಛತೆಯ ಬಗೆಗಿನ ನಮ್ಮ ಬದ್ಧತೆಯನ್ನೂ ಗಟ್ಟಿಗೊಳಿಸುತ್ತದೆ. ಆದರೆ ಈ ಕೆಲಸ ಒಂದು ದಿನಕ್ಕೆ, ಯಾವುದೋ ಒಂದು ಸಂದರ್ಭಕ್ಕೆ ಸೀಮಿತವಾಗಬಾರದು. ನಿರಂತರವಾಗಿ ಜರುಗಬೇಕು.

ವಾಚಕರ ವಾಣಿ

ಲೋಕಸಭಾ ಸ್ಥಾನ: ಜನಸಂಖ್ಯೆಯೇ ಆಧಾರವೇ?

ಕೊಡಗಿಗೆ ಪ್ರತ್ಯೇಕ ಲೋಕಸಭಾ ಸ್ಥಾನಕ್ಕಾಗಿ ಧ್ವನಿ ಎತ್ತುವುದಾಗಿ ಮೈಸೂರು- ಕೊಡಗು ಕ್ಷೇತ್ರದ ಹಾಲಿ ಸಂಸದ ಪ್ರತಾಪ ಸಿಂಹ ಅವರು ಹೇಳಿರುವುದು (ಪ್ರ.ವಾ., ಜ. 29) ಸರಿಯಾಗಿದೆ. ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಕೊಡಗು ಜಿಲ್ಲೆಯು ರಾಜ್ಯದ ಜನರ ಮನದಲ್ಲಿ ಒಂದು ವಿಶಿಷ್ಟವಾದ ಸ್ಥಾನ ಪಡೆದಿದೆ. ಆದರೂ ಜನಸಂಖ್ಯೆ ಕಡಿಮೆ ಇದೆ ಎಂಬ ಕಾರಣಕ್ಕೆ ಅದಕ್ಕೆ ಒಂದು ಪ್ರತ್ಯೇಕ ಲೋಕಸಭಾ ಕ್ಷೇತ್ರ ದೊರೆಯದಿರುವುದು ತೀರಾ ಅನ್ಯಾಯ. ಉತ್ತರದ ಹಲವು ಹಿಂದಿ ಭಾಷಿಕ ರಾಜ್ಯಗಳಲ್ಲಿ ಜನಸಂಖ್ಯೆ ಕಡಿಮೆ ಇದ್ದರೂ ಚಿಕ್ಕ ಚಿಕ್ಕ ಪ್ರದೇಶಗಳಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರಗಳಿವೆ. ಹೀಗಿರುವಾಗ, ಕೊಡಗಿನ ಹಲವು ವರ್ಷಗಳ ಬೇಡಿಕೆ ಈಡೇರಿಸಲು ಕೇಂದ್ರ ಸರ್ಕಾರ ಏಕೆ ಮುಂದಾಗುತ್ತಿಲ್ಲವೋ ತಿಳಿಯುತ್ತಿಲ್ಲ. ಲೋಕಸಭಾ ಕ್ಷೇತ್ರವನ್ನು ಘೋಷಿಸಲು ಬರೀ ಜನಸಂಖ್ಯೆಯೇ ಆಧಾರವಾಗಿರಬೇಕೆ? ನಿಸರ್ಗ ಸಂಪತ್ತಿನ ರಕ್ಷಣೆಯೂ ಭಾಗವಾಗಿರಬಾರದೇಕೆ? ಈ ವಿಷಯದ ಬಗ್ಗೆ ರಾಜ್ಯ ಸರ್ಕಾರ ಸಹ ಕೇಂದ್ರಕ್ಕೆ ಶಿಫಾರಸು ಮಾಡಲಿ.

ರಮೇಶ್, ಬೆಂಗಳೂರು

ದಾರದ ಮೂಲಕವೂ ಪರೀಕ್ಷೆಯಲ್ಲಿ ನಕಲು?!

ಪರೀಕ್ಷಾ ಅಕ್ರಮ ಆರೋಪ ಎದುರಿಸಿದ ಸುಮಾರು ಎರಡೂವರೆ ವರ್ಷಗಳ ನಂತರ ಪಿಎಸ್‌ಐ ಹುದ್ದೆಗಳ ಲಿಖಿತ ಮರುಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇತ್ತೀಚೆಗೆ ನಡೆಸಿದಾಗ, ನಾನು ಸಹ ಆ ಪರೀಕ್ಷೆಗೆ ಹಾಜರಾಗಿದ್ದೆ. ಭಾನುವಾರ ನಡೆದ ಸಶಸ್ತ್ರ ಮೀಸಲು ಪಡೆಯ ಪರೀಕ್ಷೆಗೂ ಹಾಜರಾಗಿದ್ದೆ. ಅಲ್ಲಿ ಬೆಲ್ಟ್, ಉಂಗುರ, ಉದ್ದ ತೋಳಿನ ಶರ್ಟ್, ಬೂಟು, ಜೀನ್ಸ್ ಪ್ಯಾಂಟ್‌ಗಳನ್ನು ಪರೀಕ್ಷೆಗೆ ಧರಿಸಿಕೊಂಡು ಬರಲು ನಿರ್ಬಂಧಿಸಲಾಗಿತ್ತು. ಇವುಗಳ ಮೂಲಕ ನಕಲು ನಡೆದರೂ ನಡೆಯಬಹುದು. ಆದರೆ ಎಷ್ಟೋ ಅಭ್ಯರ್ಥಿಗಳ ಕೈಯಲ್ಲಿ ಧರಿಸಿದ ದಾರ, ನನ್ನ ಕೊರಳಲ್ಲಿನ ರುದ್ರಾಕ್ಷಿ ಹಾಗೂ ದಾರವನ್ನು ಸಹ ಕತ್ತರಿಸಿ ಪರೀಕ್ಷಾ ಕೇಂದ್ರದ ಒಳಹೋಗಲು ಅನುಮತಿ ನೀಡಲಾಯಿತು. ನಕಲು ಮಾಡಲು ದಾರದಲ್ಲಿ ಅದೆಂತಹ ತಂತ್ರಜ್ಞಾನ ಇರಬಹುದು ಎಂಬುದು ನನಗಂತೂ ತಿಳಿಯಲಿಲ್ಲ!

ಪ್ರಭು ಬ. ನೀಲಿ, ಗುಲಗಾಲ ಜಂಬಗಿ, ಮುಧೋಳ

ಕ್ಷೇತ್ರ ಅಭಿವೃದ್ಧಿ: ವೈಚಾರಿಕ ನಿಲುವಿರಲಿ

ಬೆಳಗಾವಿಯಲ್ಲಿ ಎರಡು ದಿನಗಳ ಕಾಲ ರಾಷ್ಟ್ರೀಯ ಲಿಂಗಾಯತ ಪ್ರಥಮ ಮಹಿಳಾ ಸಮಾವೇಶ ಇತ್ತೀಚೆಗೆ ನಡೆದು, ಕೊನೆಯಲ್ಲಿ ಕೆಲ ನಿರ್ಣಯಗಳನ್ನು ತೆಗೆದುಕೊಂಡ ಬಗ್ಗೆ ವರದಿಯಾಗಿದೆ (ಪ್ರ.ವಾ., ಜ. 29). ಬಸವಣ್ಣನವರ ಸಹೋದರಿ ಅಕ್ಕ ನಾಗಮ್ಮ ಲಿಂಗೈಕ್ಯ ಸ್ಥಳ ಹಾಗೂ ಶರಣ ನುಲಿಯ ಚಂದಯ್ಯನವರ ಸ್ಥಳ, ಕಾಯಕ ವರ್ಗದ ಇತರ ಶರಣರ ಕ್ಷೇತ್ರಗಳ ಅಭಿವೃದ್ಧಿ ಸೇರಿದಂತೆ ಚನ್ನಬಸವೇಶ್ವರರ ಲಿಂಗೈಕ್ಯ ಸ್ಥಳವಾದ ಉಳವಿ ಕ್ಷೇತ್ರದ ಅಭಿವೃದ್ಧಿಗಾಗಿ ಉಳವಿ ಅಭಿವೃದ್ಧಿ ಪ್ರಾಧಿಕಾರ ರಚಿಸಬೇಕೆಂಬ ಆಶಯ ಅಡಕವಾಗಿದೆ. ಅದರಂತೆ, ಶೂನ್ಯ ಪೀಠದ ಪ್ರಥಮಾಧ್ಯಕ್ಷರಾದ ಅಲ್ಲಮಪ್ರಭುಗಳ ಜನ್ಮಸ್ಥಳ ಬಳ್ಳಿಗಾವಿಯ ಸ್ಮಾರಕ ಜೀರ್ಣೋದ್ಧಾರದ ಕೆಲಸವೂ ಆಗಬೇಕು.

ಶರಣರ ಚಳವಳಿಯಲ್ಲಿ ಸ್ಥಾವರ ವಿರೋಧಿ ನಡೆಯೂ ಒಂದಂಶವಾಗಿತ್ತು. ಆದರೆ ಮುಂದಿನ ಪೀಳಿಗೆಯ ನೆನಪಿಗೋಸ್ಕರವಾಗಿಯಾದರೂ ಸ್ಮಾರಕಗಳ ಉಳಿವು ಮತ್ತು ರಕ್ಷಣಾ ಕಾರ್ಯ ಅಗತ್ಯವಾಗಿದೆ. ಶರಣರ ಕ್ಷೇತ್ರಗಳಲ್ಲಿ ಪೂಜಾ ವಿಧಾನಗಳು ಬರೀ ಸಾಂಕೇತಿಕವಾಗಿರುತ್ತವೆ. ಹೀಗಾಗಿ, ಆಡಂಬರದ ಆಚರಣೆಗಳು ವಿಜೃಂಭಿಸಲು ಆದ್ಯತೆ ನೀಡದೆ, ಅವರ ವೈಚಾರಿಕ ನಿಲುವುಗಳನ್ನು ಸಾಕಾರಗೊಳಿಸುವ ಆಶಯ ಪ್ರಧಾನವಾಗಬೇಕಿದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ದಸಂಸ: ದುಡಿದವರು ಹಲವರು

ದಲಿತ ಸಂಘರ್ಷ ಸಮಿತಿಗೆ 50 ವರ್ಷ ತುಂಬಿದ ಪ್ರಯುಕ್ತ ಗುರುಪ್ರಸಾದ್ ಕಂಟಲಗೆರೆ ಅವರು ಬರೆದಿರುವ ಲೇಖನದಲ್ಲಿ (ಪ್ರ.ವಾ., ಜ. 24) ದೇವನೂರ ಮಹಾದೇವ ಅವರನ್ನು ನೆನಪು ಮಾಡಿಕೊಳ್ಳದೇ ಇದ್ದುದಕ್ಕೆ ವರಹಳ್ಳಿ ಆನಂದ ಅವರು ವಿಷಾದ ವ್ಯಕ್ತಪಡಿಸಿರುವುದು (ವಾ.ವಾ., ಜ. 29) ನ್ಯಾಯೋಚಿತವಾಗಿದೆ. ದೇವನೂರ ಅವರು ದಸಂಸಗೆ ಉಸಿರಾಗಿ ನಿಂತು ದುಡಿದಿದ್ದಾರೆ. ಅವರ ಜೊತೆಗೆ ಇದ್ದ ಇನ್ನೂ ಅನೇಕ ಕಾರಣಕರ್ತರ ಶ್ರಮವನ್ನು ಗುರುತಿಸಿಲ್ಲ. ಪ್ರೊ. ಗೋವಿಂದಯ್ಯ, ಹೋರಾಟದ ಹಾಡುಗಳನ್ನು ಕೊಟ್ಟ ದಲಿತ ಕವಿ ಸಿದ್ಧಲಿಂಗಯ್ಯ, ಮುಳ್ಳೂರು ನಾಗರಾಜ್, ಎನ್.ವೆಂಕಟೇಶ್, ಇಂದೂಧರ ಹೊನ್ನಾಪುರ, ಮಾವಳ್ಳಿ ಶಂಕರ್, ವೆಂಕಟಸ್ವಾಮಿ ಅವರನ್ನೆಲ್ಲ ಮರೆತಿರುವ ಲೇಖನ ಅಪೂರ್ಣ ಎಂದೇ ಹೇಳಬೇಕಾಗುತ್ತದೆ.

ನಂಜನಹಳ್ಳಿ ನಾರಾಯಣ, ಬೆಂಗಳೂರು

ಎಲ್ಲೆಂದರಲ್ಲಿ 'ರಾಜಕೀಯ' ಸಲ್ಲ

ಮಂಡ್ಯ ಜಿಲ್ಲೆಯ ಕೆರಗೋಡಿನಲ್ಲಿ ಎರಡು ಧ್ವಜಗಳ ನೆಪದಲ್ಲಿ ಘರ್ಷಣೆ ನಡೆದಿರುವುದು ವರದಿಯಾಗಿದೆ (ಪ್ರ.ವಾ., ಜ. 29). ರಾಜಕೀಯ ಮಾಡಲು ಇಂದು ಯಾವುದಾದರೂ ಒಂದು ನೆಪ ಬೇಕು. ಕೆರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಂಗಮಂದಿರದ ಬಳಿ ಅಲ್ಲಿನ ಒಂದು ಟ್ರಸ್ಟ್ ವತಿಯಿಂದ ಧ್ವಜಸ್ತಂಭವನ್ನು ನಿರ್ಮಿಸಿ, ಅಯೋಧ್ಯೆಯಲ್ಲಿ ಬಾಲರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಹಾರಿಸಿದ್ದ ಹನುಮಂತ– ಅರ್ಜುನ ಚಿತ್ರವುಳ್ಳ ಕೇಸರಿ ಧ್ವಜವನ್ನು ಪೊಲೀಸರು ತೆಗೆದುಹಾಕಿರುವುದು ಈಗ ತೀವ್ರ ಘರ್ಷಣೆಗೆ ಕಾರಣವಾಗಿ ಅಲ್ಲಿ ರಾಜಕೀಯ ಪ್ರವೇಶಿಸಿದೆ!

ಸರ್ಕಾರದ ಹೇಳಿಕೆ ಪ್ರಕಾರ, ಅನುಮತಿ ನೀಡಿದ್ದು 60 ಅಡಿ ಧ್ವಜಸ್ತಂಭಕ್ಕೆ ಮತ್ತು ಅದನ್ನು ರಾಷ್ಟ್ರಧ್ವಜ ಅನಾವರಣಕ್ಕೆ ಬಳಸಬೇಕೆಂಬ ಸಲುವಾಗಿ. ಇದು ನಿಜವಾಗಿದ್ದಲ್ಲಿ, ಅಲ್ಲಿ ಟ್ರಸ್ಟ್ 108 ಅಡಿ ಎತ್ತರದ ಧ್ವಜಸ್ತಂಭ ನಿರ್ಮಿಸಿ ಹನುಮಧ್ವಜ ಅನಾವರಣ ಮಾಡಿದ್ದು ಸರಿಯಲ್ಲ. ಸ್ತಂಭದ ಜಾಗ ಟ್ರಸ್ಟ್‌ಗಾಗಲೀ ಅಥವಾ ಖಾಸಗಿಯವರಿಗಾಗಲೀ ಸೇರಿದ್ದಾಗಿರದೆ ಸಾರ್ವಜನಿಕ ಸ್ಥಳವಾಗಿರುವಾಗ, ಅಲ್ಲಿ ಅನುಮತಿಗೆ ವಿರುದ್ಧವಾಗಿ ನಡೆದುಕೊಂಡು ಈಗ ವಿವಾದಕ್ಕೆ ಆಸ್ಪದ ಮಾಡಿಕೊಟ್ಟದ್ದು ಖಂಡಿತ ಸರಿಯಲ್ಲ. ಇದಕ್ಕೆ ರಾಜಕೀಯದ ಬಣ್ಣ ಬಳಿದು ಘರ್ಷಣೆಗೆ ಮುಂದಾಗಿದ್ದು ತೀರಾ ತಪ್ಪು. ಹೇಗೆಂದರೆ ಹಾಗೆ ಎಲ್ಲೆಂದರೆ ಅಲ್ಲಿ ರಾಜಕೀಯ ಮೇಲಾಟವನ್ನು ನುಸುಳಿಸುತ್ತಿರುವುದೇ ಇಂದು ಜನರು ಅನುಭವಿಸುವ ಸಾಮಾಜಿಕ ಕ್ಷೋಭೆಗಳಿಗೆ ಕಾರಣವಾಗಿದೆ. ಎರಡು ಧ್ವಜಗಳ ಆಯ್ಕೆಯ ನಡುವಣ ಈ ಘರ್ಷಣೆಯಲ್ಲಿ ಇಂತಹ ಕ್ಷೋಭೆಯನ್ನು ಕಾಣಬಹುದು.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿ: ಯುಜಿಸಿಯ ಕರಡು ಮಾರ್ಗಸೂಚಿ

ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿಗೆ ಹಲವು ಹಂತಗಳಲ್ಲಿ ಕೊಕ್ಕೆ

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ನೇಮಕಾತಿಯಲ್ಲಿ ಮೀಸಲಾತಿಯನ್ನು ತೆಗೆದುಹಾಕುವ ಅವಕಾಶವಿರುವ ನೂತನ ಕರಡು ಮಾರ್ಗಸೂಚಿಯನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಹೊರಡಿಸಿತ್ತು. ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಮೀಸಲಾದ ಹುದ್ದೆಗಳನ್ನು ಮೀಸಲಾತಿಯಿಂದ ಹೊರಗಿಡುವ ಉದ್ದೇಶದ ಈ ಕರಡು ಮಾರ್ಗಸೂಚಿಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಈ ಬಗ್ಗೆ ಸ್ಪಷ್ಟನೆ ನೀಡಿರುವ ಕೇಂದ್ರ ಸರ್ಕಾರವು, 'ಮೀಸಲಾತಿ ತೆಗೆಯಲು ಅವಕಾಶವಿಲ್ಲ' ಎಂದಷ್ಟೇ ಹೇಳಿದೆ. ಆದರೆ ಈ ಮಾರ್ಗಸೂಚಿಯನ್ನು ವಾಪಸ್ ಪಡೆಯುತ್ತೇವೆ ಅಥವಾ ಅದನ್ನು ಜಾರಿಗೆ ತರುವುದಿಲ್ಲ ಎಂದು ಹೇಳಿಲ್ಲ. ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನೇಮಕಾತಿ ಮತ್ತು ಪ್ರವೇಶಾತಿಯಲ್ಲಿ ವಿವಿಧ ಹಂತಗಳಲ್ಲಿ ಮೀಸಲಾತಿಯನ್ನು ತೆಗೆದುಹಾಕುವ ಹಲವು ಅಂಶಗಳು ಈ ಕರಡು ಮಾರ್ಗಸೂಚಿಯಲ್ಲಿವೆ

ಯುಪಿಎ ಜಾರಿಗೆ ತಂದಿದ್ದ ಮಾರ್ಗಸೂಚಿ

ಯುಪಿಎ ಸರ್ಕಾರವು ಅಧಿಕಾರದಲ್ಲಿ ಇದ್ದಾಗ ಜಾರಿಗೆ ತಂದಿದ್ದ 'ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯ ಅನುಷ್ಠಾನ ಮಾರ್ಗಸೂಚಿ–2006' ಅಡಿಯಲ್ಲಿ ಮೀಸಲಾತಿ ನೀಡಲಾಗುತ್ತಿತ್ತು. ಮೀಸಲಾತಿಯನ್ನು ಹೇಗೆ ಜಾರಿ ಮಾಡಬೇಕು, ಬ್ಯಾಕ್‌ಲಾಗ್ ಹುದ್ದೆಗಳನ್ನು ಹೇಗೆ ಭರ್ತಿ ಮಾಡಬೇಕು ಎಂಬ ವಿವರಗಳನ್ನು ಈ ಮಾರ್ಗಸೂಚಿಯಲ್ಲಿ ನೀಡಲಾಗಿತ್ತು. ಅಂತಹ ಅಂಶಗಳು ಹೀಗಿವೆ:

1. ಸೆಕ್ಷನ್ 6(ಸಿ): ಎರಡು ಅಥವಾ ಎರಡಕ್ಕಿಂತ ಹೆಚ್ಚು ವಿಶ್ವವಿದ್ಯಾಲಯಗಳ ನಡುವೆ ಅಂತರ ವರ್ಗಾವಣೆಗೆ ಅವಕಾಶವಿದ್ದರೆ, ಆ ಎಲ್ಲಾ ವಿಶ್ವವಿದ್ಯಾಲಯಗಳ ಹುದ್ದೆಗಳನ್ನು ಒಂದೇ ಗುಂಪು ಎಂದು ಪರಿಗಣಿಸಬೇಕು. ಯಾವುದೇ ವಿಶ್ವವಿದ್ಯಾಲಯ ಅಥವಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳನ್ನು ವಿಭಾಗವಾರು ಎಂದು ವರ್ಗೀಕರಣ ಮಾಡಬಾರದು. ಮೀಸಲಾತಿಯನ್ನು ತಪ್ಪಿಸುವ ಉದ್ದೇಶದಿಂದ ವಿಭಾಗವಾರು ವರ್ಗೀಕರಣ ಮಾಡುವ ಮೂಲಕ ವಿಭಾಗಕ್ಕೆ ಒಂದೇ ಹುದ್ದೆ ಇದೆ ಎಂದು ಕಾರಣವೊಡ್ಡಿ, ಮೀಸಲಾತಿಯನ್ನು ತೆಗೆದುಹಾಕುವುದನ್ನು ನಿಷೇಧಿಸಿದೆ.

2. ಸೆಕ್ಷನ್ 7(ಸಿ): ಶಾರ್ಟ್‌ಫಾಲ್ (ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಮೀಸಲಿಟ್ಟ ಹುದ್ದೆಗಳು ಮತ್ತು ನೇಮಕಾತಿಯಲ್ಲಿ ಭರ್ತಿಯಾದ ಹುದ್ದೆಗಳ ನಡುವಣ ವ್ಯತ್ಯಾಸ. ಉದಾಹರಣೆಗೆ ಮೀಸಲಿದ್ದ 100 ಹುದ್ದೆಗಳಲ್ಲಿ 80 ಹುದ್ದೆಗಳಷ್ಟೇ ಭರ್ತಿಯಾದರೆ, 20 ಹುದ್ದೆಗಳು ಶಾರ್ಟ್‌ಫಾಲ್ ಎನಿಸಿಕೊಳ್ಳುತ್ತವೆ) ಮತ್ತು ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕಾತಿ ನಡೆಸುವಾಗ ಒಟ್ಟು ಮೀಸಲಾತಿಯ ಮಿತಿ ಅನ್ವಯವಾಗುವುದಿಲ್ಲ. ಅಂದರೆ, 'ಒಂದು ನೇಮಕಾತಿಯಲ್ಲಿ ಒಟ್ಟು ಹುದ್ದೆಗಳಲ್ಲಿ ಮೀಸಲಾತಿಗೆ ಒಳಪಟ್ಟ ಹುದ್ದೆಗಳ ಪ್ರಮಾಣ ಶೇ 50ರಷ್ಟನ್ನು ಮೀರುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇರಿದ್ದ ಮಿತಿ ಅನ್ವಯವಾಗುವುದಿಲ್ಲ.

3. ಸೆಕ್ಷನ್ 9(6): ಯಾವುದೇ ಶೈಕ್ಷಣಿಕ ವರ್ಷದಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಮೀಸಲಾದ ಸೀಟುಗಳಿಗೆ ಅರ್ಹ ಅಭ್ಯರ್ಥಿಗಳು ಸಿಗಲಿಲ್ಲವೆಂದು, ಆ ಹುದ್ದೆಗಳನ್ನು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಮಂಜೂರು ಮಾಡುವಂತಿಲ್ಲ. ಬದಲಿಗೆ ಅಂತಹ ಸೀಟುಗಳು ಖಾಲಿ ಇವೆ ಎಂದು ಪ್ರಚಾರ ಮಾಡಬೇಕು. ಆ ಸೀಟುಗಳು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೇ ದೊರೆಯುವಂತೆ ಮಾಡಲು ಎಲ್ಲಾ ಯತ್ನಗಳನ್ನು ಶಿಕ್ಷಣ ಸಂಸ್ಥೆಗಳು ಮಾಡಬೇಕು.

● ಈ ಮೀಸಲಾತಿ ತೆಗೆದುಹಾಕಲು ಯಾವುದೇ ನಿಯಮ ಮತ್ತು ಷರತ್ತುಗಳು ಇಲ್ಲ

ಎನ್‌ಡಿಎ ಹೊರಡಿಸಿರುವ ಕರಡು ಮಾರ್ಗಸೂಚಿ

ಯುಜಿಸಿ ಈಗ ಸಾರ್ವಜನಿಕರ ಅಭಿಪ್ರಾಯ ಮತ್ತು ಆಕ್ಷೇಪವನ್ನು ಆಹ್ವಾನಿಸಿದ್ದ ಅಂತಿಮ ಕರಡು ಮಾರ್ಗಸೂಚಿಯಲ್ಲಿ, ಮೀಸಲಾತಿ ಅಡಿಯಲ್ಲಿ ನೇಮಕಾತಿ ನಡೆಸಲು ಕಠಿಣ ನಿಯಮಗಳನ್ನು ರೂಪಿಸಲಾಗಿದೆ. ಈಗ ಜಾರಿಯಲ್ಲಿರುವ ಮೀಸಲಾತಿ ಮಾರ್ಗಸೂಚಿಗೆ ಸಂಪೂರ್ಣ ವ್ಯತಿರಿಕ್ತವಾದಂತಹ ಹಲವು ಅಂಶಗಳು ಈ ಕರಡು ಮಾರ್ಗಸೂಚಿಯಲ್ಲಿ ಇವೆ:

1. ಸೆಕ್ಷನ್ 1(ಡಬ್ಲ್ಯು): ಒಂದು ನೇಮಕಾತಿ ವರ್ಷದಲ್ಲಿ ಒಂದೇ ಹುದ್ದೆ ಸೃಷ್ಟಿಯಾದರೆ, (ಅದು ಎಸ್‌ಸಿ ಅಥವಾ ಎಸ್‌ಟಿ ಅಥವಾ ಒಬಿಸಿ ಸಮುದಾಯಕ್ಕೆ ಮೀಸಲು ಎಂದಾದರೂ) ಆ ಹುದ್ದೆಯನ್ನು ಮೀಸಲಾತಿಯಿಂದ ಹೊರಗೆ ಇಡಬೇಕು ಮತ್ತು ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನೇ ನೇಮಕ ಮಾಡಬೇಕು. ಮೀಸಲಾತಿ ಹುದ್ದೆಯನ್ನು ಮುಂದಿನ ವರ್ಷಕ್ಕೆ ವರ್ಗಾಯಿಸಬೇಕು. ಮುಂದಿನ ವರ್ಷದಲ್ಲೂ ಒಂದೇ ಹುದ್ದೆ ಇದ್ದರೆ, ಆಗ ಅದನ್ನು ಮೀಸಲು ಹುದ್ದೆ ಎಂದು ಪರಿಗಣಿಸಬೇಕು.

2. ಸೆಕ್ಷನ್ 7.1(III): ಶಾರ್ಟ್‌ಫಾಲ್ ಹುದ್ದೆಗಳು ಎಷ್ಟೇ ಇದ್ದರೂ, ನೇಮಕಾತಿಯ ವೇಳೆ ನೀಡಲಾಗುವ ಒಟ್ಟು ಮೀಸಲಾತಿ ಪ್ರಮಾಣ ಶೇ 50ರ ಮಿತಿಯನ್ನು ದಾಟುವಂತಿಲ್ಲ. ಉದಾಹರಣೆಗೆ: 100 ಹುದ್ದೆಗಳಿಗೆ ನೇಮಕಾತಿ ನಡೆಸಬೇಕಿದೆ. ಅವುಗಳಲ್ಲಿ ಶಾರ್ಟ್‌ಫಾಲ್ ಹುದ್ದೆಗಳು 70 ಇದ್ದರೂ, ಅಷ್ಟೂ ಹುದ್ದೆಗಳನ್ನು ಮೀಸಲಾತಿ ಅಡಿಯಲ್ಲಿ ತರುವಂತಿಲ್ಲ. ಬದಲಿಗೆ 49–50 ಹುದ್ದೆಗಳನ್ನಷ್ಟೇ ಮೀಸಲಾತಿ ಅಡಿ ತರಬೇಕು. ಉಳಿದ 20–21 ಶಾರ್ಟ್‌ಫಾಲ್ ಹುದ್ದೆಗಳನ್ನು ಮುಂದಿನ ವರ್ಷಕ್ಕೆ ವರ್ಗಾಯಿಸಬೇಕು.
● ಬ್ಯಾಕ್‌ಲಾಗ್ ಎಂದು ಪರಿಗಣಿಸಲಾದ ಹುದ್ದೆಗಳಿಗೆ ಈ ಮಿತಿ ಅನ್ವಯವಾಗುವುದಿಲ್ಲ.

3. ಸೆಕ್ಷನ್ 14.1: ಯಾವುದೇ ಶೈಕ್ಷಣಿಕ ವರ್ಷದಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಮೀಸಲಾದ ಸೀಟುಗಳಿಗೆ ಅರ್ಹ ಅಭ್ಯರ್ಥಿಗಳು ಸಿಗಲಿಲ್ಲವಾದರೆ, ಆ ಸೀಟುಗಳನ್ನು ಭರ್ತಿ ಮಾಡಲು ಹೆಚ್ಚುವರಿಯಾಗಿ ಇನ್ನೂ ಎರಡು ಯತ್ನಗಳನ್ನು ಮಾಡಬೇಕು. ಆಗಲೂ ಭರ್ತಿಯಾಗದೇ ಇದ್ದರೆ, ಆ ಸೀಟುಗಳನ್ನು ರದ್ದು ಮಾಡಬೇಕು. ಸೀಟುಗಳನ್ನು ಮುಂದಿನ ಶೈಕ್ಷಣಿಕ ವರ್ಷಕ್ಕೆ ವರ್ಗಾಯಿಸಬಾರದು. ಪಿಎಚ್‌.ಡಿ ಸೀಟುಗಳಿಗೂ ಇದು ಅನ್ವಯವಾಗುತ್ತದೆ. ಸೀಟು ಪಡೆಯಲು ಅರ್ಹತೆ ಏನು ಎಂಬುದನ್ನು ಶಿಕ್ಷಣ ಸಂಸ್ಥೆಗಳು ಸ್ಪಷ್ಟವಾಗಿ ಘೋಷಿಸಿರಬೇಕು.
● ಒಂದು ಶೈಕ್ಷಣಿಕ ವರ್ಷದಲ್ಲಿ ಐದು ಪಿಎಚ್‌.ಡಿ ಸೀಟುಗಳು ಇದ್ದು, ಅವುಗಳಲ್ಲಿ ನಾಲ್ಕಷ್ಟೇ ಭರ್ತಿಯಾಗುತ್ತವೆ. ಒಂದು ಮೀಸಲು ಸೀಟು ಖಾಲಿ ಉಳಿಯುತ್ತದೆ. ಹೊಸ ಕರಡು ಮಾರ್ಗಸೂಚಿಯ ಪ್ರಕಾರ ಆ ಮೀಸಲು ಸೀಟು ರದ್ದಾಗುತ್ತದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮತ್ತೆ ಐದು ಸೀಟುಗಳು ಲಭ್ಯವಾಗುತ್ತವೆ. ಹಿಂದಿನ ವರ್ಷದಲ್ಲಿ ಖಾಲಿ ಉಳಿದಿದ್ದ ಸೀಟು ರದ್ದಾಗುವುದರಿಂದ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಒಂದು ಸೀಟು ನಷ್ಟವಾಗುತ್ತದೆ.

'ಸೇವಾ ಪುಸ್ತಕದ ಮೇಲೆ ಜಾತಿ ಹೆಸರು ನಮೂದಿಸಿ'

ಮೀಸಲಾತಿ ಅಡಿಯಲ್ಲಿ ನೇಮಕವಾದ ನೌಕರರ ಸೇವಾ ಪುಸ್ತಕದ ಮೇಲೆ, ಅವರು ಯಾವ ಜಾತಿಯವರು ಎಂಬ 'ಲೇಬಲ್' ಹಚ್ಚಬೇಕು ಎಂದು ಕರಡು ಮಾರ್ಗಸೂಚಿಯ 11.3ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಅಂತಹ ನೌಕರರ ಹೆಸರು, ವಿಳಾಸ, ಜಾತಿ-ಸಮುದಾಯ, ರಾಜ್ಯ ಮತ್ತಿತರ ವಿವರಗಳನ್ನು ಆ ಲೇಬಲ್‌ನಲ್ಲಿ ನಮೂದಿಸಿರಬೇಕು. ಆ ನೌಕರರ ಮೀಸಲಾತಿ ವಿವರಗಳನ್ನು ಪರಿಶೀಲಿಸಲು ಮತ್ತು ಅಂತಹ ಕಡತಗಳನ್ನು ಸುಲಭವಾಗಿ ಪತ್ತೆ ಮಾಡುವ ಉದ್ದೇಶದಿಂದ ಹೀಗೆ ಮಾಡಬೇಕು. ನೇಮಕಾತಿಯ ಆರಂಭದಲ್ಲಿ ಪರಿಶೀಲನೆಗೆ ಮತ್ತು ಬಡ್ತಿ ಸಂದರ್ಭದಲ್ಲಿ ಇದು ಅನುಕೂಲಕ್ಕೆ ಬರಲಿದೆ ಎಂದು ವಿವರಿಸಲಾಗಿದೆ.

ಮೀಸಲಾತಿ ತೆಗೆದುಹಾಕಲು ಅವಕಾಶ

ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಮೀಸಲಾದ ಹುದ್ದೆಗಳಿಗೆ ನೇಮಕಾತಿ ಆಗದೇ ಇದ್ದರೆ, ಆ ಹುದ್ದೆಗಳನ್ನು ಮೀಸಲಾತಿಯಿಂದ ಹೊರಗೆ ಇಡಬಹುದು ಎಂದು ನೂತನ ಕರಡು ಮಾರ್ಗಸೂಚಿಯ 10ನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಆದರೆ ಹೀಗೆ ಮಾಡುವುದಕ್ಕೂ ಮುನ್ನ ಹಲವು ಹಂತದ ಪ್ರಕ್ರಿಯೆಗಳನ್ನು ಪೂರೈಸಬೇಕು ಎಂದು ಕರಡು ಮಾರ್ಗಸೂಚಿಯಲ್ಲೇ ವಿವರಿಸಲಾಗಿದೆ.

ಗ್ರೂಪ್ 'ಎ' ಹುದ್ದೆಗಳಲ್ಲಿನ ಮೀಸಲಾತಿಯನ್ನು ತೆಗೆದುಹಾಕುವ ಮುನ್ನ,
● ಆ ಹುದ್ದೆ ಖಾಲಿ ಬಿಡಲು ಏಕೆ ಸಾಧ್ಯವಿಲ್ಲ ಎಂಬುದನ್ನು ವಿವರಿಸಬೇಕು
● ಮೀಸಲಾತಿ ಅಡಿಯಲ್ಲೇ ಆ ಹುದ್ದೆ ತುಂಬಲು ನಡೆಸಿದ ಯತ್ನಗಳ ವಿವರ ಇರಬೇಕು. ಅಭ್ಯರ್ಥಿಗಳನ್ನು ಅನರ್ಹಗೊಳಿಸಿದ್ದು ಏಕೆ ಎಂಬುದನ್ನು ವಿವರಿಸಬೇಕು

ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳಿಗೆ ಇದ್ದ ಮೀಸಲಾತಿಯನ್ನು ತೆಗೆದುಹಾಕುವ ಮುನ್ನ ವಿಶ್ವವಿದ್ಯಾಲಯವು ಆ ಸಂಬಂಧ, ಶಿಕ್ಷಣ ಸಚಿವಾಲಯಕ್ಕೆ ಅರ್ಜಿ ಹಾಕಬೇಕು. ಮೇಲೆ ವಿವರಿಸಲಾದ ಎಲ್ಲಾ ವಿವರಗಳು ಮತ್ತು ಅವಕ್ಕೆ ಸಂಬಂಧಿಸಿದ ದಾಖಲೆಗಳನ್ನು ಆ ಅರ್ಜಿಯು ಒಳಗೊಂಡಿರಬೇಕು. ಸಚಿವಾಲಯವು ಒಪ್ಪಿಗೆ ನೀಡಿದರೆ, ಮೀಸಲಾತಿಯನ್ನು ತೆಗೆದುಹಾಕಬಹುದು. ಗ್ರೂಪ್ 'ಸಿ' ಮತ್ತು 'ಡಿ'ಗಳಿಗೆ ಹುದ್ದೆಗಳಿಗೆ ಇದ್ದ ಮೀಸಲಾತಿಯನ್ನು ತೆಗೆದುಹಾಕುವ ನಿರ್ಧಾರವನ್ನು ವಿಶ್ವವಿದ್ಯಾಲಯಗಳ ಕಾರ್ಯಕಾರಿ ಸಮಿತಿಯೇ ತೆಗೆದುಕೊಳ್ಳಬಹುದು. ಬಡ್ತಿಗೂ ಇದೇ ಸ್ವರೂಪದ ನಿಯಮಗಳು ಅನ್ವಯವಾಗುತ್ತದೆ ಎಂದು ಕರಡು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಸರ್ಕಾರದ ಸಮರ್ಥನೆ...

ಮೀಸಲಾತಿ ತೆಗೆದುಹಾಕುವ ಯಾವ ಪ್ರಸ್ತಾವವೂ ಇಲ್ಲ ಎಂದು ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ಯುಜಿಸಿ ಭಾನುವಾರವೇ ಸ್ಪಷ್ಟೀಕರಣ ನೀಡಿವೆ. ಜತೆಗೆ ಎಲ್ಲಾ ನೇಮಕಾತಿಗಳನ್ನು 'ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕರ ನೇಮಕಾತಿಯಲ್ಲಿ ಮೀಸಲಾತಿ) ಕಾಯ್ದೆ–2019'ರ ಅನ್ವಯವೇ ನಡೆಸಬೇಕು. ಮೀಸಲಾತಿಯನ್ನು ತೆಗೆದುಹಾಕುವುದನ್ನು ಈ ಕಾಯ್ದೆಯು ನಿಷೇಧಿಸುತ್ತದೆ ಎಂದು ಸಚಿವಾಲಯ ಮತ್ತು ಯುಜಿಸಿ ಎರಡೂ ಹೇಳಿವೆ. ಆದರೆ ಕಾಯ್ದೆಯಲ್ಲಿ ಅಂತಹ ನಿಷೇಧದ ಬಗ್ಗೆ ಯಾವುದೇ ಉಲ್ಲೇಖ ಇಲ್ಲ.

ಮೀಸಲಾತಿ ತೆಗೆದುಹಾಕುವ ಅಂಶದ ಬಗ್ಗೆ ಮಾತ್ರ ಸರ್ಕಾರ ಸ್ಪಷ್ಟನೆ ನೀಡಿದೆ. ಮೀಸಲಾತಿಯನ್ನು ತೆಗೆದುಹಾಕುವ ಅಥವಾ ಮುಂದೂಡುವ ಅಥವಾ ಕಡಿತ ಮಾಡುವ ಇತರ ಹಲವು ಅಂಶಗಳ ಬಗ್ಗೆ ಯಾವುದೇ ಸ್ಪಷ್ಟನೆ ನೀಡಿಲ್ಲ. ಅಲ್ಲದೇ, ಈ ಮಾರ್ಗಸೂಚಿಯನ್ನು ವಾಪಸ್ ಪಡೆಯುತ್ತೇವೆ ಅಥವಾ ರದ್ದು ಪಡಿಸುತ್ತೇವೆ ಎಂಬುದನ್ನೂ ಸರ್ಕಾರ ಹೇಳಿಲ್ಲ.

ಆಧಾರ: ಯುಜಿಸಿ, 'ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ನೀತಿಯ ಅನುಷ್ಠಾನ ಮಾರ್ಗಸೂಚಿಗಳು' ಕರಡು–2023, 'ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ನೀತಿಯ ಅನುಷ್ಠಾನ ಮಾರ್ಗಸೂಚಿಗಳು–2006, 'ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕರ ನೇಮಕಾತಿಯಲ್ಲಿ ಮೀಸಲಾತಿ) ಕಾಯ್ದೆ–2019', ಪಿಟಿಐ

ಸಿನಿ ಬಿಟ್ಸ್

'ಮಾದೇವ'ನಿಗೆ ಜೋಡಿಯಾದ ಸೋನಲ್

'ರಾಬರ್ಟ್' ಸಿನಿಮಾ ಬಳಿಕ ವಿನೋದ್ ಪ್ರಭಾಕರ್ ಹಾಗೂ ಸೋನಲ್ ಮೊಂತೆರೋ ಜೋಡಿಯಾಗಿ ನಟಿಸುತ್ತಿರುವ 'ಮಾದೇವ' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ. ಇತ್ತೀಚೆಗೆ ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಕಲಾವಿದರ ಸಂಘದಲ್ಲಿ ಟೀಸರ್ ಅನಾವರಣ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ನಿರ್ದೇಶಕ ತರುಣ್ ಸುಧೀರ್, ನಟರಾದ ಅಭಿಷೇಕ್ ಅಂಬರೀಶ್, ಧನ್ವೀರ್ ಗೌಡ, ಝೈದ್ ಖಾನ್ ಸಿನಿಮಾ ತಂಡಕ್ಕೆ ಜೊತೆಯಾದರು. ಮಾಸ್ ಅಂಶಗಳಿಂದ ಕೂಡಿರುವ ಚಿತ್ರದ ಟೀಸರ್‌ನಲ್ಲಿ 'ಮರಿ ಟೈಗರ್' ರಗಡ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಖಳನಾಯಕನಾಗಿ ಶ್ರೀನಗರ ಕಿಟ್ಟಿ ನಟಿಸಿದ್ದು, ಶ್ರುತಿ ಮತ್ತು ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ನೈಜ ಘಟನೆಗಳಿಂದ ಸ್ಫೂರ್ತಿ ಪಡೆದ ಈ ಸಿನಿಮಾದ ಕಥೆಯು 1965, 1980 ಮತ್ತು 1999ರ ಕಾಲಘಟ್ಟದಲ್ಲಿ ನಡೆಯಲಿದೆ. ಕನಕಪುರ, ಚನ್ನಪಟ್ಟಣ, ಶಿವಮೊಗ್ಗ, ರಾಮೋಜಿ ಫಿಲಂ ಸಿಟಿ, ಹೆಸರಘಟ್ಟ ಭಾಗಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. 'ರಾಬರ್ಟ್ ಸಿನಿಮಾ ಬಳಿಕ ನನಗೆ ಹಾಗೂ ವಿನೋದ್ ಅವರಿಗೆ ಜೋಡಿಯಾಗಿ ತುಂಬಾ ಸಿನಿಮಾಗಳು ಬಂದವು. 'ಮಾದೇವ' ಸಿನಿಮಾ ವಿನೋದ್ ಅವರ ಬಳಿ ಬಂದಾಗ, ಅವರು ನನ್ನನ್ನು ನಾಯಕಿಯನ್ನಾಗಿ ಕಾಸ್ಟ್ ಮಾಡಿದರೆ ಚೆನ್ನಾಗಿ ಇರುತ್ತದೆ ಎಂದಾಗ ಈ ಸಿನಿಮಾ ಪಯಣ ಆರಂಭವಾಯಿತು' ಎಂದು ನೆನಪಿಸಿಕೊಂಡರು ಸೋನಲ್.

ಮತ್ತೆ ತೆರೆಗೆ 'ರಂಗಿತರಂಗ' ಕಾಂಬೊ

ಹತ್ತು ವರ್ಷಗಳ ಹಿಂದೆ ಚಂದನವನದಲ್ಲಿ ಸದ್ದು ಮಾಡಿದ್ದ ಸಿನಿಮಾ 'ರಂಗಿತರಂಗ'. ಆ ಸಿನಿಮಾದಲ್ಲಿ ಖಳನಾಯಕನ ಪಾತ್ರದಲ್ಲಿ ನಟಿಸಿದ ಸಾಯಿ ಕುಮಾರ್ ಹಾಗೂ ನಾಯಕನಾಗಿ ನಟಿಸಿದ್ದ ನಿರೂಪ್ ಭಂಡಾರಿ, ಇದೀಗ ಹೊಸ ಪ್ರಾಜೆಕ್ಟ್ ಒಂದರಲ್ಲಿ ತಂದೆ–ಮಗನಾಗಿ ಕಾಣಿಸಿಕೊಳ್ಳಲಿದ್ದಾರೆ.

ಮೊದಲ ಬಾರಿಗೆ ಡೈರೆಕ್ಟರ್ ಕ್ಯಾಪ್ ತೊಟ್ಟಿರುವ ಸಚಿನ್ ವಾಲಿ ಸಾರಥ್ಯದ ಸಿನಿಮಾದಲ್ಲಿ ನಿರೂಪ್ ಹಾಗೂ ಸಾಯಿಕುಮಾರ್ ಮತ್ತೆ ಜೊತೆಯಾಗಿ ನಟಿಸುತ್ತಿದ್ದಾರೆ. ಈಗಾಗಲೇ ಈ ಚಿತ್ರದ ಚಿತ್ರೀಕರಣ ಆರಂಭವಾಗಿದೆ. ಚಿತ್ರದ ಶೀರ್ಷಿಕೆ ಮತ್ತು ಫಸ್ಟ್‌ಲುಕ್ ಫೆ.6ಕ್ಕೆ ಅನಾವರಣಗೊಳ್ಳುತ್ತಿದೆ. 'ಕೌಸಲ್ಯ ಸುಪ್ರಜಾ ರಾಮ' ಚಿತ್ರದಲ್ಲಿ 'ಶಿವಾನಿ'ಯಾಗಿ ಮಿಂಚಿದ ಬೃಂದಾ, ಈ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಲಿದ್ದಾರೆ. ಇದೇ ಚಿತ್ರದಲ್ಲಿ ನಟಿ ಅಂಕಿತಾ ಅಮರ್ ವರದಿಗಾರ್ತಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ನಿರೂಪ್ ಭಂಡಾರಿ, ಸಾಯಿಕುಮಾರ್

ಸತ್ಯ ಮತ್ತು ಸುಳ್ಳಿನ ನಡುವೆ ಇರುವ ಸಾಮಾಜಿಕ ಬದ್ಧತೆ ಸುತ್ತ ಸಾಗುವ ಕಾಮಿಡಿ ಮತ್ತು ಫ್ಯಾಮಿಲಿ ಎಂಟರ್‌ಟೈನರ್ ಕಥಾಹಂದರವನ್ನು ಈ ಸಿನಿಮಾ ಹೊಂದಿದೆ ಎಂದಿದೆ ಚಿತ್ರತಂಡ. ಅಂಕಿತ್ ಸೋನಿಗಾರ ಈ ಚಿತ್ರ ನಿರ್ಮಿಸಿಸುತ್ತಿದ್ದು, ಪ್ರಶಾಂತ್ ಮುಲಗೆ ಸಹ ನಿರ್ಮಾಪಕರಾಗಿದ್ದಾರೆ. ಸಚಿನ್ ಬಸ್ರೂರ್ ಸಂಗೀತ, ಸಂದೀಪ್ ವಲ್ಲೂರಿ ಛಾಯಾಚಿತ್ರಗ್ರಹಣ, ಉಜ್ವಲ್ ಚಂದ್ರ ಸಂಕಲನ, ಉಲ್ಲಾಸ್ ಹೈದೂರು ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ರಾಮಮಂದಿರದ ದೇಣಿಗೆ ಪೆಟ್ಟಿಗೆಯು ಭರ್ತಿಯಾಗಿದೆ ಎಂಬಂಥ ಮಾಹಿತಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಪೆಟ್ಟಿಗೆಯಿಂದ ಕಂತೆ ಕಂತೆ ನೋಟುಗಳನ್ನು ಬುಟ್ಟಿಗೆ ತುಂಬುವ ದೃಶ್ಯ ಇರುವ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. 'ಅಯೋಧ್ಯಾ ಧಾಮದಲ್ಲಿ ರಾಮಮಂದಿರವು (ಜ.22) ಉದ್ಘಾಟನೆಯಾಗಿದೆ. ಉದ್ಘಾಟನೆಯಾದ ಅರ್ಧ ದಿನದಲ್ಲಿಯೇ ಮಂದಿರದ ದೇಣಿಗೆ ಪೆಟ್ಟಿಗೆಯು ಭರ್ತಿಯಾಗಿದೆ. ಇದನ್ನೇ ದೇವಸ್ಥಾನ ಆರ್ಥಿಕತೆ ಎನ್ನುತ್ತಾರೆ. ಇದರಿಂದ ಎಷ್ಟೊಂದು ಶಾಲೆಗಳನ್ನು ಹಾಗೂ ಆಸ್ಪತ್ರೆಗಳನ್ನು ಕಟ್ಟಿಸಬಹುದಲ್ಲವೇ?' ಎಂಬ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊದ ದೃಶ್ಯವನ್ನು ರಿವರ್ಸ್ ಇಮೇಜ್‌ನಲ್ಲಿ ಹುಡುಕಿದಾಗ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡ ವಿಡಿಯೊವೊಂದು ದೊರೆಯಿತು. @sanwaliya_seth_1007 ಎನ್ನುವ ಖಾತೆಯಲ್ಲಿ ಈ ವಿಡಿಯೊವನ್ನು 2024ರ ಜನವರಿ 16ರಂದು ಹಂಚಿಕೊಳ್ಳಲಾಗಿತ್ತು. 'ಶ್ರೀ ಸಾಂವರಿಯಾ ಸೇಠ್: ಈ ಬಾರಿ ದಾಖಲೆಯ 12 ಕೋಟಿ 69 ಲಕ್ಷ ದೇಣಿಯು ಸಂಗ್ರಹವಾಗಿದೆ' ಎಂದು ಬರೆದುಕೊಂಡಿತ್ತು. ತಾನು ಸಾಂವರಿಯಾ ಸೇಠ್ ಮಂದಿರದ ಅರ್ಚಕ ಎಂದು ಈ ಖಾತೆಯ ಬಯೊದಲ್ಲಿ ಬರೆದುಕೊಳ್ಳಲಾಗಿದೆ. ಈ ಮಂದಿರವು ರಾಜಸ್ಥಾನದಲ್ಲಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊಗೂ, ಈ ಖಾತೆಯಲ್ಲಿ ಹಂಚಿಕೊಳ್ಳಲಾದ ವಿಡಿಯೊಗೂ ಸಾಮ್ಯತೆ ಇದೆ. ಜೊತೆಗೆ, ರಾಮಮಂದಿರದ ದೇಣಿಗೆ ಪೆಟ್ಟಿಗೆ ಕುರಿತು 'ಆಜ್‌ತಕ್' ವರದಿ ಪ್ರಕಟಿಸಿದೆ. ಈ ವರದಿಯಲ್ಲಿ ತೋರಿಸಲಾದ ಪೆಟ್ಟಿಗೆಯ ದೃಶ್ಯಗಳಿಗೂ ಈಗ ಹಂಚಿಕೆಯಾಗುತ್ತಿರುವ ವಿಡಿಯೊಗೂ ಸಾಮ್ಯತೆ ಇಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜನವರಿ 30, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ಚತುರ್ಥಿ ಗಂ. 08-55 ನಕ್ಷತ್ರ: ಉತ್ತರಫಲ್ಗುನಿ ಗಂ. 22-06 ಯೋಗ: ಅತಿಗಂಡ ಗಂ. 10-43 ಕರಣ: ಬಾಲವ ಗಂ. 08-55, ಮಕರ ಮಾಸದ 14 ನೇ ದಿನ, ಮಳೆನಕ್ಷತ್ರ: ಶ್ರವಣ 2.
ರಾಹುಕಾಲ : ಮಧ್ಯಾಹ್ನ 3-00 – 04-30, ಸೂರ್ಯೋದಯ : 07-01 ಸೂರ್ಯಾಸ್ತ : 06-26, ಮುಸ್ಲಿಂ ದಿನಾಂಕ : 17 ರಜಬ್ ದಿನ ವಿಶೇಷ : ಹುತಾತ್ಮರ ದಿನಾಚರಣೆ
ಅದೃಷ್ಟ ಸಂಖ್ಯೆ : 1, 4

ಮೇಷ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿದ್ದ ನಿಮಗೆ, ಅತಿ ಹೆಚ್ಚಿನ ವರಮಾನದ ಮಾರ್ಗವನ್ನು ಸ್ನೇಹಿತರೊಬ್ಬರು ತೋರಿಸುವರು. ದೃಷ್ಟಿದೋಷ ಸರಿಪಡಿಸಿಕೊಳ್ಳಲು ವೈದ್ಯರನ್ನು ಭೇಟಿ ಮಾಡಿ.

ವೃಷಭ: ಬೆನ್ನು ಮತ್ತು ಕಾಲಿನ ನೋವು ನಿವಾರಿಸಿಕೊಳ್ಳಲು ಸೂಕ್ತ ವ್ಯಾಯಾಮ ತಿಳಿದುಕೊಳ್ಳುವುದು ಉತ್ತಮ. ಸೋಮಾರಿತನವು ದೂರವಾಗಿ ಕೈಹಿಡಿದ ಕಾರ್ಯ ಸಾಧನೆ ಅಂತಿಮ ಹಂತ ತಲುಪಲಿದೆ.

ಮಿಥುನ: ಕಂಪನಿಯಲ್ಲಿ ಸಿಗುವ ಗೌರವವನ್ನು ಉಳಿಸಿಕೊಳ್ಳುವತ್ತ ಹೆಚ್ಚಿನ ಗಮನ ಹರಿಸುವುದು ಉತ್ತಮ. ಸಕಾರಾತ್ಮಕ ನಡವಳಿಕೆಗಳಿಂದ ಲಾಭ ಕಂಡುಕೊಳ್ಳಲಿದ್ದೀರಿ. ಆಧ್ಯಾತ್ಮಿಕ ವಿಚಾರಗಳತ್ತ ಮನಸ್ಸು ಹೊರಳುವುದು.

ಕರ್ಕಾಟಕ: ವಸ್ತ್ರ ವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ ಸಂಸ್ಥೆಯೊಂದರಲ್ಲಿ ಉದ್ಯೋಗ ಸಿಗುವುದು. ಆಫೀಸಿನಲ್ಲಿ ಕೆಲಸದ ವೇಗವನ್ನು ಹೆಚ್ಚಿಸಿಕೊಳ್ಳುವಿರಿ. ಠೇವಣಿಯಲ್ಲಿ ಅಥವಾ ಆಸ್ತಿ ರೂಪದಲ್ಲಿ ಹಣ ಬೆಳೆಯಲಿದೆ.

ಸಿಂಹ: ನಾಳೆಯ ಕೆಲಸಗಳ ಬಗ್ಗೆ ಇಂದಿನ ದಿನವೇ ತಯಾರಿಯನ್ನು ನಡೆಸಿಕೊಳ್ಳುವುದು ಯಶಸ್ಸಿಗೆ ಸಹಾಯವಾಗುವುದು. ಮಾನಸಿಕವಾಗಿ ಆದ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮಾತನಾಡುವಿರಿ.

ಕನ್ಯಾ: ಮನೆಯ ವಿಸ್ತರಣೆ ವಿಷಯವಾಗಿ ಆಲೋಚನೆಗಳು ಗರಿಗೆದರಲಿವೆ. ಯಾವುದೇ ವಿಚಾರದಲ್ಲೂ ಕಳವಳ ಬೇಡ, ಎಲ್ಲವೂ ಇಚ್ಛೆಯಂತೆ ನಡೆಯಲಿದೆ. ಯೋಜನೆಗಳು ಕಾರ್ಯಗತಗೊಳ್ಳಲು ಪ್ರಯತ್ನ ನಡೆಸಬೇಕಾಗುವುದು.

ತುಲಾ: ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಬಹಿರಂಗಗೊಂಡು ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ಕೆಲಸದ ಒತ್ತಡ ಸಂಜೆಯ ವೇಳೆಗೆ ಕಡಿಮೆಯಾಗುವುದಲ್ಲದೆ ಲಾಭಕರವಾಗಿ ಮುಗಿಯುವುದು.

ವೃಶ್ಚಿಕ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಥವಾ ಅವರ ಆಸೆ ಆಕಾಂಕ್ಷೆಯನ್ನು ಈಡೇರಿಸಲು ಹಣ ವ್ಯಯವಾಗಲಿದೆ. ಕೌಟುಂಬಿಕ ಸಮಸ್ಯೆಗಳಿಗೆ ನ್ಯಾಯಾಲಯದ ಮೆಟ್ಟಿಲು ಏರುವ ವಿಚಾರಗಳು ನಡೆಯದಂತೆ ಎಚ್ಚರವಹಿಸಿ.

ಧನು: ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಪ್ರಯತ್ನ ನಡೆಸಬೇಕಾಗುತ್ತದೆ. ಎಲ್ಲಾ ವಿಷಯಗಳಲ್ಲೂ ಸ್ವಾಭಾವಿಕ ಗುಣಕ್ಕಿಂತ ಹೆಚ್ಚಿನ ಸಮಾಧಾನದಿಂದಿರುವುದು ಉತ್ತಮ. ಧನ ಸಹಾಯ ಅಪೇಕ್ಷಿಸಬೇಡಿ.

ಮಕರ: ಯಾವುದಕ್ಕೂ ಆತುರ ಪಡಬೇಡಿ. ಭಾವನೆಗಳ ಜತೆಗೆ ಅಭಿಪ್ರಾಯವೂ ಬದಲಾಗುವ ಕಾಲ. ಹಾಗಾಗಿ ಯಾವುದೇ ವಿಷಯದಲ್ಲಿ ಆತುರದ ನಿರ್ಧಾರ ಸರಿಯಲ್ಲ. ಮನೆ ಅಲಂಕೃತಗೊಳ್ಳುವುದು.

ಕುಂಭ: ಒಡಹುಟ್ಟಿದವರ ಸಹಾಯ ಸಹಕಾರದಿಂದ ಮಾನಸಿಕ ನೆಮ್ಮದಿ, ಹಾಗೂ ಸಂಸಾರದಲ್ಲಿ ಸಮತೋಲನ ಪಡೆಯುವಿರಿ. ಗೃಹ ಖರೀದಿ ಇಲ್ಲವೇ ಗೃಹ ನಿರ್ಮಾಣದಂತಹ ಕಾರ್ಯಗಳನ್ನು ಮುಂದೂಡುವುದು ಉತ್ತಮ.

ಮೀನ: ಬಹು ನಿರೀಕ್ಷಿತ ಫಲಿತಾಂಶ, ಯಶಸ್ಸು ಹಾಗೂ ಹೆಸರು ಈ ದಿನ ಒಲಿದು ಬರುತ್ತದೆ. ವೃತ್ತಿಯಲ್ಲಿ ನಿರಂತರದ ಆದಾಯವಿದ್ದರೂ ಋಣಬಾಧೆ ತಪ್ಪದು. ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರುವುದು.

ನುಡಿ ಬೆಳಗು

ಪಿ. ಚಂದ್ರಿಕಾ

ನಂಬಿಕೆ

ಶಾಲೆಗೆ ಬಂದ ತಾಯಿಗೆ ಮಗ ಮೂಲೆಯಲ್ಲಿ ಕೂತಿರುವುದು ಕಾಣುತ್ತದೆ. ಅವನಿಗೆ ಮಾತಾಡದಿರುವಂತೆ ತಾಕೀತು ಮಾಡಲಾಗಿತ್ತು. ಮಗನನ್ನು ಆಕೆ ಯಾವತ್ತು ಹಾಗೆ ನೋಡೇ ಇರಲಿಲ್ಲ. ತುಂಬಾ ಸಂಕಟ ಅನ್ನಿಸುತ್ತೆ. 'ಅಂಥಾ ತಪ್ಪನ್ನು ನನ್ನ ಮಗ ಏನು ಮಾಡಿದ?' ಎಂದು ಟೀಚರ್‌ರನ್ನು ಕೇಳಿದಳು.

ಶಾಲೆಯಲ್ಲಿ ಮಗನ ಟೀಚರ್ ಹೇಳಿದರು, 'ಎಡ್ಡಿಯನ್ನು ನೀವು ಹೇಗೆ ಬೆಳೆಸಿದ್ದೀರಿ? ಅವನಿಗೆ ನಾವು ಹೇಳಿಕೊಡುವುದನ್ನು ಕಲಿಯಬೇಕೆನ್ನುವುದೇ ಇಲ್ಲ. ಇಲ್ಲ ಸಲ್ಲದ ಪ್ರಶ್ನೆಗಳನ್ನು ಕೇಳಿ ನಮ್ಮನ್ನು ಪೇಚಿಗೆ ಸಿಗಿಸುತ್ತಾನೆ. ಮೊಟ್ಟೆಯ ಮೇಲೆ ನಾವು ಕಾವು ಕೂತರೆ ಯಾಕೆ ಮರಿಯಾಗಲ್ಲ, ಒಡೆದುಹೋಗುತ್ತದೆ ಎನ್ನುತ್ತಾನೆ. ಇವನಿಂದಾಗಿ ಎಲ್ಲ ಮಕ್ಕಳು ಹಾಳಾಗುತ್ತಿದ್ದಾರೆ, ಎಲ್ಲರಿಗೂ ಇವನು ತಮಾಷೆಯ ವಸ್ತುವಾಗಿದ್ದಾನೆ' ಎಂದು.

ತಾಯಿಗೆ ಕೋಪ ಬರುತ್ತದೆ. 'ನಿಮಗೆ ನನ್ನ ಮಗನ ಪ್ರಶ್ನೆಗೆ ಉತ್ತರ ಕೊಡಲಾಗಲಿಲ್ಲ ಎಂದರೆ ಗೊತ್ತಿಲ್ಲ ಎಂದು ಒಪ್ಪಿಕೊಳ್ಳಿ. ಬದಲಿಗೆ ನನ್ನ ಮಗನದ್ದೇ ತಪ್ಪು ಎನ್ನಬೇಡಿ' ಎನ್ನುತ್ತಾಳೆ. ಟೀಚರ್‌ಗೂ ಕೋಪ ಬರುತ್ತದೆ, 'ಬಾಯಿಗೆ ಬಂದ ಪ್ರಶ್ನೆ ಕೇಳುವ ಮಗನಿಗೆ ಬುದ್ಧಿ ಹೇಳಲಾಗದಿದ್ದರೆ ನಿಮ್ಮ ಮಗನಿಗೆ ನೀವೇ ಪಾಠ ಹೇಳಿ. ನಿಮ್ಮ ಪಾಲಿಗೆ ಅವನು ಬುದ್ಧಿವಂತ ಅಲ್ಲವೇ? ಅವನಿಗೆ ನಮ್ಮ ಶಾಲೆಯ ಅಗತ್ಯ ಇಲ್ಲ' ಎನ್ನುತ್ತಾರೆ.

ತಾಯಿಗೆ ತುಂಬಾ ನೋವಾಗುತ್ತದೆ. ಅವಳ ಒಳ ಮನಸ್ಸಿಗೆ ಗೊತ್ತು ತನ್ನ ಮಗನ ಪ್ರಶ್ನೆಗಳ್ಯಾವುವೂ ಉದ್ಧಟತನದಿಂದ ಬಂದದ್ದಲ್ಲ ಎಂದು. ಒಂದು ನಿರ್ಧಾರಕ್ಕೆ ಬಂದ ತಾಯಿ ಟೀಚರ್‌ಗೆ ಹೇಳುತ್ತಾಳೆ, 'ಗಾಳಿ ಹೊತ್ತುಬರುವ ಪುಟ್ಟ ಬೀಜದಲ್ಲಿ ವೃಕ್ಷವಾಗುವ ಶಕ್ತಿ ಇದೆಯೆಂದು ನೀವು ನಂಬಲಾರಿರಿ. ಈ ಪುಟ್ಟ ಹುಡುಗನ ಪ್ರಶ್ನೆಗೆ ದೊಡ್ಡದನ್ನು ಹುಡುಕುವ ತಾಕತ್ತಿದೆ ಎಂದು ನೀವು ಅಂದುಕೊಳ್ಳುವುದೂ ಇಲ್ಲ. ನನಗೆ ಗೊತ್ತು ನನ್ನ ಮಗ ಸುಮ್ಮನೆ ಹುಟ್ಟಿಬಂದಿಲ್ಲ. ಅಸಾಧಾರಣವಾದದ್ದನ್ನು ಸಾಧಿಸುವ ಚೈತನ್ಯ ಅವನಲ್ಲಿದೆ. ನಿಮ್ಮ ಶಿಕ್ಷಣ ಅವನಿಗೆ ಬೇಡ. ಚರಿತ್ರೆಯಲ್ಲಿ ಮಗನಿಗೆ ಪಾಠ ಹೇಳಿದ ತಾಯಿಯಾಗಿ ನಾನು ಉಳಿಯುತ್ತೇನೆ, ಗಿಣಿಯ ಪಾಠ ಹೇಳುವ ನೀವಲ್ಲ' ಎಂದು.

ಮನೆಗೆ ಕರೆತಂದ ತಾಯಿ ಮಗನ ಪ್ರಶ್ನೆಗಳನ್ನು ಸಾವಧಾನವಾಗಿ ಕೇಳಿಸಿಕೊಳ್ಳುತ್ತಾಳೆ. ಉತ್ತರ ಹೇಳುತ್ತಾಳೆ. ಇಲ್ಲದಿದ್ದರೆ ಹುಡುಕುತ್ತಾಳೆ. ಅವನೊಳಗಿನ ಶಕ್ತಿಗೆ ಬಲವಾಗುತ್ತಾಳೆ. ಜಗತ್ತನ್ನೆ ಬದಲಿಸಿದ ಅವನ ಲೆಕ್ಕವಿರದಷ್ಟು ಸಂಶೋಧನೆಗೆ ದಾರಿ ಹಾಕಿಕೊಡುತ್ತಾಳೆ. ಆ ಹುಡುಗ ಬೇರೆ ಯಾರೂ ಅಲ್ಲ ಪ್ರಸಿದ್ಧ ವಿಜ್ಞಾನಿ ಥಾಮಸ್ ಆಲ್ವಾ ಎಡಿಸನ್. ಮಗನೆಡೆಗಿನ ತಾಯಿಯ ನಂಬಿಕೆ ಕಡೆಗೂ ನಿಜವಾಗುತ್ತದೆ. ಅವನನ್ನು ರೂಪಿಸಿದ ತಾಯಿ ನ್ಯಾನ್ಸಿ ಸ್ಕಾಟಿಸ್ ಕೂಡಾ ಚರಿತ್ರೆಯಲ್ಲಿ ಅಜರಾಮರಳಾಗಿದ್ದಾಳೆ.

ನಮ್ಮ ಮಕ್ಕಳನ್ನು ನಾವೇ ನಂಬಬೇಕಲ್ಲವೇ?!

ಪದಬಂಧ 5576

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ನಾಲ್ಕು ವೇದಗಳಲ್ಲಿ ಮೊದಲನೆಯದು (3)
4. ಭವದಲ್ಲಿ ಅಂತ್ಯವಾಗಿರುವ ಹುಟ್ಟು (3)
6. ಮೊದಲು ಉತ್ತರ ನೀಡಿ ವಹಿಸಿಕೊಂಡ ಹೊಣೆಗಾರಿಕೆ (5)
7. ಭವನದ ಮೇಲಿಂದ ಕಾಣುತ್ತಿರುವ ಆಕಾಶ (2)
9. ಮಾನವನಲ್ಲಿ ಹೊಸತು ಕಾಣುತಿದೆಯೇ? (2)
10. ಗುರುವಿಗೆ ತಕ್ಕವನು ಈ ವಿದ್ಯಾರ್ಥಿ! (2)
11. ಸುಪ್ರಭಾತದ ಹೊತ್ತಿನಲ್ಲಿ ಬಂದಿಳಿದ ಮಗ (2)
13. ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಳ್ಳುವುದು (5)
16. ಮಡಿಕೆಗಳನ್ನೊಳಗೊಂಡಿರುವ ಬುದ್ಧಿಯ ಅಂಗ (3)
17. ಒನಪು ತೋರಿದಾಗ ಬಂದಿರುವ ಸ್ಮರಣೆ (3)

ಮೇಲಿಂದ ಕೆಳಕ್ಕೆ
1. ವರ್ಷದ ಎರಡೆರಡು ತಿಂಗಳುಗಳ ಅವಧಿ (4)
2. ಅನುಜನೆದುರು ರಾಕ್ಷಸ ನಿಂತಿದ್ದಾನಲ್ಲಾ! (3)
3. ಸಾಬೂನು ಬಳಸಲು ಹೇಳಿದ ನೆಪ (3)
4. ಈತ ತಿರುಗಾಡುವವನು (3)
5. ಅರವತ್ತು ವರ್ಷದ ಹುಟ್ಟಿದ ಹಬ್ಬ (4)
8. ಮುಂದೆ ಬರಲಿರುವ ಕಾಲ (3)
9. ಸ್ವಪ್ನವಿಲ್ಲಿ ನಿಜವಾಗಿದೆಯಲ್ಲಾ? (3)
10. ತಲೆ ಬರಹ ಇಲ್ಲಿದೆ (4)
12. ಕನ್ನಡಿಗನು ಧರಿಸಿದ ಹೆಲ್ಮೆಟ್ (4)
13. ಮರುಳ ಹಿಡಿದಿರುವ ಉಸುಕು (3)
14. ಕಾಲಾವಧಿಯನ್ನು ಹೀಗೆನ್ನಿ (3)
15. ಮಾದರಿ ಇಲ್ಲಿ ಕಾಣುತ್ತಿದೆ (3)



5575ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3. ತಡಸಲು 5. ಮಧುಕರಿ
6. ಸುಂಠ 7. ದಸ್ತಗಿರಿ
10. ಕಟುನುಡಿ 13. ಷಷ್ಠಿ
14. ಉದಾಸೀನ
15. ಕಟಿಸೂತ್ರ

ಮೇಲಿಂದ ಕೆಳಕ್ಕೆ:
1. ಆಮಲಕ 2. ಮಕರಂದ
3. ತರಾತುರಿ 4. ಲುಬ್ಧಕ
6. ಸುಂದರಿ 8. ಗಿಲೀಟು
9. ಸಂತುಷ್ಟಿ 10. ಕರಪತ್ರ
11. ಡಿಕ್ರಿದಾರ 12. ನವನಟ
13. ಷಡ್ಡಕ

ಸುಡೊಕು 5961

			4		3		6	
	9							5
			5		8	7	2	
		9		3				7
	3				6		5	
8		6		4		2		3
		5		2			3	4
3						5		
	8	2		5			7	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5960 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಇ.ಡಿ ವಿಚಾರಣೆಗೆ ಹಾಜರಾದ ಲಾಲು

ಪಟ್ನಾ (ಪಿಟಿಐ): 'ಉದ್ಯೋಗಕ್ಕಾಗಿ ಭೂಮಿ ಹಗರಣ'ಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರು ಸೋಮವಾರ ಜಾರಿ ನಿರ್ದೇಶನಾಲಯದ (ಇ.ಡಿ) ಕಚೇರಿಗೆ ಹಾಜರಾಗಿ ವಿಚಾರಣೆ ಎದುರಿಸಿದರು.

ಲಾಲು ತಮ್ಮ ಪುತ್ರಿ ಮೀಸಾ ಭಾರತಿ ಅವರೊಂದಿಗೆ ಬೆಳಿಗ್ಗೆ 11ರ ಸುಮಾರಿಗೆ ಇ.ಡಿ ಕಚೇರಿಗೆ ತಲುಪಿದರು ಎಂದು ಅಧಿಕಾರಿಗಳು ಹೇಳಿದ್ದಾರೆ.

'ಯಾವುದೇ ತನಿಖಾ ಸಂಸ್ಥೆ ನಮ್ಮ ಕುಟುಂಬದ ಸದಸ್ಯರನ್ನು ವಿಚಾರಣೆಗೆ ಕರೆದಾಗಲೆಲ್ಲಾ, ನಾವು ಅಲ್ಲಿಗೆ ಹೋಗಿ ಸಹಕರಿಸುತ್ತೇವೆ. ಪ್ರತಿಯೊಂದು ಪ್ರಶ್ನೆಗೂ ಉತ್ತರಿಸುತ್ತೇವೆ. ಅನಾರೋಗ್ಯದ ಕಾರಣ ಅವರಿಗೆ (ಲಾಲು) ಇನ್ನೊಬ್ಬರ ಸಹಾಯವಿಲ್ಲದೆ ನಡೆದಾಡಲು ಕಷ್ಟವಾಗುತ್ತದೆ. ಆದ್ದರಿಂದ ಎಲ್ಲಿಗಾದರೂ ಹೋಗುವಾಗ ಒಬ್ಬರು ಅವರ ಜತೆಯಲ್ಲಿ ಇರಬೇಕು' ಎಂದು ಇ.ಡಿ ಕಚೇರಿಗೆ ಪ್ರವೇಶಿಸುವ ಮುನ್ನ ಮೀಸಾ ಅವರು ತಿಳಿಸಿದರು.

ಆದರೆ ಲಾಲು ಜತೆ ಇ.ಡಿ ಕಚೇರಿಯ ಒಳಗೆ ಪ್ರವೇಶಿಸಲು ಮೀಸಾ ಅವರಿಗೆ ಅನುಮತಿ ನಿರಾಕರಿಸಲಾಯಿತು ಎಂದು ಲಾಲು ಅವರ ಇನ್ನೊಬ್ಬ ಪುತ್ರಿ, ರೋಹಿಣಿ ಆಚಾರ್ಯ ಆರೋಪಿಸಿದ್ದಾರೆ.

'ನನ್ನ ತಂದೆಯ ಆರೋಗ್ಯ ಸ್ಥಿತಿ ಹೇಗಿದೆ ಎನ್ನುವುದು ಎಲ್ಲರಿಗೂ ತಿಳಿದಿದೆ. ಇನ್ನೊಬ್ಬರ ನೆರವಿಲ್ಲದೆ ಅವರಿಗೆ ನಡೆದಾಡಲು ಆಗುವುದಿಲ್ಲ. ನನ್ನ ಸಹೋದರಿಗೆ ತಂದೆ ಜತೆ ಒಳಗೆ ಹೋಗಲು ಬಿಡಲಿಲ್ಲ. ಇ.ಡಿ ಅಧಿಕಾರಿಗಳು ಅಮಾನವೀಯವಾಗಿ ವರ್ತಿಸಿದ್ದಾರೆ' ಎಂದು 'ಎಕ್ಸ್'ನಲ್ಲಿ ದೂರಿದ್ದಾರೆ.

ಬಿಹಾರ: ಜೆಡಿಯು ವರಿಷ್ಠರ ನಿಲುವಿಗೆ ಎನ್‌ಡಿಎ ಪಕ್ಷಗಳ ಬೆಂಬಲ

ನಿತೀಶ್ ನಡೆಗೆ 'ಇಂಡಿಯಾ' ಖಂಡನೆ

ನವದೆಹಲಿ/ಕಿಶನ್‌ಗಂಜ್/ಪುಣೆ (ಪಿಟಿಐ): 'ಇಂಡಿಯಾ' ಮೈತ್ರಿಕೂಟದಿಂದ ನಿರ್ಗಮಿಸಿದ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಡೆಯನ್ನು ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳಾದ ಎಎಪಿ, ಶಿವಸೇನಾ (ಯುಬಿಟಿ) ತೀವ್ರವಾಗಿ ಖಂಡಿಸಿವೆ.

'ನಿತೀಶ್ ನಡೆಯನ್ನು ತಪ್ಪು ಎಂದು ನಾನು ಭಾವಿಸುತ್ತೇನೆ. ಅವರು 'ಇಂಡಿಯಾ' ಮೈತ್ರಿಕೂಟ ಬಿಡಬಾರದಿತ್ತು. ಅವರ ನಡವಳಿಕೆ ಪ್ರಜಾಪ್ರಭುತ್ವಕ್ಕೆ ಮಾರಕ' ಎಂದು ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

'ಆಯಾ ಕುಮಾರ್, ಗಯಾ ಕುಮಾರ್': ಜೆಡಿಯು ವರಿಷ್ಠ ನಿತೀಶ್ ಕುಮಾರ್ ಅವರ ನಡೆಯು 'ಇಂಡಿಯಾ' ಮೈತ್ರಿ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಇದನ್ನು 'ಆಯಾ ರಾಮ್, ಗಯಾ ರಾಮ್' ಎನ್ನುವ ಬದಲಿಗೆ, 'ಆಯಾ ಕುಮಾರ್, ಗಯಾ ಕುಮಾರ್' ಎನ್ನಬಹುದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ವ್ಯಂಗ್ಯವಾಡಿದರು.

ಬಿಹಾರದ ಕಿಶನ್‌ಗಂಜ್‌ನಲ್ಲಿ ಕಾಂಗ್ರೆಸ್‌ನ 'ಭಾರತ್ ಜೋಡೊ ನ್ಯಾಯ್ ಯಾತ್ರೆ' ವೇಳೆ ಸುದ್ದಿಗಾರರ ಜೊತೆ ಮಾತನಾಡಿ, 'ಕುಮಾರ್ ಅವರ ಈ ದ್ರೋಹಕ್ಕೆ, ಪ್ರಧಾನಿಯೇ ಸೂತ್ರದಾರ' ಎಂದು ದೂರಿದರು.

ಮಣಿಪುರದ ತೌಬಲ್‌ನಲ್ಲಿ ಜನವರಿ 14ರಿಂದ ಕಾಂಗ್ರೆಸ್ 'ಭಾರತ್ ಜೋಡೊ ನ್ಯಾಯ್ ಯಾತ್ರೆ' ಪ್ರಾರಂಭವಾಗುವ ವೇಳೆಗೆ, ಕಾಂಗ್ರೆಸ್‌ನ ನಾಯಕ ಮಿಲಿಂದ್ ದೇವ್ರಾ ಅವರನ್ನು ಪಕ್ಷ ಬಿಡುವಂತೆ ಮಾಡಲಾಯಿತು. ಇದೀಗ ಯಾತ್ರೆಯು ಬಿಹಾರ ಪ್ರವೇಶಿಸುವ ಸಮಯ ಎದುರಾಗಿದ್ದರಿಂದ ಅವರು (ಬಿಜೆಪಿ) ಒತ್ತಡಕ್ಕೆ ಸಿಲುಕಿದ್ದಾರೆ. ಹೀಗಾಗಿಯೇ ಅವರು 'ನೆಗೆದಾಡುವ ನಾಯಕ'ನಿಗೆ (ನಿತೀಶ್ ಕುಮಾರ್) ನೆಗೆಯುವಂತೆ ಹೇಳಿದ್ದಾರೆ. ಅವರೂ ಅದೇ ರೀತಿ ನೆಗೆದಿದ್ದಾರೆ' ಎಂದು ಜೈರಾಮ್ ಪ್ರತಿಕ್ರಿಯಿಸಿದರು.

ಪರಿಣಾಮ ಬೀರದು: ನಿತೀಶ್ ಅವರು ಎನ್‌ಡಿಎ ತೆಕ್ಕೆಗೆ ಮರಳಿರುವುದರಿಂದ 'ಇಂಡಿಯಾ' ಮೈತ್ರಿಕೂಟದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರುವುದಿಲ್ಲ ಎಂದು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಸೋಮವಾರ ಹೇಳಿದ್ದಾರೆ.

ನಿತೀಶ್ ಅವರನ್ನು 'ಇಂಡಿಯಾ' ಮೈತ್ರಿ ಕೂಟದ ಸಂಚಾಲಕರನ್ನಾಗಿ ನೇಮಿಸಲು ಕಾಂಗ್ರೆಸ್ ಒಲವು ಹೊಂದಿತ್ತು. ಆದರೆ ಅವರು ಮೈತ್ರಿ ತೊರೆದ ರೀತಿ ದುರದೃಷ್ಟಕರ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದ ರಾವುತ್, ನಿತೀಶ್ ಅವರನ್ನು 'ಪಲ್ಟು ರಾಮ್' ಎಂದು ಕರೆದರು.

'ನಿತೀಶ್ ನಿರ್ಗಮನದಿಂದ ಇಂಡಿಯಾ ಮೈತ್ರಿಯಲ್ಲಿ ಬಿರುಕು ಮೂಡಬಹುದು ಎಂದು ಯಾರಾದರೂ ಭಾವಿಸಿದ್ದರೆ, ಅದರು ಸರಿಯಲ್ಲ. ಅಂತಹವರು ತೊರೆದರೆ ಸಂಘಟನೆ ಇನ್ನೂ ಗಟ್ಟಿಯಾಗುತ್ತದೆ. ಮೈತ್ರಿ ಇನ್ನಷ್ಟು ಬಲವಾಗುತ್ತದೆ' ಎಂದರು.

ನಿತೀಶ್ ಬೆನ್ನಿಗೆ ಎನ್‌ಡಿಎ ಮಿತ್ರ ಪಕ್ಷ

ರಾಮದಾಸ್ ಅಠವಳೆ

ಲಖನೌ (ಪಿಟಿಐ): ಎನ್‌ಡಿಎ ಸೇರಿದ ಜೆಡಿಯು ಅಧ್ಯಕ್ಷ ನಿತೀಶ್ ಅವರ ನಿರ್ಧಾರ ಸರಿಯಾಗಿದ್ದು, ಬಿಹಾರದ ಜನರ ಅಭಿವೃದ್ಧಿ ದೃಷ್ಟಿಯಿಂದ ಅವರು ಸರಿಯಾದ ಸಮಯದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಬಿಜೆಪಿ ಮಿತ್ರ ಪಕ್ಷವಾದ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಎ) ಮುಖ್ಯಸ್ಥ ರಾಮದಾಸ್ ಅಠವಳೆ ತಿಳಿಸಿದ್ದಾರೆ.

ವಿರೋಧ ಪಕ್ಷಗಳು ನಿತೀಶ್ ಅವರನ್ನು 'ಪಲ್ಟು ರಾಮ್' (ನಿಷ್ಠೆ ಬದಲಿಸುವವನು), ಅವಕಾಶವಾದಿ ಎಂದೆಲ್ಲ ಕರೆಯುತ್ತಿವೆ, ಅದು ಸರಿಯಲ್ಲ. ವಾಸ್ತವವಾಗಿ ಕಾಂಗ್ರೆಸ್ ಪಕ್ಷವೇ ಅವಕಾಶವಾದಿ ಎಂದು ಅವರು ಜರಿದರು.

'ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸೇರುವ ನಿತೀಶ್ ಅವರನ್ನು ನಾವೆಲ್ಲರೂ ಸ್ವಾಗತಿಸುತ್ತೇವೆ. ನಿತೀಶ್ ನಡೆಯು ಕಾಂಗ್ರೆಸ್‌ಗೆ ಸವಾಲಾಗಿ ಪರಿಣಮಿಸಿದೆ' ಎಂದರು. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಾಶವಾಗುತ್ತದೆ ಎಂಬುದು ಸ್ವತಃ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೂ ಗೊತ್ತಿದೆ ಎಂದು ಅವರು ಹೇಳಿದರು.

'ಇಂಡಿಯಾ' ಆಟ ಮುಗಿದಿದೆ: ಕೇಂದ್ರದಲ್ಲಿ ಮೂರನೇ ಬಾರಿಗೆ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ತಡೆಯಲು 'ಇಂಡಿಯಾ' ಮೈತ್ರಿಕೂಟದಿಂದ ಸಾಧ್ಯವಿಲ್ಲ. ಭಾರತ್ ಜೋಡೊ ನ್ಯಾಯ್ ಯಾತ್ರೆಯೂ ವಿಫಲವಾಗಿದ್ದು, 'ಇಂಡಿಯಾ' ಬಣದ ಆಟ ಮುಗಿದಿದೆ' ಎಂದು ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ತಿಳಿಸಿದರು.

ಬಿಹಾರ: ಸ್ಪೀಕರ್, ಸಚಿವ ಸ್ಥಾನಕ್ಕೆ ಲಾಬಿ

ಪಟ್ನಾ (ಪಿಟಿಐ): ಬಿಹಾರದಲ್ಲಿ ಹೊಸದಾಗಿ ಎನ್‌ಡಿಎ ಮೈತ್ರಿ ಸರ್ಕಾರ ರಚನೆಯಾದ ಬೆನ್ನಲ್ಲೇ ವಿಧಾನಸಭಾ ಸ್ಪೀಕರ್ ಹುದ್ದೆ ಮತ್ತು ಇತರ ಸಚಿವ ಸ್ಥಾನಗಳಿಗೆ ಶಾಸಕರಿಂದ ತೀವ್ರ ಲಾಬಿ ಆರಂಭವಾಗಿದೆ.

ಪ್ರಸ್ತುತ ವಿಧಾನಸಭಾ ಸ್ಪೀಕರ್ ಆಗಿರುವ ಆರ್‌ಜೆಡಿ ಪಕ್ಷದ ಅವಧ್ ಬಿಹಾರಿ ಚೌಧರಿ ವಿರುದ್ಧ ಬಿಜೆಪಿ ಅವಿಶ್ವಾಸ ನಿರ್ಣಯದ ನೋಟಿಸ್ ಅನ್ನು ವಿಧಾನಸಭಾ ಕಾರ್ಯದರ್ಶಿಗೆ ಸಲ್ಲಿಸಿದೆ. ಈಗಿನ ಸ್ಪೀಕರ್ ಮೇಲೆ ವಿಶ್ವಾಸವಿಲ್ಲ ಎಂದು ನೋಟಿಸ್‌ನಲ್ಲಿ ಹೇಳಲಾಗಿದ್ದು, ಬಿಜೆಪಿ ಮತ್ತು ಜೆಡಿಯು ಶಾಸಕರು ಸಹಿ ಹಾಕಿದ್ದಾರೆ.

ಸ್ಪೀಕರ್ ಹುದ್ದೆಯನ್ನೂ ತನ್ನಲ್ಲಿ ಉಳಿಸಿಕೊಳ್ಳುವ ಉದ್ದೇಶವನ್ನು ಬಿಜೆಪಿ ಹೊಂದಿದೆ. ಬಿಜೆಪಿಯ ಹಿರಿಯ ನಾಯಕರಾದ ನಂದ ಕಿಶೋರ್ ಯಾದವ್ ಮತ್ತು ಅಮರೇಂದ್ರ ಪ್ರತಾಪ್ ಸಿಂಗ್ ಅವರ ಹೆಸರುಗಳು ಈ ಹುದ್ದೆಗೆ ಕೇಳಿ ಬರುತ್ತಿವೆ ಎಂದು ಮೂಲಗಳು ತಿಳಿಸಿವೆ.

ಸಂಪುಟ ಸಭೆ: ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸೋಮವಾರ ತಮ್ಮ ನೂತನ ಸಚಿವ ಸಂಪುಟದ ಸಭೆ ನಡೆಸಿದರು. ಇಬ್ಬರು ಉಪ ಮುಖ್ಯಮಂತ್ರಿಗಳೂ ಸೇರಿದಂತೆ ಎಲ್ಲ ಎಂಟು ಸಚಿವರೂ ಸಭೆಯಲ್ಲಿ ಭಾಗವಹಿಸಿದ್ದರು. ಖಾತೆ ಹಂಚಿಕೆ ಸಂಬಂಧ ಸಭೆಯಲ್ಲಿ ಚರ್ಚೆಯಾಗಿದೆ ಎಂದು ತಿಳಿದುಬಂದಿದೆ. ಸಚಿವರ ಖಾತೆಗಳಿಗೆ ಸಂಬಂಧಿಸಿದಂತೆ ಶೀಘ್ರವೇ ಅಧಿಸೂಚನೆ ಹೊರಬೀಳುವ ಸಾಧ್ಯತೆ ಇದೆ.

ಮಹಿಳೆ, ಜಾತಿ, ಪ್ರದೇಶ ಅಂಶಗಳನ್ನು ಆಧರಿಸಿ ಒಂದೆರಡು ದಿನಗಳಲ್ಲಿ ಸಂಪುಟ ವಿಸ್ತರಣೆಯಾಗಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

'ಹಿಂಸೆ ಹರಡುವ ಬಿಜೆಪಿ ಸಿದ್ಧಾಂತ'

ಬಿಹಾರ ತಲುಪಿದ 'ಭಾರತ್ ಜೋಡೊ ನ್ಯಾಯ ಯಾತ್ರೆ'

ಕಿಶನ್‌ಗಂಜ್, ಬಿಹಾರ (ಪಿಟಿಐ): 'ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಸಿದ್ಧಾಂತಗಳು ದೇಶದಲ್ಲಿ ಹಿಂಸೆ ಹಾಗೂ ದ್ವೇಷವನ್ನು ಹರಡುತ್ತಿವೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಆರೋಪಿಸಿದರು.

'ಭಾರತ್ ಜೋಡೊ ನ್ಯಾಯ ಯಾತ್ರೆ' ಭಾಗವಾಗಿ ಸೋಮವಾರ ಇಲ್ಲಿ ಆಯೋಜಿಸಿದ್ದ ರ್‍ಯಾಲಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ವಿವಿಧ ಧರ್ಮಗಳು ಹಾಗೂ ಜಾತಿಗಳಿಗೆ ಸೇರಿದ ಜನರು ಪರಸ್ಪರ ಕಚ್ಚಾಡುತ್ತಿದ್ದಾರೆ' ಎಂದು ದೂರಿದರು.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ತೊರೆದು ಬಿಜೆಪಿ ನೇತೃತ್ವದ ಎನ್‌ಡಿಎಗೆ ವಾಪಸಾದ ಮರುದಿನ, ರಾಹುಲ್ ಅವರ ಯಾತ್ರೆ ಬಿಹಾರಕ್ಕೆ ತಲುಪಿದೆ. 2020ರ ವಿಧಾನಸಭಾ ಚುನಾವಣೆ ಪ್ರಚಾರದಲ್ಲಿ ಪಾಲ್ಗೊಂಡ ಬಳಿಕ ರಾಹುಲ್, ಬಿಹಾರಕ್ಕೆ ನೀಡಿದ ಮೊದಲು ಭೇಟಿ ಇದು.

'ಸಹೋದರರು ತಮ್ಮೊಳಗೆ ಜಗಳವಾಡುವಂತಹ ವಾತಾವರಣವನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿಯು ಈ ದೇಶದಲ್ಲಿ ಸೃಷ್ಟಿಸಿದೆ. ನಾವು ಜನರನ್ನು ಒಗ್ಗೂಡಿಸುವ ಕೆಲಸ ಮಾಡುತ್ತೇವೆ. ದೇಶದಲ್ಲಿನ 'ನಫ್ರತ್ ಕಾ ಬಜಾರ್' ನಲ್ಲಿ (ದ್ವೇಷದ ಮಾರುಕಟ್ಟೆ) 'ಮೊಹಬ್ಬತ್ ಕಿ ದುಕಾನ್' (ಪ್ರೀತಿಯ ಅಂಗಡಿ) ತೆರೆಯಲು ಬಯಸುತ್ತೇವೆ' ಎಂದರು.

'ಮೋದಿ ಮತ್ತೆ ಗೆದ್ದರೆ ಸರ್ವಾಧಿಕಾರಿ'

ಭುವನೇಶ್ವರ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯು ಪ್ರಜಾಪ್ರಭುತ್ವ ಉಳಿಸಲು ಜನರಿಗೆ ದೊರೆಯುವ ಕೊನೆಯ ಅವಕಾಶವಾಗಿದ್ದು, ಒಂದು ವೇಳೆ ಪ್ರಧಾನಿ ನರೇಂದ್ರ ಮೋದಿ ಮತ್ತೆ ಅಧಿಕಾರಕ್ಕೆ ಬಂದರೆ ಅವರು ಸರ್ವಾಧಿಕಾರಿಯಾಗಿ ಮಾರ್ಪಡಬಹುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆತಂಕ ವ್ಯಕ್ತಪಡಿಸಿದರು.

'ಮುಂದಿನ ಬಾರಿಯೂ ನರೇಂದ್ರ ಮೋದಿ ಅಧಿಕಾರಕ್ಕೆ ಬಂದರೆ, ದೇಶದಲ್ಲಿ ಸರ್ವಾಧಿಕಾರತ್ವ ಸ್ಥಾಪನೆ ಆಗುತ್ತದೆ. ರಷ್ಯಾದಲ್ಲಿ ಪುಟಿನ್ ಅವರಂತೆ ಬಿಜೆಪಿ ಭಾರತವನ್ನು ಆಳುತ್ತದೆ' ಎಂದು ಅವರು ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಮೋದಿ ನೇತೃತ್ವದ ಕೇಂದ್ರ ಸರ್ಕಾರವು ರಾಜ್ಯಗಳು ಮತ್ತು ವಿರೋಧ ಪಕ್ಷಗಳ ನಾಯಕರಿಗೆ ಬೆದರಿಕೆಗಳನ್ನು ಹಾಕಿಕೊಂಡು ಆಡಳಿತ ನಡೆಸುತ್ತಿದೆ. ರಾಜಕೀಯ ವಿರೋಧಿಗಳನ್ನು ಮಣಿಸಲು ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆಯನ್ನು ಅಸ್ತ್ರವಾಗಿ ಬಳಸುತ್ತಿದೆ ಎಂದು ಅವರು ಆರೋಪಿಸಿದರು.

ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅವರು, ಅವುಗಳ ಸಿದ್ಧಾಂತ ವಿಷಕಾರಿಯಾಗಿದ್ದು, ಅವುಗಳಿಂದ ದೂರ ಉಳಿಯುವಂತೆ ಜನರನ್ನು ಒತ್ತಾಯಿಸಿದರು.

ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಿದ್ಧಾಂತಗಳನ್ನು ವಿರೋಧಿಸುವವರನ್ನು ಬೆದರಿಸಲಾಗುತ್ತಿದೆ ಎಂದರು.

ಭರ್ಜರಿ ಬ್ಯಾಂಡ್ ನವದೆಹಲಿಯ ವಿಜಯ್ ಚೌಕ್‌ನಲ್ಲಿ ಸೋಮವಾರ ಆಯೋಜಿಸಿದ್ದ 'ಬೀಟಿಂಗ್ ರಿಟ್ರೀಟ್' ಕಾರ್ಯಕ್ರಮದಲ್ಲಿ ಸೇನಾಪಡೆಗಳ ಬ್ಯಾಂಡ್ ತಂಡಗಳು ಪ್ರದರ್ಶನ ನೀಡಿದವು –ಪಿಟಿಐ ಚಿತ್ರ

ಪರೀಕ್ಷಾರ್ಥಿಗಳಿಗೆ ಮೋದಿ ಸಲಹೆ

ಅಹಮದಾಬಾದ್ (ಪಿಟಿಐ): 'ಸ್ನೇಹಿತರ ನಡುವಿನ ಸ್ಪರ್ಧೆಯ ಪರಿಣಾಮವಾಗಿ ಎದುರಾಗುವ ಒತ್ತಡವನ್ನು ಹೇಗೆ ನಿಭಾಯಿಸಬೇಕು ಎಂಬ ಸಲಹೆ ನೀಡಿ'

–ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅವರ ವಾರ್ಷಿಕ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮದಲ್ಲಿ ಆನ್‌ಲೈನ್ ಮೂಲಕ ಪಾಲ್ಗೊಂಡ ಗುಜರಾತ್‌ನ ಪಂಚ ಮಹಲ್‌ಜಿಲ್ಲೆಯಜವಾಹರನವೋದಯ ವಿದ್ಯಾಲಯದ 6ನೇ ತರಗತಿಯ ದೃಷ್ಟಿ ಚೌಹಾನ್ ಅವರ ಪ್ರಶ್ನೆಯಿದು.

ಇದಕ್ಕೆ ಉತ್ತರಿಸಿದ ಮೋದಿ ಅವರು, 'ಜೀವನದಲ್ಲಿ ಸ್ಪರ್ಧೆ ಅಗತ್ಯವಾಗಿದ್ದರೂ, ಅದು ಆರೋಗ್ಯಕರವಾಗಿರಬೇಕು' ಎಂದು ಹೇಳಿದ್ದಾರೆ.

'ಓದಿನಲ್ಲಿ ನಿಮಗಿಂತಲೂ ಹೆಚ್ಚು ಪ್ರತಿಭಾನ್ವಿತರಾಗಿರುವವರನ್ನು ಸ್ನೇಹಿತರನ್ನಾಗಿ ಮಾಡಿಕೊಂಡು ಅವರಿಂದ ಕಲಿಯಲು ಯತ್ನಿಸಿ. ಮಕ್ಕಳ ರಿಪೋರ್ಟ್ ಕಾರ್ಡ್‌ಗಳನ್ನು ತಮ್ಮ ವೀಸಾ ಕಾರ್ಡ್‌ಗಳು ಎಂದು ಪೋಷಕರು ಭಾವಿಸುವುದು ಸರಿಯಲ್ಲ' ಎಂದು ಸಲಹೆ ನೀಡಿದರು.

ಕಾವೇರಿ ಜಲವಿವಾದ; ವಿಚಾರಣೆಯಿಂದ ಹಿಂದಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನದಿ ನೀರು ಹಂಚಿಕೆ ವಿವಾದದ ವಿಚಾರಣೆಯಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಸೋಮವಾರ ಹಿಂದೆ ಸರಿದಿದ್ದಾರೆ.

ಅವರು ಕರ್ನಾಟಕ ಮೂಲದವರು.

ಪ್ರಕರಣದ ವಿಚಾರಣೆ ಸೋಮವಾರ ನಿಗದಿಯಾಗಿತ್ತು. ಅವರು ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿದಿರುವುದರಿಂದ ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರು ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿಗಳಿಗೆ ವರ್ಗಾಯಿಸಿದ್ದಾರೆ. ಪ್ರಕರಣ ಹೊಸ ಪೀಠದ ಎದುರು ವಿಚಾರಣೆಗೆ ಬರಬೇಕಿದೆ.

ಬಿಜೆಪಿ–ಪೊಲೀಸರ ನಡುವೆ ಸಂಘರ್ಷ

ಕೋಲ್ಕತ್ತ (ಪಿಟಿಐ): ಬಿಜೆಪಿ ಕಾರ್ಯಕರ್ತರ ಪ್ರತಿಭಟನಾ ಮೆರವಣಿಗೆಯನ್ನು ಪೊಲೀಸರು ತಡೆದ ಪರಿಣಾಮ, ವಾಗ್ವಾದ ಜೋರಾಗಿ ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಜಲಫಿರಂಗಿ, ಅಶ್ರುವಾಯು ಶೆಲ್ ಸಿಡಿಸಿದ ಘಟನೆ ಸೋಮವಾರ ಇಲ್ಲಿನ ಬ್ಯಾರಕ್‌ಪುರದಲ್ಲಿ ನಡೆಯಿತು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿ ಬ್ಯಾರಕ್‌ಪುರ ಪೊಲೀಸ್ ಆಯುಕ್ತರ ಕಚೇರಿಯತ್ತ ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಅಡ್ಡಗಟ್ಟಿ ತಡೆದರು. ಆ ವೇಳೆ ಪ್ರತಿಭಟನಕಾರರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಕ್ರಮೇಣ ಪರಿಸ್ಥಿತಿ ವಿಕೋಪಕ್ಕೆ ತಿರುಗಿತು.

'ಜೈ ಶ್ರೀರಾಮ್', 'ಭಾರತ್ ಮಾತಾ ಕಿ ಜೈ' ಎಂದು ಘೋಷಣೆಗಳನ್ನು ಕೂಗುತ್ತಾ ಮುನ್ನುಗ್ಗಿದ ಪ್ರತಿಭಟನಕಾರರು ಪೊಲೀಸರ ಬ್ಯಾರಿಕೇಡ್‌ಗಳನ್ನು ಕಿತ್ತೆಸೆದು ಮುಂದೆ ಸಾಗಿದರು. ಪರಿಸ್ಥಿತಿ ಕೈ ಮೀರದಂತೆ ನೋಡಿಕೊಳ್ಳಲು ಮತ್ತು ಗುಂಪನ್ನು ಚದುರಿಸಲು ಪೊಲೀಸರು ಜಲಫಿರಂಗಿ ಬಳಸಿದರು.

ಈ ವೇಳೆ ಪ್ರತಿಭಟನಕಾರರು ಪೊಲೀಸರ ವಿರುದ್ಧ ಕಲ್ಲು ತೂರಾಟ ನಡೆಸಿದಾಗ, ಪ್ರತಿಯಾಗಿ ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು ಎಂದು ಅಧಿಕಾರಿಗಳು ತಿಳಿಸಿದರು.

ಫೆ. 2ರಿಂದ ಮಮತಾ ಧರಣಿ

ಕೋಲ್ಕತ್ತ: ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಸಮರ್ಪಕವಾಗಿ ಅನುದಾನ ಸಿಗುತ್ತಿಲ್ಲ ಎಂದು ಆರೋಪಿಸಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಇದನ್ನು ವಿರೋಧಿ ಫೆಬ್ರುವರಿ 2ರಿಂದ ತಾವು ಧರಣಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಕೇಂದ್ರ ಸರ್ಕಾರವು ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಸಮರ್ಪಕವಾಗಿ ಅನುದಾನ ನೀಡುತ್ತಿಲ್ಲ ಎಂದು ಮಮತಾ ಅವರು ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. 'ನಾವು ಫೆಬ್ರುವರಿ 1ರವರೆಗೆ ಸಮಯ ನೀಡಿದ್ದೇವೆ. ನಾನು ಫೆಬ್ರುವರಿ 2ರಂದು ಧರಣಿ ಕೂರಲಿದ್ದೇನೆ. ಇದು ಬೂತ್ ಮಟ್ಟದಲ್ಲಿಯೂ ನಡೆಯಲಿದೆ' ಎಂದರು.

ಸಂಕ್ಷಿಪ್ತ ಸುದ್ದಿ

ಜೆಇಇ ಪರೀಕ್ಷೆಗೆ ಹೆದರಿ ವಿದ್ಯಾರ್ಥಿನಿ ಆತ್ಮಹತ್ಯೆ

ಕೋಟ (ಪಿಟಿಐ): ಜೆಇಇ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ 18 ವರ್ಷದ ವಿದ್ಯಾರ್ಥಿನಿ ನಿಹಾರಿಕಾ ಸಿಂಗ್ ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ರಾಜಸ್ಥಾನದಲ್ಲಿ ನಡೆದಿದೆ.

'ಅಪ್ಪ, ಅಮ್ಮ... ನನ್ನಿಂದ ಜೆಇಇ ಮಾಡಲು ಆಗದು. ಈ ಕಾರಣಕ್ಕಾಗಿ ನಾನು ಆತ್ಮಹತ್ಯೆ ಮಾಡಿಕೊಂಡಿದ್ದೇನೆ' ಎಂದು ಪೋಷಕರನ್ನು ಉದ್ದೇಶಿಸಿ ನಿಹಾರಿಕಾ ಬರೆದ ಪತ್ರ ಲಭ್ಯವಾಗಿದೆ. ಆಕೆ ಇನ್ನೊಂದು ದಿನ ಅಥವಾ ಇನ್ನೆರಡು ದಿನಗಳಲ್ಲಿ ಜೆಇಇ ಪರೀಕ್ಷೆಗೆ ಹಾಜರಾಗಬೇಕಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯಪಾಲರಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ ಸಿಪಿಎಂ

ತಿರುವನಂತಪುರ (ಪಿಟಿಐ): ಎಸ್‌ಎಫ್‌ಐ ನಡೆಸುತ್ತಿದ್ದ ಪ್ರತಿಭಟನೆ ವಿರೋಧಿಸಿ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ರಸ್ತೆ ಬದಿ ಕುಳಿತ ಪ್ರಸಂಗವನ್ನು 'ಪ್ರಜಾಪ್ರಭುತ್ವಕ್ಕೆ ಧಕ್ಕೆ ತಂದ ಘಟನೆ' ಎಂದು ರಾಜ್ಯದ ಆಡಳಿತಾರೂಢ ಸಿಪಿಎಂ ಸೋಮವಾರ ಕರೆದಿದೆ.

ರಾಜ್ಯಪಾಲರು ರಾಜ್ಯದ ಮುಖ್ಯಸ್ಥನ ಕರ್ತವ್ಯ ನಿಭಾಯಿಸಬೇಕು. ಅದನ್ನು ಬಿಟ್ಟು ಬೀದಿ ಗೂಂಡಾಗಳಂತೆ ತುಚ್ಛವಾಗಿ ವರ್ತಿಸುವುದು ಸರಿಯಲ್ಲ ಎಂದು ಹೇಳಿದೆ.

ರಾಜ್ಯಪಾಲರ ವರ್ತನೆಯನ್ನು ಕಟುವಾಗಿ ಟೀಕಿಸಿ, ಪಕ್ಷದ ಮುಖವಾಣಿ ಪತ್ರಿಕೆ 'ದೇಶಾಭಿಮಾನಿ'ಯಲ್ಲಿ ಸಂಪಾದಕೀಯ ಬರಹ ಬರೆದಿದೆ. 'ಗೌರವಾನ್ವಿತ ಸ್ಥಾನದಲ್ಲಿರುವ ಹೊರತಾಗಿಯೂ ದೇಶದ ಕಾನೂನಿಗೆ ಬದ್ಧವಾಗಿ ಇರುವುದನ್ನು ಖಾನ್ ನಿರ್ಲಕ್ಷಿಸುತ್ತಿದ್ದಾರೆ' ಎಂದು ಸಿಪಿಎಂ ಆರೋಪಿಸಿದೆ.

ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ರಾಜ್ಯಪಾಲರಿಗೆ ಸಂವಿಧಾನ ನೀಡಿಲ್ಲ. ರಾಜ್ಯ ಸಂಪುಟದ ಸಲಹೆ ಮೇರೆಗೆ ಅವರು ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಅದಕ್ಕಾಗಿ ರಾಜ್ಯದ ಜನರು ಸರ್ಕಾರವನ್ನು ಚುನಾಯಿಸಿದ್ದಾರೆ ಎಂದು ಲೇಖನದಲ್ಲಿ ಕುಟುಕಲಾಗಿದೆ.

ಕೇಜ್ರಿವಾಲ್ ವಿರುದ್ಧ ದೂರು: ವೀರೇಂದ್ರ ಸಚ್‌ದೇವ್

ನವದೆಹಲಿ (ಪಿಟಿಐ): ಎಎಪಿಯ ಏಳು ಮಂದಿ ಶಾಸಕರನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮಾಡಿರುವ ಆರೋಪದ ವಿರುದ್ಧ ಪೊಲೀಸರಿಗೆ ದೂರು ನೀಡುವುದಾಗಿ ಬಿಜೆಪಿ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಅವರು ಸೋಮವಾರ ತಿಳಿಸಿದರು.

ವಿರೋಧಪಕ್ಷದ ನಾಯಕ ರಾಮ್‌ವೀರ್ ಬಿಧೂರಿ ನೇತೃತ್ವದ ಬಿಜೆಪಿ ಶಾಸಕರ ನಿಯೋಗವು ದೆಹಲಿ ಪೊಲೀಸ್ ಕಮಿಷನರ್‌ಗೆ ಮಂಗಳವಾರ ದೂರು ಸಲ್ಲಿಸಲಿದೆ ಎಂದು ಹೇಳಿದರು.

ಪಕ್ಷ ತೊರೆಯಲು ಎಎಪಿಯ ಏಳು ಮಂದಿ ಶಾಸಕರಿಗೆ ಬಿಜೆಪಿಯು ತಲಾ ₹25 ಕೋಟಿ ನೀಡುವ ಆಮಿಷವೊಡ್ಡಿದೆ ಎಂದು ಕೇಜ್ರಿವಾಲ್ ಅವರು ಈಚೆಗೆ ಆರೋಪಿಸಿದ್ದರು.

ಸುದ್ದಿ 2 ನಿಮಿಷ

ಜಾತಿ ಪ್ರಮಾಣಪತ್ರ ಅಕ್ರಮ ಪ್ರಕರಣ: ಅರ್ಜಿಗಳನ್ನು ವರ್ಗಾಯಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಎಂಬಿಬಿಎಸ್ ಪ್ರವೇಶಾತಿಗೆ ಜಾತಿ ಪ್ರಮಾಣಪತ್ರ ನೀಡುವಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಕಲ್ಕತ್ತಾ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಇರುವ ಎಲ್ಲ ಅರ್ಜಿಗಳನ್ನೂ ಸುಪ್ರಿಂ ಕೋರ್ಟ್ ತನ್ನಲ್ಲಿಗೆ ವರ್ಗಾಯಿಸಿಕೊಂಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಪೀಠವು ಸೋಮವಾರ ಈ ನಿರ್ಧಾರ ತೆಗೆದುಕೊಂಡಿದೆ.

ಅರ್ಜಿಗಳನ್ನು ಮೂರು ವಾರಗಳಲ್ಲಿ ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿಯೂ ಹೇಳಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲ್ಕತ್ತಾ ಹೈಕೋರ್ಟ್‌ನ ಏಕಸದಸ್ಯ ಪೀಠ ಹಾಗೂ ವಿಭಾಗೀಯ ಪೀಠ ನೀಡಿದ್ದ ಆದೇಶಗಳಿಗೆ ಸುಪ್ರೀಂ ಕೋರ್ಟ್ ಶನಿವಾರ ತಡೆ ನೀಡಿತ್ತು. ಶನಿವಾರ ಕೋರ್ಟ್ ಕಲಾಪ ಇಲ್ಲದಿದ್ದರೂ, ಈ ಪ್ರಕರಣದ ವಿಚಾರಣೆಗಾಗಿ ಪೀಠವು ವಿಶೇಷ ಕಲಾಪ ನಡೆಸಿತ್ತು.

ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರು ಇದ್ದ ಕಲ್ಕತ್ತಾ ಹೈಕೋರ್ಟ್‌ನ ಏಕಸದಸ್ಯ ಪೀಠವು, ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ನಡೆಸಿ ಸಿಬಿಐ ತನಿಖೆಗೆ ಬುಧವಾರ ಆದೇಶಿಸಿತ್ತು. ಪಶ್ಚಿಮ ಬಂಗಾಳ ಸರ್ಕಾರವು ಗುರುವಾರ, ದ್ವಿಸದಸ್ಯ ಪೀಠದ ಎದುರು ಮೇಲ್ಮನವಿ ಸಲ್ಲಿಸಿತ್ತು. ದ್ವಿಸದಸ್ಯ ಪೀಠವು ಏಕಸದಸ್ಯ ಪೀಠದ ಆದೇಶಕ್ಕೆ ಮಧ್ಯಂತರ ತಡೆ ನೀಡಿತ್ತು.

'ಸಿಮಿ' ನಿಷೇಧ: 5 ವರ್ಷ ವಿಸ್ತರಣೆ

ನವದೆಹಲಿ (ಪಿಟಿಐ): ದೇಶದಲ್ಲಿ ಭಯೋತ್ಪಾದನೆ ಉತ್ತೇಜಿಸುವ ಮತ್ತು ಶಾಂತಿ, ಕೋಮು ಸೌಹಾರ್ದ ಕದಡುವಲ್ಲಿ ತೊಡಗಿರುವ ಭಯೋತ್ಪಾದಕ ಸಂಘಟನೆ 'ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ' (ಸಿಮಿ) ಮೇಲೆ ವಿಧಿಸಲಾಗಿರುವ ನಿಷೇಧವನ್ನು ಕೇಂದ್ರ ಸರ್ಕಾರ ಇನ್ನೂ ಐದು ವರ್ಷಗಳವರೆಗೆ ವಿಸ್ತರಿಸಿ ಸೋಮವಾರ ಆದೇಶ ಹೊರಡಿಸಿದೆ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ 'ಸಿಮಿ'ಯನ್ನು ಮುಂದಿನ ಐದು ವರ್ಷಗಳವರೆಗೆ 'ಕಾನೂನುಬಾಹಿರ ಸಂಘ' ಎಂದು ಘೋಷಿಸಲಾಗಿದೆ ಎಂದು ಗೃಹ ಸಚಿವ ಅಮಿತ್ ಶಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ 2001ರಲ್ಲಿ 'ಸಿಮಿ' ಸಂಘಟನೆಯನ್ನು ಮೊದಲ ಬಾರಿಗೆ ನಿಷೇಧಿಸಲಾಯಿತು. ಆಗಿನಿಂದ ಪ್ರತಿ ಐದು ವರ್ಷಗಳಿಗೊಮ್ಮೆ ನಿಷೇಧವನ್ನು ವಿಸ್ತರಿಸಲಾಗುತ್ತಿದೆ.

'ಸಿಮಿ' ತನ್ನ ವಿಧ್ವಂಸಕ ಕೃತ್ಯಗಳನ್ನು ಮುಂದುವರಿಸಿದೆ ಮತ್ತು ತಲೆಮರೆಸಿಕೊಂಡಿರುವ ತನ್ನ ಕಾರ್ಯಕರ್ತರನ್ನು ಪುನಃ ಸಂಘಟಿಸುತ್ತಿದೆ ಎಂದು ಗೃಹ ಸಚಿವಾಲಯ ಅಧಿಸೂಚನೆಯಲ್ಲಿ ತಿಳಿಸಿದೆ.

ಇರಾನ್ ಹಡಗಿನಲ್ಲಿದ್ದ 17 ಜನರ ರಕ್ಷಣೆ

ನವದೆಹಲಿ (ಪಿಟಿಐ): ಸೊಮಾಲಿಯಾದ ಪೂರ್ವ ಕರಾವಳಿಯಲ್ಲಿ ಕಡಲ್ಗಳ್ಳರು ಅಪಹರಿಸಿದ್ದ ಇರಾನ್ ಧ್ವಜ ಹೊಂದಿದ್ದ 'ಇಮಾನ್' ಮೀನುಗಾರಿಕಾ ಹಡಗಿನಲ್ಲಿದ್ದ 17 ಮಂದಿಯನ್ನು ರಕ್ಷಣೆ ಮಾಡಿರುವುದಾಗಿ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಕಡಲ್ಗಳ್ಳರು ಹಡಗನ್ನು ಅಪಹರಿಸಿರುವ ಮಾಹಿತಿ ಅರಿತು 'ಐಎನ್‌ಎಸ್ ಸುಮಿತ್ರಾ' ನೌಕೆಯನ್ನು ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು ಎಂದು ನೌಕಾ ಪಡೆ ವಕ್ತಾರ ಕಮಾಂಡರ್ ವಿವೇಕ್ ಮಧ್ವಾಲ್ ಹೇಳಿದ್ದಾರೆ.

ಮೀನುಗಾರಿಕಾ ಹಡಗಿನ ಒಳಗೆ ಪ್ರವೇಶಿಸಿದ್ದ ಕಡಲ್ಗಳ್ಳರು, ಅದರ ಸಿಬ್ಬಂದಿಯನ್ನು ಒತ್ತೆಸೆರೆಯಲ್ಲಿಟ್ಟಿದ್ದರು ಎಂದಿದ್ದಾರೆ.

ಹಿಜಾಬ್‌ಗೆ ಆಕ್ಷೇಪ: ಬಿಜೆಪಿ ಶಾಸಕರ ವಿರುದ್ಧ ಪ್ರತಿಭಟನೆ

ಜೈಪುರ (ಪಿಟಿಐ): ಶಾಲಾ ಕಾರ್ಯಕ್ರಮದಲ್ಲಿ ಬಾಲಕಿಯರು ಹಿಜಾಬ್ ಧರಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ಶಾಸಕ ಬಾಲಮುಕುಂದ್ ಆಚಾರ್ಯ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಸರ್ಕಾರಿ ಪ್ರೌಢ ಶಾಲೆಯ ಮುಸ್ಲಿಂ ವಿದ್ಯಾರ್ಥಿನಿಯರು ಇಲ್ಲಿನ ಸುಭಾಷ್ ಚೌಕ್ ಪೊಲೀಸ್ ಠಾಣೆ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಠಾಣೆ ಎದುರಿನ ರಸ್ತೆಯಲ್ಲಿ ಸೇರಿದ್ದ ಹಲವು ವಿದ್ಯಾರ್ಥಿನಿಯರು, ಶಾಸಕರ ವಿರುದ್ಧ ಘೋಷಣೆಗಳನ್ನು ಕೂಗಿದರು. ಅವರು ಕ್ಷಮೆ ಕೋರಬೇಕು. ಅಲ್ಲದೆ, ಅವರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಪಟ್ಟುಹಿಡಿದರು.

ಈ ವಿಚಾರದ ಕುರಿತು ಕಾಂಗ್ರೆಸ್ ಶಾಸಕ ರಫೀಕ್ ಖಾನ್ ಅವರು ರಾಜ್ಯ ವಿಧಾನಸಭೆಯಲ್ಲಿ ಚರ್ಚಿಸಲು ಯತ್ನಿಸಿದರು. ಆದರೆ, ಇದಕ್ಕೆ ಸ್ಪೀಕರ್ ಅವಕಾಶ ನೀಡಲಿಲ್ಲ. ಜೊತೆಗೆ ಅವರ ಹೇಳಿಕೆಯನ್ನು ಕಡತದಿಂದ ತೆಗೆದುಹಾಕಲಾಯಿತು.

ಒಬಿಸಿ ಮೀಸಲು: ಭುಜಬಲ್ ಆತಂಕ ಶಮನಕ್ಕೆ ಮುಂದಾದ ಫಡಣವೀಸ್

ದೇವೇಂದ್ರ ಫಡಣವೀಸ್

ನಾಗಪುರ (ಪಿಟಿಐ): ಅರ್ಹ ಮರಾಠರಿಗೆ ಕುಣಬಿ ಜಾತಿ ಪ್ರಮಾಣಪತ್ರವನ್ನು ನೀಡಲು ಕರಡು ಅಧಿಸೂಚನೆ ಹೊರಡಿಸಿರುವ ಹಿನ್ನೆಲೆಯಲ್ಲಿ, ಮಹಾರಾಷ್ಟ್ರದ ಸಚಿವ ಛಗನ್ ಭುಜಬಲ್ ಅವರು ವ್ಯಕ್ತಪಡಿಸಿರುವ ಆತಂಕವನ್ನು ಶಮನ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದರು.

ಕರಡು ಅಧಿಸೂಚನೆ ಬಗ್ಗೆ ನಿರ್ದಿಷ್ಟವಾಗಿ ಉಲ್ಲೇಖಿಸದ ಫಡಣವೀಸ್ ಅವರು, ಅಗತ್ಯ ಎದುರಾದರೆ ಸೂಕ್ತ ತಿದ್ದುಪಡಿ ತರಲಾಗುವುದು ಎಂದು ಹೇಳಿದರು. ಮರಾಠರ ರಕ್ತಸಂಬಂಧಿಗಳಿಗೆ ಕುಣಬಿ ಜಾತಿ (ಒಬಿಸಿ) ಪ್ರಮಾಣಪತ್ರ ನೀಡಬೇಕು ಎಂದು ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಅವರ ಆಗ್ರಹವನ್ನು ಒಪ್ಪಿ ಸರ್ಕಾರ ಕರಡು ಅಧಿಸೂಚನೆ ಹೊರಡಿಸಿರುವ ಹಿನ್ನೆಲೆಯಲ್ಲಿ ಫಡಣವೀಸ್ ಈ ಮಾತು ಹೇಳಿದ್ದಾರೆ.

ಯಾವುದೇ ಪರಿಸ್ಥಿತಿಯಲ್ಲಿಯೂ ಒಬಿಸಿ ವರ್ಗಗಳಿಗೆ ಈಗ ಇರುವ ಮೀಸಲಾತಿಯನ್ನು ಕಡಿಮೆ ಮಾಡುವುದಿಲ್ಲ ಎಂದು ಅವರು ಭರವಸೆ ನೀಡಿದರು. ಕರಡು ಅಧಿಸೂಚನೆ ವಿರೋಧಿಸಿ ಪ್ರತಿಭಟನೆ ನಡೆಸುವುದಾಗಿ ಭುಜಬಲ್ ಭಾನುವಾರ ಹೇಳಿದ್ದಾರೆ.

ಕೃಷಿ ಕಸುಬಿನ ಕುಣಬಿ ಸಮುದಾಯಕ್ಕೆ ಸೇರಿದವ ತಾನು ಎಂದು ಹೇಳುವ ದಾಖಲೆ ಇರುವ ಮರಾಠ ವ್ಯಕ್ತಿಯ ರಕ್ತಸಂಬಂಧಿಗಳನ್ನು ಕೂಡ ಕುಣಬಿ ಎಂದು ಗುರುತಿಸಲಾಗುವುದು ಎಂದು ಕರಡು ಅಧಿಸೂಚನೆ ಹೇಳುತ್ತದೆ. 'ನಾವು ಒಬಿಸಿ ಸಮುದಾಯಗಳಿಗೆ ಅನ್ಯಾಯವಾಗಲು ಬಿಡುವುದಿಲ್ಲ' ಎಂದು ಫಡಣವೀಸ್ ಭರವಸೆ ನೀಡಿದರು.

'ಒಬಿಸಿ ಸಮುದಾಯಗಳ ಹಿತಾಸಕ್ತಿ ರಕ್ಷಣೆ ಆಗಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾದರೆ ನಾನು ಹಿರಿಯರ ಜೊತೆ ಮಾತುಕತೆ ನಡೆಸುತ್ತೇನೆ' ಎಂದರು.

'ಪರಿಣತರು ಸರ್ಕಾರಕ್ಕೆ ಪತ್ರ ಬರೆಯಲಿ': ಮರಾಠ ಸಮುದಾಯಕ್ಕೆ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಕಠಿಣ ಕಾನೂನು ರೂಪಿಸಲು ರಾಜ್ಯ ಸರ್ಕಾರಕ್ಕೆ ಪರಿಣತರು ಸಲಹೆಗಳನ್ನು ನೀಡಬೇಕು ಎಂದು ಸಾಮಾಜಿಕ ಕಾರ್ಯಕರ್ತ ಮನೋಜ್ ಜಾರಾಂಗೆ ಅವರು ಕೇಳಿಕೊಂಡರು.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Travel

15.03.2024 04.04.2024 16.04.2024 17.05.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 05.03.2024 12.04.2024 ದುಬೈ,ಅಬುದಾಬಿ 5 ದಿನಗಳು. 06.03.2024 12.04.2024 05.05.2024 ಭೂತಾನ್ 8 ದಿನಗಳು. 15.03.2024 15.04.2024 21.05.2024 ನೇಪಾಳ 9 ದಿನಗಳು. 06.03.2024 04.04.2024 ಶ್ರೀಲಂಕಾ 7 ದಿನಗಳು. 02.04.2024 03.05.2024 26.05.2024 ಅಸ್ಸಾಂ,ಮೇಘಾಲಯ 9 ದಿನಗಳು. 15.03.2024 29.03.2024 16.04.2024 ಕಾಶಿ,ಗಯಾ,ಅಯೋಧ್ಯಾ 8 ದಿನಗಳು. 14.03.2024 12.04.2024 ಗುಜರಾತ್ 8 ದಿನಗಳು. 15.03.2024 26.03.2024 ರಾಜಸ್ಥಾನ್ 10 ದಿನಗಳು. 12.04.2024 06.05.2024 ಕಾಶ್ಮೀರ್,ವೈಷ್ಣೋದೇವಿ 6/8 ದಿನಗಳು. 05.04.2024 25.04.2024 14.05.2024 ಶಿಮ್ಲಾ,ಕುಲುಮನಾಲಿ 7 ದಿನಗಳು. 12.03.2024 05.04.2024 ಮಧ್ಯಪ್ರದೇಶ 10 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು.03 9448402248 7022547922

ಅಯೋಧ್ಯಯಾತ್ರೆ, ದೆಹಲಿ ಆಗ್ರಾ ಅಲಹಾಬಾದ್ ಅಯೋಧ್ಯ ಕಾಶಿ,ಗಯಾ 27.03.2024 10 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

ಶಿವನಂದಿ ಟ್ರಾವೆಲ್ಸ್.(ರಿ) ಹನುಮಂತನಗರ, ಬೆಂಗಳೂರು. ಅಯೋಧ್ಯ,ನೇಪಾಳ ಮುಕ್ತಿನಾಥ್ 12ದಿನ,21.3.2024, 15.4.2024. ದೆಹಲಿ,ಕಾಶಿ ಅಯೋಧ್ಯ,10ದಿನ 24.4.2024. ಚಾರ್`ಧಾಮ್ 14ದಿನ,3.6.24. 9036056352 9481027363.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ

Astrology

★॥ಶ್ರೀಅನ್ನಪೂರ್ಣೇಶ್ವರಿ॥★ ಜ್ಯೋತಿಷ್ಯಕೇಂದ್ರ," ಸ್ತ್ರೀಪುರುಷ_ವಶೀಕರಣ, ಸಂಭೋಗ ವಶೀಕರಣ, ಸಾಲಭಾದೆ ಇನ್ನೂಯಾವುದೇ ಸಮಸ್ಯೆಗಳಿಗೆ 11ಗಂಟೆಗಳಲ್ಲಿ ಶಾಶ್ವತ ಪರಿಹಾರ. "ರಾಘವೇಂದ್ರಭಟ್". 8050061378

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430366, 9663563555

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ವೈವಾಹಿಕ

Brides Wanted

Kannada

ವಧು ಬೇಕಾಗಿದೆ. 37 ವರ್ಷ ಪ್ರಾಯದ ವಿಚ್ಛೇದಿತ ವರನಿಗೆ ವಧು ಬೇಕಾಗಿದೆ. ಬೆಂಗಳೂರಿನಲ್ಲಿ ನೆಲೆಸಿದ್ದು, ಟ್ಯಾಕ್ಸಿ ಸರ್ವಿಸ್ ನಡೆಸುತ್ತಿರುವ ಪಿಯುಸಿ ವಿದ್ಯಾರ್ಹತೆ ಪಡೆದಿರುವ ಮೂಲತಃ ಚನ್ನರಾಯಪಟ್ಟಣ ನಿವಾಸಿಯಾಗಿದ್ದು, 3 ಎಕ್ರೆ ಕೃಷಿ ಜಮೀನನ್ನು ಹೊಂದಿರುತ್ತಾರೆ. ಒಕ್ಕಲಿಗ ಗೌಡ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಗೌಡ ಜನಾಂಗದ ಯಾವುದೇ ಒಳಪಂಗಡಕ್ಕೆ ಸೇರಿದ 30 ರಿಂದ 35 ವರ್ಷದೊಳಗಿನ ವಿಚ್ಛೇಧಿತ, ಮಕ್ಕಳಿಲ್ಲದ ವಧು ಬೇಕಾಗಿದ್ದು, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ 8296413419

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,352
ಇಂದಿನ ಅಂತ್ಯ	21,737
▲	385
ದಿನದ ಗರಿಷ್ಠ	21,763

ವಿನಿಮಯ ದರ

$ ಡಾಲರ್	83.16
£ ಪೌಂಡ್	105.63
€ ಯುರೊ	90.02
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹570
12 ಕ್ಕೆ ₹75
ಮೈಸೂರು
100ಕ್ಕೆ ₹572

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1505 (1510)
ಸೋಯಾ (ರಿಫೈನ್ಡ್)	₹895 (905)
ಸೂರ್ಯಕಾಂತಿ (ರಿಫೈನ್ಡ್)	₹918 (925)
ಪಾಮೋಲಿನ್	₹862 (868)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹600-1000
ಸಣ್ಣ	₹400-600

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹161
ಆರ್‌ಎಸ್‌ಎಸ್-5 ₹156
ಗುಡ್ ಲಾಟ್ ₹139
(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹140-476
ದ್ವಿತಳಿ (ಬಿ.ವಿ) ₹177-546

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-10800
ಪುತ್ತೂರು	₹5500-9200
ತಿಪಟೂರು	₹8600-9800

ಭಾರತದಲ್ಲಿ ಸಿಎಂಎಫ್‌ಆರ್‌ಐನಿಂದ ಮೊದಲ ಪ್ರಯತ್ನ: ಸಿಂಗಪುರ, ಇಸ್ರೇಲ್, ಅಮೆರಿಕದಲ್ಲಿ ಯಶಸ್ವಿ

ಲ್ಯಾಬ್‌ನಲ್ಲಿ ಮೀನಿನ ಮಾಂಸ ಅಭಿವೃದ್ಧಿ



ಕೊಚ್ಚಿ (ಪಿಟಿಐ): ಭಾರತದಲ್ಲಿ ಪ್ರಥಮ ಬಾರಿಗೆ ಮೀನಿನ ನಿರ್ದಿಷ್ಟ ಜೀವಕೋಶಗಳನ್ನು ಬಳಸಿಕೊಂಡು ಪ್ರಯೋಗಾಲಯದಲ್ಲಿ ಮೀನಿನ ಮಾಂಸದ ಅಭಿವೃದ್ಧಿಗೆ ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಅಧೀನದಲ್ಲಿರುವ ಕೇಂದ್ರೀಯ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆಯು (ಐಸಿಎಆರ್– ಸಿಎಂಎಫ್‌ಆರ್‌ಐ) ಮುಂದಾಗಿದೆ.

ಪ್ರಾಥಮಿಕ ಹಂತದಲ್ಲಿ ಈ ಯೋಜನೆಯು ಮಾರುಕಟ್ಟೆಯಲ್ಲಿ ಅತಿಹೆಚ್ಚು ಬೆಲೆ ಹೊಂದಿರುವ ಸಮುದ್ರದ ಮೀನುಗಳಾದ ಕಿಂಗ್ ಫಿಶ್, ಪಾಂಫ್ರೆಟ್ ಹಾಗೂ ಸೀರ್ ಫಿಶ್ ಮಾಂಸದ ಉತ್ಪಾದನೆಗೆ ಸೀಮಿತವಾಗಿದೆ.

ಈಗಾಗಲೇ ಸಿಂಗಪುರ, ಇಸ್ರೇಲ್ ಮತ್ತು ಅಮೆರಿಕದ ಪ್ರಯೋಗಾಲಯ-ಗಳಲ್ಲಿ ಸಂಸ್ಕರಿತ ಸಮುದ್ರ ಆಹಾರದ ಅಭಿವೃದ್ಧಿ ಮತ್ತು ಸಂಶೋಧನೆ ನಡೆಯುತ್ತಿದೆ. ಕೆಲವು ದೇಶಗಳ ಪ್ರಯೋಗಾಲಯದಲ್ಲಿ ಕೋಳಿ ಮಾಂಸ ಅಭಿವೃದ್ಧಿಪಡಿಸುವ ಕಾರ್ಯವೂ ಯಶಸ್ವಿಯಾಗಿದೆ.

ದೇಶದಲ್ಲಿ ಸಮುದ್ರದ ಮೀನುಗಳಿಗೆ ಹೆಚ್ಚುತ್ತಿರುವ ಬೇಡಿಕೆ ಪೂರೈಸಲು ಈ ಕಾರ್ಯಕ್ಕೆ ನಿರ್ಧರಿಸಲಾಗಿದೆ. ಕೆಲವೇ ತಿಂಗಳುಗಳಲ್ಲಿ ಈ ಕೆಲಸ ಆರಂಭವಾಗಲಿದೆ. ಮೀನಿನ ಮಾಂಸದ ಉತ್ಪಾದನಾ ಕ್ಷೇತ್ರದಲ್ಲಿ ಭಾರತವನ್ನು ಮುಂಚೂಣಿ ಸ್ಥಾನಕ್ಕೆ ಒಯ್ಯುವುದೇ ಈ ಯೋಜನೆಯ ಹಿಂದಿರುವ ಮೂಲ ಉದ್ದೇಶವಾಗಿದೆ ಎಂದು ತಿಳಿಸಿದೆ.

ಅಭಿವೃದ್ಧಿ ಹೇಗೆ?: ಮೀನಿನ ಜೀವ ಕೋಶ ಕೃಷಿ ಅಥವಾ ಪ್ರಯೋ ಗಾಲಯದಲ್ಲಿ ಮೀನಿನ ಮಾಂಸ ಅಭಿವೃದ್ಧಿಪಡಿಸುವ ಈ ಪ್ರಕ್ರಿಯೆಯಲ್ಲಿ ಮೀನಿನ ನಿರ್ದಿಷ್ಟ ಜೀವಕೋಶಗಳನ್ನು ತೆಗೆದುಕೊಳ್ಳಲಾಗುತ್ತದೆ. ಅದನ್ನು ಪ್ರಯೋಗಾಲಯದಲ್ಲಿ ಇಟ್ಟು ಬೆಳೆಸಲಾಗುತ್ತದೆ. ಈ ಮಾಂಸವು ಮೀನಿನ ಮೂಲ ವಾಸನೆ, ರಚನೆ ಮತ್ತು ಗುಣಮಟ್ಟದ ಪೋಷಕಾಂಶವನ್ನು ಹೊಂದಿರುತ್ತದೆ.

> **ಲ್ಯಾಬ್‌ನಲ್ಲಿ ಮೀನಿನ ಮಾಂಸ ಅಭಿವೃದ್ಧಿಪಡಿಸುವ ಯೋಜನೆ ದೇಶಕ್ಕೆ ಆಹಾರದ ಭದ್ರತೆ ಒದಗಿಸಲಿದೆ. ಭಾರತವು ಈ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಸಹಕಾರಿಯಾಗಲಿದೆ**
> **ಎ. ಗೋಪಾಲಕೃಷ್ಣನ್,** ನಿರ್ದೇಶಕ, ಸಿಎಂಎಫ್‌ಆರ್‌ಐ

ನೀಟ್ ಮೀಟ್ ಜೊತೆ ಒಪ್ಪಂದ

ದೇಶದಲ್ಲಿ ನೀಟ್ ಮೀಟ್ ಬಯೋಟೆಕ್ ಎಂಬ ನವೋದ್ಯಮವು ಪ್ರಾಣಿಗಳ ಜೀವಕೋಶ ಬೇರ್ಪಡಿಸಿ ಸಂಸ್ಕರಿತ ಮಾಂಸ ಅಭಿವೃದ್ಧಿಪಡಿಸುವ ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿದೆ. ಈ ನವೋದ್ಯಮದ ಜೊತೆಗೆ ಸಿಎಂಎಫ್‌ಆರ್‌ಐ ಒಪ್ಪಂದ ಮಾಡಿಕೊಂಡಿದೆ.

ಈ ಸಂಬಂಧ ಸಿಎಂಎಫ್‌ಆರ್‌ಐ ನಿರ್ದೇಶಕ ಎ. ಗೋಪಾಲಕೃಷ್ಣನ್ ಮತ್ತು ನೀಟ್ ಮೀಟ್ ಸಿಇಒ ಸಂದೀಪ್ ಶರ್ಮಾ ಒಡಂಬಡಿಕೆಗೆ ಸಹಿ ಹಾಕಿದ್ದಾರೆ. ಸರ್ಕಾರಿ-ಖಾಸಗಿ ಸಹಭಾಗಿತ್ವದಡಿ ಮೀನಿನ ಮಾಂಸವನ್ನು ಅಭಿವೃದ್ಧಿಪಡಿಸಲಾಗುತ್ತದೆ.

ಅನುವಂಶಿಕ, ಜೀವ ರಾಸಾಯನಿಕ ಸೇರಿದಂತೆ ವಿಶ್ಲೇಷಣಾತ್ಮಕ ಕೆಲಸವನ್ನು ಸಿಎಂಎಫ್‌ಆರ್‌ಐ ನಿರ್ವಹಿಸಲಿದೆ. ಇದಕ್ಕಾಗಿಯೇ ಪ್ರತ್ಯೇಕವಾಗಿ ಜೀವಕೋಶ ಅಭಿವೃದ್ಧಿ ಪ್ರಯೋಗಾಲಯವನ್ನು ಸ್ಥಾಪಿಸಲಿದೆ. ಇದಕ್ಕೆ ಪೂರಕ ಪರಿಕರಗಳು, ಸಿಬ್ಬಂದಿ ಸೇರಿದಂತೆ ಅಗತ್ಯವಿರುವ ಸೌಕರ್ಯ ಒದಗಿಸುವುದಾಗಿ ಹೇಳಿದೆ.

'ದೇಶದ ಪ್ರಯೋಗಾಲಯಗಳಲ್ಲಿ ಪ್ರಾಣಿಗಳ ಜೀವಕೋಶ ಬಳಸಿಕೊಂಡು ಮಾಂಸ ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಈ ಯೋಜನೆಯಿಂದ ವೇಗ ಸಿಗಲಿದೆ' ಎಂದು ಗೋಪಾಲಕೃಷ್ಣನ್ ಹೇಳಿದ್ದಾರೆ.

'30 ಸಾವಿರ ಉದ್ಯೋಗ ಸೃಷ್ಟಿ ಗುರಿ'

ಎವಿಜಿಸಿ ವಲಯದ ಅಭಿವೃದ್ಧಿಗೆ ಕ್ರಮ: ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 2028ರ ವೇಳೆಗೆ ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮ್ಸ್ ಮತ್ತು ಕಾಮಿಕ್ಸ್ (ಎವಿಜಿಸಿ) ವಲಯದಲ್ಲಿ ಸರ್ಕಾರವು 30 ಸಾವಿರ ಉದ್ಯೋಗ ಸೃಷ್ಟಿಸುವ ಗುರಿ ಹೊಂದಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಸೋಮವಾರ ರಾಜ್ಯ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಎಬಿಎಐಯಿಂದ ಆಯೋಜಿಸಿರುವ ಮೂರು ದಿನಗಳ ಗೇಮ್ಸ್, ಅನಿಮೇಷನ್, ವಿಷುಯಲ್ ಎಫೆಕ್ಟ್ಸ್ ಸಮ್ಮೇಳನ-2024ಕ್ಕೆ (ಜಿಎಎಫ್‌ಎಕ್ಸ್) ಚಾಲನೆ ನೀಡಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ 2012ರಲ್ಲಿಯೇ ಎವಿಜಿಸಿ ನೀತಿ ರೂಪಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ಎವಿಜಿಸಿ-ಎಕ್ಸ್‌ಆರ್ ತಂತ್ರಜ್ಞಾನದಲ್ಲಿ ಕರ್ನಾಟಕವನ್ನು ಅಗ್ರಸ್ಥಾನಕ್ಕೇರಿಸುವುದೇ ಸರ್ಕಾರದ ಗುರಿ. ಈ ವಲಯವು ಕೌಶಲ ಬೇಡುತ್ತದೆ. ಇದಕ್ಕೆ ಪೂರಕ ವಾತಾವರಣ ಸೃಷ್ಟಿಗೆ ಸರ್ಕಾರ ಕ್ರಮವಹಿಸಲಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಮಾಧ್ಯಮ ಮತ್ತು ಮನರಂಜನಾ ಉದ್ಯಮವು ದೇಶದ ಶೇ20ರಷ್ಟಿದೆ. ಪ್ರತಿಭಾವಂತರಿಗೆ ಉತ್ತಮ ವೇದಿಕೆ ಒದಗಿಸುವ ಉದ್ದೇಶ ಹೊಂದಲಾಗಿದೆ. ಎಂದರು.

ದೇಶದಲ್ಲಿ ಎರಡನೇ ಅತಿದೊಡ್ಡ ವಲಯವಾಗಿ ಡಿಜಿಟಲ್ ಮಾಧ್ಯಮ ಬೆಳೆಯುತ್ತಿದೆ. 2021ರಲ್ಲಿ ಈ ವಲಯದಲ್ಲಿ ₹56 ಲಕ್ಷ ಕೋಟಿ ವಹಿವಾಟು ನಡೆದಿದೆ ಎಂದು ಮಾಹಿತಿ ನೀಡಿದರು.

ಸರ್ಕಾರವು 2023ರಲ್ಲಿ ಜೈವಿಕ ತಂತ್ರಜ್ಞಾನ, ಅನಿಮೇಷನ್, ವಿಷುವಲ್ ಎಫೆಕ್ಟ್, ಗೇಮಿಂಗ್ ಕ್ಷೇತ್ರದ ವಿಸ್ತರಣೆಗೆ ಸಂಬಂಧಿಸಿದಂತೆ ಕರಡು ನೀತಿ ರೂಪಿಸಿದೆ. ಐಟಿ–ವ್ಯಾಪಾರ ನಿರ್ವಹಣೆ ಉದ್ಯಮದಲ್ಲಿ ಕರ್ನಾಟಕವು ಜಾಗತಿಕವಾಗಿ ಮುಂಚೂಣಿ ಸ್ಥಾನಕ್ಕೇರಲು ಈ ನೀತಿ ನೆರವಾಗಲಿದೆ ಎಂದು ಆಶಿಸಿದರು.

ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕರೂಪ್ ಕೌರ್, ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಜಂಟಿ ಕಾರ್ಯದರ್ಶಿ ಪ್ರಿತುಲ್ ಕುಮಾರ್, ಇನ್ಫೊಸಿಸ್ ವಿಜ್ಞಾನ ಪ್ರತಿಷ್ಠಾನದ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣ, ಇನ್‌ವೆಸ್ಟ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ ನಿವೃತಿ ರಾಯ್ ಹಾಜರಿದ್ದರು.

ಬೆಂಗಳೂರಿನಲ್ಲಿ ಸೋಮವಾರ ಆರಂಭವಾದ ಜಿಎಎಫ್‌ಎಕ್ಸ್ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕನ್ನಡದಲ್ಲಿ ಅನಿಮೇಷನ್ ಮೂಲಕ ತಯಾರಿಸಿರುವ 'ಲೈಫ್ ಸಾಂಗ್' ಪ್ರದರ್ಶನಕ್ಕೆ ಚಾಲನೆ ನೀಡಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಬಿಎಐ ಅಧ್ಯಕ್ಷ ಬಿರೇನ್ ಘೋಷ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕರೂಪ್ ಕೌರ್, ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಜಂಟಿ ಕಾರ್ಯದರ್ಶಿ ಪ್ರಿತುಲ್ ಕುಮಾರ್, ಇನ್ಫೊಸಿಸ್ ವಿಜ್ಞಾನ ಪ್ರತಿಷ್ಠಾನದ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣ ಇದ್ದರು –ಪ್ರಜಾವಾಣಿ ಚಿತ್ರ

ಅಂಕಿ ಅಂಶಗಳು

15,000 ಕರ್ನಾಟಕದ ಎವಿಜಿಸಿ ವೃತ್ತಿಪರರು

1 ಎವಿಜಿಸಿ-ಎಕ್ಸ್‌ಆರ್ ಸ್ಕೂಲ್

300 ಒಟ್ಟು ಎವಿಜಿಸಿ-ಎಕ್ಸ್‌ಆರ್ ಸ್ಟುಡಿಯೊಗಳು

27 ಲಲಿತಕಲಾ ಕಾಲೇಜುಗಳು

> **ನವೋದ್ಯಮ ಉದ್ಯಮಗಳ ಸ್ಥಾಪನೆಯಲ್ಲಿ ಬೆಂಗಳೂರು ಮುಂಚೂಣಿಯಲ್ಲಿದೆ. ಎವಿಜಿಸಿ ತಂತ್ರಜ್ಞಾನದಿಂದ ಸಿನಿಮಾ ಕ್ಷೇತ್ರಕ್ಕೆ ಹೆಚ್ಚು ಅನುಕೂಲವಾಗುತ್ತಿದೆ**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

ಸೆನ್ಸೆಕ್ಸ್ 1,240 ಅಂಶ ಏರಿಕೆ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳ ಖರೀದಿ ಭರಾಟೆಯಿಂದಾಗಿ ಸೋಮವಾರ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಶೇ 2ರಷ್ಟು ಏರಿಕೆ ಕಂಡಿವೆ. ಇದರಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹6 ಲಕ್ಷ ಕೋಟಿ ಹೆಚ್ಚಳವಾಗಿದೆ.

ಸೆನ್ಸೆಕ್ಸ್ 1,240 ಅಂಶ (ಶೇ 1.76) ಏರಿಕೆಯಾಗಿ 71,941ಕ್ಕೆ ಅಂತ್ಯಗೊಂಡಿತು. ನಿಫ್ಟಿ 385 ಅಂಶ (ಶೇ 1.80) ಹೆಚ್ಚಳವಾಗಿ 21,737ರಲ್ಲಿ ವಹಿವಾಟು ಕೊನೆಗೊಂಡಿತು.

ರಿಲಯನ್ಸ್ ಬಂಡವಾಳ ಏರಿಕೆ: ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯ ಶೇ 7ರಷ್ಟು ಏರಿಕೆಯಾಗಿದೆ. ಇದರಿಂದ ಕಂಪನಿಯ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹19.56 ಲಕ್ಷ ಕೋಟಿ ದಾಟಿದೆ. ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 6.81ರಷ್ಟು ಹೆಚ್ಚಾಗಿದೆ. ಪ್ರತಿ ಷೇರಿನ ಬೆಲೆ ₹2,895 ಇದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 7.16ರಷ್ಟು ಏರಿಕೆಯಾಗಿದೆ. ಪ್ರತಿ ಷೇರಿನ ಬೆಲೆ ₹2,900 ಇದೆ.

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14500
ಎಸಿ	₹7900
ಆರ್‌ಪಿ	₹12200
ಆರ್‌ಸಿ	₹7370

ಫೆಬ್ರುವರಿ ಎರಡನೇ ವಾರಕ್ಕೆ ದರ ಇಳಿಕೆ?

ಕೆ.ಜಿ ಬೆಳ್ಳುಳ್ಳಿಗೆ ₹450 ಧಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಚಿಲ್ಲರೆ ಮಾರುಕಟ್ಟೆಯಲ್ಲಿ ನಾಟಿ ಬೆಳ್ಳುಳ್ಳಿಯ ದರ ಒಂದು ಕೆ.ಜಿಗೆ ₹450 ಇದ್ದರೆ, ಹೈಬ್ರೀಡ್ ಬೆಳ್ಳುಳ್ಳಿ ಧಾರಣೆಯು ₹400 ದಾಟಿದೆ.

ಬೆಂಗಳೂರಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ 'ಎ' ದರ್ಜೆಯ ಹೈಬ್ರೀಡ್ ಬೆಳ್ಳುಳ್ಳಿಯ ಸಗಟು ಧಾರಣೆ ಒಂದು ಕೆ.ಜಿಗೆ ₹330 ಇದೆ. ಕಳೆದ ಒಂದೂವರೆ ತಿಂಗಳಿನಿಂದಲೂ ಬೆಲೆ ಇಳಿಕೆಯಾಗಿಲ್ಲ. ಇದರಿಂದ ಗ್ರಾಹಕರು ತತ್ತರಿಸುವಂತಾಗಿದೆ.

ದೇಶದ ಒಟ್ಟು ಬೆಳ್ಳುಳ್ಳಿ ಉತ್ಪಾದನೆಯ ಪೈಕಿ ಮಧ್ಯಪ್ರದೇಶದ ಪಾಲು ಶೇ 70ರಷ್ಟಿದೆ. ಉಳಿದಂತೆ ರಾಜಸ್ಥಾನ ಮತ್ತು ಗುಜರಾತ್‌ನಲ್ಲಿಯೂ ಅತಿಹೆಚ್ಚಾಗಿ ಬೆಳೆಯಲಾಗುತ್ತದೆ. ಈ ಮೂರು ರಾಜ್ಯಗಳಿಂದಲೇ ಕರ್ನಾಟಕಕ್ಕೆ ಬೆಳ್ಳುಳ್ಳಿ ಪೂರೈಕೆಯಾಗುತ್ತದೆ.

ಚೀನಾದಲ್ಲಿ ಉತ್ಪಾದನೆ ಕುಸಿತ: ಪ್ರತಿವರ್ಷ ಚೀನಾದಿಂದ ಬಾಂಗ್ಲಾದೇಶ, ಮಲೇಷ್ಯಾ, ವಿಯೆಟ್ನಾಂ ಹಾಗೂ ಶ್ರೀಲಂಕಾಕ್ಕೆ ಬೆಳ್ಳುಳ್ಳಿ ರಫ್ತಾಗುತ್ತದೆ. ಆದರೆ, ಈ ಬಾರಿ ಚೀನಾದಲ್ಲಿ ಉತ್ಪಾದನೆ ಕುಸಿದಿದೆ. ಹಾಗಾಗಿ, ಮಧ್ಯಪ್ರದೇಶದಿಂದ ಈ ನಾಲ್ಕು ದೇಶಗಳಿಗೆ ಬೆಳ್ಳುಳ್ಳಿ ರಫ್ತು ಆಗಿದೆ. ಇದೇ ದೇಶೀಯ ಮಾರುಕಟ್ಟೆಯಲ್ಲಿ ಧಾರಣೆ ಏರಿಕೆಗೆ ಕಾರಣವಾಗಿದೆ ಎನ್ನುತ್ತಾರೆ ವ್ಯಾಪಾರಿಗಳು.

'ಸದ್ಯ ಮಧ್ಯಪ್ರದೇಶದಲ್ಲಿ ಬೆಳ್ಳುಳ್ಳಿ ಕೊಯ್ಲು ಆರಂಭವಾಗಿದೆ. ಪ್ರತಿದಿನ ಬೆಂಗಳೂರಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆಗೆ 3 ಸಾವಿರ ಚೀಲ ಆವಕವಾಗುತ್ತಿದೆ. ಫೆಬ್ರುವರಿ ಎರಡನೇ ವಾರದ ವೇಳೆಗೆ ಆವಕ ಹೆಚ್ಚಳವಾಗಲಿದೆ. ಆಗ ಒಂದು ಕೆ.ಜಿ ಸಗಟು ದರ ₹150ರಿಂದ ₹200ಕ್ಕೆ ಇಳಿಯಲಿದೆ' ಎಂದು ಬೆಂಗಳೂರಿನ ಗುಜರಾತ್ ಟ್ರೇಡರ್ಸ್‌ನ ವರ್ತಕ ಜುಬೇರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸದ್ಯ ಹೊಸ ಸರಕು ಪೂರೈಕೆಯಾಗುತ್ತಿದೆ. ಇದರಿಂದ ಸಗಟು ದರದಲ್ಲಿ ಸೋಮವಾರ ಕೆ.ಜಿಗೆ ₹20 ಕಡಿಮೆಯಾಗಿದೆ' ಎಂದರು.

3 ವರ್ಷದಲ್ಲಿ 5 ಟ್ರಿಲಿಯನ್ ಆರ್ಥಿಕತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರದ ಮಧ್ಯಂತರ ಬಜೆಟ್ ಮಂಡನೆಗೆ ಎರಡು ದಿನ ಬಾಕಿ ಉಳಿದಿರುವ ಬೆನ್ನಲ್ಲೇ 2024–25ನೇ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರವು (ಜಿಡಿಪಿ) ಶೇ 7ರಷ್ಟು ಆಗಬಹುದು ಎಂಬ ನಿರೀಕ್ಷೆ ಇದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ವರದಿ ಸೋಮವಾರ ಹೇಳಿದೆ.

2023–24ನೇ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆಯು ಶೇ 7.3ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಶೇ 7.2ರಷ್ಟಿತ್ತು. ವಿಶ್ವದ ಆರ್ಥಿಕತೆಯು ಶೇ 2ರಷ್ಟು ಬೆಳವಣಿಗೆ ಸಾಧಿಸಲು ಹರಸಾಹಸಪಡುತ್ತಿರುವ ನಡುವೆಯೇ ಈ ವರದಿ ಪ್ರಕಟಿಸಲಾಗಿದೆ.

ಮುಂದಿನ ಮೂರು ವರ್ಷಗಳಲ್ಲಿ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ. ಜಿಡಿಪಿ ಗಾತ್ರವು ₹415 ಲಕ್ಷ ಕೋಟಿಗೆ ತಲುಪಲಿದೆ (5 ಟ್ರಿಲಿಯನ್ ಡಾಲರ್). 2030ರ ವೇಳೆಗೆ ₹581 ಲಕ್ಷ ಕೋಟಿಗೆ ತಲುಪಲಿದೆ (7 ಟ್ರಿಲಿಯನ್ ಡಾಲರ್). 2023–24ರಲ್ಲಿ ₹307 ಲಕ್ಷ ಕೋಟಿಗೆ (3.7 ಟ್ರಿಲಿಯನ್ ಡಾಲರ್) ಮುಟ್ಟಲಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

'ಕೋವಿಡ್ ಸಾಂಕ್ರಾಮಿಕ ನಂತರದ ನಾಲ್ಕು ವರ್ಷಗಳಲ್ಲಿ ದೇಶದ ಜಿಡಿಪಿ ಸತತವಾಗಿ ಶೇ 7ಕ್ಕಿಂತಲೂ ಹೆಚ್ಚು ಬೆಳವಣಿಗೆ ದಾಖಲಿಸುತ್ತಿದೆ' ಎಂದು ಮುಖ್ಯ ಹಣಕಾಸು ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	18000-28500
ಹೊಸತು	28500-35000
ಹಳತು	42000-44000
ಕಾರ್ಕಳ	
ಹೊಸತು	25000-35000
ಹಳತು	30000-44500
ಕುಮಟ	
ಚಿಪ್ಪು	26899-31899
ಕೋಕ	18019-28999
ಫ್ಯಾಕ್ಟರಿ	11089-21100
ಹಳೆಚಾಲಿ	36509-38209
ಹೊಸಚಾಲಿ	32899-34869
ಪುತ್ತೂರು	
ಕೋಕ	11500-26000
ಹೊಸತು	26500-35000
ಸಾಗರ	
ಬಿಳಿಗೋಟು	12281-30299
ಚಾಲಿ	30899-37801
ಕೋಕ	21129-31269
ಕೆಂಪುಗೋಟು	24699-37199
ರಾಶಿ	33919-48799
ಸಿಪ್ಪೆಗೋಟು	10001-20259
ಶಿವಮೊಗ್ಗ	
ಬೆಟ್ಟೆ	38069-54039
ಗೊರಬಲು	16509-36258
ರಾಶಿ	34009-49399
ಸರಕು	54189-83396
ಸಿದ್ದಾಪುರ	
ಬಿಳಿಗೋಟು	30699-32299
ಚಾಲಿ	37099-39099
ಕೋಕ	28319-31099
ಹೊಸಚಾಲಿ	31889-34299
ಕೆಂಪುಗೋಟು	31619-35609
ರಾಶಿ	44099-47589
ತಟ್ಟಿಬೆಟ್ಟೆ	40569-47489
ಶಿರಸಿ	
ಬೆಟ್ಟೆ	38103-44698
ಬಿಳಿಗೋಟು	26009-34318
ಚಾಲಿ	36508-39211
ಕೆಂಪುಗೋಟು	31898-36898
ರಾಶಿ	44508-49099
ಯಲ್ಲಾಪುರ	
ಅಪಿ	58100-58100
ಬಿಳಿಗೋಟು	24299-33899
ಚಾಲಿ	34099-39440
ಕೋಕ	16899-28899
ಕೆಂಪುಗೋಟು	26899-37499
ರಾಶಿ	47019-54200
ತಟ್ಟಿಬೆಟ್ಟೆ	38799-46430

ಮುಯಿಜು ವಿರುದ್ಧ ವಾಗ್ದಂಡನೆಗೆ ಸಿದ್ಧತೆ

ಮಾಲ್ಡೀವ್ಸ್: ವಿರೋಧ ಪಕ್ಷ ಎಂಡಿಪಿಯಿಂದ ಸಹಿ ಸಂಗ್ರಹ

ಮಾಲೆ (ಪಿಟಿಐ): ಮಾಲ್ಡೀವ್ಸ್‌ನ ಪ್ರಮುಖ ವಿರೋಧ ಪಕ್ಷ ಮಾಲ್ಡೀವಿಯನ್ ಡೆಮಾಕ್ರಟಿಕ್ ಪಾರ್ಟಿ (ಎಂಡಿಪಿ), ಅಧ್ಯಕ್ಷ ಮೊಹಮ್ಮದ್ ಮುಯಿಜು ವಿರುದ್ಧ ವಾಗ್ದಂಡನೆ ನಿಲುವಳಿ ಮಂಡಿಸಲು ಸಿದ್ಧತೆ ನಡೆಸಿದೆ.

ಮುಯಿಜು

ಮುಯಿಜು ಸಂಪುಟದ ನಾಲ್ವರು ಸದಸ್ಯರಿಗೆ ಅನುಮೋದನೆ ನೀಡುವ ವಿಚಾರವಾಗಿ ಮಾಲ್ಡೀವ್ಸ್ ಸಂಸತ್ತಿನಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರ ಮಧ್ಯೆ ಹೊಡೆದಾಟ ನಡೆದ ಮರುದಿನ ಈ ಬೆಳವಣಿಗೆ ಉಂಟಾಗಿದೆ.

'ಅಧ್ಯಕ್ಷರನ್ನು ವಾಗ್ದಂಡನೆಗೆ ಗುರಿಪಡಿಸಲು ಎಂಡಿಪಿಯು ದಿ ಡೆಮಾಕ್ರಟ್ಸ್ ಪಕ್ಷದ ಸಹಕಾರದೊಂದಿಗೆ ಅಗತ್ಯ ಪ್ರಮಾಣದಲ್ಲಿ ಸದಸ್ಯರ ಸಹಿ ಸಂಗ್ರಹಿಸಿದೆ. ನಿಲುವಳಿಯನ್ನು ಇನ್ನಷ್ಟೇ ಮಂಡಿಸಬೇಕಿದೆ' ಎಂದು ಸಂಸದರೊಬ್ಬರ ಹೇಳಿಕೆ ಉಲ್ಲೇಖಿಸಿ ಸನ್ ಡಾಟ್ ಕಾಮ್ ವರದಿ ಮಾಡಿದೆ.

'ವಿರೋಧ ಪಕ್ಷಗಳ ಸಂಸದೀಯ ಗುಂಪು, ಸೋಮವಾರ ಸಭೆ ನಡೆಸಿ ಅಧ್ಯಕ್ಷರ ವಿರುದ್ಧ ವಾಗ್ದಂಡನೆ ನಿಲುವಳಿ ಮಂಡಿಸಲು ಒಮ್ಮತದ ತೀರ್ಮಾನ ತೆಗೆದುಕೊಂಡಿದೆ' ಎಂದು ದಿ ಎಡಿಷನ್. ಎಂವಿ ತನ್ನ ವರದಿಯಲ್ಲಿ ಹೇಳಿದೆ.

87 ಸಂಸದರನ್ನು ಒಳಗೊಂಡಿರುವ ಮಾಲ್ಡೀವ್ಸ್ ಸಂಸತ್ತಿನಲ್ಲಿ ಎಂಡಿಪಿ ಮತ್ತು ಡೆಮಾಕ್ರಟ್ಸ್ ಜತೆಯಾಗಿ 56 ಸದಸ್ಯರನ್ನು ಹೊಂದಿವೆ. ಎಂಡಿಪಿಯ 43 ಹಾಗೂ ಡೆಮಾಕ್ರಟ್ಸ್ ಪಕ್ಷದ 13 ಸದಸ್ಯರು ಇದ್ದಾರೆ. '56 ಸದಸ್ಯರ ಮತಗಳ ಬಲದಿಂದ ಅಧ್ಯಕ್ಷರನ್ನು ವಾಗ್ದಂಡನೆಗೆ ಗುರಿಪಡಿಸುವ ಅವಕಾಶವನ್ನು ಸಂವಿಧಾನ ನೀಡುತ್ತದೆ' ಎಂದು ಸನ್ ಡಾಟ್ ಡಾಮ್ ವರದಿ ಮಾಡಿದೆ. ಚೀನಾ ಪರ ಧೋರಣೆ ಹೊಂದಿರುವ ಮುಯಿಜು, ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಇಬ್ರಾಹಿಂ ಮೊಹಮ್ಮದ್ ಅವರನ್ನು ಮಣಿಸಿದ್ದರು. ಇಬ್ರಾಹಿಂ ಅವರ ಅವಧಿಯಲ್ಲಿ ಭಾರತ– ಮಾಲ್ಡೀವ್ಸ್ ನಡುವೆ ಉತ್ತಮ ಬಾಂಧವ್ಯ ಇತ್ತು.

ಮೂವರು ಸಚಿವರಿಗೆ ಸಿಗದ ಅನುಮೋದನೆ

ಮಾಲ್ಡೀವ್ಸ್ ಸಂಸತ್ತು, ಮುಯಿಜು ಸಂಪುಟದ ಮೂವರಿಗೆ ಅನುಮೋದನೆ ನಿರಾಕರಿಸಿದೆ. 22 ಸಚಿವರಲ್ಲಿ ನಾಲ್ವರು ಸಚಿವರ ಅನುಮೋದನೆಯನ್ನು ವಿರೋಧ ಪಕ್ಷ ಎಂಡಿಪಿ ತಡೆಹಿಡಿದಿತ್ತು. ಆದ್ದರಿಂದ ಸಂಸತ್ತಿನ ಅನುಮೋದನೆ ಪಡೆಯಲು ಸೋಮವಾರ ಮತದಾನ ನಡೆಯಿತು.

ವಸತಿ ಮತ್ತು ನಗರಾಭಿವೃದ್ಧಿ ಸಚಿವ ಅಲಿ ಹೈದರ್ ಅಹ್ಮದ್, ಇಸ್ಲಾಮಿಕ್ ಸಚಿವ ಮೊಹಮ್ಮದ್ ಶಹೀಂ ಅಲಿ ಸಯೀದ್ ಮತ್ತು ಅಟಾರ್ನಿ ಜನರಲ್ ಅಹ್ಮದ್ ಉಶಾಮ್ ಅವರಿಗೆ ಅನುಮೋದನೆ ನಿರಾಕರಿಸಲಾಗಿದೆ. ಆರ್ಥಿಕ ಸಚಿವ ಮೊಹಮ್ಮದ್ ಸಯೀದ್ ಮತ್ತು ಇತರ 18 ಸಚಿವರಿಗೆ ಅನುಮೋದನೆ ದೊರೆಯಿತು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಸೋಮವಾರ ನಡೆದ ಮತದಾನದಲ್ಲಿ ಹೈದರ್ ಅವರ ಅನುಮೋದನೆ-ಯನ್ನು 46–24 ರಿಂದ ತಿರಸ್ಕರಿಸಲಾಯಿತು. ಉಶಾಮ್ ಮತ್ತು ಶಹೀಂ ಅವರ ಅನುಮೋದನೆ ಕ್ರಮವಾಗಿ 44–24 ಹಾಗೂ 31–30 ರಿಂದ ತಿರಸ್ಕೃತಗೊಂಡಿದೆ ಎಂದು ವರದಿಯಾಗಿದೆ.

ಬಿಪಿಸಿಎಲ್ ಲಾಭ ಶೇ 82 ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತ್‌ಪೆಟ್ರೋಲಿಯಂಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ನಿವ್ವಳ ಲಾಭವು, 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 82ರಷ್ಟು ಏರಿಕೆಯಾಗಿದೆ.

ಏಪ್ರಿಲ್ ತ್ರೈಮಾಸಿಕದಲ್ಲಿ ಕಂಪನಿಯು ₹1,747 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ 3ನೇ ತ್ರೈಮಾಸಿಕದಲ್ಲಿ 3,181.42 ಕೋಟಿಗೆ ಹೆಚ್ಚಳವಾಗಿದೆ. ಆದರೆ, ಜುಲೈ–ಸೆಪ್ಟೆಂಬರ್ ತ್ರೈಮಾಸಿಕ ದಲ್ಲಿ ₹8,243.55 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಡಿಸೆಂಬರ್ ತ್ರೈ-ಮಾಸಿಕದಲ್ಲಿ ಲಾಭವು ಕಡಿಮೆಯಾಗಿದೆ.

ಮುಂಬೈ ಧಾರಣೆ

ಶೇಂಗಾ
29-1-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1515 (1520)
ಒಂದು ವಾರದ ಡೆಲಿವರಿ	1510 (1515)
ಸೋಯಾ ಕಚ್ಚಾ	858 (867)
ಪಾಮ್ ವಾರದ ಡೆಲಿವರಿ	860 (866)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹**62,300** (62,150)
ಬೆಳ್ಳಿ ಕೆ.ಜಿ ₹**71,400** (71,100)

ಆವರಣದಲ್ಲಿ ಶನಿವಾರದ ಧಾರಣೆ

ಸುಧಾ, ಮಯೂರ ತಪ್ಪದೇ ಓದಿ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ
ಫೋ: (0836)2213838 Email: eedharwad@gmail.com
ನಂ.ಎಚ್.ಡಿಎಂಸಿ/66/07/02/2023–24 ದಿನಾಂಕ: 09–01–2024
ಇ–ಟೆಂಡರ ಅಧಿಸೂಚನೆ ಜಾಹಿರಾತು ನಂ. ದಿನಾಂಕ:
ಸನ್ 2022–23 ಹಾಗೂ 2023–24ನೇ ಸಾಲಿನ ಪಾಲಿಕೆ ಅನುದಾನ, 14ನೇ ಹಣಕಾಸು ಅನುದಾನ, ಎಸ್.ಎಫ್.ಸಿ ಮುಕ್ತ ನಿಧಿ ಅನುದಾನ (ಎಸ್‌ಸಿಎಸ್‌ಪಿ/ಟಿಎಸ್‌ಪಿ/7.25%) ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ PWD/CPWD/ ಇತರೆ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ 1ನೇ ದರ್ಜೆ, 2ನೇ ದರ್ಜೆ, 3ನೇ ದರ್ಜೆ ಮತ್ತು 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರನಲ್ಲಿ ಭಾಗವಹಿಸಬಹುದು.
ಇ.ನಂ : 1) 4471 (Gen), 2) 5479 (Gen), 3) 9741 (Gen), 4) 9722 (SC), 5) 4171 (Gen), 6) 4184 (Gen), 7) 4189 (Gen), 8) 3365 (Gen), 9) 8671 (SC), 10) 2654 (Gen), 11) 6472 (Gen), 12)3862 Gen), 13) 8384 (Gen), 14) 5131(Gen), 15)6998(Gen), 16) 7918(Gen), 17)4729(Gen), 18)6246 Gen), 19) 13455(Gen), 20)13262(Gen), 21)13266(Gen), 22)13568(Gen), 23) 1274 (Gen), 24) 1076 (Gen),
ಒಟ್ಟು 24 ಕಾಮಗಾರಿಗಳು ಮೊತ್ತ ರೂ. 527.42 ಲಕ್ಷಗಳಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರ ದಾಖಲೆಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರಮೆಂಟನಲ್ಲಿ ದಿನಾಂಕ:29/01/2024 (ಅ.ನಂ. 1 ರಿಂದ 24) ರಿಂದ ಪಡೆಯಬಹುದಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರ ಟೆಂಡರನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 0836–2213838 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in/ ರಲ್ಲಿ ಪಡೆಯಬಹುದು.
ಈ ಮೇಲಿನ ಕಾಮಗಾರಿಗಳಿಗೆ 1) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:16/02/2024 ಸಂಜೆ 05.00 ಗಂಟೆಯವರೆಗೆ
2) ಟೆಂಡರ ತೆರೆಯುವ ದಿನಾಂಕ: 17/02/2024 ಸಂಜೆ 5.30 ಗಂಟೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಧಾರವಾಡ
ವಾ.ಸಾ.ಇ/ಧಾರವಾಡ/721/ದೇಶಪಾಂಡೆಪಬ್ಲಿಸಿಟಿ/2023–24

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ
GSTIN:29BLR002252F1DR
ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2023–24/2316, ದಿನಾಂಕ: 25.01.2024
ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ
1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಈ ಕೆಡಬ್ಲ್ಯೂ–3 & 4ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2023–24 ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆ ಅಡಿಯಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ವರ್ಕ ಇಂಡೆಂಟ್ ಸಂಖ್ಯೆ: (1)7736, (2)7346 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: ಕನಿಷ್ಠ ರೂ:89.00 ಲಕ್ಷಗಳು ಹಾಗೂ ಗರಿಷ್ಠ ರೂ:499.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ: 3ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) ಪ್ರೀ–ಬಿಡ್ ಮೀಟಿಂಗ್ ದಿನಾಂಕ: 07.02.2024 (11.30 ರ ನಂತರ) 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 12.02.2024 (17.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 14.02.2024 (16.00 ಗಂಟೆವರೆಗೆ) 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 16.02.2024 (11.30 ಗಂಟೆ ನಂತರ) 9) ಆರ್ಥಿಕ ಬಿಡ್ ತೆರೆಯುವ ದಿನಾಂಕ :19.02.2024 (11.30 ಗಂಟೆ ನಂತರ) 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in
ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
ವಾ.ಸಾ.ಸಂ.ಇ/ಯಾದಗಿರಿ/295/ಕೆ.ಎಸ್.ಎಂ.ಸಿ.&ಎ/2023–24 ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

रजिस्ट्री सं. डी.एल.- 33004/99 REGD. No. D. L.-33004/99
भारत का राजपत्र
The Gazette of India
सत्यमेव जयते
सी.जी.-डी.एल.-अ.-27042023-245494
CG-DL-E-27042023-245494
असाधारण
EXTRAORDINARY
भाग II—खण्ड 3—उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY
सं. 1855] नई दिल्ली, बृहस्पतिवार, अप्रैल 27, 2023/वैशाख 7, 1945
No. 1855] NEW DELHI, THURSDAY, APRIL 27, 2023/ VAISAKHA 7, 1945
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 27ನೆ ಏಪ್ರಿಲ್, 2023
ಎಸ್ ಒ 1943 (ಇ): ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ಸೆಕ್ಷನ್ 3ಎ ಯ ಉಪವಿಭಾಗ (1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ಇನ್ನು ಮುಂದೆ ಕಾಯಿದೆ ಎಂದು ಉಲ್ಲೇಖಿಸಲಾಗುತ್ತದೆ) ಕೇಂದ್ರ ಸರ್ಕಾರವು ಅದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಳಸಲಾಗುತ್ತದೆ ಎಂದು ತೃಪ್ತಿಗೊಂಡ ನಂತರ, ನಿರ್ಮಾಣಕ್ಕೆ ಅಗತ್ಯವಿರುವುದರಿಂದ (ಅಗಲಗೊಳಿಸುವುದು / ಎರಡು ಪಥ ಫೇವ್ಡ್ ಶೋಲ್ಡರ್ ರೊಂದಿಗೆ / ನಾಲ್ಕು ಪಥ ಇತ್ಯಾದಿ), ನಿರ್ವಹಣೆ, ಆಡಳಿತ ಮತ್ತು ಕಾರ್ಯಾಚರಣೆ ಮಾಡುವ ಸಲುವಾಗಿ ಕರ್ನಾಟಕ ರಾಜ್ಯದ ರಾಷ್ಟ್ರೀಯ ಹೆದ್ದಾರಿ ನಂ 766 ಸಿ ರ ಕಿ ಮೀ 163.7 ರಿಂದ ಕಿ ಮೀ 166.350, ಕಿ ಮೀ 174.120 ಮತ್ತು ಕಿ ಮೀ 186.550 ರಿಂದ ಕಿ ಮೀ 191.9 ರ ಭೂಮಿಯ ವ್ಯಾಪ್ತಿಯಲ್ಲಿ ಹಾದುಹೋಗುವ (ಬೈಂದೂರು – ರಾಣೆಬೆನ್ನೂರು ವಿಭಾಗ), ಹಾವೇರಿ ಜಿಲ್ಲೆ, ಕರ್ನಾಟಕ ದಲ್ಲಿರುವ ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಈ ಮೂಲಕ ಘೋಷಿಸುತ್ತದೆ.
ಸದರಿ ಜಮೀನಿನಲ್ಲಿ ಹಿತಾಸಕ್ತಿ ಹೊಂದಿರುವ ಯಾವುದೇ ವ್ಯಕ್ತಿ, ಅಧಿಕೃತ ಗೆಜೆಟ್ ನಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ, ಈ ಭೂಮಿಯನ್ನು ಕಾಯಿದೆಯ ಸೆಕ್ಷನ್ 3 ಸಿ ಯ ಉಪವಿಭಾಗ (1) ರ ಅಡಿಯಲ್ಲಿ ಮೇಲಿನ ಉದ್ದೇಶಕ್ಕಾಗಿ ಬಳಸಲು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಬಹುದು.
ಅಂತಹ ಪ್ರತಿಯೊಂದು ಆಕ್ಷೇಪಣೆಯನ್ನು ಸಕಾರಣದೊಂದಿಗೆ ಸಕ್ಷಮ ಪ್ರಾಧಿಕಾರಕ್ಕೆ, ಅಂದರೆ ಸಹಾಯಕ ಆಯುಕ್ತರು, ಹಾವೇರಿ ಉಪ ವಿಭಾಗ, ಹಾವೇರಿ ಇವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು, ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆ ಸಲ್ಲಿಸಿದವರ ವಯಕ್ತಿಕವಾಗಿ ಅಥವಾ ಅವರ ಪರ ವಕೀಲರ ಅಹವಾಲು ಕೇಳಲು ಅವಕಾಶ ಮಾಡಿಕೊಡುತ್ತದೆ. ಮತ್ತು ಅಂತಹ ಎಲ್ಲ ಆಕ್ಷೇಪಣೆಗಳನ್ನು ಕೇಳಿದ ನಂತರ ಮತ್ತು ಅಂತಹ ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ, ಯಾವುದಾದರು ಇದ್ದಲ್ಲಿ, ಮತ್ತು ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಕಂಡುಬಂದರೆ, ಆದೇಶ ಮೂಲಕ , ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.
ಸಕ್ಷಮ ಪ್ರಾಧಿಕಾರವು ಕಾಯಿದೆಯ ಸೆಕ್ಷನ್ 3 ಸಿ ಯ ಉಪ–ಸೆಕ್ಷನ್ 2 ರ ಅಡಿಯಲ್ಲಿ ಹೊರಡಿಸಿರುವ ಯಾವುದೇ ಆದೇಶವು ಅಂತಿಮವಾಗಿರುತ್ತದೆ.
ಅಧಿಸೂಚನೆಯಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಯೋಜನೆಗಳು ಮತ್ತು ಇತರ ವಿವರಗಳು ಲಭ್ಯವಿದ್ದು ಮತ್ತು ಆಸಕ್ತ ವ್ಯಕ್ತಿಗಳು ಇವುಗಳನ್ನು ಸಕ್ಷಮ ಪ್ರಾಧಿಕಾರದ ಮೇಲ್ಕಂಡ ಕಚೇರಿಯಲ್ಲಿ ಪರಿಶೀಲಿಸಬಹುದು.
ಅನುಸೂಚಿ : ಕರ್ನಾಟಕ ರಾಜ್ಯದ ರಾಷ್ಟ್ರೀಯ ಹೆದ್ದಾರಿ ನಂ 766 ಸಿ ರ ಕಿ ಮೀ 163.7 ರಿಂದ ಕಿ ಮೀ 166.350, ಕಿ ಮೀ 174.120 ಮತ್ತು ಕಿ ಮೀ 186.550 ರಿಂದ ಕಿ ಮೀ 191.9 ರ ಭೂಮಿಯ ವ್ಯಾಪ್ತಿಯಲ್ಲಿ ಹಾದುಹೋಗುವ (ಬೈಂದೂರು – ರಾಣೆಬೆನ್ನೂರು ವಿಭಾಗ), ಕರ್ನಾಟಕ, ಕಟ್ಟಡ ಸಹಿತ / ಕಟ್ಟಡ ರಹಿತ ವಾಗಿರುವ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ			ಜಿಲ್ಲೆ : ಹಾವೇರಿ		
ಕ್ರಮ ಸಂಖ್ಯೆ	ಸರ್ವೆ / ಪ್ಲಾಟ್ ನಂ.	ಜಮೀನಿನ ವಿಧ	ಜಮೀನಿನ ತರಹೆ	ವಿಸ್ತೀರ್ಣ (ಸ್ಥಳೀಯ ಯೂನಿಟ್ ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರು ಗಳಲ್ಲಿ)
1	2	3	4	5	6
ತಾಲೂಕು: ರಟ್ಟೀಹಳ್ಳಿ					
ಗ್ರಾಮ : ಬೆಳ್ಳೂರು					
1	189	ಖಾಸಗಿ	ತರಿ	1,156.3800000(Square Meter)	0.1156380
2	190	ಖಾಸಗಿ	ತರಿ	1,062.2000000(Square Meter)	0.1062200
3	191	ಖಾಸಗಿ	ತರಿ	162.8800000(Square Meter)	0.0162880
4	193	ಖಾಸಗಿ	ತರಿ	6,089.5000000(Square Meter)	0.6089500
			Total	8,470.9600	0.8471

[F. No. RW/BNG/NH-766C/Km.40to 194/20/2021/3A]
ABHAY JAIN, Dy. Secy.

ವೇಗಿಗಳ ದಾಳಿಗೆ ಒಲಿದ ಜಯ

ರಣಜಿ ಟ್ರೋಫಿ: ತ್ರಿಪುರ ವಿರುದ್ಧ ಕರ್ನಾಟಕಕ್ಕೆ ಗೆಲುವು, ವಿದ್ವತ್‌ಗೆ 4 ವಿಕೆಟ್

ತ್ರಿಪುರ: ಮಧ್ಯಮ ವೇಗದ ಬೌಲರ್‌ಗಳ ಸಾಂಘಿಕ ಪ್ರದರ್ಶನದ ನೆರವಿನಿಂದ ಕರ್ನಾಟಕ ತಂಡ ಅಗರ್ತಲಾದಲ್ಲಿ ನಡೆದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ನಾಲ್ಕನೇ ದಿನವಾದ ಸೋಮವಾರ ತ್ರಿಪುರಾ ತಂಡವನ್ನು 29 ರನ್‌ಗಳಿಂದ ಸೋಲಿಸುವಲ್ಲಿ ಯಶಸ್ವಿಯಾಯಿತು.

ಕರ್ನಾಟಕ ಈ ಗೆಲುವಿನಿಂದ ಆರು ಪಾಯಿಂಟ್ಸ್ ಪಡೆದಿದ್ದು 'ಸಿ' ಗುಂಪಿನಲ್ಲಿ 15 ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನದಲ್ಲಿ ಉಳಿದುಕೊಂಡಿದೆ. ತಮಿಳುನಾಡು ಸಹ ಇಷ್ಟೇ ಪಾಯಿಂಟ್ಸ್ ಪಡೆದರೂ, ರನ್ ಕೋಷ್ಟಕದ ಆಧಾರದಲ್ಲಿ ಮೊದಲ ಸ್ಥಾನದಲ್ಲಿದೆ.

ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್ ಮತ್ತು ವಾಸುಕಿ ಕೌಶಿಕ್ ಅವರು ಮತ್ತೊಮ್ಮೆ ಕರ್ನಾಟಕದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ಮೂವರು ಎಂಟು ವಿಕೆಟ್‌ಗಳನ್ನು ಹಂಚಿಕೊಂಡರು.

ಕರ್ನಾಟಕ ತಂಡವನ್ನು ಭಾನುವಾರ ಎರಡನೇ ಇನಿಂಗ್ಸ್‌ನಲ್ಲಿ 151 ರನ್‌ಗಳಿಗೆ ಉರುಳಿಸಿದ ನಂತರ ಆತಿಥೇಯರ ಮುಂದೆ ಗೆಲುವಿಗೆ 193 ರನ್‌ಗಳ ಸಾಧಾರಣ ಗುರಿಯಿತ್ತು. ಆದರೆ ಅಂತಿಮ ದಿನ ತ್ರಿಪುರಾ ತಂಡ 55.2 ಓವರುಗಳಲ್ಲಿ 163 ರನ್ನಿಗೆ ಕುಸಿಯಿತು.

ವಿದ್ವತ್ ಕಾವೇರಪ್ಪ 22 ಓವರುಗಳಲ್ಲಿ 44 ರನ್ನಿಗೆ 4 ವಿಕೆಟ್ ಪಡೆದು ಪರಿಣಾಮಕಾರಿಯೆನಿಸಿದರು. ಕೌಶಿಕ್

ವಿದ್ವತ್ ಕಾವೇರಪ್ಪ.

ಒಂದು ವಿಕೆಟ್ ಮಾತ್ರ ಪಡೆದರೂ, 17 ಓವರುಗಳಲ್ಲಿ ಬರೇ 41 ರನ್‌ಗಳ ನ್ನಷ್ಟೇ ನೀಡಿದರು. ವಿಜಯಕುಮಾರ್ 62 ರನ್ನಿಗೆ ಮೂರು ವಿಕೆಟ್ (ಇಕಾನಮಿ: 4.32) ಪಡೆದರು.

ಭಾನುವಾರ ಅಜೇಯರಾಗಿ ಉಳಿದಿದ್ದ ಮಧ್ಯಮ ಕ್ರಮಾಂಕದ ಆಟಗಾರ ಸುದೀಪ್ ಚಟರ್ಜಿ 26 ರನ್‌ಗಳೊಡನೆ ಆಟ ಮುಂದುವರಿಸಿ ಏಕಾಂಗಿಯಾಗಿ ಪ್ರತಿರೋಧ ತೋರಿ 10 ಬೌಂಡರಿಗಳಿದ್ದ 82 ರನ್ ಗಳಿಸಿದರು. ಚಟರ್ಜಿ ಮತ್ತು ಕನ್ನಡಿಗ ಗಣೇಶ್ ಸತೀಶ್ (ಭಾನುವಾರ ಔಟಾಗದೇ 3) ನಾಲ್ಕನೇ ವಿಕೆಟ್‌ಗೆ 39 ರನ್ ಸೇರಿಸಿ ತಂಡದ ಆಸೆಗೆ ಬಲತುಂಬಿದ್ದರು.

ಮೊತ್ತ 89 ಆಗಿದ್ದಾಗ ಗಣೇಶ್, ವಿದ್ವತ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗುವ ಮೂಲಕ ಜೊತೆಯಾಟ ಮುರಿಯಿತು.

ಸುದೀಪ್ ಒಂದೆಡೆ ರನ್ ಗಳಿಸುತ್ತ ಹೋದರೂ, ಇನ್ನೊಂದೆಡೆ ವೈಶಾಖ ವಿಜಯಕುಮಾರ್ ಮತ್ತು ವಿದ್ವತ್ ಅವರ ದಾಳಿಗೆ ತ್ರಿಪುರಾ ತಂಡ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತ ಹೋಯಿತು.

ಸಮರ್ಥ್ ಅವರಿಂದ ರನೌಟ್ ಆದ ಸುದೀಪ್ ಕೊನೆಯವರಾಗಿ ನಿರ್ಗಮಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ 241, ತ್ರಿಪುರಾ 200. ಎರಡನೇ ಇನಿಂಗ್ಸ್: ಕರ್ನಾಟಕ 151, ತ್ರಿಪುರಾ 55.2 ಓವರ್‌ಗಳಲ್ಲಿ 163 (ಭಾನುವಾರ 3 ವಿಕೆಟ್‌ಗೆ 59)

ಸುದೀಪ್ ರನ್‌ಔಟ್ (ಸಮರ್ಥ್) 82 (144ಎ, 4x10)
ಗಣೇಶ್ ಬಿ ಕಾವೇರಪ್ಪ 22 (57ಎ, 4x4)
ವೃದ್ಧಿಮಾನ್ ರನ್‌ಔಟ್ (ವೈಶಾಖ) 0 (6ಎ)
ವಿಕ್ರಮ್‌ಜಿತ್ ಸಿ ಶರತ್ ಬಿ ಕಾವೇರಪ್ಪ 9 (12ಎ, 4x1)
ಮಣಿಶಂಕರ್ ಎಲ್‌ಬಿಡಬ್ಲ್ಯು ಬಿ ವೈಶಾಖ 8 (13ಎ, 4x2)
ಪರ್ವೇಜ್ ಸಿ ಅನೀಶ್ ಬಿ ವೈಶಾಖ 1 (16ಎ)
ರಾಣಾ ಬಿ ಕಾವೇರಪ್ಪ 1 (6ಎ)
ಅಭಿಜಿತ್ ಔಟಾಗದೆ 4 (14ಎ, 4x1)
ಇತರೆ: 8 (ಬೈ 4, ಲೆಗ್‌ಬೈ 2, ನೋಬಾಲ್ 2)
ಇತರೆ: 8 (ಬೈ 4, ಲೆಗ್‌ಬೈ 2, ನೋಬಾಲ್ 2)

ವಿಕೆಟ್ ಪತನ: 4-89 (ಗಣೇಶ್ ಸತೀಶ್; 31.3), 5-90 (ವೃದ್ಧಿಮಾನ್ ಸಹಾ, 33.1), 6-103 (ವಿಕ್ರಮ್‌ಜಿತ್ ದೇವನಾಥ್; 37.2), 7-119 (ಮಣಿಶಂಕರ್ ಮುರಾಸಿಂಗ್; 41.3), 8-133 (ಪರ್ವೇಜ್ ಸುಲ್ತಾನ್; 45.3), 9-138 (ರಾಣಾ ದತ್; 46.4), 10-163 (ಸುದೀಪ್ ಚಟರ್ಜಿ; 55.2)

ಬೌಲಿಂಗ್: ವಿದ್ವತ್ ಕಾವೇರಪ್ಪ 22–6–44–4, ವಾಸುಕಿ ಕೌಶಿಕ್ 17–3–41–1, ವೈಶಾಖ ವಿಜಯಕುಮಾರ್ 14.2–2–62–3, ಕಿಶನ್ ಬೆದರೆ 1–0–9–0, ಶಶಿಕುಮಾರ್ 1–0–1–0

ಪಂದ್ಯದ ಆಟಗಾರ: ವೈಶಾಖ ವಿಜಯಕುಮಾರ್

ಫಲಿತಾಂಶ: ಕರ್ನಾಟಕಕ್ಕೆ 29 ರನ್‌ಗಳ ಜಯ

ಉತ್ಸಾಹಿ ಭಾರತಕ್ಕೆ ಇಂದು ಕಿವೀಸ್ ಸವಾಲು

19 ವರ್ಷದೊಳಗಿನವರ ಐಸಿಸಿ ಏಕದಿನ ವಿಶ್ವಕಪ್: ಸೂಪರ್ ಸಿಕ್ಸ್ ಹಂತದ ಪಂದ್ಯ

ಬ್ಲೊಮ್‌ಫೊಂಟೀನ್ (ದಕ್ಷಿಣ ಆಫ್ರಿಕಾ), (ಪಿಟಿಐ): ಸತತ ಮೂರು ಲೀಗ್ ಪಂದ್ಯಗಳನ್ನು ಗೆದ್ದು ಭಾರತ ತಂಡ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಉತ್ತಮ ಆರಂಭ ಮಾಡಿದೆ.

ಈಗ ಇದೇ ಹುಮ್ಮಸ್ಸಿನೊಡನೆ ಮಂಗಳವಾರ ನಡೆಯುವ ಸೂಪರ್ ಸಿಕ್ಸ್ ಹಂತದ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

'ಎ' ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಸೂಪರ್ ಲೀಗ್‌ಗೆ ಅರ್ಹತೆ ಪಡೆದಿರುವ ಭಾರತ, ಮನುಗುವಾಂಗ್ ಓವಲ್‌ನಲ್ಲೇ ಈ ಪಂದ್ಯ ಆಡುವ ಅನುಕೂಲ ಹೊಂದಿದೆ. ಭಾರತ ಇಲ್ಲಿಯೇ ತನ್ನ ಲೀಗ್ ಪಂದ್ಯಗಳನ್ನು ಆಡಿತ್ತು.

ಈಸ್ಟ್ ಲಂಡನ್‌ನಲ್ಲಿ ಆಡಿದ್ದ ಕಿವೀಸ್ ತಂಡ, ಇದೀಗ ಬ್ಲೊಮ್‌ಫೊಂಟೀನ್‌ನಲ್ಲಿ ಈ ಪಂದ್ಯ ಆಡಬೇಕಾಗಿದೆ. ಭಾರತ ತಂಡವು ಲೀಗ್ ಹಂತದಲ್ಲಿ ಬಾಂಗ್ಲಾದೇಶ, ಐರ್ಲೆಂಡ್ ಮತ್ತು ಅಮೆರಿಕ ತಂಡಗಳನ್ನು ಸೋಲಿಸಿತ್ತು. ಮೂರೂ ಪಂದ್ಯಗಳಲ್ಲಿ ಅಧಿಕಾರಯುತ ಪ್ರದರ್ಶನ ನೀಡಿದೆ.

ದೇಶಿಯ ಕ್ರಿಕೆಟ್‌ನಲ್ಲಿ ಯಶಸ್ಸು ಗಳಿಸಿರುವ ಸರ್ಫರಾಜ್ ಅಹ್ಮದ್ ಅವರ ಸೋದರ, ಮೂರನೇ

ಅರ್ಷಿನ್ ಕುಲಕರ್ಣಿ

ಕ್ರಮಾಂಕದ ಆಟಗಾರ ಮುಷೀರ್ ಖಾನ್ ಉತ್ತಮ ಲಯದಲ್ಲಿದ್ದಾರೆ. ಟೂರ್ನಿಯಲ್ಲಿ ಅತಿ ಹೆಚ್ಚು ರನ್‌ಗಳಿಸಿದವರ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ. ಬ್ಯಾಟರ್ ಆದರ್ಶ್ ಸಿಂಗ್ ಈ ಬಾರಿ ಉತ್ತಮ ಕಾಣಿಕೆಯ ನಿರೀಕ್ಷೆಯಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಆಕರ್ಷಕ ಶತಕ ಬಾರಿಸಿದ್ದ ಅರ್ಷಿನ್ ಕುಲಕರ್ಣಿ ಇಲ್ಲಿಯೂ ಉತ್ತಮ ಕೊಡುಗೆ ನೀಡುವ ಉತ್ಸಾಹದಲ್ಲಿದ್ದಾರೆ. ನಾಯಕ ಉದಯ್ ಸಹಾರನ್ ಕೂಡ ಒಂದು ಉಪಯುಕ್ತ ಇನಿಂಗ್ಸ್ ಆಡಿದ್ದು, ಅದೇ ಲಯ ಮುಂದುವರಿಸುವ ಗುರಿಯಲ್ಲಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಎಡಗೈ ವೇಗಿ ನಮನ್ ತಿವಾರಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಬಾಂಗ್ಲಾ ವಿರುದ್ಧ ಬರಿಗೈಯಲ್ಲಿ ಮರಳಿದ್ದ ಅವರು ನಂತರದ ಎರಡು ಪಂದ್ಯಗಳಲ್ಲಿ ತಲಾ ನಾಲ್ಕು ವಿಕೆಟ್‌ಗಳನ್ನು ಪಡೆದಿದ್ದಾರೆ.

ಎಡಗೈ ಸ್ಪಿನ್ನರ್ ಸೌಮಿ ಪಾಂಡೆ ಅವರೂ ಪರಿಣಾಮಕಾರಿ ಎನಿಸಿದ್ದಾರೆ. ಅವರ ಇಕಾನಮಿ ರೇಟ್ ಟೂರ್ನಿಯಲ್ಲಿ ಎರಡನೇ ಅತಿ ಉತ್ತಮವಾಗಿದೆ.

ಡಿ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿರುವ ನ್ಯೂಜಿಲೆಂಡ್ ತಂಡ ಬ್ಯಾಟಿಂಗ್ ವಿಭಾಗದಲ್ಲಿ ಅಷ್ಟೇನೂ ಉತ್ತಮ ಪ್ರದರ್ಶನ ನೀಡಿಲ್ಲ. ಅಫ್ಗಾನಿಸ್ತಾನ ವಿರುದ್ಧ ಒಂದು ವಿಕೆಟ್‌ನ ರೋಚಕ ಜಯ ಪಡೆದಿದ್ದ ನ್ಯೂಜಿಲೆಂಡ್, ಪಾಕಿಸ್ತಾನ ಕೈಲಿ 10 ವಿಕೆಟ್‌ಗಳ ಸೋಲು ಕಂಡಿತ್ತು. ಈಗ ಭಾರತ ಮುಂದೆ ಬ್ಯಾಟರ್‌ಗಳಿಗೆ ಸವಾಲು ಇದೆ.

ಉತ್ತರ ಪ್ರದೇಶದ ಮುಂದೆ ಎಡವಿದ ಮುಂಬೈ ತಂಡ

ಮುಂಬೈ (ಪಿಟಿಐ): ಆರ್ಯನ್ ಜುಯಲ್ (76) ಮತ್ತು ಕರಣ್ ಶರ್ಮಾ (67) ಅವರ ಅಮೋಘ ಆಟದ ನೆರವಿನಿಂದ ಉತ್ತರ ಪ್ರದೇಶ ತಂಡ ರಣಜಿ ಟ್ರೋಫಿ ಪಂದ್ಯದಲ್ಲಿ 41 ಬಾರಿಯ ಚಾಂಪಿಯನ್ ಹಾಗೂ ಆತಿಥೇಯ ಮುಂಬೈ ತಂಡವನ್ನು 2 ವಿಕೆಟ್ ಗಳಿಂದ ಮಣಿಸಿದೆ.

ಅಂತಿಮ ದಿನದಂದು ಮುಂಬೈ 320 ರನ್‌ಗಳಿಗೆ ಆಲೌಟ್ ಆಗಿದೆ. 195 ರನ್‌ಗಳ ಸವಾಲಿನ ಗುರಿ ಬೆನ್ನತ್ತಿದ ಜುಯಲ್ ಮತ್ತು ಕರಣ್ ಮೂರನೇ ವಿಕೆಟ್‌ಗೆ 104 ರನ್‌ಗಳ ಜೊತೆಯಾಟವಾಡಿದರು.

ಕರಣ್ 173 ಎಸೆತಗಳಲ್ಲಿ ಅಜೇಯ 67 ರನ್ (7x4, 2x6) ಗಳಿಸಿ ಉತ್ತರ ಪ್ರದೇಶಕ್ಕೆ ಆರು ಅಂಕಗಳನ್ನು ಗಳಿಸಲು ಸಹಾಯ ಮಾಡಿದರು.

ಉತ್ತರ ಪ್ರದೇಶ ತಂಡ 70 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 195 ರನ್ ಗಳಿಸಿತು. ಮುಂಬೈ ಪರ ತನುಷ್ ಕೋಟ್ಯಾನ್ (58ಕ್ಕೆ5) ಉತ್ತಮ ಬೌಲಿಂಗ್ ಪ್ರದರ್ಶಿಸಿದರು.

ಎಫ್‌ಐಎಚ್ ಹಾಕಿ ಫೈವ್ಸ್ ಪುರುಷರ ವಿಶ್ವಕಪ್ ಟೂರ್ನಿ

ಭಾರತ ತಂಡ ಕ್ವಾರ್ಟರ್‌ಫೈನಲ್‌ಗೆ

ಮಸ್ಕತ್ (ಪಿಟಿಐ): ಮಣಿಂದರ್ ಸಿಂಗ್ ಗಳಿಸಿದ ನಾಲ್ಕು ಗೋಲುಗಳ ಬಲದಿಂದ ಭಾರತ ತಂಡವು ಎಫ್‌ಐಎಚ್ ಹಾಕಿ ಫೈವ್ಸ್ ಪುರುಷರ ವಿಶ್ವಕಪ್ ಟೂರ್ನಿಯಲ್ಲಿ ಜಮೈಕಾ ವಿರುದ್ಧ 13–0ಯಿಂದ ಸುಲಭ ಗೆಲುವು ಸಾಧಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಸೋಮವಾರ ನಡೆದ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಮಣಿಂದರ್ ಮಿಂಚಿದರು. ಅವರು ಪಂದ್ಯ ಆರಂಭವಾದ ಎರಡನೇ ನಿಮಿಷದಲ್ಲೇ ಎರಡು ಗೋಲು ಗಳಿಸಿದರೆ, ಪಂದ್ಯದ ಮುಕ್ತಾಯದ ವೇಳೆ ಒಂದು ನಿಮಿಷ ಅಂತರದಲ್ಲಿ (28ನೇ ಮತ್ತು 29ನೇ) ಮತ್ತೆರಡು ಬಾರಿ ಚೆಂಡನ್ನು ಗುರಿ ಸೇರಿಸಿ ಭಾರತದ ಗೆಲುವಿನ ಅಂತರವನ್ನು ಹೆಚ್ಚಿಸಿದರು. ಅವರು ಸ್ವಿಟ್ಜರ್ಲೆಂಡ್ ವಿರುದ್ಧದ ಪಂದ್ಯದಲ್ಲೂ 4 ಗೋಲು ದಾಖಲಿಸಿದ್ದರು.

ಉಳಿದಂತೆ ಮನ್‌ಜೀತ್ (5ನೇ ಮತ್ತು 24ನೇ ನಿ), ರಾಹೀಲ್ ಮೊಹಮ್ಮದ್ (16ನೇ ಮತ್ತು 27ನೇ), ಮನ್‌ದೀಪ್ ಮೋರ್ (23ನೇ, 27ನೇ) ತಲಾ ಎರಡು ಗೋಲು ಗಳಿಸಿದರು. ಉತ್ತಮ್ ಸಿಂಗ್ (5ನೇ), ರಾಜಭರ್ ಪವನ್ (9ನೇ) ಮತ್ತು ಗುರ್ಜೋತ್ ಸಿಂಗ್ (14ನೇ) ತಲಾ ಒಂದು ಗೋಲು ತಂದಿತ್ತರು.

ಭಾರತ ತಂಡವು ಆರಂಭದಿಂದಲೇ ಆಕ್ರಮಣಕಾರಿಯಾಗಿ ಆಟ ಪ್ರದರ್ಶಿಸಿತು. ಮೊದಲ ಆರು ನಿಮಿಷದಲ್ಲೇ 4–0ಯಿಂದ ಮುನ್ನಡೆ ಸಾಧಿಸಿದ ಭಾರತಕ್ಕೆ, ಯಾವುದೇ ಹಂತದಲ್ಲಿ ಜಮೈಕಾ ತಂಡವು ಸರಿಸಾಟಿಯಾಗಲಿಲ್ಲ. ಮೊದಲಾರ್ಧದಲ್ಲಿ 6–0 ಮುನ್ನಡೆ ಪಡೆದ ಭಾರತ, ಉತ್ತರಾರ್ಧದಲ್ಲೂ ಚುರುಕಿನ


ಭಾರತ ಪುರುಷರ ಹಾಕಿ ತಂಡದ ರಾಹೀಲ್ ಮೊಹಮ್ಮದ್, ಮಣಿಂದರ್ ಸಿಂಗ್

ಆಟದ ಮೂಲಕ ಗಮನ ಸೆಳೆಯಿತು. 'ಬಿ' ಗುಂಪಿನಲ್ಲಿದ್ದ ಭಾರತ ತಂಡವು ಮೊದಲ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ವಿರುದ್ಧ (9–1) ಜಯ ಸಾಧಿಸಿದ್ದರೆ, ಎರಡನೇ ಪಂದ್ಯದಲ್ಲಿ ಈಜಿಪ್ಟ್ ವಿರುದ್ಧ (2–5) ಪರಾಭವಗೊಂಡಿತ್ತು.

ಸ್ಟೀಲರ್ಸ್‌ಗೆ ಮಣಿದ ವಾರಿಯರ್ಸ್ ತಂಡ

ಪಟ್ನಾ (ಪಿಟಿಐ): ಶಿವಂ ಪತಾರೆ ಮತ್ತು ಸಿದ್ಧಾರ್ಥ್ ದೇಸಾಯಿ ಅವರ ಅಮೋಘ ರೈಡಿಂಗ್ ಬಲದಿಂದ ಹರಿಯಾಣ ಸ್ಟೀಲರ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 41–36ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಇಲ್ಲಿನ ಪಾಟಲೀಪುತ್ರ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಿರಾಮದ ವೇಳೆಗೆ 16–18ರಿಂದ ಹಿನ್ನಡೆಯಲ್ಲಿದ್ದ ಸ್ಟೀಲರ್ಸ್ ಉತ್ತರಾರ್ಧದಲ್ಲಿ ಪುಟಿದೆದ್ದು, ಸಾಂಘಿಕ ಪ್ರದರ್ಶನ ನೀಡಿತು. ಎದುರಾಳಿ ತಂಡವನ್ನು ಎರಡು ಬಾರಿ ಆಲೌಟ್ ಮಾಡಿತು. ತಂಡದ ಶಿವಂ ಮತ್ತು ಸಿದ್ಧಾರ್ಥ್ ಕ್ರಮವಾಗಿ 12 ಮತ್ತು 11 ಅಂಕ ಗಳಿಸಿ ಸೂಪರ್ ಟೆನ್ ಸಾಧನೆ ಮಾಡಿದರು.

ವಾರಿಯರ್ಸ್ ತಂಡದ ಪರವಾಗಿ ಮಣಿಂದರ್ ಸಿಂಗ್ 13 ಪಾಯಿಂಟ್ಸ್ ಪಡೆದರು. ಉಳಿದಂತೆ ನಿತಿನ್ ಕುಮಾರ್ ಮತ್ತು ಶ್ರೀಕಾಂತ್ ದೇಸಾಯಿ ಕ್ರಮವಾಗಿ 9 ಮತ್ತು 7 ಪಾಯಿಂಟ್ಸ್ ಗಳಿಸಿದರೂ ಗೆಲುವು ದಕ್ಕಲಿಲ್ಲ.

ಸ್ಟೀಲರ್ಸ್ ತಂಡ ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ. ವಾರಿಯರ್ಸ್ 10ನೇ ಸ್ಥಾನದಲ್ಲಿದೆ.

ಪಟ್ನಾ ಪೈರೆಟ್ಸ್‌ಗೆ ಜಯ: ಮತ್ತೊಂದು ಪಂದ್ಯದಲ್ಲಿ ಆತಿಥೇಯ ಪಟ್ನಾ ಪೈರೆಟ್ಸ್ ತಂಡವು 32–20ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಸೋಲಿಸಿದೆ.

ಶೂಟಿಂಗ್: ಸೋನಮ್ ಮಸ್ಕರ್‌ಗೆ ಬೆಳ್ಳಿ

ಕೈರೊ (ಪಿಟಿಐ): ಭಾರತದ ಸೋನಮ್ ಮಸ್ಕರ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್‌ನ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕವನ್ನು ಗೆದ್ದರು.

ಈಜಿಪ್ಟ್ ಇಂಟರ್‌ನ್ಯಾಷನಲ್ ಒಲಿಂಪಿಕ್ ಸಿಟಿ ಶೂಟಿಂಗ್‌ನಲ್ಲಿ ನಡೆಯುತ್ತಿರುವ ವಿಶ್ವಕಪ್‌ನ ಚೊಚ್ಚಲ ಸ್ಪರ್ಧೆಯಲ್ಲೇ ಸೋನಮ್ 251.1 ಪಾಯಿಂಟ್ ಸಂಪಾದಿಸಿ ಎರಡನೇ ಸ್ಥಾನ ಪಡೆದರು. ಅವರಿಗಿಂತ 0.9 ಹೆಚ್ಚು ಪಾಯಿಂಟ್ ಪಡೆದ ಜರ್ಮನಿಯ ಅನ್ನಾ ಜಾನ್ಸೆನ್ ಚಿನ್ನ ಗೆದ್ದರೆ, ಪೋಲೆಂಡ್‌ನ ಅನೆಟಾ ಸ್ಟಾಂಕಿವಿಚ್ ಕಂಚಿನ ಪದಕ ಪಡೆದರು.

ಭಾರತದ ಸೋನಮ್ ಮತ್ತು ನ್ಯಾನ್ಸಿ ಅವರು ಫೈನಲ್‌ನ ಅರ್ಹತಾ ಸುತ್ತಿನಲ್ಲಿ ಕ್ರಮವಾಗಿ ಐದು ಮತ್ತು ನಾಲ್ಕನೇ ಸ್ಥಾನ ಪಡೆದಿದ್ದರು. ಫೈನಲ್‌ನಲ್ಲಿ ನ್ಯಾನ್ಸಿ ನಾಲ್ಕನೇ ಸ್ಥಾನ ಪಡೆದರು.

ಸೋನಮ್ ಮಸ್ಕರ್

ವಿಶ್ವ ಗುಂಪಿನ ಪಂದ್ಯ: 60 ವರ್ಷ ಬಳಿಕ ಪಾಕ್ ಪ್ರವಾಸ

ಭಾರತ ಡೇವಿಸ್ ಕಪ್ ತಂಡಕ್ಕೆ ಬಿಗಿ ಭದ್ರತೆ

ಇಸ್ಲಾಮಾಬಾದ್ (ಪಿಟಿಐ): ಡೇವಿಸ್ ಕಪ್ ವಿಶ್ವಗುಂಪಿನ ಪಂದ್ಯವಾಡಲು ಪಾಕಿಸ್ತಾನ ಪ್ರವಾಸ ಕೈಗೊಂಡಿರುವ ಭಾರತ ಡೇವಿಸ್ ಕಪ್ ತಂಡಕ್ಕೆ ದೇಶದ ಗಣ್ಯರಿಗೆ ಒದಗಿಸುವ ರೀತಿಯ ಭದ್ರತೆಯನ್ನೇ ಒದಗಿಸಲಾಗಿದೆ.

60 ವರ್ಷಗಳಲ್ಲಿ ಮೊದಲ ಬಾರಿ ಭಾರತ ಟೆನಿಸ್ ತಂಡ ಪಾಕಿಸ್ತಾನಕ್ಕೆ ಭೇಟಿ ನೀಡಿದೆ.

ಐವರು ಆಟಗಾರರು, ಇಬ್ಬರು ಫಿಸಿಯೋಗಳು ಮತ್ತು ಇಬ್ಬರು ಎಐಟಿಎ ಅಧಿಕಾರಿಗಳನ್ನು ಒಳಗೊಂಡ ಭಾರತ ತಂಡ ಭಾನುವಾರ ರಾತ್ರಿ ಇಸ್ಲಾಮಾಬಾದ್ ತಲುಪಿದೆ.

ಫೆ.3 ಮತ್ತು 4ರಂದು ಪಂದ್ಯಗಳು ನಡೆಯಲಿದೆ. ಪಂದ್ಯಗಳು ನಡೆಯುವ ಇಸ್ಲಾಮಾಬಾದ್ ಸ್ಪೋರ್ಟ್ ಕಾಂಪ್ಲೆಕ್ಸ್‌ನಲ್ಲಿ ಬಾಂಬ್ ನಿಷ್ಕ್ರಿಯ ದಳ ನಿತ್ಯ ಬೆಳಿಗ್ಗೆ ತಪಾಸಣೆ ಕೈಗೊಳ್ಳಲಿದೆ. ಆಟಗಾರರ ಸುರಕ್ಷತೆ ಮತ್ತು ಭದ್ರತೆ ಖಚಿತಪಡಿಸಿಕೊಳ್ಳಲು ಅತಿ ಗಣ್ಯರಿಗೆ ನೀಡುವ ಬಹುಸ್ತರ ಭದ್ರತಾ ವ್ಯವಸ್ಥೆ ಜತೆಗೆ ತಂಡ ಪ್ರಯಾಣಿಸುವ ವೇಳೆ ಎರಡು ಬೆಂಗಾವಲು ವಾಹನ ಒದಗಿಸಲಾಗಿದೆ.

ರಾಮಕುಮಾರ್ ರಾಮನಾಥನ್

ಭಾರತ ಡೇವಿಸ್ ಕಪ್ ತಂಡ 1964 ರಲ್ಲಿ ಕೊನೆಯ ಬಾರಿ ಪಾಕಿಸ್ತಾನಕ್ಕೆ ತೆರಳಿತ್ತು. ಆಗ ಭಾರತ 4–0 ಅಂತರದಿಂದ ಜಯಗಳಿಸಿತ್ತು.

'60 ವರ್ಷಗಳ ನಂತರ ಭಾರತ ತಂಡ ಪಾಕಿಸ್ತಾನಕ್ಕೆ ಬಂದಿರುವ ಕಾರಣ ಹೆಚ್ಚುವರಿ ಮುನ್ನೆಚ್ಚರಿಕೆ ತೆಗೆದುಕೊಳ್ಳುತ್ತಿದ್ದೇವೆ. ಭಾರತ ತಂಡಕ್ಕೆ ನಾಲ್ಕರಿಂದ ಐದು ಹಂತಗಳ ಭದ್ರತೆ ಕಲ್ಪಿಸಲಾಗಿದೆ. ಈವೆಂಟ್ ಸೆಕ್ಯುರಿಟಿ ಮ್ಯಾನೇಜರ್ ಆಗಿ ನಾನು ಪ್ರಯಾಣದ ಸಮಯದಲ್ಲಿ ಅವರೊಂದಿಗೆ ಇದ್ದೇನೆ' ಎಂದು ಪಿಟಿಎಫ್ ಪ್ರಧಾನ ಕಾರ್ಯದರ್ಶಿ ಕರ್ನಲ್ ಗುಲ್ ರೆಹಮಾನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಇಸ್ಲಾಮಾಬಾದ್ ಏಷ್ಯಾದ ಸುರಕ್ಷಿತ ನಗರಗಳಲ್ಲಿ ಒಂದಾಗಿದೆ. ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವುದರಿಂದ ಭದ್ರತೆ ಈಗಾಗಲೇ ಬಿಗಿಯಾಗಿದೆ. ನಗರದಲ್ಲಿ ಸುಮಾರು 10,000 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಭಾರತೀಯ ಆಟಗಾರರ ಸುರಕ್ಷತೆ ಮತ್ತು ಭದ್ರತೆಯಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ' ಎಂದು ಹೇಳಿದರು.

ಸರ್ಫರಾಜ್ ಖಾನ್, ಸುಂದರ್, ಸೌರಭ್ ಕುಮಾರ್‌ಗೆ ಅವಕಾಶ

ದ್ವಿತೀಯ ಟೆಸ್ಟ್‌ಗಿಲ್ಲ ಜಡೇಜ, ರಾಹುಲ್

ಹೈದರಾಬಾದ್ (ಪಿಟಿಐ): ಇಂಗ್ಲೆಂಡ್ ಕೈಲಿ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಆಘಾತಕಾರಿ ಸೋಲನುಭವಿಸಿದ ಭಾರತ ತಂಡ, ಎರಡನೇ ಟೆಸ್ಟ್ ಆರಂಭಕ್ಕೆ ಮೊದಲೇ ದೊಡ್ಡ ಹೊಡೆತ ಕಂಡಿದೆ.

ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ ಮತ್ತು ಬ್ಯಾಟರ್ ಕೆ.ಎಲ್.ರಾಹುಲ್ ಅವರು ಗಾಯಾಳಾಗಿ ಎರಡನೇ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ ಎಂದು ಸೋಮವಾರ ಪ್ರಕಟಿಸಲಾಗಿದೆ.

ಜಡೇಜ ಅವರು ಮೊದಲ ಟೆಸ್ಟ್ ಪಂದ್ಯದಲ್ಲಿ ಭಾನುವಾರ ಒಂದು ರನ್‌ಗೆ ವೇಗವಾಗಿ ಓಡುವ ಭರದಲ್ಲಿ ಕಾಲಿನ ಸ್ನಾಯುಸೆಳೆತಕ್ಕೆ (ಹ್ಯಾಮ್‌ಸ್ಟ್ರಿಂಗ್) ಒಳಗಾಗಿದ್ದಾರೆ.

ರಾಹುಲ್ ಅವರಿಗೆ ಬಲ ತೊಡೆಯ ಸ್ನಾಯು (ಕ್ವಾಡ್ರಿಸೆಪ್ಸ್) ನೋವು ಬಾಧಿಸುತ್ತಿದೆ. ಕಳೆದ ವರ್ಷದ ಮೇ ತಿಂಗಳಲ್ಲಿ ಐಪಿಎಲ್ ವೇಳೆ ಫೀಲ್ಡಿಂಗ್ ಸಂದರ್ಭದಲ್ಲಿ ಅವರು ಇದೇ ನೋವನ್ನು ಅನುಭವಿಸಿದ್ದರು ಎಂಬುದು ಚಿಂತೆಗೆ ಕಾರಣವಾಗಿದೆ. ನಂತರ ನಾಲ್ಕು ತಿಂಗಳು ಅವರು ಆಡಿಲಿರಲಿಲ್ಲ.

'ರವೀಂದ್ರ ಜಡೇಜ ಮತ್ತು ಕೆ.ಎಲ್.ರಾಹುಲ್ ಅವರು ಫೆಬ್ರುವರಿ 2ರಂದು ವಿಶಾಖಪಟ್ಟಣದಲ್ಲಿ ಆರಂಭವಾಗುವ ಇಂಗ್ಲೆಂಡ್ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಆಡುವುದಿಲ್ಲ' ಎಂದು ಬಿಸಿಸಿಐ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ಬಿಸಿಸಿಐ ವೈದ್ಯಕೀಯ ತಂಡ ಅವರ ಆರೋಗ್ಯದ ಮೇಲೆ ನಿಗಾ ಇರಿಸಿದೆ ಎಂದೂ ತಿಳಿಸಿದೆ.

ಆಯ್ಕೆ ಸಮಿತಿಯು ಮುಂಬೈನ ಬ್ಯಾಟರ್ ಸರ್ಫರಾಜ್ ಖಾನ್, ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ ಮತ್ತು ವಾಷಿಂಗ್ಟನ್ ಸುಂದರ್ ಅವರನ್ನು ತಂಡಕ್ಕೆ ಸೇರ್ಪಡೆಗೊಳಿಸಿದೆ.

ದೇಶಿಯ ಕ್ರಿಕೆಟ್‌ನಲ್ಲಿ ರನ್ ಹೊಳೆ ಹರಿಸಿದ ಸರ್ಫರಾಜ್ ಖಾನ್ ಅವರಿಗೆ ಇದು ರಾಷ್ಟ್ರೀಯ ತಂಡಕ್ಕೆ ಚೊಚ್ಚಲ ಕರೆ. ಇಂಗ್ಲೆಂಡ್ ಲಯನ್ಸ್ ವಿರುದ್ಧ ಭಾರತ 'ಎ' ಸರಣಿಯಲ್ಲೂ ಅವರು ಯಶಸ್ಸು ಕಂಡಿದ್ದರು.

ವಿರಾಟ್ ಕೊಹ್ಲಿ ಐದು ಪಂದ್ಯಗಳ ಸರಣಿಯ ಮೊದಲ ಎರಡು ಟೆಸ್ಟ್‌ಗಳಿಗೆ ಅಲಭ್ಯರಿರುವುದಾಗಿ ಈ ಹಿಂದೆಯೇ ತಿಳಿಸಿದ್ದರು. ಈಗ ಜಡೇಜ ಮತ್ತು ರಾಹುಲ್ ಗಾಯಾಳಾಗಿರುವುದು ತಂಡಕ್ಕೆ ಕಳವಳ ಮೂಡಿಸಿದೆ. 2013ರ ನಂತರ ಟೆಸ್ಟ್‌ನಲ್ಲಿ ನಾಲ್ಕನೇ ಸೋಲು ಅನುಭವಿಸಿದ್ದೂ ತಂಡದ ಚಿಂತೆಗೆ ಕಾರಣವಾಗಿದೆ.

ಮೊದಲ ಟೆಸ್ಟ್‌ನಲ್ಲಿ ರಾಹುಲ್ ಮತ್ತು ಜಡೇಜ ಉಪಯುಕ್ತ ಕೊಡುಗೆ ನೀಡಿದ್ದರು. ಜಡೇಜ ಐದು ವಿಕೆಟ್‌ಗಳನ್ನು ಪಡೆದಿದ್ದರಲ್ಲದೇ ಮೊದಲ ಇನಿಂಗ್ಸ್‌ನಲ್ಲಿ

ಭಾರತ ತಂಡದ ಆಟಗಾರರಾದ ಕೆ. ಎಲ್. ರಾಹುಲ್ (ಎಡ) ಮತ್ತು ರವೀಂದ್ರ ಜಡೇಜ

87 ರನ್ ಬಾರಿಸಿದ್ದರು. ರಾಹುಲ್ 86 ರನ್ ಗಳಿಸಿದ್ದರು.

ಜಡೇಜ ಅವರ ಬದಲಿಗೆ ನಾಲ್ಕು ಟೆಸ್ಟ್‌ಗಳನ್ನು ಆಡಿರುವ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರು ತಂಡದಲ್ಲಿ ಸ್ಥಾನ ಪಡೆಯುವ ನಿರೀಕ್ಷೆಯಿದೆ.

ಗಾಯದಿಂದ ಚೇತರಿಸಿ ತಂಡಕ್ಕೆ ಪುನರಾಗಮನ ಮಾಡಿದ ನಂತರ ರಾಹುಲ್ ಟೆಸ್ಟ್ ಹಾಗೂ ಏಕದಿನ ಮಾದರಿಗಳಲ್ಲಿ ಉತ್ತಮ ಲಯದಲ್ಲಿದ್ದರು.

ದಕ್ಷಿಣ ಆಫ್ರಿಕಾ ವಿರುದ್ಧ ಟೆಸ್ಟ್ ಸರಣಿಯಲ್ಲಿ ವಿಕೆಟ್ ಕೀಪಿಂಗ್ ಕೂಡ ಮಾಡಿದ್ದು ಅವರ ಕಾರ್ಯಭಾರ ಹೆಚ್ಚಿಸಿತ್ತು.

ಸರ್ಫರಾಜ್ ತಂಡಕ್ಕೆ ಅರ್ಹವಾಗಿ ಸೇರ್ಪಡೆ ಆಗಿದ್ದರೂ, ಈ ಮೊದಲೇ 15ರ ಬಳಗದಲ್ಲಿರುವ ರಜತ್ ಪಾಟೀದಾರ್ ಪದಾರ್ಪಣೆ ಮಾಡುವ ಸಾಧ್ಯತೆ ಅಧಿಕವಾಗಿದೆ. ಸುಂದರ್ ಟೆಸ್ಟ್ ತಂಡಕ್ಕೆ ಆಯ್ಕೆಯಾಗಿರುವ ಕಾರಣ, ಇಂಗ್ಲೆಂಡ್ ಲಯನ್ಸ್ ವಿರುದ್ಧ ಗುರುವಾರ ಆರಂಭವಾಗುವ ಮೂರನೇ ಹಾಗೂ ಅಂತಿಮ 'ಟೆಸ್ಟ್' ಪಂದ್ಯಕ್ಕೆ ಅವರ ಬದಲು ಸಾರಾಂಶ್ ಜೈನ್ ಅವಕಾಶ ಪಡೆದಿದ್ದಾರೆ.

'ಆವೇಶ್ ಖಾನ್ (ವೇಗದ ಬೌಲರ್) ಅವರು ಮಧ್ಯ ಪ್ರದೇಶ ರಣಜಿ ತಂಡದಲ್ಲಿ ಆಡಲಿದ್ದಾರೆ. ಅಗತ್ಯ ಬಿದ್ದರೆ ಅವರು ಟೆಸ್ಟ್ ತಂಡಕ್ಕೆ ಸೇರ್ಪಡೆ ಆಗುವರು' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

2ನೇ ಟೆಸ್ಟ್‌ಗೆ ಪರಿಷ್ಕೃತ ತಂಡ

ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ಶ್ರೇಯಸ್ ಅಯ್ಯರ್, ಕೆ.ಎಸ್. ಭರತ್ (ವಿಕೆಟ್ ಕೀಪರ್), ಧ್ರುವ್ ಜುರೇಲ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಜಸ್‌ಪ್ರೀತ್ ಬೂಮ್ರಾ (ಉಪ ನಾಯಕ), ರಜತ್ ಪಾಟೀದಾರ್, ಸರ್ಫರಾಜ್ ಖಾನ್, ವಾಷಿಂಗ್ಟನ್ ಸುಂದರ್ ಮತ್ತು ಸೌರಭ್ ಕುಮಾರ್.

ಸರ್ಫರಾಜ್ ಖಾನ್

ಬೂಮ್ರಾಗೆ ವಾಗ್ದಂಡನೆ, ಡಿಮೆರಿಟ್ ಪಾಯಿಂಟ್

ದುಬೈ (ಎಎಫ್‌ಪಿ): ಹೈದರಾಬಾದ್‌ನಲ್ಲಿ ಮೊದಲ ಟೆಸ್ಟ್ ವೇಳೆ, ಇಂಗ್ಲೆಂಡ್‌ನ ಬ್ಯಾಟರ್ ಒಲಿ ಪೋಪ್ ರನ್ ಓಡುವಾಗ 'ತಕ್ಕುದಲ್ಲದ' ರೀತಿ ಅಡ್ಡಬಂದಿದ್ದಕ್ಕೆ ಭಾರತದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಿಗೆ ಐಸಿಸಿ ಸೋಮವಾರ ವಾಗ್ದಂಡನೆ ವಿಧಿಸಿದೆ. ಜೊತೆಗೆ ಒಂದು ಡಿಮೆರಿಟ್ ಪಾಯಿಂಟ್ ಸಹ ಹೇರಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ನೀತಿಸಂಹಿತೆಯ ಲೆವೆಲ್ 1 ನಡಿ ಬೂಮ್ರಾ ತಪ್ಪೆಸಗಿದ್ದಾರೆ. ಇಂಗ್ಲೆಂಡ್ ತಂಡದ ಎರಡನೇ ಇನಿಂಗ್ಸ್ ವೇಳೆ (81ನೇ ಓವರ್) ಈ ಪ್ರಸಂಗ ನಡೆದಿತ್ತು. ತಾವು ಬೌಲಿಂಗ್ ಮಾಡಿದ ನಂತರ ಪೋಪ್ ರನ್ನಿಗೆ ಓಡುವ ವೇಳೆ ಬೂಮ್ರಾ ಅಡ್ಡಬಂದು ದೈಹಿಕವಾಗಿ ತಡೆಯಲು ಯತ್ನಿಸಿದ್ದರೆಂಬ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ.

ಕ್ರೀಡಾಂಗಣದಲ್ಲಿದ್ದ ಅಂಪೈರ್‌ಗಳಾದ ಪಾಲ್ ರೈಫೆಲ್ ಮತ್ತು ಕ್ರಿಸ್ ಗಫಾನಿ, ಮೂರನೇ ಅಂಪೈರ್ ಮರೈಸ್ ಎರಾಸ್ಮಸ್ ಮತ್ತು ನಾಲ್ಕನೇ ಅಂಪೈರ್ ರೋಹನ್ ಪಂಡಿತ್ ಅವರು ಬೂಮ್ರಾ ವಿರುದ್ಧ ದೂರು ಸಲ್ಲಿಸಿದ್ದರು. ವಾಗ್ದಂಡನೆ ಜೊತೆ, ಇದು 24 ತಿಂಗಳ ಅವಧಿಯಲ್ಲಿ ಇದು ಅವರ ಮೊದಲ ತಪ್ಪು ಆದ ಕಾರಣ ಅವರ 'ಶಿಸ್ತಿನ ದಾಖಲೆ'ಗೆ ಒಂದು ಡಿಮೆರಿಟ್ ಪಾಯಿಂಟ್ ಸೇರಿಸಲಾಗಿದೆ. ಬೂಮ್ರಾ ತಪ್ಪು ಒಪ್ಪಿಕೊಂಡಿದ್ದು, ಕ್ರಮಕ್ಕೆ ಸಮ್ಮತಿಸಿದ್ದಾರೆ.

ಗುಕೇಶ್ ರನ್ನರ್ ಅಪ್, ಲಿಯಾನ್‌ಗೆ ಪ್ರಶಸ್ತಿ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಅಂತಿಮ ಟೈ ಬ್ರೇಕರ್‌ನಲ್ಲಿ ಚೀನಾದ ವಿ ಯಿ ಅವರಿಗೆ ಮಣಿಯುವುದರೊಂದಿಗೆ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಸೋಮವಾರ ಜಂಟಿ ಎರಡನೇ ಸ್ಥಾನಕ್ಕೆ ಸಮಾಧಾನ ಪಡಬೇಕಾಯಿತು.

ಆದರೆ ಚಾಲೆಂಜರ್ ವಿಭಾಗದಲ್ಲಿ ಭಾರತದ ಲಿಯಾನ್ ಲ್ಯೂಕ್ ಮೆಂಡೋನ್ಸ ಅವರು 13ನೇ ಹಾಗೂ ಅಂತಿಮ ಸುತ್ತಿನಲ್ಲಿ ಸ್ವದೇಶದ ದಿವ್ಯಾ ದೇಶಮುಖ್ ಅವರನ್ನು ಮಣಿಸಿ ಚಾಂಪಿಯನ್ ಆದರು. ಗೋವಾದ ಆಟಗಾರ 9.5 ಪಾಯಿಂಟ್ಸ್ ಕಲೆಹಾಕಿದರು.

ಮಾಸ್ಟರ್ಸ್ ವಿಭಾಗದಲ್ಲಿ ಗುಕೇಶ್ ಫೈನಲ್‌ಗೆ ಅರ್ಹತೆ ಪಡೆಯಬೇಕಾದರೆ ಕೊನೆಯ ಸುತ್ತಿನಲ್ಲಿ ಇರಾನ್‌ನ ಪರ್ಹಾಮ್ ಮಘಸೂಡ್ಲೂ ಅವರನ್ನು ಸೋಲಿಸಿ, ನಂತರ ಮೂರು ಟೈಬ್ರೇಕ್ ಆಟಗಳಲ್ಲಿ ಕಳೆದ ಸಲದ ವಿಜೇತ ಅನಿಶ್ ಗಿರಿ ಅವರನ್ನು ಸೋಲಿಸಬೇಕಾಗಿತ್ತು. ಈ ಎರಡರಲ್ಲಿ ಅವರು ಯಶಸ್ವಿಯೂ ಆಗಿ ಪ್ರಶಸ್ತಿಯ ಭರವಸೆ ಮೂಡಿಸಿದ್ದರು. ಆದರೆ ವಿ ಯಿ ಜೊತೆ ಮೊದಲು ಡ್ರಾ ಮಾಡಿಕೊಂಡ ಗುಕೇಶ್, ನಂತರ ಸೋಲು ಕಂಡರು.

ಲಿಯಾನ್ ಲ್ಯೂಕ್ ಮೆಂಡೋನ್ಸ

ಕೊನೆಯ (14ನೇ) ಸುತ್ತಿನಲ್ಲಿ ವಿ ಯಿ, ಭಾರತದ ವಿದಿತ್ ಗುಜರಾತಿ (7.5) ವಿರುದ್ಧ ಜಯಗಳಿಸಿದರೆ, ಪ್ರಜ್ಞಾನಂದ (7.5), ಫ್ರಾನ್ಸ್‌ನ ಅಲಿರೇಜಾ ಫಿರೋಜ್ (7.5) ಅವರ ಜೊತೆ ಡ್ರಾ ಮಾಡಿಕೊಂಡರು. ನೆದರ್ಲೆಂಡ್ಸ್‌ನ ಅನಿಶ್ ಗಿರಿ (8.5), ಮ್ಯಾಕ್ಸ್ ವಾರ್ಮೆರ್‌ಡನ್ (4) ವಿರುದ್ಧ ಜಯಗಳಿಸಿದರು.

ಅನಿಶ್ ಮೂರನೇ, ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ನಾಲ್ಕನೇ, ವಿದಿತ್ ಗುಜರಾತಿ ಆರನೇ ಹಾಗೂ ಪ್ರಜ್ಞಾನಂದ ಏಳನೇ ಸ್ಥಾನ ಪಡೆದರು.